ಬುಧವಾರ, ಏಪ್ರಿಲ್ 19, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 108 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಚಾಟ್ ಜಿಪಿಟಿಯು ಪರೀಕ್ಷಾ ಸ್ವರೂಪವನ್ನು ಬದಲಿಸಬಲ್ಲದೇ?

ಆಳ-ಅಗಲ
ವಿಪರೀತ ಬಿಸಿಲಿಗೆ ಬಸವಳಿದಿದೆ ದೇಶ

ಶಾಖಾ ಕಚೇರಿಯಿಂದ ಪ್ರಧಾನ ಕಚೇರಿ ಸೇವೆಗೆ ಜಿಎಸ್‌ಟಿ ಅನ್ವಯ 10

ವಿನಯ ಕುಲಕರ್ಣಿ ಧಾರವಾಡ ಪ್ರವೇಶಕ್ಕೆ ಅನುಮತಿ ನಿರಾಕರಿಸಿದ ಕೋರ್ಟ್ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,727	17,660	₹62,300 (ಬೆಂಗಳೂರು)	₹76,600 (ಬೆಂಗಳೂರು)	82.04

ಬಿಜೆಪಿಯಲ್ಲಿ 'ಸಂತೋಷದ ಹೊಳೆ'

ಪ್ರಜಾವಾಣಿ ವಾರ್ತೆ

ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಹೊರಬಿದ್ದ ಬಳಿಕ ಬಂಡಾಯವೆದ್ದ ಅನೇಕರು ಅನ್ಯಪಕ್ಷ ಸೇರಿದ್ದಾರೆ. ಟಿಕೆಟ್ ಸಿಗದೇ ಕಾಂಗ್ರೆಸ್ ಸೇರಿರುವ ಜಗದೀಶ ಶೆಟ್ಟರ್ ಅವರು, 'ನನಗೆ ಟಿಕೆಟ್ ತಪ್ಪಲು ಬಿ.ಎಲ್. ಸಂತೋಷ್ ಅವರೇ ಕಾರಣ' ಎಂದು ದೂರಿದ್ದಾರೆ. 'ಸಂತೋಷ್ ಬಗ್ಗೆ ಟೀಕೆ ಸರಿಯಲ್ಲ' ಎಂದು ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಆಕ್ಷೇಪಿಸಿದ್ದಾರೆ. ನಾಯಕರ ಖಾಸಗಿ ಮಾತುಕತೆ ವೇಳೆ ಮಾತ್ರ ಪ್ರಸ್ತಾಪವಾಗುತ್ತಿದ್ದ ಸಂತೋಷ್ ಹೆಸರು ಮೊದಲ ಬಾರಿಗೆ ರಾಜಕೀಯ ಚರ್ಚೆಯ ಮುನ್ನೆಲೆಗೆ ಬಂದಿದೆ. ಏತನ್ಮಧ್ಯೆ, ಗಿಡ ಬಾಡುತ್ತಿರುವ ಬಗ್ಗೆ ತೇಜಸ್ವಿನಿ ಅನಂತಕುಮಾರ್ ಮಾಡಿರುವ ಟ್ವೀಟ್ ಕೂಡ ಚರ್ಚೆಗೆ ಗ್ರಾಸವಾಗಿದೆ

2	2033	222	216	150
ನಾಮಪತ್ರ ಸಲ್ಲಿಕೆಗೆ ಬಾಕಿ ಇರುವ ದಿನ	ಈವರೆಗೆ ಸಲ್ಲಿಕೆಯಾದ ಒಟ್ಟು ನಾಮಪತ್ರ	ಬಿಜೆಪಿ ಘೋಷಿತ ಅಭ್ಯರ್ಥಿಗಳ ಸಂಖ್ಯೆ	ಕಾಂಗ್ರೆಸ್ ಘೋಷಿತ ಅಭ್ಯರ್ಥಿಗಳ ಸಂಖ್ಯೆ	ಜೆಡಿಎಸ್ ಘೋಷಿತ ಅಭ್ಯರ್ಥಿಗಳ ಸಂಖ್ಯೆ

'ಬಿಜೆಪಿ ತಳಪಾಯ ಅಲ್ಲಾಡಿಸಿದ ಸಂತೋಷ್'

ಜಗದೀಶ ಶೆಟ್ಟರ್

ಹುಬ್ಬಳ್ಳಿ: 'ನನಗೆ ಟಿಕೆಟ್ ಕೈ ತಪ್ಪಲು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಕಾರಣ. ತಮ್ಮ ಮಾನಸ ಪುತ್ರ ಮಹೇಶ ಟೆಂಗಿನಕಾಯಿ ಅವರಿಗೆ ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರದಿಂದ ಟಿಕೆಟ್ ಕೊಡಿಸಬೇಕಿತ್ತು. ಅದಕ್ಕಾಗಿ ನನಗೆ ಟಿಕೆಟ್ ತಪ್ಪಿಸಿದರು' ಎಂದು ಜಗದೀಶ ಶೆಟ್ಟರ್ ಆರೋಪಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಮಮತೆ, ಮಮಕಾರ ಇಷ್ಟೆಲ್ಲ ಅನಾಹುತಕ್ಕೆ ಕಾರಣ. ರಾಜ್ಯದ ಬಿಜೆಪಿಯನ್ನು ಸಂತೋಷ್ ಮತ್ತು ಅವರ ಕಡೆಯವರು ತಮ್ಮ ಹಿಡಿತದಲ್ಲಿ ಇಟ್ಟು-ಕೊಂಡಿದ್ದಾರೆ. ರಾಜ್ಯ ಕಚೇರಿಯಲ್ಲೂ ಅವರದ್ದೇ ನಡೆಯುತ್ತದೆ. ಇದರಿಂದ ಬಿಜೆಪಿಯ ತಳಪಾಯ ಅಲುಗಾಡುತ್ತಿದೆ. ಇದರ ಪರಿಣಾಮ ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳು ಸೇರಿದಂತೆ ಇಡೀ ರಾಜ್ಯದ ಮೇಲೆ ಆಗಲಿದೆ' ಎಂದರು.

'ಶೆಟ್ಟರ್‌ಗೆ ಟಿಕೆಟ್ ಸಿಗುವುದಿಲ್ಲ ಎಂದು ಮಾನಸಪುತ್ರ ಕಳೆದ ಆರೇಳು ತಿಂಗಳಿಂದ ಈ ಗಾಳಿಸುದ್ದಿ ಹಬ್ಬಿಸಿದ. ಇದೆಲ್ಲ ಸಂತೋಷ್ ಕೃಪಾ-ಶೀರ್ವಾದದಿಂದ ನಡೆದ ಕೆಲಸ. ಈಗ ನಾನು ಕಳೆದ ಸಲಕ್ಕಿಂತ ಹೆಚ್ಚಿನ ಮತಗಳ ಅಂತರದಿಂದ ಆರಿಸಿ ಬರುವೆ. ಬಿಜೆಪಿಯೊಳಗೆ ಇದ್ದಾಗ ನನ್ನ ಮಹತ್ವ ಗೊತ್ತಾಗಲಿಲ್ಲ. ಪಕ್ಷಕ್ಕೆ ಈಗಾಗಲೇ ದೊಡ್ಡ ಹೊಡೆತ ಬಿದ್ದಿದೆ' ಎಂದರು.

'ಟೆಂಗಿನಕಾಯಿ ಸೇರಿದಂತೆ ರಾಜ್ಯದಾದ್ಯಂತ ತನಗೆ ಬೇಕಾದವರನ್ನು ಮುಂದೆ ತರಲು ಸಂತೋಷ್ ನಡೆಸುತ್ತಿರುವ ಕುತಂತ್ರದ ಕುರಿತು ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ, ಧರ್ಮೇಂದ್ರ ಪ್ರಧಾನ್, ಅರುಣ್ ಸಿಂಗ್ ಅವರಿಗೆಲ್ಲಾ ಹೇಳಿದರೂ, ಯಾರೂ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ.

11ನೇ ಪುಟ ನೋಡಿ

ಕಿಡಿ ಹಚ್ಚಿದ ಶೆಟ್ಟರ್ ನುಡಿ

- ನಾನೆಂದು ಕಾನೂನು ಮೀರಿಲ್ಲ; ಆದ್ದರಿಂದ ಐ.ಟಿ.ಇ.ಡಿ ಭಯವಿಲ್ಲ
- ರಾಜ್ಯದಲ್ಲಿ ಸಂತೋಷ್ ಎಂಬ ವ್ಯಕ್ತಿ ಮುಖ್ಯವೇ ಹೊರತು, ಪಕ್ಷವಲ್ಲ
- ಸಂತೋಷ್ ಅವರನ್ನು ಕೇರಳ, ತಮಿಳುನಾಡು, ತೆಲಂಗಾಣ, ಪಶ್ಚಿಮ ಬಂಗಾಳದಲ್ಲಿ ಉಸ್ತುವಾರಿ ಮಾಡಿದರೂ ಪಕ್ಷಕ್ಕೆ ಒಳ್ಳೆಯದಾಗಲಿಲ್ಲ
- ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರಿಗೆ ಸಂತೋಷ್ ವೈಫಲ್ಯ ಗೊತ್ತಿದ್ದರೂ ಅವರಿಗೇ ಕರ್ನಾಟಕ ಚುನಾವಣೆಯ ಉಸ್ತುವಾರಿ ಕೊಟ್ಟಿದ್ದಾರೆ
- ಸುರೇಶಕುಮಾರ್ ಅವರಿಗೂ ಟಿಕೆಟ್ ತಪ್ಪಿಸಲು ಷಡ್ಯಂತ್ರ ಮಾಡಿದರು. ಈ ಬಗ್ಗೆ ಅವರು ಹಿಂದೊಮ್ಮೆ ನನ್ನ ಬಳಿ ಗೋಳು ತೋಡಿಕೊಂಡಿದ್ದರು.
- ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೂ ಟಿಕೆಟ್ ತಪ್ಪಿಸುವ ಯತ್ನ ನಡೆದಿತ್ತು
- ರಾಜ್ಯದಲ್ಲಿದ್ದ ಐಪಿಎಸ್ ಅಧಿಕಾರಿ ಅಣ್ಣಾಮಲೈಗೆ ರಾಜ್ಯ ಚುನಾವಣೆಯ ಸಹ ಉಸ್ತುವಾರಿ ಮಾಡಿದ್ದಾರೆ. ಅವರ ಎದುರಿಗೆ ಕೈಕಟ್ಟಿ ಕುಳಿತುಕೊಳ್ಳುವ ಅಸಹಾಯಕತೆಗೆ ನಮ್ಮನ್ನು ದೂಡಿದರು

ಜಗದೀಶ ಶೆಟ್ಟರ್ ವಾಗ್ದಾಳಿ ನಡೆಸಿರುವುದು ಅವರಿಗೆ ಶೋಭೆ ತರುವುದಿಲ್ಲ. ಪಕ್ಷಕ್ಕೆ ದ್ರೋಹ ಎಸಗಿದ ಶೆಟ್ಟರ್ ಅವರಿಗೆ ಮತದಾರರು ಪಾಠ ಕಲಿಸಲಿದ್ದಾರೆ

ಬಿ.ಎಸ್. ಯಡಿಯೂರಪ್ಪ, ಬಿಜೆಪಿ ನಾಯಕ

ಬಿಜೆಪಿಯಲ್ಲಿ ಯಾರಿಗೆ ಯಾರೂ ಟಿಕೆಟ್ ಕೊಡಿಸಲು ಸಾಧ್ಯವಿಲ್ಲ. ನನಗೆ ಟಿಕೆಟ್ ಸಿಗಲು ಸಂತೋಷ್ ಕಾರಣ ಎಂಬುದು ಶೆಟ್ಟರ್ ಅವರ ವೈಯಕ್ತಿಕ ಅಭಿಪ್ರಾಯ

ಮಹೇಶ ಟೆಂಗಿನಕಾಯಿ, ಬಿಜೆಪಿ ಅಭ್ಯರ್ಥಿ, ಹು–ಧಾ ಸೆಂಟ್ರಲ್ ಕ್ಷೇತ್ರ

ಶೆಟ್ಟರ್ ಅವರಿಗೆ ನೀಡಬಹುದಾಗಿದ್ದ ಎಲ್ಲ ಉನ್ನತ ಅಧಿಕಾರವನ್ನೂ ಪಕ್ಷ ನೀಡಿದೆ. ಆದರೆ, ಕಾಂಗ್ರೆಸ್ ಸೇರುವ ಮೂಲಕ ಅವರು ಹೆತ್ತ ತಾಯಿಯನ್ನೇ ತುಳಿದು ಹೋಗಿದ್ದಾರೆ

ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

'ಕೈ' ನಾಲ್ಕನೇ ಪಟ್ಟಿ ಬಿಡುಗಡೆ

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣೆಗೆ ನಾಲ್ಕನೇ ಪಟ್ಟಿಯನ್ನು (ಏಳು ಅಭ್ಯರ್ಥಿಗಳು) ಕಾಂಗ್ರೆಸ್ ಮಂಗಳವಾರ ರಾತ್ರಿ ಪ್ರಕಟಿಸಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿನಿಧಿಸುವ ಶಿಗ್ಗಾವಿ ಕ್ಷೇತ್ರಕ್ಕೆ ಮೊಹಮ್ಮದ್ ಯೂಸುಫ್ ಸವಣೂರು ಅವರನ್ನು ಹುರಿ-ಯಾಳುವನ್ನಾಗಿ ಮಾಡಿದೆ.

ಸುದ್ದಿ 6

ಕ್ಷೇತ್ರ	ಅಭ್ಯರ್ಥಿ
ಲಿಂಗಸುಗೂರು	ಡಿ.ಎಸ್.ಹೂಲಗೇರಿ
ಹುಬ್ಬಳ್ಳಿ–ಧಾರವಾಡ ಕೇಂದ್ರ	ಜಗದೀಶ ಶೆಟ್ಟರ್
ಹುಬ್ಬಳ್ಳಿ–ಧಾರವಾಡ ಪಶ್ಚಿಮ	ದೀಪಕ್ ಚಿಂಚೋರೆ
ಶಿಗ್ಗಾವಿ	ಮೊಹಮ್ಮದ್ ಯೂಸುಫ್ ಸವಣೂರು
ಹರಿಹರ	ನಂದಗಾವಿ ಶ್ರೀನಿವಾಸ್
ಚಿಕ್ಕಮಗಳೂರು	ಎಚ್.ಡಿ. ತಮ್ಮಯ್ಯ
ಶ್ರವಣಬೆಳಗೊಳ	ಎಂ.ಎ.ಗೋಪಾಲಸ್ವಾಮಿ

ಅನಂತಕುಮಾರ್ ನೆಟ್ಟಿದ್ದ ಗಿಡ ಮುದುರಿದೆ: ತೇಜಸ್ವಿನಿ

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷೆ ತೇಜಸ್ವಿನಿ ಅನಂತ ಕುಮಾರ್ ತಮ್ಮ ಪತಿ ಅನಂತಕುಮಾರ್ ಅವರು ಲಾಲ್ ಬಾಗ್‌ನಲ್ಲಿ ನೆಟ್ಟಿದ್ದ ಗಿಡ ಬಾಡಿ ಹೋಗಿರುವ ಬಗ್ಗೆ ಮಾಡಿರುವ ಟ್ವೀಟ್‌ವೊಂದು ಭಾರಿ ಚರ್ಚೆಗೆ ಕಾರಣವಾಗಿದೆ.

'2015ರ ಜೂನ್ 5ರಂದು ಲಾಲ್‌ಬಾಗ್ ಪಶ್ಚಿಮ ದ್ವಾರದ ಬಳಿ ಅನಂತಕುಮಾರ್ ಅವರು ಈ ಗಿಡ ನೆಟ್ಟಿದ್ದರು. ಯಾಕೋ ಮುದುರಿ ಹೋಗಿದೆ. ಲಾಲ್‌ಬಾಗ್ ಅಧಿಕಾರಿಗಳಿಗೆ ವಿಷಯ ತಿಳಿಸಿದ್ದೇವೆ. ಅನಂತಕುಮಾರರ ಅನುಪಸ್ಥಿತಿಯಲ್ಲಿ ಈ ಗಿಡವನ್ನು ಉಳಿಸುವ ಜವಾಬ್ದಾರಿ ನಮ್ಮದು ಎಂಬುದು ನನ್ನ ಭಾವನೆ' ಎಂದಿದ್ದಾರೆ.

ತೇಜಸ್ವಿನಿ ಅವರು ವಿಧಾನಸಭಾ ಚುನಾವಣೆ ಟಿಕೆಟ್ ಆಕಾಂಕ್ಷಿಯಾಗಿದ್ದು, ಅವರಿಗೆ ಟಿಕೆಟ್ ತಪ್ಪಿರುವುದರಿಂದ ತಮ್ಮ ವೇದನೆಯನ್ನು ಸೂಚ್ಯವಾಗಿ ಈ ರೀತಿ ವ್ಯಕ್ತಪಡಿಸಿರಬಹುದು ಎಂಬ ಚರ್ಚೆ ನಡೆಯುತ್ತಿದೆ.

ನಾಮಪತ್ರ ಕೊಡಾಕ ಬಂದೇವ್ರಿ ಸಾಹೇಬ್ರ

ಕಲಬುರಗಿಯಲ್ಲಿ ಮಂಗಳವಾರ ನಾಮಪತ್ರ ಸಲ್ಲಿಕೆ ನಿಮಿತ್ತ ನಡೆಸಿದ ಮೆರವಣಿಗೆಯಲ್ಲಿ ಗ್ರಾಮೀಣ ಮತಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರೇವುನಾಯಕ ಬೆಳಮಗಿ ಅವರನ್ನು ಕಾರ್ಯಕರ್ತರು ಹೆಗಲ ಮೇಲೆ ಹೊತ್ತುಕೊಂಡು ಸಂಭ್ರಮಿಸಿದರು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಡಿ.ಎಸ್. ವೀರಯ್ಯ ವಿರುದ್ಧ ಆರೋಪ 'ಲೋಕಾ' ತನಿಖೆ

ಟರ್ಮಿನಲ್: ₹55 ಕೋಟಿ ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸಾರಿಗೆ ಇಲಾಖೆಯ ಅಧೀನದಲ್ಲಿರುವ ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್‌ನಲ್ಲಿ ಕಾಮಗಾರಿಯನ್ನೇ ನಡೆಸದೇ ₹ 55 ಕೋಟಿ ದುರ್ಬಳಕೆ ಮಾಡಿರುವ ಆರೋಪದ ಕುರಿತು ಲೋಕಾಯುಕ್ತ ಪೊಲೀಸರು ತನಿಖೆ ಆರಂಭಿಸಿದ್ದು, ಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ಮಂಗಳವಾರ ಶೋಧ ನಡೆಸಿದ್ದಾರೆ.

ಲಾರಿ ಚಾಲಕರು ಮತ್ತು ಸಿಬ್ಬಂದಿಯ ಬಳಕೆಗಾಗಿ ರಾಜ್ಯದ ವಿವಿಧೆಡೆ ಮೂಲಸೌಕರ್ಯ ಅಭಿವೃದ್ಧಿಪಡಿಸಲು ಬಿಡುಗಡೆ ಮಾಡಿದ್ದ ₹55 ಕೋಟಿಯನ್ನು ಅರಸು ಟ್ರಕ್ ಟರ್ಮಿನಲ್ ಅಧ್ಯಕ್ಷ ಡಿ.ಎಸ್. ವೀರಯ್ಯ ಮತ್ತು ಹಿಂದಿನ ವ್ಯವಸ್ಥಾಪಕ ನಿರ್ದೇಶಕ ಶಂಕರಪ್ಪ ಸೇರಿ ಕಾಮಗಾರಿ ನಡೆಸದೇ ವಿವಿಧ ಕಂಪನಿಗಳ ಖಾತೆಗಳಿಗೆ ವರ್ಗಾಯಿಸಿ ಅಕ್ರಮ ಎಸಗಿದ್ದಾರೆ ಎಂಬ ಆರೋಪದ ಕುರಿತು ತನಿಖೆ ಆರಂಭಿಸಲಾಗಿದೆ.

5ನೇ ಪುಟ ನೋಡಿ

ನೇರ ಹಣ ವರ್ಗಾವಣೆ ಪತ್ತೆ

'ರಾಜ್ಯದ ಹಲವು ಜಿಲ್ಲೆಗಳಲ್ಲಿ ಟ್ರಕ್ ಟರ್ಮಿನಲ್‌ಗಳ ನಿರ್ಮಾಣ ಮತ್ತು ಮೂಲ ಸೌಕರ್ಯ ಒದಗಿಸಲು ರಾಜ್ಯ ಸರ್ಕಾರ ಬಿಡುಗಡೆ ಮಾಡಿದ್ದ ಹಣ ಸಂಸ್ಥೆಯ ಖಾತೆಯಲ್ಲಿತ್ತು. ಅದನ್ನು ಕಾಮಗಾರಿ ನಡೆಸದೇ ನೇರವಾಗಿ ಪಾವತಿಸಿರುವುದು ಕಡತಗಳ ಪರಿಶೀಲನೆ ವೇಳೆ ತಿಳಿದುಬಂದಿದೆ. ಅಂದಾಜು ಪಟ್ಟಿ, ಕಾಮಗಾರಿ ಮೇಲ್ವಿಚಾರಣಾ ವರದಿ, ತಾಂತ್ರಿಕ, ಆರ್ಥಿಕ ಪರಿಶೀಲನಾ ವರದಿ ಯಾವುದೂ ಇಲ್ಲದೆ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಚೆಕ್‌ಗೆ ಸಹಿ ಮಾಡಿ ಹಣ ವರ್ಗಾಯಿಸಿರುವು-ದು ಪತ್ತೆಯಾಗಿದೆ' ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಕಡತಗಳನ್ನು ವಶಪಡಿಸಿಕೊಳ್ಳುವ ಪ್ರಕ್ರಿಯೆ ಮುಗಿದ ತಕ್ಷಣ, ಹೆಚ್ಚಿನ ಪರಿಶೀಲನೆ ನಡೆಸಲಾಗುವುದು. ಆರೋಪಕ್ಕೆ ಸಂಬಂಧಿಸಿದಂತೆ ಟರ್ಮಿನಲ್ ಅಧ್ಯಕ್ಷರು ಹಾಗೂ ಹಿಂದಿನ ವ್ಯವಸ್ಥಾಪಕ ನಿರ್ದೇಶಕರ ವಿಚಾರಣೆಯನ್ನೂ ನಡೆಸಲಾಗುತ್ತದೆ. ಬಳಿಕ, ಪ್ರಾಥಮಿಕ ತನಿಖಾ ವರದಿಯನ್ನು ಲೋಕಾಯುಕ್ತರಿಗೆ ಸಲ್ಲಿಸಲಾಗುವುದು. ಅಕ್ರಮ ನಡೆದಿರುವುದು ಕಂಡುಬಂದರೆ, ಎಫ್‌ಐಆರ್ ದಾಖಲಿಸಿ, ಹೆಚ್ಚಿನ ತನಿಖೆ ನಡೆಸಲಾಗುವುದು ಎಂದು ಮೂಲಗಳು ಹೇಳಿವೆ.

ಪ್ರಜಾಮತ ಪುಟಗಳು 6,7

ಉನ್ನಾವೊ ಸಂತ್ರಸ್ತೆಯ ಶೆಡ್‌ಗೆ ಬೆಂಕಿ

ಉನ್ನಾವೊ (ಉತ್ತರ ಪ್ರದೇಶ) (ಪಿಟಿಐ): ಉನ್ನಾವೊ ಅತ್ಯಾಚಾರ ಸಂತ್ರಸ್ತೆಯು ವಾಸವಿದ್ದ ಶೆಡ್‌ನತ್ತ ಬಂದ ಅತ್ಯಾಚಾರ ಆರೋಪಿಗಳು, ಶೆಡ್‌ಗೆ ಬೆಂಕಿ ಹಚ್ಚಿದ್ದಲ್ಲದೆ, ಎರಡು ಹಸುಗೂಸುಗಳನ್ನು ಬೆಂಕಿಯೊಳಗೆ ಮಂಗಳವಾರ ಎಸೆದಿದ್ದಾರೆ.

'ಪ್ರಕರಣ ಹಿಂಪಡೆಯಲು ನಿರಾಕರಿಸಿದ್ದಕ್ಕೆ ಪ್ರತೀಕಾರವಾಗಿ ಈ ಅಮಾನವೀಯ ಕೃತ್ಯ ನಡೆದಿದ್ದು, ಇಬ್ಬರೂ ಮಕ್ಕಳ ಸ್ಥಿತಿ ಚಿಂತಾಜ-ನಕವಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

'ಸಂತ್ರಸ್ತೆಯ ಆರು ತಿಂಗಳ ಗಂಡು ಮಗುವಿಗೆ ಹಾಗೂ ಆಕೆಯ ಎರಡು ತಿಂಗಳ ತಂಗಿಗೆ ಕ್ರಮವಾಗಿ ಶೇ 35 ಹಾಗೂ ಶೇ 45ರಷ್ಟು ಪ್ರಮಾಣದ ಸುಟ್ಟ ಗಾಯಗಳಾಗಿವೆ.

11ನೇ ಪುಟ ನೋಡಿ

'ಮುಸ್ಲಿಂ ಮೀಸಲು ರದ್ದು: ಇನ್ನೊಂದು ವಾರ ಜಾರಿ ಇಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಮುಸ್ಲಿಮರಿಗೆ ನೀಡಿದ್ದ ಶೇ 4ರಷ್ಟು ಒಬಿಸಿ ಕೋಟಾ ಮೀಸಲಾತಿಯನ್ನು ರದ್ದುಗೊಳಿಸಿರುವ ನಿರ್ಧಾರವನ್ನು ಇನ್ನೂ ಒಂದು ವಾರದವರೆಗೆ ಜಾರಿಗೊಳಿಸು-ವುದಿಲ್ಲ ಎಂದು ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮಂಗಳವಾರ ತಿಳಿಸಿದೆ.

ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಹಾಗೂ ಬಿ.ವಿ.ನಾಗರತ್ನ ಅವರನ್ನು ಒಳಗೊಂಡ ದ್ವಿಸದಸ್ಯ ಪೀಠದ ಎದುರು ಕರ್ನಾಟಕ ಸರ್ಕಾರದ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಪ್ರಮಾಣಪತ್ರ ಸಲ್ಲಿಸಲು ಸರ್ಕಾರಕ್ಕೆ ಹೆಚ್ಚಿನ ಕಾಲಾವಕಾಶ ಬೇಕಿದೆ' ಎಂದರು.

ಅರ್ಜಿದಾರರ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, 'ರಾಜ್ಯ ಸರ್ಕಾರವು ವಾರದೊಳಗೆ ಪ್ರತಿಕ್ರಿಯೆ ನೀಡಬೇಕು. ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಬಹುದು' ಎಂದು ಸಲಹೆ ನೀಡಿದರು. ಇದಕ್ಕೆ ಒಪ್ಪಿದ ಪೀಠವು ವಿಚಾರಣೆಯನ್ನು ಏಪ್ರಿಲ್ 25ಕ್ಕೆ ಮುಂದೂಡಿತು. ಪ್ರತಿಕ್ರಿಯೆ ನೀಡಲು ಏಪ್ರಿಲ್ 17ರವರೆಗೆ ಕಾಲಾವಕಾಶ ನೀಡುವಂತೆ ರಾಜ್ಯ ಸರ್ಕಾರ ಕಳೆದ ವಾರ ಕೋರಿತ್ತು.

ಮುಸ್ಲಿಮರಿಗೆ ಇದ್ದ ಶೇ 4ರಷ್ಟು ಮೀಸಲಾತಿಯನ್ನು ರದ್ದುಪಡಿಸಿ ಕರ್ನಾಟಕ ಸರ್ಕಾರವು ಮಾರ್ಚ್ 27ರಂದು ಆದೇಶ ಹೊರಡಿಸಿತ್ತು.

5ನೇ ಪುಟ ನೋಡಿ

'ಅಭಿವೃದ್ಧಿ ಆಗಿಲ್ಲ ಅಂದರೆ ಮಾನಸಿಕ ಆಸ್ಪತ್ರೆಗೆ ಸೇರಿಸ್ತೇನೆ'

ಪ್ರಜಾವಾಣಿ ವಾರ್ತೆ

ವಿಶ್ವೇಶ್ವರ ಹೆಗಡೆ ಕಾಗೇರಿ

ಶಿರಸಿ: 'ಕ್ಷೇತ್ರ ಹಿಂದೆಂದಿಗಿಂತಲೂ ಹೆಚ್ಚು ಅಭಿವೃದ್ಧಿ ಕಾಣುತ್ತಿರುವಾಗ ಕೆಲವರು ಅಭಿವೃದ್ಧಿ ಆಗಿಲ್ಲ ಎನ್ನುತ್ತ ಜನರ ದಿಕ್ಕು ತಪ್ಪಿಸುವ ಕಾರ್ಯ ಮಾಡುತ್ತಿದ್ದಾರೆ. ಅಂಥ ವ್ಯಕ್ತಿಗಳನ್ನು ಮಾನಸಿಕ ಆಸ್ಪತ್ರೆಗೆ ಸೇರಿಸುವ ಕೆಲಸ ಮಾಡುತ್ತೇನೆ' ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ನಗರದಾದ್ಯಂತ ಡೊಳ್ಳು, ತಮಟೆ ಸದ್ದಿನ ಅಬ್ಬರ, ಅಭಿಮಾನಿಗಳ ನೃತ್ಯ, ಮೆರವಣಿಗೆ ಮಧ್ಯೆ ಹೂ ಮಳೆಯ ಸ್ವಾಗತದ ನಡುವೆ 7ನೇ ಬಾರಿ ವಿಧಾನಸಭೆ ಚುನಾವಣೆಗೆ ಬಿಜೆಪಿಯ ವಿಶ್ವೇಶ್ವರ ಹೆಗಡೆ ಕಾಗೇರಿ ಮಂಗಳವಾರ ನಾಮಪತ್ರ ಸಲ್ಲಿಸಿದರು.

Subject Number	Parameter	Baseline Visit	Visit 3	Visit 4	Improvement Baseline to Visit 3	Improvement Baseline to Visit 4
Subject 01	HbA1c	8.2	7.1	5.9	Yes	Yes
Subject 05	HbA1c	8.1	7.1	6.0	Yes	Yes
Subject 08	HbA1c	8.8	7.6	5.7	Yes	Yes
Subject 09	HbA1c	9.2	8.3	6.1	Yes	Yes
Subject 10	HbA1c	9.4	8.7	7.4	Yes	Yes
Subject 11	HbA1c	8.9	7.2	5.9	Yes	Yes
Subject 12	HbA1c	8.2	7.6	6.0	Yes	Yes

ಚಿನಕುರಳಿ

ಪ್ರಕಾಶ್ ಶೆಟ್ಟಿ

2022-23ರಲ್ಲಿ ಶೇ 45ರಷ್ಟು ಏರಿಕೆ

ಬಿಸಿಲಿನ ಝಳ: ಬಿಯರ್ ಮಾರಾಟ ಹೆಚ್ಚಳ

• ಪವನ್‌ಕುಮಾರ್ ಎಚ್.

ಹುಬ್ಬಳ್ಳಿ: ರಾಜ್ಯದಲ್ಲಿ ಬಿಯರ್ ಮಾರಾಟ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. 2021-22ನೇ ಸಾಲಿಗೆ ಹೋಲಿಸಿದರೆ, 2022-23ನೇ ಸಾಲಿನಲ್ಲಿ ಬಿಯರ್ ಮಾರಾಟದಲ್ಲಿ ಶೇ 45ರಷ್ಟು ಏರಿಕೆಯಾಗಿದೆ.

ಬಿಯರ್ ತಯಾರಿಕೆಯ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶದಿಂದ ರಾಜ್ಯದಲ್ಲಿ ಲಭ್ಯವಿರುವ ಬಿಯರ್‌ಗಳ ವೈವಿಧ್ಯ ಹೆಚ್ಚಿದೆ. ಇದೂ ಮತ್ತು ಹೆಚ್ಚುತ್ತಿರುವ ತಾಪಮಾನದಿಂದಾಗಿ ಬಿಯರ್ ಮಾರಾಟದಲ್ಲಿ ಹೆಚ್ಚಳವಾಗಿದೆ ಎಂದು ಅಬಕಾರಿ ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ.

2022-23ರ ಹಣಕಾಸು ವರ್ಷದಲ್ಲಿ 390.66 ಲಕ್ಷ ಕಾರ್ಟನ್ ಬಾಕ್ಸ್ (ಎಲ್‌ಸಿಬಿ) ಬಿಯರ್ ಮಾರಾಟವಾಗಿವೆ. ಇದರ ಹಿಂದಿನ ವರ್ಷ 2021-22ರಲ್ಲಿ 268.83 ಎಲ್‌ಸಿಬಿಯಷ್ಟು ಬಿಯರ್ ಮಾರಾಟ-ವಾಗಿದ್ದವು. ಈ ಬಾರಿ ಹೆಚ್ಚುವರಿಯಾಗಿ 121.83 ಎಲ್‌ಸಿಬಿಯಷ್ಟು ಬಿಯರ್ ಮಾರಾಟವಾಗಿದ್ದು, ಅಬಕಾರಿ ಇಲಾಖೆಗೆ ₹ 800 ಕೋಟಿ ಹೆಚ್ಚಿನ ಆದಾಯ ತಂದುಕೊಟ್ಟಿದೆ.

2019-20 ಹಾಗೂ ಕೋವಿಡ್ ತೀವ್ರವಾಗಿದ್ದ 2020-21ರಲ್ಲಿ ಬಿಯರ್ ಮಾರಾಟ ಕುಸಿತ ಕಂಡಿತ್ತು. ಆ ಎರಡೂ ಆರ್ಥಿಕ ವರ್ಷಗಳಲ್ಲಿ ಕ್ರಮವಾಗಿ 289.60 ಎಲ್‌ಸಿಬಿ ಹಾಗೂ 237.83 ಎಲ್‌ಸಿಬಿಯಷ್ಟು ಬಿಯರ್ ಮಾರಾಟವಾಗಿತ್ತು. ಇದಕ್ಕೂ ಮುಂಚೆ 2018-19ರಲ್ಲಿ 300.85 ಎಲ್‌ಸಿಬಿಯಷ್ಟು ಬಿಯರ್ ಮಾರಾಟವಾಗಿತ್ತು. ಇದರ ಹಿಂದಿನ ವರ್ಷದಲ್ಲಿ 265.77 ಎಲ್‌ಸಿಬಿಯಷ್ಟು ಬಿಯರ್ ಅನ್ನು ಜನರು ಖರೀದಿಸಿದ್ದರು.

ಹಲವು ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಬಿಯರ್ ಉತ್ಪನ್ನಗ-ಳನ್ನು ರಾಜ್ಯದ ಮಾರುಕಟ್ಟೆಗೆ ಬಿಡುಗಡೆ ಮಾಡಿವೆ. ಗ್ರಾಹಕರ ಎದುರು ಹಲವು ಆಯ್ಕೆಗಳಿದ್ದು, ಬಿಯರ್ ಜನಪ್ರಿಯತೆ ಹೆಚ್ಚಾಗಲು ಕಾರಣವಾಗಿದೆ ಎಂದು ಅಬಕಾರಿ ಇಲಾಖೆಯ ಜಂಟಿ ನಿರ್ದೇಶಕ (ಅಂಕಿ–ಅಂಶಗಳ ವಿಭಾಗ) ಕೆ.ಎಸ್. ಶಿವಯ್ಯ 'ಪ್ರಜಾವಾಣಿ'ಗೆ ತಿಳಿಸಿದರು.

ದೇಶೀ ಮದ್ಯದ್ದೇ ಪ್ರಾಬಲ್ಯ



ಬಿಯರ್ ಮಾರಾಟ ಏರಿಕೆ ಕಾಣುತ್ತಿದ್ದರೂ ದೇಶೀಯ ತಯಾರಿಕಾ ಮದ್ಯ (ಐಎಂಎಲ್) ಈಗಲೂ ಮಾರುಕಟ್ಟೆಯಲ್ಲಿ ಪ್ರಾಬಲ್ಯ ಹೊಂದಿದೆ. ಶೇ 85ರಷ್ಟು ಆದಾಯ ತಂದು ಕೊಡುತ್ತದೆ. ಬಿಯರ್ ಕೇವಲ ಶೇ 15ರಷ್ಟು ಆದಾಯ ನೀಡುತ್ತದೆ.

2022-23ರಲ್ಲಿ ದೇಶೀಯ ಮದ್ಯ (ಐಎಂಎಲ್) ಹಾಗೂ ಬಿಯರ್ ಮಾರಾಟದಿಂದ ಸರ್ಕಾರಕ್ಕೆ ₹ 29,790 ಕೋಟಿ ಆದಾಯ ಬಂದಿದೆ. 2021-22ರಲ್ಲಿ ₹ 26,377 ಕೋಟಿ ಆದಾಯ ಇತ್ತು. 2023-24ರ ಸಾಲಿನಲ್ಲಿ ₹35 ಸಾವಿರ ಕೋಟಿ ಆದಾಯದ ಗುರಿಯನ್ನು ಇಲಾಖೆ ಹೊಂದಿದೆ.

ಸುಧಾ, ಮಯೂರ ಓದಿರಿ

KHADI AND VILLAGE INDUSTRIES COMMISSION
Ministry of Micro, Small & Medium Enterprises, Govt. of India,
Multi Disciplinary Training Centre(MDTC), Vijinapura Near FCI Godown, Doorvaninagar, Bangalore-560 016. Karnataka, Phone : 080-2565 0285, E-mail: kvicbang@gmail.com

DISPOSAL OF BAMBOO TREES
SHORT TENDER NOTICE

The Multi Disciplinary Training Centre Khadi and Village Industries Commission, Ministry of MSME, Govt of India, Vijinapura Bangalore is having grown up Bamboo Trees in its premises. It is decided to sell the Bamboo Trees on as is where is basis for the user. Hence sealed quotations are invited from the interested buyers. Interested buyers who are willing to cut it and transport on their own cost are requested to submit the rate per tree irrespective of height of plant along with **EMD of Rs 10,000/-** through Demand draft Infavour of Principal **"MDTC, KVIC"** Account to the Principal Multi Disciplinary Training centre KVIC, Vijinapura Doorvaninagar Bangalore – 560016. Last date for submitting the tender is **28.04.2023 at 03.00 PM** and the **tender will be opened at 04.00 PM** on the same day. Inspection of Bamboo trees will be made available during office working day between 10.00 AM to 5.00 PM. For further details if any you may visit this training centre and contact over phone 080:25650285.

Sd/- DIRECTOR / PRINCIPAL

ಆಸ್ತಿ ತೆರಿಗೆ: ಶೇ 5ರಷ್ಟು ರಿಯಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಪ್ರತಿ ವರ್ಷದಂತೆ ಈ ವರ್ಷವೂ ಆಸ್ತಿ ತೆರಿಗೆ ಪಾವತಿಗೆ ಶೇ 5ರಷ್ಟು ರಿಯಾಯಿತಿ ಘೋಷಿಸಿದೆ.

ಆಸ್ತಿ ಮಾಲೀಕರು ಏ.30ರೊಳಗೆ ಪಾವತಿಸುವ ತೆರಿಗೆಗೆ ರಿಯಾಯಿತಿ ಪಡೆಯಬಹುದು. https://bbmptax.karnataka.gov.in/ ಮೂಲಕ ಆನ್‌ಲೈನ್‌ನಲ್ಲಿ ತೆರಿಗೆ ಪಾವತಿಸಬಹುದಾಗಿದೆ.

ಅಪಾರ್ಟ್‌ಮೆಂಟ್ ಸುತ್ತಲಿನ ಮರ ಕಡಿಯಲು ಹೈಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನ್ನೇರುಘಟ್ಟ ರಸ್ತೆಯಲ್ಲಿರುವ ಮಂತ್ರಿ ಎಲಿಗೆನ್ಸ್ ಅಪಾರ್ಟ್‌ಮೆಂಟ್ ಸುತ್ತಲೂ ಬೆಳೆದಿರುವ ಮರಗಳು ಅಗ್ನಿ ಸುರಕ್ಷತಾ ಪ್ರಮಾಣ ಪತ್ರ ಪಡೆಯುವುದಕ್ಕೆ ಅಡ್ಡಿಯಾಗಿವೆ ಎಂಬ ಕಾರಣವನ್ನು ಮಾನ್ಯ ಮಾಡಿರುವ ಹೈಕೋರ್ಟ್, 49 ಮರಗಳನ್ನು ಕಡಿಯುವುದಕ್ಕೆ ಅವಕಾಶ ಕಲ್ಪಿಸಿದೆ.

ಈ ಸಂಬಂಧ, 'ಮಂತ್ರಿ ಎಲಿಗೆನ್ಸ್ ಅಪಾರ್ಟ್‌ಮೆಂಟ್ ಮಾಲೀಕರ ಸಂಘ' ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, 'ವೃಕ್ಷ ಅಧಿಕಾರಿಯ ಸಮ್ಮುಖದಲ್ಲಿ ಅಷ್ಟೇ ಗಿಡಗಳನ್ನು ನೆಡಬೇಕು' ಎಂದು ಅರ್ಜಿದಾರರಿಗೆ ನಿರ್ದೇಶಿಸಿದೆ.

ಪ್ರಕರಣವೇನು?: 'ಮಂತ್ರಿ ಎಲಿಗೆನ್ಸ್ ಅಪಾರ್ಟ್‌ಮೆಂಟ್ ಮಾಲೀಕರ ಸಂಘ'ವು ಅಗ್ನಿ ಸುರಕ್ಷತಾ ಪ್ರಮಾಣ ಪತ್ರದ ನವೀಕರಣ ಕೋರಿ ಗೃಹ ರಕ್ಷಕ ದಳದ ಪೊಲೀಸ್ ಮಹಾ ನಿರ್ದೇಶಕರಿಗೆ ಅರ್ಜಿ ಸಲ್ಲಿಸಿತ್ತು. ಈ ಸಂಬಂಧ ಗೃಹರಕ್ಷಕ ದಳದ ಅಧಿಕಾರಿಗಳು 2021ರ ಅಕ್ಟೋಬರ್ 5ರಂದು ಅಪಾರ್ಟ್‌ಮೆಂಟ್‌ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು.

ಪರಿಶೀಲನೆ ವೇಳೆ ಅಪಾರ್ಟ್‌ಮೆಂಟ್ ಆವರಣವೂ ಸೇರಿದಂತೆ ಸುತ್ತಮುತ್ತಲಿನಲ್ಲಿ ಬೃಹತ್ತಾದ ಮರಗಳು, ಸಣ್ಣಸಣ್ಣ ಕುರುಚಲು ಗಿಡಗಂಟೆ ಬೆಳೆದಿರುವುದನ್ನು ಗಮನಿಸಿದ್ದ ಅಧಿಕಾರಿಗಳು, 'ಕಟ್ಟಡದ ಆವರಣ ಪ್ರವೇಶಿಸಲು ವಾಹನಗಳಿಗೆ ಕಷ್ಟವಿದೆ. ಹೀಗಾಗಿ, ಅಗ್ನಿ ಸುರಕ್ಷತಾ ಪ್ರಮಾಣ ಪತ್ರದ ನವೀಕರಣ ಸಾಧ್ಯವಿಲ್ಲ' ಎಂದು ಮನವಿಯನ್ನು ತಿರಸ್ಕರಿಸಿದ್ದರು. ಅಂತೆಯೇ, 'ಮುಂದಿನ 15 ದಿನಗಳಲ್ಲಿ ಅಗ್ನಿ ಸುರಕ್ಷತಾ ಪ್ರಮಾಣ ಪತ್ರ ಪಡೆಯದೇ ಹೋದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು 2022ರ ಮಾರ್ಚ್ 23ರಂದು ಎಚ್ಚರಿಕೆಯ ನೋಟಿಸ್ ನೀಡಿದ್ದರು.

ಇದರಿಂದಾಗಿ ಅಪಾರ್ಟ್‌ಮೆಂಟ್ ಮಾಲೀಕರ ಸಂಘವು, 'ವಾಹನಗಳ ಪ್ರವೇಶಕ್ಕೆ ಅಡ್ಡಿಯಾಗಿವೆ ಎಂದು ಗುರುತಿಸಲಾದ 49 ಮರಗಳನ್ನು, ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ–1976ರ ಪ್ರಕಾರ ತೆರವುಗೊಳಿಸಲು ಅನುಮತಿ ನೀಡಬೇಕು' ಎಂದು ಕೋರಿ ವಲಯ ಅರಣ್ಯ ಇಲಾಖೆಗೆ ಮನವಿ ಮಾಡಿತ್ತು. ಈ ಮನವಿಗೆ ಪ್ರತಿಕ್ರಿಯಿಸಿದ್ದ ವಲಯ ಅರಣ್ಯಾಧಿಕಾರಿಗಳು, 'ಈ ಮರಗಳು ಯಾರ ಆಸ್ತಿ, ಪಾಸ್ತಿ ಹಾಗೂ ಜೀವಕ್ಕೆ ಹಾನಿಯುಂಟು ಮಾಡುವ ಸಂಭವವಿಲ್ಲ. ಹೀಗಾಗಿ, ಇವುಗಳನ್ನು ತೆರವುಗೊಳಿಸಲು ಅವಕಾಶ ನೀಡಲಾಗುವುದಿಲ್ಲ' ಎಂದು ಮನವಿಯನ್ನು ತಿರಸ್ಕರಿಸಿದ್ದರು. ಈ ಕ್ರಮಗಳನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಪ್ರಜಾವಾಣಿ@75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಮೂವರು ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಆಯೋಗದ ಸೂಚನೆಯಂತೆ ನಗರದ ಮೂರು ಪೊಲೀಸ್ ಠಾಣೆಗಳ ಇನ್‌ಸ್ಪೆಕ್ಟರ್‌ಗಳನ್ನು ಮಂಗಳವಾರ ರಾತ್ರಿ ದಿಢೀರ್ ವರ್ಗಾವಣೆ ಮಾಡಲಾಗಿದೆ.

ರಾಜರಾಜೇಶ್ವರಿ ನಗರ ಠಾಣೆಯ ಶಿವಕುಮಾರ್, ಯಶವಂತಪುರ ಪೊಲೀಸ್ ಠಾಣೆಯ ಶ್ರೀಕಂಠಯ್ಯ ಹಾಗೂ ನಂದಿನಿ ಲೇಔಟ್ ಪೊಲೀಸ್ ಠಾಣೆಯ ನೆಲವಾಗಲು ಮಂಜುನಾಥ್ ಅವರನ್ನು ವರ್ಗಾವಣೆ ಮಾಡಲಾಗಿದೆ.

KSIC MysoreSilk® heritage weaves 100% PURE SILK SINCE 1912 GI - 11
MysoreSilk 100 GRAND YEARS
TÜVRheinland CERT ISO 9001 ISO 14001 ISO 15001-2018

ಕೆಎಸ್‌ಐಸಿ ಮೈಸೂರು ಸಿಲ್ಕ್ ಸೀರೆಗಳ
ಸೆಕೆಂಡ್ಸ್ ಮಾರಾಟ
35%* ರವರೆಗೆ ರಿಯಾಯಿತಿ ಮಾರಾಟ
ಈ ಮಾರಾಟ ಕೇವಲ 5 ದಿನಗಳು ಮಾತ್ರ
19 ರಿಂದ 23ನೇ ಏಪ್ರಿಲ್, 2023
ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆಯವರೆಗೆ
ಸ್ಥಳ: ಕೆನರಾ ಯೂನಿಯನ್ ಹಾಲ್,
ನಂ. 42, ಕೆನರಾ ಯೂನಿಯನ್ ರಸ್ತೆ, ಬಸ್ ನಂ. 90 ಮಾರ್ಗ,
8ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003.
ತ್ವರೆಮಾಡಿ! ಕೊಡುಗೆ ಸ್ಟಾಕ್ ಇರುವವರೆಗೆ ಮಾತ್ರ

IN THE COURT OF THE CITY CIVIL JUDGE
AT BENGALURU (CCH-40)
Ex. Petition No. 1146/2019
In
O.S. No. 4426/2014

BETWEEN : Sanjay Vitthalrao Sindhe, S/o Vitthalrao Shinde, aged about 55 years, Occ. Business, R/o. Post Ningoan (T), Taluk Madha, District Solhapur, Maharastra-413210. **...Decree Holder**
AND : Umapathi K Reddy ...Judgement Debtor

Notice for appearance/and to objection if any on the draft sale deed filled by the decree Holder

To, **Umapathy K Reddy,** S/o. Krishnappa, aged about 61 years, R/o. C/o. N. Puttuswamy, Flat No.301, Chandra Hill View Apartment, /36 Ravi Hill View Layout, BSK III Stage, Bangalore - 560 085. Also at : 9562, Shadowgrave, Dr. Rancho, Cucamonga CA-91730.

Whereas, the Decree Holder herein has filed the above petition for execution of the Decree in O S No. 4426/2014 in E P No. 1146/2019 to direct the judgement debtor to execute the sale deed in favour of the decree holder and the decree holder has filed the sale deed draft before this Hon'ble Court for executing the sale deed through court. You are hereby summoned to appear in person or by a pleaser **on 21.04.2023** at CCH-40 City Civil Court Bengaluru to file objections if any before to execute and register the sale deed if any failing which the above petition shall be disposed off in accordance with law.

SCHEDULE PROPERTY

All that piece and parcel of the property bearing Sy.No. 105 (Old No. 67/1) measuring to an extent of 0.20 guntas vide Order ALN SR(SP) 226.20.2.02 dated 16.02.2002 situated at Belundur Village, Varthur Hobli, Bengaluru East Taluk (earlier Bengaluru South Taluk) Bounded by:
East By : Sy.No. 66/2, i.e Item No.2 herein, **West By :** Property Belonging to Papanna Reddy, **North By :** Property belonging to Naga Reddy Hanumappa, **South By :** Property belonging to K. Jagannath, Sy.No. 105 (Old Sy.No. 67/1)

ITEM No. II : All that piece and parcel of the property bearing Sy.No. 66/2 measuring to an extent of 0.03 guntas vide Order ALN SR(SP) 226.20.2.02 dated 16.02.2002 situated at Belundur Village, Varthur Hobli, Bengaluru East Taluk (earlier Bengaluru South Taluk) Bounded by:
East By : Part of Sy.No. 66 belonging to B V Ramachandra Reddy, **West By :** Property Belonging to K. Umapathi Reddy Sy.No. 105 (Old No. 67/1), **North By:** Private Property, **South By** : Property belonging to K. Jagannath, within Sy.No. 66/2.

Given under my hand and Seal of this Court on 18.04.2023.

By Order of the Court, Assistant Registrar, City Civil Court, Bangalore.
Advocate for Decree holder :
Nitin R Kalashetti, Advocate
No. 8, Square One Complex, Civil Chowk, Opp. District Court, Solapur, Maharasthra, M: 9423588236
e-mail : mkalshetti@gmail.com

22–23ಕ್ಕೆ 'ಎಡ್ಯುವರ್ಸ್' ಶಿಕ್ಷಣ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ವತಿಯಿಂದ ಆಯೋಜಿಸಿರುವ ಕರ್ನಾಟಕದ ಅತಿ ದೊಡ್ಡ ಶೈಕ್ಷಣಿಕ ಮೇಳ 'ಎಡ್ಯುವರ್ಸ್: ಜ್ಞಾನ ದೇಗುಲ–2023' ಇದೇ ತಿಂಗಳು 22 ಮತ್ತು 23ರಂದು ಅರಮನೆ ಮೈದಾನದ ತ್ರಿಪುರ ವಾಸಿನಿ ಆವರಣದಲ್ಲಿ ನಡೆಯಲಿದೆ.

ಚಲನಚಿತ್ರ ನಟ ರಮೇಶ್ ಅರವಿಂದ್ ಅವರು 13ನೇ ಆವೃತ್ತಿಯ ಮೇಳ ಉದ್ಘಾಟಿಸಲಿದ್ದಾರೆ. ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಹಾಗೂ ಅಂತಃಶಕ್ತಿಯ ಬಲವರ್ಧನೆಗಾಗಿ ಉತ್ತಮ ಮಾರ್ಗದರ್ಶನ ಒದಗಿಸುವುದು ಈ ಶೈಕ್ಷಣಿಕ ಮೇಳದ ಉದ್ದೇಶ. 50ಕ್ಕೂ ಹೆಚ್ಚು ಅಗ್ರಗಣ್ಯ ಶೈಕ್ಷಣಿಕ ಸಂಸ್ಥೆಗಳು ಈ ಮೇಳದಲ್ಲಿ ಭಾಗಿಯಾಗಲಿದ್ದು, ಪಿಯುಸಿ ಬಳಿಕ ಲಭ್ಯವಿರುವ ಕೋರ್ಸ್‌ಗಳು, ಅವಕಾಶಗಳ ಬಗ್ಗೆ ಮಾಹಿತಿ ಸಿಗಲಿದೆ. ಸಿಇಟಿ, ನೀಟ್, ಕಾಮೆಡ್‌–ಕೆ ಅಧಿಕಾರಿಗಳು ಹಾಗೂ ತಜ್ಞರೊಂದಿಗೆ ನೇರ ಸಂವಹನದ ಅವಕಾಶ ದೊರೆಯಲಿದೆ.

ವೈದ್ಯಕೀಯ, ದಂತ, ನೀಟ್ ಮತ್ತು ಕಾಮೆಡ್‌–ಕೆ ಕುರಿತು ವೃತ್ತಿ ಮಾರ್ಗದರ್ಶನ ದೊರೆಯಲಿದೆ. ಶಿಕ್ಷಣ ತಜ್ಞರ ಸಾರಥ್ಯದಲ್ಲಿ ನಡೆಯಲಿರುವ ಈ ಬೃಹತ್ ಮೇಳದಲ್ಲಿ, ಶೈಕ್ಷಣಿಕ ಭವಿಷ್ಯ ರೂಪಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಸಿಗಲಿದೆ.

ಶಿಕ್ಷಣ ಸಾಲ ಯೋಜನೆಯ ಜತೆಗೆ ವಿಶೇಷ ಕೋರ್ಸ್‌ಗಳ ಮಾಹಿತಿಯೂ ದೊರೆಯಲಿದೆ. ಪ್ರತಿಷ್ಠಿತ ವಿಶ್ವವಿದ್ಯಾಲಯಗಳು, ಕಾಲೇಜುಗಳ ಮಳಿಗೆಗಳು ಮೇಳದಲ್ಲಿ ಇರಲಿವೆ. ಕಾಲೇಜಿನಲ್ಲಿನ ಕೋರ್ಸ್‌ಗಳ ಮಾಹಿತಿ, ಶುಲ್ಕ ವಿವರ, ಕೋರ್ಸ್ ಅಧ್ಯಯನದಿಂದ ಭವಿಷ್ಯದಲ್ಲಿ ಸಿಗುವ ಉದ್ಯೋಗಾವಕಾಶಗಳ ಕುರಿತು ಮಾಹಿತಿ ದೊರೆಯುತ್ತದೆ.

ನೀಟ್ ಮತ್ತು ಸಿಇಟಿ ಅಣಕು ಪರೀಕ್ಷೆಯನ್ನೂ ನಡೆಸಲಾಗುತ್ತದೆ. ಟಾಪರ್‌ಗಳಿಗೆ ₹ 1 ಲಕ್ಷದವರೆಗೆ ನಗದು ಗೆಲ್ಲುವ ಅವಕಾಶ ಇರಲಿದೆ. ಆನ್‌ಲೈನ್‌ನಲ್ಲಿ ನೋಂದಣಿ ಪ್ರಾರಂಭವಾಗಿದ್ದು, ಆಸಕ್ತರು www.eduverse.in ಮೂಲಕ ನೋಂದಣಿ ಮಾಡಿಕೊಳ್ಳಬಹುದು. ಮೇಳದ ದಿನದಂದು ಬೆಳಿಗ್ಗೆ 9 ಗಂಟೆಯಿಂದ ಸ್ಥಳದಲ್ಲಿ ನೋಂದಾಯಿಸಿಕೊಳ್ಳಲು ಅವಕಾಶ ಇರಲಿದೆ.

ಹುಬ್ಬಳ್ಳಿಯಲ್ಲಿ ಇದೇ 29 ಮತ್ತು 30ರಂದು ರಾಯ್ಕರ್ ಪ್ರದರ್ಶನ ಮೈದಾನದಲ್ಲಿ 'ಎಡ್ಯುವರ್ಸ್' ನಡೆಯಲಿದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 9845816919, 9743307037

ನಗರದಲ್ಲಿ ಗರಿಷ್ಠ ತಾಪಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಾತಾವರಣದಲ್ಲಿ ಉಷ್ಣತೆ ಹೆಚ್ಚಳವಾಗುತ್ತಿದ್ದು, ಮಂಗಳವಾರ ಗರಿಷ್ಠ ತಾಪಮಾನ 36.5 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿದೆ. ಇದು ಈ ವರ್ಷ ದಾಖಲಾದ ಗರಿಷ್ಠ ತಾಪಮಾನವಾಗಿದೆ.

ರಾಜ್ಯದ ಹಲವು ಪ್ರದೇಶಗಳಲ್ಲಿಯೂ ಮಂಗಳವಾರ ತಾಪಮಾನದಲ್ಲಿ ಹೆಚ್ಚಳವಾಗಿದೆ. ಬೆಂಗಳೂರು ನಗರ ಮತ್ತು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತ ತಾಪಮಾನ 36.5 ಡಿಗ್ರಿ ಸೆಲ್ಸಿಯಸ್‌ಗೆ ಏರಿಕೆ ಕಂಡಿತ್ತು. ಕನಿಷ್ಠ ತಾಪಮಾನ 20.5 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ. ಈ ತಿಂಗಳು ನಗರದ ತಾಪಮಾನದಲ್ಲಿ ಭಾರಿ ಹೆಚ್ಚಳವಾಗಿದ್ದು, ಕಳೆದೊಂದು ವಾರದಿಂದ ಗರಿಷ್ಠ ತಾಪಮಾನ 35 ಡಿಗ್ರಿ ಸೆಲ್ಸಿಯಸ್, ಕನಿಷ್ಠ ತಾಪಮಾನ 22 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ.

ಹವಾಮಾನ ಇಲಾಖೆಯ ಮಾಹಿತಿ ಪ್ರಕಾರ ಗುರುವಾರದ ಬಳಿಕ ತಾಪಮಾನ ಇಳಿಕೆ ಕಾಣಲಿದೆ. ಬುಧವಾರ ಗರಿಷ್ಠ ತಾಪಮಾನ 36 ಡಿಗ್ರಿ ಸೆಲ್ಸಿಯಸ್, ಕನಿಷ್ಠ ತಾಪಮಾನ 22 ಡಿಗ್ರಿ ಸೆಲ್ಸಿಯಸ್ ಇರಲಿದೆ. ಗರಿಷ್ಠ ತಾಪಮಾನ ಗುರುವಾರ 35 ಡಿಗ್ರಿ ಸೆಲ್ಸಿಯಸ್, ಶುಕ್ರವಾರ 34 ಡಿಗ್ರಿ ಸೆಲ್ಸಿಯಸ್, ಶನಿವಾರ 33 ಡಿಗ್ರಿ ಸೆಲ್ಸಿಯಸ್ ಇರಲಿದೆ. 'ಈ ತಿಂಗಳ ಕೊನೆಯಲ್ಲಿ ಮಳೆಯಾಗುವ ಸಾಧ್ಯತೆಯಿದೆ. ಇದರಿಂದಾಗಿ ತಾಪಮಾನ ತಗ್ಗಲಿದೆ. ನಗರದಲ್ಲಿ ಮಂಗಳವಾರ ಈ ವರ್ಷದ ಗರಿಷ್ಠ ತಾಪಮಾನ ವರದಿಯಾಗಿದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.

'ವಾತಾವರಣದಲ್ಲಿ ತೇವಾಂಶ ಇಲ್ಲದಿರುವುದರಿಂದ ಹಲವೆಡೆ ಉಷ್ಣಾಂಶ ಏರಿಕೆಯಾಗಿದೆ. ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ಬಿಸಿಲಿನ ಪ್ರಖರತೆ ಹೆಚ್ಚಾಗುತ್ತಿದೆ. ಮುಂದಿನ ವಾರ ಮಳೆಯಾಗುವ ಸಾಧ್ಯತೆಯಿದೆ' ಎಂದು ಹವಾಮಾನ ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ವಿವಿಧೆಡೆ ಹೆಚ್ಚಿದ ಉಷ್ಣಾಂಶ

ನವದೆಹಲಿ: ದೇಶದ ಕೆಲವೆಡೆ ಮಂಗಳವಾರ ಅತಿ ಹೆಚ್ಚು ತಾಪಮಾನ ದಾಖಲಾಗಿದೆ. ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ 44.2, ಹರಿಯಾಣದ ಹಿಸ್ಸಾರ್‌ನಲ್ಲಿ 41.4, ಕರ್ನಾಲ್‌ನಲ್ಲಿ 40.7, ಪಂಜಾಬ್‌ನ ಅಂಬಾಲದಲ್ಲಿ 39.7 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿರುವುದಾಗಿ ಎನ್‌ಡಿಟಿವಿ ವರದಿ ಮಾಡಿದೆ.

ತಿರುವನಂತಪುರ (ಪಿಟಿಐ): ಹೆಚ್ಚು ಬಿಸಿಲಿನ ಕಾರಣ ಕೇರಳದಲ್ಲಿ ಸೋಮವಾರ ಒಂದೇ ದಿನ 100.35 ದಶಲಕ್ಷ ಯುನಿಟ್ ವಿದ್ಯುತ್ ಬಳಕೆಯಾಗಿದೆ. ಇದು ಈವರೆಗಿನ ಹೊಸ ದಾಖಲೆ ಎಂದು ಕೇರಳ ರಾಜ್ಯ ವಿದ್ಯುತ್ ಮಂಡಳಿ ಹೇಳಿದೆ. ಪಾಲಕ್ಕಾಡ್‌ನಲ್ಲಿ ಮಂಗಳವಾರ 39.7 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇತ್ತು.

ಪ್ರತಿಭಟನೆ ರಾಜ್ಯಕ್ಕೆ ಅಮೂಲ್ ಹಾಲು ಲಗ್ಗೆ ಇಟ್ಟಿರುವುದನ್ನು ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘದ ಸದಸ್ಯರು ಮಂಗಳವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

4ನೇ ಮಹಡಿಯಿಂದ ಬಿದ್ದು ಮಹಿಳೆ ಸಾವು

ಬೆಂಗಳೂರು: ಪುಟ್ಟೇನಹಳ್ಳಿಯಲ್ಲಿ 4ನೇ ಮಹಡಿಯಿಂದ ಬಿದ್ದು ಕೊತ್ತನೂರು ದಿಣ್ಣೆಯ ನಿವಾಸಿ ಸೋನು ಪೂಜಾರಿ (33) ಅವರು ಮಂಗಳವಾರ ಮೃತಪಟ್ಟಿದ್ದಾರೆ.

ಕೊತ್ತನೂರು ದಿಣ್ಣೆಯ ನಾಲ್ಕು ಅಂತಸ್ತಿನ ಕಟ್ಟಡದಲ್ಲಿ ನಿರಂಜನ್ ಪೂಜಾರಿ ಹಾಗೂ ಸೋನು ಪೂಜಾರಿ ದಂಪತಿ ನೆಲೆಸಿದ್ದರು. ನಿರಂಜನ್ ಅವರು ಕೆಲಸದ ನಿಮಿತ್ತ ಮುಂಬೈಗೆ ತೆರಳಿದ್ದರು. ಸೋನು ಮನೆಯಲ್ಲಿ ಒಬ್ಬರೇ ಇದ್ದರು. ಮಂಗಳವಾರ ಬೆಳಿಗ್ಗೆ 4ನೇ ಮಹಡಿಗೆ ತೆರಳಿದ್ದರು. ಆಗ ಈ ಘಟನೆ ನಡೆದಿದೆ.

'ಇದು ಆತ್ಮಹತ್ಯೆಯೋ, ಕಟ್ಟಡದಿಂದ ಕಾಲು ಜಾರಿ ಬಿದ್ದು ಮೃತಪಟ್ಟಿರುವುದೋ ಎಂಬುದು ತಿಳಿದುಬಂದಿಲ್ಲ' ಎಂದು ಪೊಲೀಸರು ಹೇಳಿದರು.

ಜಲಮಂಡಳಿ ಕಾಮಗಾರಿಯ ಗುಂಡಿಗೆ ಬಿದ್ದು ಮಗು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಡರಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಗೊಲ್ಲರಹಟ್ಟಿ ಎಂಬಲ್ಲಿ ಜಲಮಂಡಳಿ ಕಾಮಗಾರಿ ನಡೆಸಲು ತೆಗೆದಿದ್ದ ಗುಂಡಿಗೆ ಮಗು ಬಿದ್ದು ಮೃತಪಟ್ಟಿದೆ.

ಉತ್ತರಪ್ರದೇಶದ ಹನುಮಾನ್ ಹಾಗೂ ಹಂಸ ದಂಪತಿಯ ಎರಡೂವರೆ ವರ್ಷದ ಕಾರ್ತಿಕ್ ಮೃತಪಟ್ಟ ಮಗು.

'ಕೂಲಿ ಕೆಲಸಕ್ಕೆ ನಗರಕ್ಕೆ ಬಂದಿದ್ದ ದಂಪತಿ ಗೊಲ್ಲರಹಟ್ಟಿ ಬಳಿ ನೆಲೆಸಿದ್ದರು. ಹನುಮಾನ್ ಪೇಂಟಿಂಗ್ ಕೆಲಸ ಮಾಡುತ್ತಿದ್ದರು. ಸೋಮವಾರ ಮಗು ಆಟವಾಡಲು ತೆರಳಿದ್ದಾಗ ಈ ಘಟನೆ ನಡೆದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಬ್ಯಾಡರಹಳ್ಳಿ ವ್ಯಾಪ್ತಿಯಲ್ಲಿ, ಜಲಮಂಡಳಿಯು ಒಂದು ತಿಂಗಳು ಕಳೆದರೂ ಕಾಮಗಾರಿ ಪೂರ್ಣಗೊಳಿಸದೆ ಗುಂಡಿಯನ್ನು ತೆರೆದ ಸ್ಥಿತಿಯಲ್ಲೇ ಬಿಟ್ಟಿತ್ತು. ಕಾಮಗಾರಿ ವೇಳೆ ನಿರ್ಲಕ್ಷ್ಯ ತೋರಿದ ಎಂಜಿನಿಯರ್ ಹಾಗೂ ಗುತ್ತಿಗೆದಾರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಬಾಲಕಿಗೆ ಲೈಂಗಿಕ ದೌರ್ಜನ್ಯ: ಅಪರಾಧಿಗೆ 20 ವರ್ಷ ಕಠಿಣ ಶಿಕ್ಷೆ

ದಾವಣಗೆರೆ: ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ ಅಪರಾಧಿಗೆ ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಎಫ್‌ಟಿಎಸ್‌ಸಿ–1 (ಪೋಕ್ಸೊ ನ್ಯಾಯಾಲಯ) 20 ವರ್ಷ ಕಠಿಣ ಶಿಕ್ಷೆ ಹಾಗೂ ₹ 30,000 ದಂಡ ವಿಧಿಸಿದೆ.

ಬೆಂಗಳೂರಿನ ನದೀಮ್ ಶಿಕ್ಷೆಗೆ ಗುರಿಯಾದ ಅಪರಾಧಿ. ಇಲ್ಲಿನ ಮಹಿಳಾ ಠಾಣೆ ಎಸ್‌ಐ ಶಿಲ್ಪಾ ವೈ.ಎಸ್. ಆರೋಪ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಧೀಶರಾದ ಎನ್. ಶ್ರೀಪಾದ ಅವರು ತೀರ್ಪು ಪ್ರಕಟಿಸಿದರು. ದಂಡದ ಹಣದಲ್ಲಿ ₹ 25,000ವನ್ನು ಸಂತ್ರಸ್ತೆಗೆ ಪರಿಹಾರ ರೂಪದಲ್ಲಿ ನೀಡಬೇಕು. ಸರ್ಕಾರದಿಂದ ₹ 5 ಲಕ್ಷ ಪಾವತಿಸಲು ಆದೇಶಿಸಿದರು. ಸರ್ಕಾರದ ಪರವಾಗಿ ಅಭಿಯೋಜಕ ಕೆ.ಕೆಂಚಪ್ಪ ವಾದಿಸಿದ್ದರು.

ನಗರದ ಕಮ್ಮನಹಳ್ಳಿಯಲ್ಲಿ ಜೋಸ್ ಆಲುಕ್ಕಾಸ್‌ನ ನೂತನ ಮಳಿಗೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ನಟ ಶಿವಧ್ವಜ್ ಶೆಟ್ಟಿ, ನಟಿ ಅನುಷಾ ರೈ, ಜೋಸ್ ಆಲುಕ್ಕಾಸ್ ಅಧ್ಯಕ್ಷ ಜೋಸ್ ಆಲುಕ್ಕಾ, ವ್ಯವಸ್ಥಾಪಕ ನಿರ್ದೇಶಕರಾದ ವರ್ಗೀಸ್ ಆಲುಕ್ಕಾ, ಪಾಲ್ ಜೆ. ಆಲುಕ್ಕಾ ಮತ್ತು ಜಾನ್ ಆಲುಕ್ಕಾ ಇದ್ದರು

ಕಮ್ಮನಹಳ್ಳಿ: ಜೋಸ್ ಆಲುಕ್ಕಾಸ್ ಮಳಿಗೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಮ್ಮನಹಳ್ಳಿಯಲ್ಲಿ ಜೋಸ್ ಆಲುಕ್ಕಾಸ್‌ನ ನೂತನ ಮಳಿಗೆಯನ್ನು ರಾಜ್ಯ ನಿವೃತ್ತ ಪೊಲೀಸ್ ಸಹಾಯಕ ಕಮಿಷನರ್ ಎಂ.ಎಸ್. ಶ್ರೀನಿವಾಸ್ ಉದ್ಘಾಟಿಸಿದರು.

ಈ ಆಭರಣ ಮಳಿಗೆಯಲ್ಲಿ ಚಿನ್ನ, ವಜ್ರ, ಪ್ಲಾಟಿನಿಯಂ ಮತ್ತು ಬೆಳ್ಳಿ ಆಭರಣಗಳ ಬೃಹತ್ ಮತ್ತು ಆಧುನಿಕ ಸಂಗ್ರಹಗಳಿವೆ.

₹40 ಸಾವಿರ ಮೊತ್ತದ ಚಿನ್ನದ ಆಭರಣಗಳನ್ನು ಖರೀದಿಸುವ ಗ್ರಾಹಕರಿಗೆ ಉಚಿತ ಚಿನ್ನದ ನಾಣ್ಯವನ್ನು ನೀಡಲಾಗುತ್ತಿದೆ. ವಜ್ರದ ಮೇಲೆ ಶೇ 20ರಷ್ಟು, ಪ್ಲಾಟಿನಂ ಆಭರಣಗಳ ಮೇಲೆ ಶೇ 7 ರಷ್ಟು ರಿಯಾಯಿತಿ ಪಡೆಯಬಹುದು. ಏಪ್ರಿಲ್ 19ರವರೆಗೆ ಈ ಎಲ್ಲ ರಿಯಾಯಿತಿಗಳ ಪ್ರಯೋಜನ ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

ನಟ ಶಿವಧ್ವಜ್ ಶೆಟ್ಟಿ, ನಟಿ ಅನುಷಾ ರೈ, ಜೋಸ್ ಆಲುಕ್ಕಾಸ್ ಅಧ್ಯಕ್ಷ ಜೋಸ್ ಆಲುಕ್ಕಾ, ವ್ಯವಸ್ಥಾಪಕ ನಿರ್ದೇಶಕರಾದ ವರ್ಗೀಸ್ ಆಲುಕ್ಕಾ, ಪಾಲ್ ಜೆ. ಆಲುಕ್ಕಾ ಮತ್ತು ಜಾನ್ ಆಲುಕ್ಕಾ ಇದ್ದರು.

SAKRA WORLD HOSPITAL
JV by SECOM & TOYOTA TSUSHO, JAPAN

ಸಾಕ್ರ ವರ್ಲ್ಡ್ ಹಾಸ್ಪಿಟಲ್
ಇಲ್ಲಿ ನಿಮಗಾಗಿ ಸಿದ್ಧವಿದೆ
ಬದಲಿ ಯಕೃತ್ (ಲಿವರ್) ಕಸಿ ಶಸ್ತ್ರಕ್ರಿಯೆ
ಹಾಗೂ ಸಮಗ್ರ ನಿರ್ವಹಣೆಯ ಸೌಲಭ್ಯ

ಮುಖ್ಯಾಂಶಗಳು

ಬದಲಿ ಲಿವರ್ ಕಸಿ (ವಯಸ್ಕರ ಹಾಗೂ ಮಕ್ಕಳ) ಶಸ್ತ್ರಚಿಕಿತ್ಸೆಗಾಗಿ ಮೀಸಲಾದ ತಜ್ಞರ ತಂಡ। ಹೆಪಟಾಲಜಿಸ್ಟ್‌ಗಳು, ಟ್ರಾನ್ಸ್‌ಪ್ಲಾಂಟ್ ಸರ್ಜನ್ಸ್, ಕೊಆರ್ಡಿನೇಟರ್, ಅನಸ್ಥೆಸಿಯಾಲಜಿಸ್ಟ್ಸ್, ಫಿಸಿಯೋತೆರಪಿಸ್ಟ್‌ಗಳು ಮತ್ತು ಟ್ರಾನ್ಸ್‌ಪ್ಲಾಂಟ್ ನರ್ಸ್‌ಗಳನ್ನು ಒಳಗೊಂಡ ಸಮಗ್ರ ತಂಡ। ಅತ್ಯಾಧುನಿಕ ಉಪಕರಣಗಳು, ಪ್ರೋಟೋಕಾಲ್–ಆಧಾರಿತ ಶುಶ್ರೂಷಾ ಕ್ರಮದ ಐ.ಸಿ.ಯು., ಹಾಗೂ ಬಿಗಿಯಾದ ಸೋಂಕು ನಿಯಂತ್ರಣ ವಿಧಾನಗಳು। ಟ್ರಾನ್ಸ್‌ಪ್ಲಾಂಟ್ ಸಂಕೀರ್ಣ ಪ್ರಕ್ರಿಯೆಯ ಉದ್ದಕ್ಕೂ ರೋಗಿಗೆ ಮುಕ್ತ ಹಾಗೂ ಪ್ರಾಮಾಣಿಕ ಸಂವಹನದ ಮೂಲಕ ನಿರಂತರ ಮಾರ್ಗದರ್ಶನ

ನೀವಾಗಲಿ, ನಿಮ್ಮ ಪ್ರೀತಿಪಾತ್ರರಾಗಲಿ ಲಿವರ್ ಸಮಸ್ಯೆಗಳನ್ನು ಎದುರಿಸುತ್ತಿದ್ದಲ್ಲಿ, ದಯವಿಟ್ಟು ನಮ್ಮ ತಜ್ಞರನ್ನು ಭೇಟಿ ಮಾಡಿ

ಸಾಕ್ರ ವರ್ಲ್ಡ್ ಹಾಸ್ಪಿಟಲ್, ಹೊರ ವರ್ತುಲ ರಸ್ತೆ, ಮಾರತಹಳ್ಳಿ, ಇಂಟೆಲ್‌ನ ಎದುರು, ಪಾಸ್‌ಪೋರ್ಟ್ ಕಚೇರಿ ಹಿಂಭಾಗ, ಬೆಂಗಳೂರು – 560 103.
ಅಪಾಯಿಂಟ್‌ಮೆಂಟ್‌ಗಾಗಿ ಕರೆಮಾಡಿ: 080 4969 4969 । ತುರ್ತು ಸಂದರ್ಭಕ್ಕಾಗಿ ಕರೆಮಾಡಿ: 080 4962 4962
ಶುಲ್ಕರಹಿತ ಸಂಖ್ಯೆ: 1800 202 4969 www.sakraworldhospital.com

ಆರ್.ಕೆ. ರಮೇಶ್ ಪರವಾಗಿ ಸಂಸದ ಡಿ.ಕೆ. ಸುರೇಶ್ ಮತಯಾಚನೆ

‘ಸಂಕಷ್ಟದಲ್ಲಿ ರಾಜ್ಯಕ್ಕೆ ಭೇಟಿ ನೀಡದ ಮೋದಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ನೆರೆಹಾವಳಿ, ಬರ ಸೃಷ್ಟಿಯಾದಾಗ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಒಮ್ಮೆಯೂ ಭೇಟಿ ನೀಡಲಿಲ್ಲ. ಅಗತ್ಯವಿರುವಷ್ಟು ಪರಿಹಾರವನ್ನೂ ನೀಡಲಿಲ್ಲ. ಆದರೆ, ಚುನಾವಣೆ ಸಂದರ್ಭದಲ್ಲಿ ಅವರಿಗೆ ಕರ್ನಾಟಕದ ಮೇಲೆ ಎಲ್ಲಿಲ್ಲದ ಪ್ರೀತಿ ಬಂದಿದೆ’ ಎಂದು ಸಂಸದ ಡಿ.ಕೆ. ಸುರೇಶ್ ಟೀಕಿಸಿದರು.

ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಆರ್.ಕೆ. ರಮೇಶ್ ಪರವಾಗಿ ವಸಂತಪುರದಲ್ಲಿ ನಡೆದ ಸಮಾವೇಶದಲ್ಲಿ ಮತಯಾಚಿಸಿ ಮಾತನಾಡಿದ ಅವರು, ‘ಮೋದಿ ಮತ್ತು ಅಮಿತ್ ಶಾ ಅವರು, ಪ್ರತಿವಾರ, ಮೂರು ದಿನಕ್ಕೆ ರಾಜ್ಯಕ್ಕೆ ಬರುತ್ತಿದ್ದಾರೆ. ರಾಜ್ಯದಲ್ಲಿ ಶೇ 40ರಷ್ಟು ಕಮಿಷನ್ ಲೂಟಿ ಮಾಡಿ ಕೇಂದ್ರದ ಬಿಜೆಪಿ ನಾಯಕರಿಗೆ ಸಾವಿರಾರು ಕೋಟಿ ನೀಡುವ ಎಟಿಎಂ ಕೇಂದ್ರವಾಗಿ ಕರ್ನಾಟಕ ಮಾರ್ಪಟ್ಟಿದೆ’ ಎಂದರು.

ವಸಂತಪುರದಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಪಾಲ್ಗೊಂಡಿರುವ ಜನಸ್ತೋಮ.

‘ಬೆಂಗಳೂರು ನಗರಕ್ಕೆ ಕಳಂಕತರುವ ಶಾಸಕರಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದ ಬಿಜೆಪಿ ಶಾಸಕ ಎಂ. ಕೃಷ್ಣಪ್ಪ ಅವರು ಮೊದಲಿಗರು. ಹದಿನೈದು ವರ್ಷದಲ್ಲಿ ಸಾವಿರಾರು ಕೋಟಿ ಅನುದಾನ ಬಿಡುಗಡೆಯಾಗಿದ್ದರೂ, ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿಲ್ಲ’ ಎಂದು ಆರೋಪಿಸಿದರು.

‘ನಯವಾಗಿ ಅಣ್ಣ, ಸಾಹುಕಾರ ಎಂದು ಕರೆದು ಮತದಾರರನ್ನು ವಂಚಿಸುವ ಮೂಲಕ ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಅನ್ಯಾಯ, ಅಕ್ರಮ ಮೂಲಕ ಹಣ ಸಂಪಾದನೆ ಮಾಡಿದ್ದಾರೆ. ಪೊಲೀಸ್, ಬಿಬಿಎಂಪಿ, ಕಂದಾಯ ಅಧಿಕಾರಿಗಳ ಮೂಲಕ ಕಮಿಷನ್ ಪಡೆದಿದ್ದಾರೆ. ಸಾರ್ವಜನಿಕರು ಈ ಅನ್ಯಾಯವನ್ನು ಪ್ರಶ್ನಿಸಿದರೆ ಪೊಲೀಸ್ ಮತ್ತು ಬೆಂಬಲಿಗರ ಮೂಲಕ ಹೆದರಿಸುವ ಶಾಸಕರನ್ನು ಈ ಬಾರಿ ಸೋಲಿಸಬೇಕು. ಈಗ ಮಾಡಿರುವ ಅನ್ಯಾಯ, ಅಕ್ರಮ ಸಾಕು’ ಎಂದು ಕಿಡಿಕಾಡಿದರು.

ಉತ್ತರಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಕುಮಾರ್ ಮಾತನಾಡಿ ‘ನಮ್ಮಲ್ಲಿರುವ ವೈಮನಸ್ಸು ಬಿಟ್ಟು ಈ ಬಾರಿ ಒಗ್ಗೂಡುವ ಮೂಲಕ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ಸುರೇಶ್ ಅವರ ಕೈ ಬಲಪಡಿಸಬೇಕೆಂದು’ ಮನವಿ ಮಾಡಿದರು.

ಕಾಂಗ್ರೆಸ್ ಅಭ್ಯರ್ಥಿ ಆರ್.ಕೆ. ರಮೇಶ್ ಮಾತನಾಡಿ ‘2018ರಿಂದ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಜನಸಾಮಾನ್ಯರೊಂದಿಗೆ ಬೆರೆತು ಕಷ್ಟಸುಖಗಳಲ್ಲಿ ಭಾಗಿಯಾಗುತ್ತಿದ್ದೇನೆ’ ಎಂದು ಹೇಳಿದರು.

ಪ್ರಜಾ ಮತ ಜನತಂತ್ರದ ಹಬ್ಬ

ಕರ್ನಾಟಕ ವಿಧಾನಸಭಾ ಚುನಾವಣೆ - 2023

ರಾಜಗೋಪಾಲರೆಡ್ಡಿಗೆ ಜೆಡಿಎಸ್ ಟಿಕೆಟ್

ಆನೇಕಲ್ : ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಆಕಾಂಕ್ಷಿಯಾಗಿದ್ದ ಎಚ್.ಪಿ ರಾಜಗೋಪಾಲ ರೆಡ್ಡಿ ಅವರು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ರಾಜಗೋಪಾಲ್ ರೆಡ್ಡಿ ಅವರು ತಾಲ್ಲೂಕಿನ ಹುಲಿಮಂಗಲದಲ್ಲಿ ಹಿತೈಷಿಗಳ ಸಭೆಯನ್ನು ಕರೆದಿದ್ದರು. ರಾತ್ರಿ 8ರ ವೇಳೆಗೆ ಜೆಡಿಎಸ್ ಪಕ್ಷಕ್ಕೆ ಸೇರಿದರು.

ಎಚ್. ನಾಗೇಶ್ ಅವರು ತೆರೆದ ವಾಹನದಲ್ಲಿ ಮೆರವಣಿಗೆ ನಡೆಸಿದರು.

‘15 ವರ್ಷಗಳ ದುರಾಡಳಿತಕ್ಕೆ ಮುಕ್ತಿ’

ಕೆ.ಆರ್.ಪುರ: ‘ಹದಿನೈದು ವರ್ಷಗಳ ದುರಾಡಳಿತಕ್ಕೆ ಕೆಲವೇ ದಿನಗಳಲ್ಲಿ ಮುಕ್ತಿ ಸಿಗಲಿದೆ’ ಎಂದು ಮುಳಬಾಗಿಲು ಶಾಸಕ ಹಾಗೂ ಮಹದೇವಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಚ್. ನಾಗೇಶ್ ಹೇಳಿದರು.

ಮಹದೇವಪುರ ಕ್ಷೇತ್ರದಲ್ಲಿ ಮಂಗಳವಾರ ಮೆರವಣಿಗೆ ನಡೆಸಿ ನಾಮಪತ್ರ ಸಲ್ಲಿಸಿದ ಅವರು, ‘ಕ್ಷೇತ್ರದ ಶಾಸಕ ಅರವಿಂದ ಲಿಂಬಾವಳಿ ಅವರು ಹದಿನೈದು ವರ್ಷಗಳಿಂದ ಅಭಿವೃದ್ಧಿ ಕಾರ್ಯಗಳನ್ನು ನಡೆಸಿಲ್ಲ. ಅವರು ಕ್ಷೇತ್ರದಲ್ಲಿ ದುರಾಡಳಿತ ನಡೆಸುತ್ತಾ ಬಂದಿದ್ದಾರೆ. ರಸ್ತೆಗಳೆಲ್ಲ ದೂಳುಮಯವಾಗಿವೆ. ಅವರು ಜನಸಾಮಾನ್ಯರಿಗೆ ಸ್ಪಂದಿಸಲಿಲ್ಲ’ ಎಂದು ಆರೋಪಿಸಿದರು.

‘ಸರ್ಕಾರಿ ಅಧಿಕಾರಿಯಾಗಿ ವಿವಿಧ ಇಲಾಖೆಗಳನ್ನು ನಿರ್ವಹಣೆ ಮಾಡಿರುವುದು, ಮುಳಬಾಗಿಲು ಶಾಸಕನಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿರುವುದು ನನಗೆ ಶ್ರೀರಕ್ಷೆ. ಮತದಾರರು ಕೈ ಹಿಡಿಯಲಿದ್ದಾರೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮುಖಂಡರಾದ ಉದಯ್ ಕುಮಾರ್, ರಾಮಕೃಷ್ಣಪ್ಪ, ಬಾಬುಗೌಡ, ವಿಟಿಬಿ ಬಾಬು, ಅನಿಲ್ ಕುಮಾರ್ ಇದ್ದರು.

ಬಿಜೆಪಿ ಲಿಂಗಾಯತರ ಸಭೆ ಇಂದು?

ಬೆಂಗಳೂರು: ಇಬ್ಬರು ಲಿಂಗಾಯತ ನಾಯಕರು ಪಕ್ಷ ತೊರೆದು ಕಾಂಗ್ರೆಸ್ ಸೇರಿರುವ ಬೆನ್ನಲ್ಲೇ ಬಿಜೆಪಿಯ ಲಿಂಗಾಯತ ಶಾಸಕರು ಮತ್ತು ಮುಖಂಡರ ಸಭೆಯೊಂದನ್ನು ಬುಧವಾರ ನಡೆಸುವ ಸಾಧ್ಯತೆ ಇದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರು ಇದರ ನೇತೃತ್ವ ವಹಿಸಲಿದ್ದಾರೆ. ಹಲವು ಶಾಸಕರು ಮತ್ತು ಸಮುದಾಯದ ಮುಖಂಡರು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಮಯ ಮತ್ತು ಸ್ಥಳ ಇನ್ನೂ ನಿಗದಿ ಆಗಿಲ್ಲ. ಬೊಮ್ಮಾಯಿ, ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಅವರು ಬುಧವಾರ ನಾಮಪತ್ರ ಸಲ್ಲಿಸಲಿರುವುದರಿಂದ ಸಮಯ ನಿಗದಿ ಆಗಬೇಕಾಗಿದೆ ಎಂದು ಮೂಲಗಳು ಹೇಳಿವೆ.

ಎಸ್‌ಡಿಪಿಐ ಅಭ್ಯರ್ಥಿ ‘ದೇಶದ್ರೋಹದ ಆರೋಪಿ’

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು (ಉಳ್ಳಾಲ) ವಿಧಾನಸಭಾ ಕ್ಷೇತ್ರದ ಎಸ್‌ಡಿಪಿಐ ಅಭ್ಯರ್ಥಿ ಮಹಮ್ಮದ್ ರಿಯಾಝ್ ಫರಂಗಿಪೇಟೆ ಅವರ ಬಳಿ ಯಾವುದೇ ಸ್ಥಿರಾಸ್ತಿ ಇಲ್ಲ. ಅವರು ₹1.90 ಲಕ್ಷ ನಗದು, ಠೇವಣಿ, ಉಳಿತಾಯ ಖಾತೆ ಸೇರಿದಂತೆ ಒಟ್ಟು ₹2.20 ಲಕ್ಷ ಚರಾಸ್ತಿ ಹೊಂದಿದ್ದಾರೆ. ₹1.78 ಲಕ್ಷ ಸಾಲ ಹೊಂದಿದ್ದಾರೆ.

ಪ್ರಥಮ ಪಿಯುಸಿ ವಿದ್ಯಾರ್ಹತೆ ಹೊಂದಿದ್ದಾರೆ. ವಿವಿಧ ಗುಂಪುಗಳ ಮಧ್ಯೆ ದ್ವೇಷ ಹರಡುವುದು, ಪೊಲೀಸ್ ಕರ್ತವ್ಯಕ್ಕೆ ಅಡ್ಡಿ ಆರೋಪದ ಮೇಲೆ ವಿವಿಧೆಡೆಗಳಲ್ಲಿ ದಾಖಲಾಗಿರುವ ಏಳು ಅಪರಾಧ ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ. ಬೆಳ್ತಂಗಡಿ, ಕೊಣಾಜೆ, ಮಂಗಳೂರು ಪೂರ್ವ, ಮಂಗಳೂರು ಉತ್ತರ ಠಾಣೆಗಳಲ್ಲಿ ಈ ಪ್ರಕರಣಗಳು ದಾಖಲಾಗಿವೆ. ದೇಶದ್ರೋಹದ ಆರೋಪದ ಮೇಲೆ ಎನ್ಐಎ ಪಟ್ನಾ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣದ ವಿಚಾರಣೆ ಕೂಡ ಬಾಕಿ ಇದೆ. ಅವರ ಪತ್ನಿ ಶಮೀಮ ಬಳಿ ₹1.50 ಲಕ್ಷ ನಗದು ಇದೆ. ₹11.08 ಲಕ್ಷ ಮೌಲ್ಯದ 200 ಗ್ರಾಂ ಬಂಗಾರ, ಇಬ್ಬರು ಹೆಣ್ಣು ಮಕ್ಕಳ ಬಳಿ ತಲಾ ₹4.43 ಲಕ್ಷ ಮೌಲ್ಯದ 80 ಗ್ರಾಂ ಬಂಗಾರ ಇದೆ.

ನಗದು, ಸ್ವತ್ತುಗಳ ವಶ: ಎರಡು ಪಟ್ಟು ಹೆಚ್ಚಳ

ಬೆಂಗಳೂರು: 2018ರ ಚುನಾವಣೆಗೆ ಹೋಲಿಸಿದರೆ ಈ ಬಾರಿ ವಶಕ್ಕೆ ಪಡೆದಿರುವ ನಗದು ಮತ್ತು ಇತರ ಸ್ವತ್ತುಗಳ ಮೂರು ಪಟ್ಟು ಮೌಲ್ಯದ ಸ್ವತ್ತುಗಳನ್ನು ಈ ಚುನಾವಣೆಯಲ್ಲಿ ವಶಪಡಿಸಿಕೊಳ್ಳಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ ತಿಳಿಸಿದೆ.

2018ರ ಮಾರ್ಚ್ 27ರಿಂದ ಏಪ್ರಿಲ್ 17ರವರೆಗೆ ಒಟ್ಟು ₹ 62.39 ಕೋಟಿ ಮೌಲ್ಯದ ನಗದು ಹಾಗೂ ಇತರ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಈ ಬಾರಿ ಮಾರ್ಚ್ 29ರಿಂದ ಏಪ್ರಿಲ್ 19ರವರೆಗೆ ₹ 187.17 ಕೋಟಿ ಮೌಲ್ಯದ ನಗದು ಹಾಗೂ ಇತರ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. 2018ರಲ್ಲಿ ಚುನಾವಣೆ ಪ್ರಕ್ರಿಯೆ ಅಂತ್ಯಗೊಳ್ಳುವವರೆಗೂ ಸೇರಿ ₹ 185.74 ಕೋಟಿ ಮೊತ್ತದ ನಗದು ಹಾಗೂ ಇತರ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು ಎಂದು ಅಂಕಿಅಂಶ ನೀಡಿದೆ.

ಸೋಮವಾರ ಒಂದೇ ದಿನ ₹ 3.24 ಕೋಟಿ ನಗದು, ₹ 2.18 ಕೋಟಿ ಮೌಲ್ಯದ ಮದ್ಯ, ₹ 8.10 ಲಕ್ಷ ಮೌಲ್ಯದ 87.5 ಕೆ.ಜಿ. ಮಾದಕವಸ್ತು, ₹ 4.80 ಕೋಟಿ ಮೌಲ್ಯದ 8.07 ಕೆ.ಜಿ. ಚಿನ್ನ, ₹ 41.66 ಲಕ್ಷ ಮೌಲ್ಯದ 52.74 ಕೆ.ಜಿ. ಬೆಳ್ಳಿ ಮತ್ತು ₹ 16.88 ಲಕ್ಷ ಮೌಲ್ಯದ ಉಚಿತ ಉಡುಗೊರೆಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮನೆಯಿಂದ ಮತದಾನ: 8,730 ಮಂದಿಯಿಂದ ಆಯ್ಕೆ

ಬೆಂಗಳೂರು: ವಿಧಾನಸಭೆ ಚುನಾವಣೆಯಲ್ಲಿ 80 ವರ್ಷಕ್ಕೂ ಹೆಚ್ಚಿನ ವಯೋಮಾನದವರಲ್ಲಿ 8,730 ಮತದಾರರು ಮನೆಯಿಂದ ಮತದಾನ ಮಾಡುವುದನ್ನು ಆಯ್ಕೆ ಮಾಡಿಕೊಂಡಿದ್ದಾರೆ.

ಚುನಾವಣೆ ಆಯೋಗದ ಆದೇಶದಂತೆ ಪ್ರಥಮ ಬಾರಿಗೆ ಮನೆಯಿಂದ ಮತದಾನ ಆಯ್ಕೆಯನ್ನು ನೀಡಲಾಗುತ್ತಿದೆ. ಈ ಆಯ್ಕೆ ಪಡೆದ ಮತದಾರರ ಮನೆಯಲ್ಲಿ ತಾತ್ಕಾಲಿಕ ಮತಗಟ್ಟೆಯನ್ನು ಬಿಬಿಎಂಪಿ ಪ್ರತಿನಿಧಿಗಳು ನಿರ್ಮಿಸಲಿದ್ದಾರೆ. ಮೇ 10ರ ಮತದಾನದ ದಿನದಿಂದ ನಾಲ್ಕೈದು ದಿನ ಮೊದಲೇ ಮತ ಚಲಾಯಿಸಬಹುದು.

ಮನೆಯಿಂದ ಮತದಾನ ಆಯ್ಕೆ ಪಡೆದುಕೊಂಡವರಲ್ಲಿ 8,611 ಮಂದಿ 80 ವರ್ಷಕ್ಕೂ ಮೇಲಿನವರಾಗಿದ್ದಾರೆ. 119 ಅಂಗವಿಕಲರಿದ್ದಾರೆ. ಈ ಆಯ್ಕೆ ಪಡೆಯಲು ಏ.17 ಕಡೆ ದಿನವಾಗಿತ್ತು. ಎಲ್ಲ ಚುನಾವಣಾಧಿಕಾರಿಗಳಿಂದ ಮಾಹಿತಿ ಪಡೆದ ಮೇಲೆ ಒಟ್ಟು ಮತದಾರರ ಸಂಖ್ಯೆಯಲ್ಲಿ ವ್ಯತ್ಯಾಸವಾಗಬಹುದು ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ 2.36 ಲಕ್ಷ ಮಂದಿ 80 ವರ್ಷಕ್ಕೂ ಮೇಲ್ಪಟ್ಟವರಿದ್ದಾರೆ. ರಾಜ್ಯದಲ್ಲಿ ಈ ಸಂಖ್ಯೆ 12 ಲಕ್ಷವಾಗಿದೆ.

‘ಕಳೆದ ಬಾರಿ ಮತಗಟ್ಟೆಗೆ ಹೋಗಲು ಸಾಧ್ಯವಾಗದೆ ಮತ ಚಲಾಯಿಸಲಿಲ್ಲ. ಈ ಬಾರಿ ಮನೆಯಿಂದ ಮತದಾನ ಆಯ್ಕೆ ಮಾಡಿಕೊಂಡಿದ್ದೇನೆ. ನನ್ನ ಹಕ್ಕನ್ನು ಚಲಾಯಿಸಲು ಪ್ರತಿಯೊಬ್ಬರೂ ತಮ್ಮ ಹಕ್ಕನ್ನು ಅರಿಯಬೇಕು’ ಎಂದು ಬಸವನಗುಡಿ ನಿವಾಸಿ 93 ವರ್ಷದ ರಮಾದೇವಿ ಹೇಳಿದರು.

Share your experience, Call us: 18 00 18 00 600 or Write us at: info@hamdard.com or Visit us at: www.hamdard.com
Registered & Consumer Care Office: Hamdard Manzil, Lal Kuan, Delhi - 110 006, India

ಪಿಇಎಸ್: ಆತ್ಮತೃಷ ಉತ್ಸವಕ್ಕೆ ತೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯದಲ್ಲಿ ನಡೆದ ಆತ್ಮತೃಷ ತಾಂತ್ರಿಕ–ಸಾಂಸ್ಕೃತಿ ಉತ್ಸವಕ್ಕೆ ಭಾನುವಾರ ಅದ್ದೂರಿ ತೆರೆ ಬಿದ್ದಿತು.

ಉತ್ಸವದಲ್ಲಿ ಕಲೆ, ಸಂಗೀತ, ನೃತ್ಯ ಸೇರಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ಮಾಡಲಾಯಿತು. ‘ಕಾಮಿಡಿ ನೈಟ್’ ಕಾರ್ಯಕ್ರಮದಲ್ಲಿ ನಿರೂಪ್ ಮೋಹನ್ ಹಾಗೂ ಸಾಹಿಲ್ ಶಾ ಅವರ ನಗೆ ಚಟಾಕಿಗೆ ಪ್ರೇಕ್ಷಕರು ನಗೆಗಡಲಲ್ಲಿ ತೇಲಾಡಿದರು.

‘ಕಲ್–ನೈಟ್’ ಕಾರ್ಯಕ್ರಮದಲ್ಲಿ ನಿನಾದ್ ತಂಡದ ನೃತ್ಯ ಪಟುಗಳು ‘ಏ ದಿಲ್ ಹೈ ಮುಷ್ಕಿಲ್ ಸೇರಿ ಬೇರೆ–ಬೇರೆ ಹಾಡುಗಳಿಗೆ ಹೆಜ್ಜೆ ಹಾಕಿದರು. ಪಿಇಎಸ್ ವಿಶ್ವವಿದ್ಯಾಲಯದ ನೃತ್ಯ ತಂಡಗಳಾದ ಸಂಸ್ಕೃತಿ, ಎನ್ಕೋರ್ ಮತ್ತು ಟ್ರಾನ್ಸ್ ತಂಡಗಳು ವಿವಿಧ ಹಾಡುಗಳಿಗೆ ಹೆಜ್ಜೆ ಹಾಕಿದರು.

ಪಿಇಎಸ್ ವಿಶ್ವವಿದ್ಯಾಲಯದ ನೌಟಂಕಿ ತಂಡವು ಪರೀಕ್ಷೆಯ ಕುರಿತು ನಾಟಕವನ್ನು ಪ್ರಸ್ತುತ ಪಡಿಸಿತು. ‘ಪ್ರೊ–ನೈಟ್’ ಕಾರ್ಯಕ್ರಮದಲ್ಲಿ ಬಾಲಿವುಡ್ ಗಾಯಕಿ ಜಸ್ಲೀನ್ ರಾಯಲ್, ಬ್ಯಾಂಡ್ ಲೋಹರ್ ದಿ ಬ್ಲಾಕ್ ಸ್ಮಿತ್ಸ್, ಕನ್ನಡದ ರ್‍ಯಾಪ್ ಹಾಡುಗಳು, ಡಿಜೆ ಜೋನಾಸ್ ಮೊಂಟೆರೊ ಅವರ ಹಿಂದಿ, ಇಂಗ್ಲಿಷ್ ಮತ್ತು ಕನ್ನಡ ಹಾಡುಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ಈ ಕಾರ್ಯಕ್ರಮದಲ್ಲಿ 7 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪಿಇಎಸ್ ವಿಶ್ವವಿದ್ಯಾಲಯದಲ್ಲಿ ನಡೆದ ಆತ್ಮತೃಷ ಉತ್ಸವದಲ್ಲಿ ವಿದ್ಯಾರ್ಥಿಗಳ ತಂಡವೊಂದು ನೃತ್ಯ ಪ್ರದರ್ಶಿಸಿತು.

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ಸಮ್ಮೇಳನ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಅತಿಥಿಗಳು: ತಲಬತ್ತುಲ ಶ್ರೀನಿವಾಸ್, ಬೆಂಜಮಿನ್ ವ್ಯಾನ್ ಸಂಗ್ ವಾಹ್, ಜಿನ್ ಸಂಗ್ ಡಾಂಗ್, ರೂಪಾ ಎಂ.ವಿ. ವೆಂಕಟೇಶ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕೆ.ಆರ್. ರಸ್ತೆ, ವಿವಿ ಪುರ, ಬೆಳಿಗ್ಗೆ 9.30

ನಿರ್ಮಲಾನಂದನಾಥ ಸ್ವಾಮೀಜಿ

‘ಪಠ್ಯಕ್ರಮ ಆಧಾರಿತ ತರಬೇತಿ ಕಾರ್ಯಕ್ರಮದ ಉದ್ಘಾಟನೆ: ಅತಿಥಿಗಳು: ಎಸ್.ಎಂ. ಜಯಕರ, ಶ್ರೀನಿವಾಸ್ ಸಿ., ಆರ್. ಸರ್ವಮಂಗಳಾ, ಜೆ.ಎಂ. ಮಲ್ಲಿಕಾರ್ಜುನಯ್ಯ, ಆಯೋಜನೆ ಮತ್ತು ಸ್ಥಳ: ಕೆಎಲ್‌ಇ ಸೊಸೈಟಿ ಡಿಗ್ರಿ ಕಾಲೇಜ್, ನಾಗರಬಾವಿ, ಬೆಳಿಗ್ಗೆ 10

ಆರ್.ಎಸ್. ಪದ್ಮರಾಜ್ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ: ಉದ್ಘಾಟನೆ: ಎ.ಎಸ್. ಸುಬ್ರಹ್ಮಣ್ಯ ಉಡುಪ, ಅತಿಥಿಗಳು: ವೆಂಕಟಾಚಲಪತಿ, ತಿರುಣಾವುಕರಸು ಎಸ್., ಮೋಹನ್ ವರ್ಣೇಕರ್, ಸ್ಥಳ: ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ರಾಜ್ಯ ಚುನಾವಣಾ ಪ್ರಕ್ರಿಯೆ ಮತ್ತು ಮತದಾನ ಜಾಗೃತಿ: ಅತಿಥಿಗಳು: ತುಷಾರ್ ಗಿರಿನಾಥ್, ಸಂಗಪ್ಪ, ಆಯೋಜನೆ: ಬೆಂಗಳೂರು ಚೇಂಬರ್ ಆಫ್ ಇಂಡಸ್ಟ್ರಿ ಆ್ಯಂಡ್ ಕಾಮರ್ಸ್, ಮಧ್ಯಾಹ್ನ 3.30 (ಆನ್‌ಲೈನ್ ಕಾರ್ಯಕ್ರಮ)

ಪ್ರವಚನ ವಾಹಿನಿ: ‘ಶಂಕರ ಭಗವತ್ಪಾದರ ಸ್ತೋತ್ರ ಸಾಹಿತ್ಯ’ದ ಕುರಿತು ಉಪನ್ಯಾಸ: ಸುದರ್ಶನ ಶರ್ಮ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ರಾಮೋತ್ಸವ ವಿಶೇಷ

ರಯೀಸ್ ಬಾಲೇಖಾನ್

ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಶ್ರೀಹರಿ ಭಟ್ ಮತ್ತು ತಂಡ, ಸಂಗೀತ ಕಛೇರಿ: ಗಾಯನ: ರಯೀಸ್ ಬಾಲೇಖಾನ್ ಮತ್ತು ಹಫೀಜ್ ಬಾಲೇಖಾನ್, ಹಾರ್ಮೋನಿಯಂ: ಸತೀಶ ಕೊಳ್ಳಿ, ತಬಲಾ: ರಾಜೇಂದ್ರ ನಾಕೋಡ್, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5

30ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಶಿವಾನಿ ಎಂ., ಪಿಟೀಲು: ಕನ್ಯಾಕುಮಾರಿ ನಿಶಾಂತ್ ಚಂದ್ರನ್, ಮೃದಂಗ: ಆನೂರು ಅನಂತಕೃಷ್ಣ ಶರ್ಮಾ, ಖಂಜೀರಾ: ಬೆಂಗಳೂರು ಎನ್. ಅಮೃತ್, ಕೃಷ್ಣ, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15ರಿಂದ

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಐಶ್ವರ್ಯ ವಿದ್ಯಾ ರಘುನಾಥ್, ಪಿಟೀಲು: ಚಾರುಲತಾ ರಾಮಾನುಜಂ, ಮೃದಂಗ: ಬಿ.ಸಿ. ಮಂಜುನಾಥ್, ಖಂಜೀರಾ: ಗುರುಪ್ರಸನ್ನ, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

KLE ACADEMY OF HIGHER EDUCATION & RESEARCH, BELAGAVI, KARNATAKA
(Deemed-to-be-University)
Accredited at A+ Grade by NAAC (3rd Cycle) | Placed in Category 'A' by MoE (GoI)

WANTED

Applications are invited from the eligible candidates for the following posts

@ KLE ACADEMY OF HIGHER EDUCATION & RESEARCH, BELAGAVI

POST	DEPARTMENTS	QUALIFICATION
TUTOR/ LECTURERS AT SCHOOL OF ALLIED HEALTH SCIENCES (B.Sc/ M.Sc)	• MICROBIOLOGY • ANATOMY • PHYSIOLOGY • HOSPITAL ADMINISTRATION • CLINICAL RESEARCH • RADIOLOGY • OPTOMETRY • NEUROSCIENCE TECHNOLOGY • ANAESTHESIA TECHNOLOGY • PSYCHOLOGY • RENAL DIALYSIS • PERFUSION TECHNOLOGY • ECHO CARDIOGRAPHY	M.Sc. in the Respective specialization or any equivalent (PG) from a Recognized University.

POST	Qualification
DATA ANALYST	BE/BTech in Information Technology / Computer Science
WEB DEVELOPER	BE/ MCA/ BCA
IT SUPPORT ENGINEER	Diploma in (CSE / E&C) / BCA
DATA ENTRY OPERATOR	Diploma/ BCA/ MCA
LIBRARIAN	Master's Degree in Library Science / Information Science / Documentation Science.

• Last date for submission of applications: 01/05/2023

For Online Applications & Further Details Visit Our Website
www.kledeemeduniversity.edu.in
0831- 2444 444

Date: 18/04/2023 Sd/- Registrar

ಜಿಲ್ಲಾ ಚುನಾವಣಾಧಿಕಾರಿಗಳು, ಬೆಂಗಳೂರು ಜಿಲ್ಲೆ
ಮತ್ತು
ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ
ಎನ್.ಆರ್.ಚೌಕ, ಬೆಂಗಳೂರು–560 002.

ಸಾರ್ವತ್ರಿಕ ವಿಧಾನಸಭಾ ಚುನಾವಣೆ-2023

ವಿಷಯ: ಚುನಾವಣಾ ಕೆಲಸ ಕಾರ್ಯಕ್ಕೆ ನಿಯೋಜಿಸಲಾದ ಅಧಿಕಾರಿ/ಸಿಬ್ಬಂದಿಯು ಗೈರು ಹಾಜರಾದಲ್ಲಿ ಅವರ ವಿರುದ್ಧ ಕಠಿಣಕ್ರಮ ಜರುಗಿಸಲಾಗುವುದೆಂದು ಎಚ್ಚರಿಕೆ.

ಚುನಾವಣಾ ಮತಗಟ್ಟೆ ಅಧಿಕಾರಿಗಳ ನಿಯೋಜನೆ

ಮೊದಲನೇ ಹಂತದ ಚುನಾವಣೆ ತರಬೇತಿ	ದಿನಾಂಕ: 20.04.2023 ಬೆಳಗ್ಗೆ 9.30 ಗಂಟೆಗೆ.
ಎರಡನೇ ಹಂತದ ಚುನಾವಣೆ ತರಬೇತಿ	ದಿನಾಂಕ ಮತ್ತು ಸಮಯವನ್ನು ನಂತರ ತಿಳಿಸಲಾಗುವುದು.
ಮಸ್ಟರಿಂಗ್ ದಿನಾಂಕ	09.05.2023 ಬೆಳಗ್ಗೆ 9.30 ಗಂಟೆಗೆ.
ಮತದಾನ ದಿನಾಂಕ	10.05.2023

ಎಚ್ಚರಿಕೆ

ಚುನಾವಣಾ ಕೆಲಸಕ್ಕೆ ನಿಯೋಜಿಸಲಾದ ಸಿಬ್ಬಂದಿಗಳು ನಿಗದಿಪಡಿಸಿದ ದಿನಾಂಕ, ಸಮಯ ಮತ್ತು ಕೇಂದ್ರಗಳಲ್ಲಿ ತರಬೇತಿ, ಮಸ್ಟರಿಂಗ್ ಮತ್ತು ಮತದಾನ ಕಾರ್ಯಕ್ಕೆ ಕಡ್ಡಾಯವಾಗಿ ಹಾಜರಾಗುವುದು.

ಮುಂದುವರೆದು ಸಿಬ್ಬಂದಿಯು ಯಾರಾದರೂ ಗೈರುಹಾಜರಾದಲ್ಲಿ, ಅಂತಹವರ ವಿರುದ್ಧ ಪ್ರಜಾ ಪ್ರತಿನಿಧಿ ಕಾಯ್ದೆ 1951ರ ಕಲಂ 134ರಂತೆ ಕೂಡಲೇ ಎಫ್.ಐ.ಆರ್ (FIR) ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಮತ್ತು ಸೇವಾ ನಿಯಾಮಾವಳಿಗಳಂತೆ ಮತ್ತು ಅಪರಾಧ ಕಾಯ್ದೆಯಂತೆ ಶಿಸ್ತುಕ್ರಮ ಕೈಗೊಳ್ಳಲಾಗುವುದು.

ಚುನಾವಣೆಗೆ ಸಿಬ್ಬಂದಿಯನ್ನು ನಿಯೋಜಿಸಲು ಪ್ರತಿ ಕಛೇರಿಯಿಂದ ನೋಡಲ್ ಅಧಿಕಾರಿಗಳನ್ನು ನೇಮಿಸಿ ಆದೇಶಿಸಲಾಗಿದೆ. ಸದರಿ ನೋಡಲ್ ಅಧಿಕಾರಿಯು ತಮ್ಮ ಕಛೇರಿಯ ಸಿಬ್ಬಂದಿಗೆ ಚುನಾವಣೆ ಕರ್ತವ್ಯದ ಆದೇಶಗಳನ್ನು ಜಾರಿ ಮಾಡಿ, ಚುನಾವಣಾ ತರಬೇತಿಗೆ ಹಾಗೂ ಚುನಾವಣಾ ಕರ್ತವ್ಯಕ್ಕೆ ಹಾಜರುಪಡಿಸುವ ಜವಾಬ್ದಾರಿ ವಹಿಸುವುದು. ಈ ಮೇಲಿನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಯಾವುದೇ ನಿರ್ಲಕ್ಷ್ಯತನ ತೋರಿದ್ದಲ್ಲಿ, ನೋಡಲ್ ಅಧಿಕಾರಿ ವಿರುದ್ಧ ಪ್ರತಿನಿಧಿ ಕಾಯ್ದೆ 1951ರ ಕಲಂ 134ರಂತೆ ಕಠಿಣ ಕ್ರಮ ಕೈಗೊಳ್ಳಲಾಗುವುದು.

ಚುನಾವಣಾ ಕರ್ತವ್ಯದ ಆದೇಶಗಳನ್ನು ಬಿ.ಬಿ.ಎಂ.ಪಿ ವೆಬ್‌ಸೈಟ್ **www.bbmp.gov.in** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಮತಗಟ್ಟೆ ಸಿಬ್ಬಂದಿಯು ಪ್ರಿಸೈಡಿಂಗ್ ಆಫೀಸರ್ ಕೈಪಿಡಿಯನ್ನು **https://eci.gov.in** ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಜಿಲ್ಲಾ ಚುನಾವಣಾಧಿಕಾರಿಗಳು, ಬೆಂಗಳೂರು ಜಿಲ್ಲೆ ಹಾಗೂ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ, ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ತುರಹಳ್ಳಿ ಅರಣ್ಯ ಜಾಗ ಒತ್ತುವರಿ ಆರೋಪ: ಮನೆ ನಿರ್ಮಾಣಕ್ಕೆ ಅಡ್ಡಿ

ಸೂಕ್ಷ್ಮ ವಲಯ: ನಿವೇಶನ ಮಾಲೀಕರು ಕಂಗಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನಶಂಕರಿಯ 6ನೇ ಹಂತದಲ್ಲಿ 1ರಿಂದ 14ರವರೆಗೆ ಹೊಸ ಬ್ಲಾಕ್ ನಿರ್ಮಿಸಿ ನಿವೇಶನ ಹಂಚಿಕೆ ಮಾಡಿದ್ದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕ್ರಮದಿಂದ ನಿವೇಶನದಾರರು ಈಗ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಎರಡು ದಶಕಗಳ ಹಿಂದೆ ಬಿಡಿಎ ಈ ಪ್ರದೇಶದಲ್ಲಿ ನಿವೇಶನ ಹಂಚಿಕೆ ಮಾಡಿತ್ತು. ಆದರೆ, ಇವುಗಳಲ್ಲಿನ 2 ಹಾಗೂ 3ನೇ ಬ್ಲಾಕ್‌ನಲ್ಲಿ ಅರಣ್ಯ ಇಲಾಖೆಗೆ ಸೇರಿದ ಜಾಗವನ್ನು ಒತ್ತುವರಿ ಮಾಡಿಕೊಂಡು ನಿವೇಶನ ನಿರ್ಮಿಸಲಾಗಿದೆ ಎನ್ನುವ ಆರೋಪ ಕೇಳಿಬಂದಿದ್ದು, ನಿವೇಶನಗಳ ಮಾಲೀಕರು ಕಂಗಾಲಾಗಿದ್ದಾರೆ.

‘ಬಿಡಿಎ ನಿವೇಶನ ಹಂಚಿಕೆ ಮಾಡಿ ಕ್ರಯ ಪತ್ರವನ್ನೂ ನೀಡಿತ್ತು. ನಿವೇಶನದಾರರು ಅಲ್ಲಿ ಮನೆ ನಿರ್ಮಿಸಲು ಮುಂದಾಗಿದ್ದರು. ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಬಂದು ‘ಬಿಡಿಎ ಈ ಜಾಗವನ್ನು ಒತ್ತುವರಿ ಮಾಡಿಕೊಂಡಿದೆ. ಕಾಡಂಚಿನ ಪ್ರದೇಶವು ತುರಹಳ್ಳಿ ಅರಣ್ಯ ವ್ಯಾಪ್ತಿಯ ಸೂಕ್ಷ್ಮ ವಲಯವಾಗಿದ್ದು ಕಟ್ಟಡ ನಿರ್ಮಾಣಕ್ಕೆ ಅವಕಾಶ ಇಲ್ಲ’ ಎಂದು ಮನೆ ನಿರ್ಮಾಣಕ್ಕೆ ತಡೆಯೊಡ್ಡುತ್ತಿದ್ದಾರೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ನಿವೇಶನ ಖರೀದಿಸಿದ್ದೇವೆ. ಎಲ್ಲ ದಾಖಲೆಗಳೂ ಇವೆ. ಆದರೆ, ಬಿಡಿಎ ಮಾತ್ರ ನಮ್ಮ ನೆರವಿಗೆ ಬರುತ್ತಿಲ್ಲ’ ಎಂದು ನಿವೇಶನ ಖರೀದಿದಾರರು ಅಳಲು ತೋಡಿಕೊಳ್ಳುತ್ತಾರೆ.

‘ಅರಣ್ಯ ಇಲಾಖೆ ಸಿಬ್ಬಂದಿ ಪ್ರಕಾರ ಬಿಡಿಎ ಅತಿಕ್ರಮಣ ಮಾಡಿಕೊಂಡು ನಿವೇಶನ ನಿರ್ಮಿಸಿದೆ. ಹೀಗಾಗಿ, ಕಾಡಿನ ಪಕ್ಕದಲ್ಲಿ ಹಂಚಿಕೆಯಾಗಿರುವ ನಿವೇಶನಗಳಲ್ಲಿ ಮನೆ ನಿರ್ಮಿಸಲು ಬಿಡುವುದಿಲ್ಲ. ಬಿಡಿಎ, ಅರಣ್ಯ ಇಲಾಖೆಯ ತಿಕ್ಕಾಟದಿಂದ ನಿವೇಶನದ ಮಾಲೀಕರು ತೊಂದರೆಗೆ ಸಿಲುಕಿದ್ದಾರೆ. ಸಮಸ್ಯೆ ಮತ್ತಷ್ಟು ಕಗ್ಗಂಟಾಗಿದೆ’ ಎಂದು ನಿವೇಶನದಾರ ನಂಜುಂಡಯ್ಯ ಹೇಳುತ್ತಾರೆ.

ಬಿಡಿಎನಿಂದ ನಿವೇಶನ ಪಡೆದಿದ್ದ ನೂರಾರು ನಿವೇಶನದಾರರು ತೊಂದರೆಗೆ ಸಿಲುಕಿದ್ದಾರೆ. ನಿವೇಶನ ಕಳೆದುಕೊಳ್ಳುವ ಸ್ಥಿತಿ ಎದುರಾಗಿದೆ.

‘ಹೆಮ್ಮಿಗೆಪುರ, ಉತ್ತರಹಳ್ಳಿಯ ಮನವರ್ತೆ ಕಾವಲ್ ಮತ್ತು ತುರಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ ಬಿಡಿಎ ಲೇಔಟ್ ಮಾಡಿ ನಿವೇಶನ ನಿರ್ಮಿಸಿತ್ತು. ಇದಕ್ಕೆ ಹೊಂದಿಕೊಂಡಂತೆಯೇ ಅರಣ್ಯವಿದೆ. ಅರಣ್ಯ ಪಕ್ಕದ 100 ಮೀಟರ್ ಸೂಕ್ಷ್ಮ ವಲಯದ ವ್ಯಾಪ್ತಿಗೆ ಸೇರುತ್ತದೆ. ಈ ವಲಯದಲ್ಲಿ 1,157 ನಿವೇಶನ ಮಾಡಲಾಗಿದೆ. ಇಲ್ಲಿ ಯಾವುದೇ ಚಟುವಟಿಕೆ ನಡೆಸಲು ಅವಕಾಶವಿಲ್ಲ. ಈ ಭೂಮಿಯನ್ನು ವಾಪಸ್ ನೀಡಬೇಕು ಎಂಬುದು ಅರಣ್ಯ ಇಲಾಖೆ ವಾದವಾಗಿದೆ.

‘ಸೂಕ್ಷ್ಮ ವಲಯದ ವ್ಯಾಪ್ತಿ ಕಡಿತಗೊಳಿಸುವಂತೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ಜತೆಗೆ ಚರ್ಚಿಸಲಾಗುವುದು ಎಂದು ಬಿಡಿಎ ಅಧಿಕಾರಿಗಳು ಹೇಳಿದ್ದಾರೆ. ವಿಧಾನಸಭೆ ಚುನಾವಣೆ ನಡೆಯುತ್ತಿರುವ ಕಾರಣಕ್ಕೆ ಯಾರೂ ಇತ್ತ ಬಂದಿಲ್ಲ. ಚುನಾವಣೆ ಮುಗಿದ ಮೇಲೆ ಸರ್ಕಾರದ ಹಂತದಲ್ಲೇ ಮಾತುಕತೆ ನಡೆಸುತ್ತೇವೆ’ ಎಂದು ನಿವೇಶನದಾರರು ಹೇಳಿದ್ದಾರೆ.

‘ಎರಡು ದಶಕದ ಬಳಿಕ ತಕರಾರು’

ಬನಶಂಕರಿಯ 2 ಮತ್ತು 3ನೇ ಬ್ಲಾಕ್ ನಿರ್ಮಾಣವಾಗಿ ಎರಡು ದಶಕಗಳೇ ಕಳೆದಿದೆ. ಇದುವರೆಗೂ ಸುಮ್ಮನಿದ್ದ ಅರಣ್ಯ ಇಲಾಖೆ ಸಿಬ್ಬಂದಿ ಈಗ ಇಲಾಖೆಗೆ ಸೇರಿದ್ದು ಎನ್ನುತ್ತಿದ್ದಾರೆ. ಈ ಜಾಗ ವಾಪಸ್ ಮಾಡುವಂತೆ ಬಿಡಿಎಗೆ ನೋಟಿಸ್ ನೀಡಿದೆ ಎಂಬ ಮಾಹಿತಿಯಿದೆ. ಬಿಡಿಎ ಮಧ್ಯಪ್ರವೇಶಿಸಿ ನಿವೇಶನ ಖರೀದಿಸಿದವರಿಗೆ ನ್ಯಾಯ ಒದಗಿಸಬೇಕು ಎಂದು ನಿವೇಶನದಾರ ನಂಜುಂಡಯ್ಯ ಆಗ್ರಹಿಸುತ್ತಾರೆ.

ಭಾರತೀಯ ಅಧಿಕಾರಿಗಳ ಸಂಘಕ್ಕೆ ತಿಲ್ಲಾಪೂರ ನೇಮಕ

ಬೆಂಗಳೂರು: ಅಖಿಲ ಭಾರತೀಯ ರಾಜ್ಯ ಸಿವಿಲ್ ಸೇವಾ ಮತ್ತು ಆಡಳಿತಾಧಿಕಾರಿ ಸಂಘಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿಯಾಗಿ ರಾಜ್ಯದ ಕೆಎಎಸ್ ಅಧಿಕಾರಿ ರವಿ ಎಂ. ತಿಲ್ಲಾಪೂರ ಆಯ್ಕೆಯಾಗಿದ್ದಾರೆ.

ರಾಜಸ್ಥಾನದ ಜೈಪುರದಲ್ಲಿ ಈಚೆಗೆ ನಡೆದ ಒಕ್ಕೂಟದ 16ನೇ ಸಮ್ಮೇಳನದ ವಾರ್ಷಿಕ ಮಹಾಸಭೆಯಲ್ಲಿ ಈ ಆಯ್ಕೆ ನಡೆದಿದೆ. ರಾಜಸ್ಥಾನ ಸಿವಿಲ್ ಸೇವಾ ಅಧಿಕಾರಿಗಳ ಸಂಘದ ಅಧ್ಯಕ್ಷ ಗೌರವ್ ಬಜಾದ್ ಒಕ್ಕೂಟದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಸಿಇಒ ತಿಲ್ಲಾಪೂರ ಅವರು ಪ್ರಸ್ತುತ ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳ ಸಂಘದ ಅಧ್ಯಕ್ಷರೂ ಆಗಿದ್ದು, ಇದೇ ಮೊದಲ ಬಾರಿ ರಾಜ್ಯದ ಕೆಎಎಸ್ ಅಧಿಕಾರಿಯೊಬ್ಬರು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಹುದ್ದೆಗೇರಿದ್ದಾರೆ.

ರವಿ ಎಂ. ತಿಲ್ಲಾಪೂರ

‘ಸಮ್ಮೇಳನದಲ್ಲಿ ಐಎಎಸ್, ಕೆಎಎಸ್ ಹುದ್ದೆಗಳ ಪದೋನ್ನತಿ, ಸೇವಾ ಸೌಲಭ್ಯಗಳು, ವರ್ಗಾವಣೆ ಕುರಿತು ಚರ್ಚೆಗಳು ನಡೆದವು. ಕರ್ನಾಟಕದ ಡಾ.ನಾಗೇಂದ್ರ ಎಫ್. ಹೊನ್ನಳ್ಳಿ, ಸಂತೋಷ್ ಬಿರಾದಾರ ಸೇರಿ 22 ರಾಜ್ಯಗಳ ಪ್ರತಿನಿಧಿಗಳು ಭಾಗವಹಿಸಿದ್ದರು’ ಎಂದು ರಾಜ್ಯ ಕೆಎಎಸ್ ಅಧಿಕಾರಿಗಳ ಸಂಘದ ಕಾರ್ಯದರ್ಶಿ ಡಾ.ಬಿ. ಆರ್.ಹರೀಶ್ ನಾಯ್ಕ ಹೇಳಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

St. Benedict's Academy School (CBSE & Degree College), Asirvanam, Anchepalya, Kengeri, Mysore Road, Bangalore-74
Requires Trained & Experienced **TEACHERS**
ENGLISH & HINDI
COMPUTER SCIENCE
ACCOUNTANCY
NURSING TUTORS
MONTESSORI TEACHERS
Call: 9740985741
Mail your resume to: jeromeosb@gmail.com

WANTED TEACHERS with BA/MA (Eng/SS) Salary upto 28000/- Contact Sidhartha International School, Peenya,Dasarahalli. Contact 9620100046 / 9964670328.

SSB INTERNATIONAL SCHOOL
Indiranagar, Bangalore - 560038

LADY ACADEMIC HEADS
for All Categories (Kindergarten, Montessori, Primary & High School)

INSTRUCTORS - LIFE SKILLS
Yoga, Music (Vocal) & Dance (Classical)
Physical Education Instructors (M/F)

ADMINISTRATIVE STAFF
System Administrator,
Front Office (Receptionist),
Clerical Staff with an Experience of Handling Admissions,
Store Manager (Lady),
DTP Operator cum Graphic Designer

TRAINED LADY TEACHERS
PRE-PRIMARY
Kindergarten Methodology
Montessori Methodology
PRIMARY (PRT)
with B.Sc/BA, B.Ed
HIGH SCHOOL (PGT)
for teaching English, Physics, Chemistry, Geography, Maths, Hindi and Computer Science

ALL APPLICANTS SHOULD POSSESS RELEVANT QUALIFICATION
Apply immediately in person / Email to ssbinternationalschool@gmail.com
The Secretary, SSB Education Society, No.5/A, HAL II-Stage, Indiranagar, Bangalore-38. Ph: 41523548

Poornaprajna Education Centre®
(Promoted and Managed by Udupi Sri Admar Mutt Education Council)
No.4, 16th Cross Sadashivanagar, Bangalore – 560 080 Ph: 080 23618181

Applications are invited from qualified and experienced candidates for the following vacancies in PPEC, Sadashivanagar, B-80

- **HIGH SCHOOL SECTION :**
  - **Asst. Librarian -** Any Graduate with B. Lib/M.Lib.,.
- **PRIMARY SECTION :**
  - **Headmistress - B.Sc., B.Ed.,.** with atleast 5 years of experience in similar position.
  - **Physical Education Teacher -** (Male) Any Graduate with B. P.Ed.,
  - **Male Security** - School education with working, verbal and writing knowledge of Kannada & English (age less than 45 years)

Computer knowledge is a must for the above posts. Interested candidates may send their resume to the Hon. Secretary by Post or through email to ppecs7@yahoo.co.in within 7 days.

"ST. MARTIN'S HIGH SCHOOL" 7th cross Behind Anjan Theatre, Magadi Road, Bengaluru-23. Requires: Head Mistress Academic Advisers, Accountant/ Clerk Qualified and Trained Teachers for Nursery, Primary and High School to teach all the subjects including Computer, PE, Drawing. PREFERABLY LADIES. Contact Office- Phone: 080- 23101999, 9449117716, 9591990199

WANTED TEACHERS, Nursery, Primary and High-school classes for all the subjects includung P.E. and Computer. 'SRI VIDYA KENDRA' Peenya 1st stage, Bengaluru-58 Phone: 9900708182, 28398833, 41179155

GURUKULA INTERNATIONAL SCHOOL Requires, NURSERY, English, Maths, Kannada COMPUTER TEACHERS for Primary and High School and LADY ACCOUNTANT with Kannada typing. 9th Cross, Near Magadi Road, Metro Station Bangalore-23. 7829338292 7676676629

WINDERMERE HIGH SCHOOL requires Teachers for Computers, Maths(MSc BEd), Science (MSc BE.d) & Kannada (MA BEd) for High School. ForPrimary School Kannada (BA BEd), Hindi (BA BEd), Social (BA BEd/ DEd) PETeacher. Drivers and Bus attenders. Contact 13/1, 3rd Cross, Magadi Road,Bangalore-560023. Ph: 08040948787, 08023144539, 9902878787. Email:windermerepublicschool@gmail.com

WANTED LADY TEACHERS for English Medium High School Experienced ENGLISH TEACHER BA/MA B.Ed, KANNADA BA/MA BEd, SCIENCE BSc/MSc BEd, SOCIAL MA BEd. Apply Secretary CAUVERY VIDYANIKETHAN, 69, Kathriguppe Main Road, BSK 3rd Stage, Bangalore-85 Ph: 99805-15366/ 87925-68207/ 99452-70710

WANTED SCIENCE Teacher For Highschool Sagar Convent Kanakapura Main B'lore- 82 Near APS Engineering College Good Salary: 9342552428

"WANTED GRADUATED Well experienced Teachers for Nishara Public School, Kaggalipura, Bangalore. Contact : 8095554686, 8904873640"

BEST ENGLISH/ SOCIAL SCIENCE/ MATHS/ HINDI/ GENERAL SCIENCE/ MUSIC/ B.P.Ed TEACHERS for CBSE SCHOOL. Good salary is offered 9449835744/ 9535601743.

REQUIRED EXPERIENCED candidates to handle Nursery, Primary & High School (English/ Science/ Math) BEd, DEd, NTT & BPEd. Contact: Jnanavahini Vidya Samsthe (JVS) #8, BEML layout, 8th main, Basaveswara Nagar, Bengaluru-79. Phone: 9343745526.

CAMLIN ENGLISH SCHOOL 6th 'C' Main Hampinagara Vijayanagar 2nd Stage Bangalore-104. Requires TEACHERS B.Sc., B.Ed. (Maths, Science) B.A., B.Ed. (English, Kannada, Social) TCH/D.Ed., NTT, Computers, Drawings, SECURITY GUARD, ATTENDER, AYA SCHOOL BUS DRIVER. Contact immediately/ Apply: 080-23301363

LITTLE BLOOM ENGLISH HIGH SCHOOL 62/1, DEVASANDRA, K.R. PURAM, BENGALURU-36. Phone: 9739411881, 9739797756 Experienced/ Trained Teachers to handle Nursery to High School to teach All Subjects, Computer Teacher and PE instructor for 23-24. Qualification: NTT/ D.Ed/ B.A/ B.Sc/ B.Ed/ M.A/ M.Ed. Email: littlebloomenglishschool@gmail.com Walk-in interview 20th, 21st April 2023 Timings: 10:00am to 1:00pm

WANTED ENGLISH MEDIUM TRAINED Lady Teachers forPrimary to teach all the subjects andTrained Male / Female Graduates for High School to teach English / Social Science/Maths/ Science/ Hindi/NTTTrained/ Computer Science / PT Master/ Part-Time Drawing / Music. LadyGraduates Interested in teaching can also applyfor the academic year 2023-24. Agelimit-not above 40 years. Attractive Salary with PF and ESI Facilities. Contactin person (10.00 am-3.00 pm on all working days) Secretary, Deccan EducationalSociety®, No.95, 3rd Cross, Srirampuram, Bengaluru – 560021 (Near Sampige Theater,Malleswaram)

REPUTED ENGLISH Medium School requires experienced trained LADY TEACHERS for Nursery/ Primary/ Higher Secondary for teaching English, Maths, Science, E.V.S, P.E Teacher. Walk-in interview. 10:00 AM to 2:00 PM. Salary Rs.18,000/- above. New Oxford English School, #129, 6th cross Gandhinagar, Bangalore-09. Ph: 22261590, 8884440214.

FRANK PUBLIC SCHOOL, JP.Nagar 6th Phase, requires HIGH SCHOOL ENGLISH, HINDI TEACHERS, PRIMARY SCHOOL TEACHERS. email resume: rumysud@gmail.com WhatsApp:9901692223

ST.CHARLES HIGH SCHOOL #1086,1st Block,3rd Stage, Adarsha-Layout, Basaveshwaranagar, Bangalore-79.Invites application from NTT, TCH,BA B.Ed, BSC B.Ed,QUALIFIED and EXPERIENCED English medium TEACHERS to handle Nursery,Primary and High-School also wanted PE,HM and Co-ordinator. Phone:9886519766

Engg/ Production Technical

WANTED
ITI-WELDERS & FITTERS
(Fresher/Experienced)
Required for a manufacturing company in Nelamangala, Bangalore Rural-562123.
Interested candidates may contact the following Mobile Nos. during 9 a.m to 4 p.m on all working days/mail their bio-date to the e-mail id.
M: 96324 28588, 63614 01798
E-mail id: jobskph41@gmail.com

REQUIRE: CNC OPERATORS, ELECTRICAL WINDERS & STORE EXECUTIVE for our Motor and Special Pumps Manufacturing Unit at Devarachikkanahalli, Bannergatta Road, Bangalore. Email: flowoilpumps@hotmail.com

Accounts & Finance

REQUIRED EXPERIENCED Male/ Female ACCOUNTANT/ ACCOUNTS ASSISTANT/ OFFICE ASSISTANT for a Pharma Company @ Domlur. Contact: 9480529536/ 7019715711/ 08025353641 medilabindia@yahoo.com.

Marketing & Sales

WANTED MANAGERS, Teamleaders, Sales Executives and Telecallers to work in Jayanagar & Central City. Earn upto 20000-30000. Call 7406432056

JOB VACANCY Required Male/Female for FIELD MARKETING Qualification: Any Degree,Special Allowance and Incentives with Salary Contact- 9884194032. Star`Office Bazaar Pvt.Ltd. Indiranagar, Bengaluru

Walk-in

MAXCONCORDE DEVELOPERS
Sky is the limit
A Real Estate Company
Requires
Sales Executive - Good Communication Skills, Own Conveyance Must. Min 1-2 Yrs Exp. in Similar Field.
Tele-Callers- Female With Good communication Skills Min 1-2 Yrs Exp. in Similar Field.
Receptionist - Female with pleasing Personality With Good communication Skill,
Typist- Good typing speed in Kannada & English.
Residence Near By Preferred
WALK - IN
#2231, 11th main, Jayanagar 3rd block, Bangalore
7795052288

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

General

WANTED SECURITY Guards, and Kitchen Worker's Contact: MGP Institutions, Kanmanikai, Mysore Road, Bangalore. Phone 9886236341.

GOOD WISHES (India), Bannerghatta Road, Wanted immediately CHRISTIAN EVENT MANAGER. GOOD SALARY. Call: 98450-15353.

Part-Time Jobs

EXCELLENT GREAT Opportunity Work From Home Earn Unlimited From 35k-40k Part/ Full Time: 8147236252/ 9886641282

EARN 30K-2L/ Month Age 35-60 VRS, Housewife, Retired People & Self Employee. Bangalore, Jayanagar: 7899493370

Security & Detectives

WANTED EXPERIENCED OPERATION MANAGER/ FIELD OFFICER/ AREA MANAGER/ SUPERVISOR/ GUARD FOR A REPUTED SECURITY AGENCY, BANGALORE. CONTACT:9945273400 / 9686911831. Email: gm@ritemanprotection.com

Self Employment

I,NARAYANA(62) COMPLETED world tour in bicycle & motorcycle looking for any job or help Speaks Kannada/English/Hindi/Tamil 9980751092

Wanted

WANTED TYPIST Freshers /Experienced for Advocate Office. Salary Rs. 10 to 14K. J.P. Nagar. Call: 9916343921

WANTED FEMALE Office Assistant Below 40Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

REAL ESTATE SELLING

Industrial & Factory

Tumkur Road

SALE 5 Acres, Industrial Land, suitable for any Red Catagory, Industrial Garments, Engineering, Pharmaceutical. 9141326819

Sites

Basavanagudi

SALE DVG Road House 2BHK GF 2BHK FF 1600Sft Site 25x30 Clear Title Suit Commercial Also Brokers Excuse: 9886019240

Nagarabhavi

"SALE 40X60, 30X40 Site in MPM Layout Mallathahalli, Good Location, Genuine Buyers Contact 7760388034/ 9242135834"

AUTOMOTIVE

Four Wheelers Selling

Hyundai

ACCIDENT DAMAGED KA-02 MJ-4640 GRAND i10 SPORTZ 1.2 BSIV/2014 is for sale with RC-Last date 24.04.2023. Contact: 9945300381, 9844048926

PUBLIC NOTICE

KARNATAKA ANTIBIOTICS AND PHARMACEUTICALS LTD.,
(A GOVT OF INDIA ENTERPRISE)
REGD& CORP.OFFICE: ARKA THE BUSINESS CENTRE, NO. 37, NTTF MAIN ROAD, PEENYA, BANGALORE-560058
GODOWN/WAREHOUSE ON LEASE/RENT BASIS
We are looking for a GODOWN/WAREHOUSE having 5000 sq.ft within the radial distance of 1 - 2 kms from our Manufacturing Plant at No. 14, Peenya Industrial Area. The detailed information is available at KAPL's Website www.kaplindia.com. Interested parties are requested to submit their sealed offers on or before 08.05.2023 before 5.00 PM.
Sd/-
Company Secretary & Deputy General Manager(Admn)

BUSINESS

Business Offers

Finance

NRI'S INVESTMENT/FINANCE available on low-interest for properties,land& building,sites flats,converted lands also personal,educational call pengana-7204995189

PERSONAL

Change of Name

CHANGE OF NAME
I, **NAZNEEN KHANNUM** D/o Shabbir Ahmed, R/at No 133, 7th Cross, Govindapuram, Arabic College, Bengaluru-560045, have changed my name to **MYRA** vide gazette dated 22.08.2022. before Karnataka Gazette, Unit-II, Bangalore. Henceforth I shall be called **MYRA** only.

I, M.A.RENUKA W/o B.Ravi prakash, aged about 46 years residing at Gutlur village, Huthur post, Kolar Taluk and District. Have changed my name to Renu Ravi Prakash vide affidavit dated 10.04.2023 before Notary Ravindrababu.G Kolar. Henceforth I shall be called as Renu Ravi Prakash only.

CHANGE OF NAME
I,**KEERTHANA,**Flat-103, A-Block,Sai Palace, JP Nagar, 7th Phase, Puttenahalli, Bengaluru, 560078, Karnataka, India, I Changed my name as **KEERTHANA MAGESH KUMAR,** D/o. Magesh Kumar Pudupadi Krishnamurthy. vide affidavit dated 18.04.2023 before Notary B.H.Rajendra, Bangalore.

I, HARISH V, Residing at No.15, BDA Layout, E Block, Lingarajpuram, St.Thomas Town Post, Bangalore-84 have changed my minor daughter's name from YESHWINI. H to YESESHWINI. H vide affidavit dated 18.04.2023 before Notary Y.R.Chandrasekar, Bangalore

CHANGE OF NAME
I, **JHANSI RANI. M** W/o Sreenivasulu Balakrishna, R/@ No.181, 2nd Cross, Viveknagar Further Extension, Viveknagar, Bengaluru-560047, have changed my name to **JHANSI RANI** vide affidavit dated 18.04.2023 before Notary M. Narendran, Bangalore.

I, N. Manje Gowda residing at No.12, 2nd Cross, Brundavan Layout, Mallasandra, Hesaraghatta Main Road, Bangalore-560057 have changed my name to Manjunatha. N vide affidavit dated:17.4.2023 Sworn before Notary Deepa. M Bangalore

I, LAKSHMANA, residing at Bengaluru-98 have changed my name as LAKSHMANA. L, vide affidavit dated 18/04/2023 before Notary P.C.Ramaiah, Bengaluru

WE, CHANDRESH MUNISWAMY and APARNA LAKSHMI NARASIMHA SWAMY have changed our Son's Name from PREM MUNISWAMY CHANDRASHA to PREM MUNISWAMY CHANDRESH vide affidavit dated: 18/4/2023 Before Notary Manohar Jeerige Bangalore.

I, SATHISHA, residing at Bengaluru-15 have changed my name as SATHISHA M, vide affidavit dated 18/04/2023 before Notary P.C.Ramaiah, Bengaluru

Lost

ಕಳೆದಿದೆ
ಭರತ ಸಿ.ಎಸ್. S/o ಶೇಖರ್, ಕರಿಹೋಬನಹಳ್ಳಿ, ಬೆಂಗಳೂರು ಆದ ನಾನು ನನ್ನ ಮೂಲ ಆಸ್ತಿಯ ಕ್ರಯ ಪತ್ರವನ್ನು ಕಳೆದುಕೊಂಡಿದ್ದೇನೆ. ನನ್ನ ಸೇಲ್ ಡೀಡ್ ದಾಖಲೆಗಳ ಸಂಖ್ಯೆ 33/1, ಸೈಟ್ ಸಂಖ್ಯೆ. 18. ವೈ.ಎಂ. ರಾಮಚಂದ್ರ ಅವರು 03-07-2006 ರಂದು ಜಿ.ಗಂಗಮ್ಮ ಅವರಿಗೆ ನೊಂದಾಯಿತವಾಗಿರುವ ಆಸ್ತಿಯ ಕ್ರಯ ಪತ್ರದ ದಾಖಲೆಯ ಸಂಖ್ಯೆ 20526/06-07. ಯಾರಿಗಾದರೂ ಈ ದಾಖಲಾತಿ ಸಿಕ್ಕದರೆ ದಯವಿಟ್ಟು ಸಂಪರ್ಕಿಸಿ : 9663145517

OTHERS

For Sale

SCRAP SALE
Plant -1
TOYOTA BOSHOKU AUTOMOTIVE INDIA PVT LTD
#41, Bhimenahalli, MN Halli Post, Bidadi, Ramanagaram, Bangalore 562 109

Sl No	Material in KGs	In Tons/ Annum (Approx)
1	Wood scrap	50
2	Carton Box / Paper Board	180
3	Plastic & PVC	80
4	MS Scrap	140
5	PU Foam	35
6	Felt cut pieces	10
7	Empty Barrels	100
8	MS rail with Plastic wheels	15
9	Plastics Painted & Nylon parts	12
	Incineration	
10	WS cut pieces Carpet, Fabric, PVC with Foam & Waste (Used) Isocyanate, Proglide & Polyol	400

Plant -2
TOYOTA BOSHOKU AUTOMOTIVE INDIA PVT LTD
GUNDUKURKI ROAD, NALLAGANAKOTHAPALLI VILLAGE, HOSUR TALUK, KRISHNAGIRI DIST, TAMIL NADU. PIN : 635 117.

Sl No	Material in KGs	In Tons/ Annum (Approx)
1	Wood Scrap	25
2	Paper Board	25
3	MS Scrap	45
4	MS Headrest Pipes	55
5	MS Steel & Wood (Metal Box)	20
6	Plastics	15
7	Incineration	25

Note: 1. State pollution control board approval for all above materials is mandatory.
2.Interested parties can inspect the scrap in the above premises between date: 19.04.2023 to 21.04.2023. Timings: 2:00 pm to 5:00 pm
3.Quotation to Be submitted on or Before 22/04/2023.
4.Quotation can be sent to following E-Mail IDs gy.narasimhamurthy@toyota-boshoku.com & sriram.shetty@toyota-boshoku.com
5.Agreement period: 1st May 2023 to 30th April 2024
Interested parties can contact the following person for scrap inspection at site Plant-1 /2
Mr.Sriram shetty K (Purchase Department) Mobile: 08904067146
Mr. G Y Narasimhamurthy (Purchase Department) Mobile: 09663881794

CONNECT

ST. BENEDICT'S ACADEMY RESIDENTIAL
CBSE School, PU, Degree and Nursing Colleges for Boys & Girls.
ADMISSION OPEN FOR 2023 - 24
Fee, Food, Hostel facilities for One (1) Year- One Lakh only in Installments
Free Academy for NCC, Karate, Kung Fu-Wu, Counseling, Yoga.
St. Benedict's Group of Institutions, Anchpalaya, Kengeri, Mysore Road, Bangalore.
Contact: 9886812398
Mail: jeromeosb@gmail.com / www.sbab.in

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ಗುರುದಾಸನ್

ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿ ಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ, ಮದುವೆ ಯೋಗ, ಪ್ರೇಮ-ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮೀ ಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು. ಸೂಚನೆ: ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ಗುರುದಾಸನ್(ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ.ನಂ. 102, ನಂ. 30, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು), ಬೆಂಗಳೂರು-04
ಮನೆ ವಿಳಾಸ: ಮನೆ ನಂ. 2544, ನಂದಗೋಕುಲ ನಿಲಯ, ಅಂಬರ್ ಲಾಜಿಸ್ಟಿಕ್ ಹತ್ತಿರ, ಕೆಳಮಹಡಿ, 13ನೇ ಮುಖ್ಯ ರಸ್ತೆ, ‘ಇ’ ಬ್ಲಾಕ್ (ಮೋರ್ ಸೂಪರ್ ಮಾರ್ಕೆಟ್ ಹಿಂಭಾಗ), ಕೊಡಿಗೇಹಳ್ಳಿ ಗೇಟ್, ಸಹಕಾರ ನಗರ, ಬೆಂಗಳೂರು-560092
Mob.: 98441 06430 / 81579 14600
ಭೇಟಿಯ ವೇಳೆ: ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ
ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH DECCAN HERALD ಪ್ರಜಾವಾಣಿ
BOOK YOUR CLASSIFIEDS ADVERTISEMENT
DECCAN HERALD ALL EDITION & PRAJAVANI BENGALURU CITY

	Ordinary	Bold	Ordinary Semi Display	Bold Semi Display
Per word	Rs. 100/-	Rs. 150/-	Rs. 110/-	Rs. 170/-
			Single Column	Multi Column
Classified Display			Rs. 535/-	Rs. 550/-

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

conditions apply*

For More Details Contact:
Ph: 080- 45557160 | 163 | 164 |
9845114560 | 9731810277 | 9901641752 | 9886213331
dhclassifieds@deccanherald.co.in www.dhclassifieds.com

1. ಗೋವಿಂದರಾಜನಗರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಉಮೇಶ್ ಶೆಟ್ಟಿ ಅವರು ಬೆಂಬಲಿಗರೊಂದಿಗೆ ಮೆರವಣಿಗೆಯಲ್ಲಿ ಸಾಗಿದರು. ಮುಖಂಡರಾದ ಅರುಣ್ ಸೋಮಣ್ಣ, ವಿಶ್ವನಾಥ್ ಗೌಡ ಇದ್ದರು. 2. ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಆರ್.ವಿ.ದೇವರಾಜ್ ನಾಮಪತ್ರ ಸಲ್ಲಿಕೆಗೂ ಮುನ್ನ ತೆರೆದ ವಾಹನದಲ್ಲಿ ಮೆರವಣಿಗೆ ನಡೆಸಿದರು. 3. ವಿಜಯನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಕೃಷ್ಣಪ್ಪ ಮತ್ತು ಅವರ ಪುತ್ರ ಪ್ರಿಯಕೃಷ್ಣ ಮಂಗಳವಾರ ತೆರೆದ ವಾಹನದಲ್ಲಿ ಸಾಗಿದರು –ಪ್ರಜಾವಾಣಿ ಚಿತ್ರಗಳು

ನಾಮಪತ್ರ ನೂರು: ಉತ್ಸಾಹ ಜೋರು

ಕಾರ್ಯಕರ್ತರ ಅದ್ದೂರಿ ಮೆರವಣಿಗೆ: ನಾಯಕರ ಅಬ್ಬರದ ಭಾಷಣ: ಶಕ್ತಿ ಪ್ರದರ್ಶನಕ್ಕೆ ಅಭ್ಯರ್ಥಿಗಳ ತೀವ್ರ ಪೈಪೋಟಿ

ಕ್ಷೇತ್ರ	ಬಿಟಿಎಂ ಲೇಔಟ್
ಅಭ್ಯರ್ಥಿ	ರಾಮಲಿಂಗಾರೆಡ್ಡಿ
ಪಕ್ಷ	ಕಾಂಗ್ರೆಸ್
ಅಭ್ಯರ್ಥಿಯ ಕುಟುಂಬದ ಒಟ್ಟು ಆಸ್ತಿ	₹110.65 ಕೋಟಿ
ಅಪರಾಧ ಪ್ರಕರಣ	4
ಶಿಕ್ಷಣ	ಬಿಎಸ್ಸಿ
ಚರಾಸ್ತಿ	₹36.15 ಕೋಟಿ
ಸ್ಥಿರಾಸ್ತಿ	₹74.5 ಕೋಟಿ
ಎಷ್ಟು ಹೆಚ್ಚಳ	₹44.04 ಕೋಟಿ
ಅಭ್ಯರ್ಥಿಯ ಹೆಸರಿನಲ್ಲಿರುವ ಆಸ್ತಿ	₹79.29 ಕೋಟಿ
ಅಭ್ಯರ್ಥಿಯ ಸಾಲ	₹13 ಕೋಟಿ
ಪತ್ನಿ ಹೆಸರಿನಲ್ಲಿರುವ ಆಸ್ತಿ	₹31.36 ಕೋಟಿ
ಪತ್ನಿಯ ಸಾಲ	₹53.20 ಲಕ್ಷ

ಕ್ಷೇತ್ರ	ಜಯನಗರ
ಅಭ್ಯರ್ಥಿ	ಸಿ.ಕೆ. ರಾಮಮೂರ್ತಿ
ಪಕ್ಷ	ಬಿಜೆಪಿ
ಅಭ್ಯರ್ಥಿಯ ಕುಟುಂಬದ ಒಟ್ಟು ಆಸ್ತಿ	₹33.90 ಕೋಟಿ
ಅಪರಾಧ ಪ್ರಕರಣ	3
ಶಿಕ್ಷಣ	ದ್ವಿತೀಯ ಪಿಯುಸಿ
ಚರಾಸ್ತಿ	₹5.57 ಕೋಟಿ
ಸ್ಥಿರಾಸ್ತಿ	₹28.33 ಕೋಟಿ
ಅಭ್ಯರ್ಥಿಯ ಹೆಸರಿನಲ್ಲಿರುವ ಆಸ್ತಿ	₹1.17 ಕೋಟಿ
ಅಭ್ಯರ್ಥಿಯ ಸಾಲ	₹27 ಲಕ್ಷ
ಪತ್ನಿ ಹೆಸರಿನಲ್ಲಿರುವ ಆಸ್ತಿ	₹32.68 ಕೋಟಿ
ಪತ್ನಿಯ ಸಾಲ	₹58.59 ಲಕ್ಷ
ಮಕ್ಕಳ ಹೆಸರಿನಲ್ಲಿ ಆಸ್ತಿ	₹4.14 ಲಕ್ಷ

ಕ್ಷೇತ್ರ	ಚಾಮರಾಜಪೇಟೆ
ಅಭ್ಯರ್ಥಿ	ಜಮೀರ್ ಅಹಮದ್ ಖಾನ್
ಪಕ್ಷ	ಕಾಂಗ್ರೆಸ್
ಅಭ್ಯರ್ಥಿಯ ಕುಟುಂಬದ ಒಟ್ಟು ಆಸ್ತಿ	₹72.83 ಕೋಟಿ
ಕುಟುಂಬದ ಒಟ್ಟು ಸಾಲ	₹42.93 ಕೋಟಿ
ಅಪರಾಧ ಪ್ರಕರಣ	5
ಶಿಕ್ಷಣ	ಎಸ್ಎಸ್ಎಲ್‌ಸಿ
ಚರಾಸ್ತಿ	₹7 ಕೋಟಿ
ಸ್ಥಿರಾಸ್ತಿ	₹65.82 ಕೋಟಿ
ಎಷ್ಟು ಹೆಚ್ಚಳ	₹32.49 ಕೋಟಿ
ಅಭ್ಯರ್ಥಿಯ ಹೆಸರಿನಲ್ಲಿರುವ ಆಸ್ತಿ	₹72.40 ಕೋಟಿ
ಪತ್ನಿ ಹೆಸರಿನಲ್ಲಿರುವ ಆಸ್ತಿ	₹31.31 ಲಕ್ಷ



ಕ್ಷೇತ್ರ	ಚಿಕ್ಕಪೇಟೆ
ಅಭ್ಯರ್ಥಿ	ಆರ್.ವಿ.ದೇವರಾಜ್
ಪಕ್ಷ	ಕಾಂಗ್ರೆಸ್
ಅಭ್ಯರ್ಥಿಯ ಕುಟುಂಬದ ಒಟ್ಟು ಆಸ್ತಿ	₹97.83 ಕೋಟಿ
ಕುಟುಂಬದ ಒಟ್ಟು ಸಾಲ	₹22.5 ಕೋಟಿ
ಅಪರಾಧ ಪ್ರಕರಣ	ಇಲ್ಲ
ಶಿಕ್ಷಣ	ಬಿ.ಎ
ಚರಾಸ್ತಿ	₹16.52 ಕೋಟಿ
ಸ್ಥಿರಾಸ್ತಿ	₹81.31 ಕೋಟಿ
ಎಷ್ಟು ಹೆಚ್ಚಳ	₹16.57 ಕೋಟಿ
ಅಭ್ಯರ್ಥಿಯ ಹೆಸರಿನಲ್ಲಿರುವ ಆಸ್ತಿ	₹85.3 ಕೋಟಿ
ಅಭ್ಯರ್ಥಿಯ ಸಾಲ	₹21.17 ಕೋಟಿ
ಪತ್ನಿ ಹೆಸರಿನಲ್ಲಿರುವ ಆಸ್ತಿ	₹12.53 ಕೋಟಿ
ಪತ್ನಿಯ ಸಾಲ	₹1.33 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲೆಲ್ಲೂ ಹಾರಾಡಿದ ರಾಜಕೀಯ ಪಕ್ಷಗಳ ಬಾವುಟ, ಅದ್ದೂರಿ ಮೆರವಣಿಗೆ, ಅಬ್ಬರದ ಭಾಷಣ...

ಇವು ನಗರದಲ್ಲಿ ಮಂಗಳವಾರ ನಾಮಪತ್ರ ಸಲ್ಲಿಕೆಗೂ ಮುನ್ನ ಅಭ್ಯರ್ಥಿಗಳು ನಡೆಸಿದ ರ‍್ಯಾಲಿ ಸಂದರ್ಭದಲ್ಲಿ ಕಂಡು ಬಂದ ದೃಶ್ಯಗಳು. ನಾಮಪತ್ರ ಸಲ್ಲಿಕೆಗೆ ಎರಡು ದಿನ ಮಾತ್ರ ಬಾಕಿ ಇದ್ದು, ಮಂಗಳವಾರ ಉಮೇದುವಾರಿಕೆ ಸಲ್ಲಿಕೆ ಉತ್ಸಾಹ ಜೋರಾಗಿತ್ತು. 28 ಕ್ಷೇತ್ರಗಳಿಗೆ ನೂರು ನಾಮಪತ್ರ ಸಲ್ಲಿಕೆಯಾಗಿದ್ದು, 74 ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದ್ದಾರೆ.

ಕಾಂಗ್ರೆಸ್ ಪಕ್ಷದಿಂದ ಬಿಟಿಎಂ ಲೇಔಟ್ ಕ್ಷೇತ್ರಕ್ಕೆ ರಾಮಲಿಂಗಾರೆಡ್ಡಿ, ಕೆ.ಜೆ.ಜಾರ್ಜ್ ಸರ್ವಜ್ಞನಗರದಿಂದ, ವಿಜಯನಗರದಿಂದ ಎಂ.ಕೃಷ್ಣಪ್ಪ ಮತ್ತು ಅವರ ಪುತ್ರ ಪ್ರಿಯಕೃಷ್ಣ ಗೋವಿಂದರಾಜನಗರದಿಂದ, ಚಿಕ್ಕಪೇಟೆಯಿಂದ ಆರ್.ವಿ.ದೇವರಾಜ್ ಸೇರಿ ಹಲವರು ನಾಮಪತ್ರ ಸಲ್ಲಿಸಿದರು.

ಬಿಜೆಪಿಯಿಂದ ಕೆ.ಆರ್.ಪುರ ಕ್ಷೇತ್ರಕ್ಕೆ ಬೈರತಿ ಬಸವರಾಜ್, ರಾಜಾಜಿನಗರ ಕ್ಷೇತ್ರಕ್ಕೆ ಎಸ್. ಸುರೇಶ್‌ಕುಮಾರ್, ಮಹದೇವಪುರ ಕ್ಷೇತ್ರಕ್ಕೆ ಅರವಿಂದ ಲಿಂಬಾವಳಿ ಪತ್ನಿ ಮಂಜುಳಾ, ಗೋವಿಂದರಾಜನಗರ ಕ್ಷೇತ್ರದಿಂದ ಉಮೇಶ್ ಶೆಟ್ಟಿ, ಜಯನಗರದಿಂದ ಸಿ.ಕೆ.ರಾಮಮೂರ್ತಿ ಸೇರಿ ಹಲವರು ನಾಮಪತ್ರ ಸಲ್ಲಿಸಿದರು. ಜೆಡಿಎಸ್‌ನಿಂದ ದಾಸರಹಳ್ಳಿ ಕ್ಷೇತ್ರಕ್ಕೆ ಆರ್.ಮಂಜುನಾಥ್ ಮತ್ತು ಬಸವನಗುಡಿ ಕ್ಷೇತ್ರಕ್ಕೆ ಅರಮನೆ ಶಂಕರ್ ಉಮೇದುವಾರಿಕೆ ಸಲ್ಲಿಸಿದರು.

ಬಹುತೇಕ ಎಲ್ಲಾ ಅಭ್ಯರ್ಥಿಗಳು ದೇವಸ್ಥಾನಗಳಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಅಲ್ಲಿಂದ ಮೆರವಣಿಗೆಯಲ್ಲಿ ಸಾಗಿದರು. ತೆರೆದ ವಾಹನಗಳಲ್ಲಿ ಕಾರ್ಯಕರ್ತರು ಮತ್ತು ಬೆಂಬಲಿಗರೊಂದಿಗೆ ಸಾಗಿ ಶಕ್ತಿ ಪ್ರದರ್ಶಿಸಿದರು. ಕೆಲವರು ಪಾದಯಾತ್ರೆ ಮೂಲಕ ತೆರಳಿದರೆ, ಹಲವರು ಬೈಕ್‌ಯಾತ್ರೆಯಲ್ಲಿ ಸಾಗಿದರು. ಕಾರ್ಯಕರ್ತರು ಮತ್ತು ಬೆಂಬಲಿಗರು ರ‍್ಯಾಲಿ ನಡೆಸಿದ ರಸ್ತೆಗಳಲ್ಲಿ ಬೇರೆ ವಾಹನ ಸಂಚಾರ ಸಾಧ್ಯವಾಗದೆ ದಟ್ಟಣೆ ಉಂಟಾಗಿತ್ತು. ವಾಹನ ಸವಾರರು ಬದಲಿ ರಸ್ತೆಗಳಲ್ಲಿ ತೆರಳಲು ಪರದಾಡಬೇಕಾಯಿತು.

ಸಿಪಿಐ(ಎಂ) ಅಭ್ಯರ್ಥಿಯಿಂದ ನಾಮಪತ್ರ

ಕೆ.ಆರ್.ಪುರ: ಭಾರತ ಕಮ್ಯುನಿಸ್ಟ್ ಪಕ್ಷದಿಂದ(ಮಾರ್ಕ್ಸ್ ವಾದಿ) ಕೆ.ಆರ್.ಪುರ ವಿಧಾನಸಭಾ ಕ್ಷೇತ್ರಕ್ಕೆ ಎಂ.ನಂಜೇಗೌಡ ನಾಮಪತ್ರ ಸಲ್ಲಿಸಿದರು.

ನೂರಾರು ಕಾರ್ಯಕರ್ತರೊಂದಿಗೆ ಸಾಗಿ ಉಮೇದುವಾರಿಕೆ ಸಲ್ಲಿಸಿದ ಅವರು, ‘ಸಿಪಿಐಎಂ ಪಾರದರ್ಶಕ ಚುನಾವಣೆ ನಡೆಸುವ ಉದ್ದೇಶದಿಂದ ಸ್ಪರ್ಧೆ ಮಾಡಿದೆ. ಮೂರು ಪಕ್ಷಗಳಿಂದ ರಾಜ್ಯದ ಅಭಿವೃದ್ಧಿ ಶೂನ್ಯವಾಗಿದೆ. ಆಳುವ ಪಕ್ಷಗಳು ಜನರನ್ನು ನಿರಂತರವಾಗಿ ಶೋಷಣೆ ಮಾಡುತ್ತಿವೆ’ ಎಂದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಮೀನಾಕ್ಷಿ ಸುಂದರಂ, ಮುಖಂಡರಾದ ಗೋಪಾಲಗೌಡ, ಗೌರಮ್ಮ, ಲಿಂಗರಾಜ ಇದ್ದರು.

ಬಿಟಿಎಂ ಲೇಔಟ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಮಲಿಂಗಾರೆಡ್ಡಿ ಅವರು ಬೆಂಬಲಿಗರೊಂದಿಗೆ ಮೆರವಣಿಗೆಯಲ್ಲಿ ಸಾಗಿ ನಾಮಪತ್ರ ಸಲ್ಲಿಸಿದರು

ಮಹದೇವಪುರ ಕ್ಷೇತ್ರ ಬಿಜೆಪಿ ಅಭ್ಯರ್ಥಿ ಮಂಜುಳಾ ಅರವಿಂದ ಲಿಂಬಾವಳಿ ಅವರು ನಾಮಪತ್ರ ಸಲ್ಲಿಸಲು ಬೆಂಬಲಿಗರೊಂದಿಗೆ ತೆರಳಿದರು. ಅರವಿಂದ ಲಿಂಬಾವಳಿ ಇದ್ದರು

ದಾಸರಹಳ್ಳಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಆರ್.ಮಂಜುನಾಥ್ ನಾಮಪತ್ರ ಸಲ್ಲಿಸಲು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ಎತ್ತಿನಗಾಡಿಯಲ್ಲಿ ಸಾಗಿದರು

ಎತ್ತಿನಗಾಡಿಯಲ್ಲಿ ಮಂಜುನಾಥ್ ಮೆರವಣಿಗೆ

ಪೀಣ್ಯ ದಾಸರಹಳ್ಳಿ: ದಾಸರಹಳ್ಳಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಆರ್.ಮಂಜುನಾಥ್ ಅವರು ಮಂಗಳವಾರ ವಿಶೇಷವಾಗಿ ಎತ್ತಿನಗಾಡಿಯಲ್ಲಿ ಸಾಗಿ ನಾಮಪತ್ರ ಸಲ್ಲಿಸಿದರು.

ದಾಸರಹಳ್ಳಿಯ ನೆಲಮಹೇಶ್ವರಮ್ಮ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಬಳಿಕ ಸಾವಿರಾರು ಬೆಂಬಲಿಗರೊಂದಿಗೆ ಸಾಗಿದ ಎತ್ತಿನಗಾಡಿ ಮೆರವಣಿಗೆಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಚಾಲನೆ ನೀಡಿದರು. ಅವರೂ ಗಾಡಿ ಏರಿ ಕಾರ್ಯಕರ್ತರತ್ತ ಕೈಬೀಸಿ ಉತ್ಸಾಹ ಹೆಚ್ಚಿಸಿದರು.

ಬಾಗಲಗುಂಟೆ ಬಿಬಿಎಂಪಿ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಿದ ಆರ್.ಮಂಜುನಾಥ್, ‘ಐದು ವರ್ಷಗಳಿಂದ ಜನರ ನಡುವೆಯೇ ಇದ್ದು ಅವರ ಕಷ್ಟ–ಸುಖಗಳಿಗೆ ಸ್ಪಂದಿಸಿದ್ದೇನೆ. ಪ್ರಚಾರಕ್ಕೆ ಎಲ್ಲೇ ಹೋದರೂ ವಿಶ್ವಾಸದಿಂದ ಬರ ಮಾಡಿಕೊಳ್ಳುತ್ತಿದ್ದಾರೆ. ಗೆಲುವು ನಿಶ್ಚಿತ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜೆಡಿಎಸ್ ಮುಖಂಡರಾದ ಅಂದಾನಪ್ಪ, ಎಂ.ಮುನಿಸ್ವಾಮಿ, ಬಿ.ಎನ್. ಜಗದೀಶ್, ಹನುಮಂತರಾಜು, ಶ್ರೀರಾಮ ರೆಡ್ಡಿ, ನರಸಿಂಹಮೂರ್ತಿ, ರುದ್ರೇಗೌಡ, ಚರಣ್ ಗೌಡ ಭಾಗವಹಿಸಿದ್ದರು.

ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಸುರೇಶಕುಮಾರ್ ಬೆಂಬಲಿಗರೊಂದಿಗೆ ತೆರಳಿ ನಾಮಪತ್ರ ಸಲ್ಲಿಸಿದರು

ಬಸವನಗುಡಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಅರಮನೆ ಶಂಕರ್ ಅವರು ಮಂಗಳವಾರ ನಾಮಪತ್ರ ಸಲ್ಲಿಸಲು ಮೆರವಣಿಗೆಯಲ್ಲಿ ಸಾಗಿದರು. ವಿಧಾನಪರಿಷತ್ ಸದಸ್ಯ ಟಿ.ಎ.ಶರವಣ, ಬಾಗೇಗೌಡ, ಪಕ್ಷದ ಬ್ಲಾಕ್ ಅಧ್ಯಕ್ಷ ರಾಜಣ್ಣ ಇದ್ದರು

ಸರ್ವಜ್ಞನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಜೆ.ಜಾರ್ಜ್ ಅವರು ತೆರೆದ ವಾಹನದಲ್ಲಿ ತೆರಳಿದರು

ಅಭಿವೃದ್ಧಿ ಕಾರ್ಯಗಳೇ ಶ್ರೀರಕ್ಷೆ: ಬೈರತಿ ಬಸವರಾಜ

ಕೆ.ಆರ್.ಪುರ: ‘ಕ್ಷೇತ್ರದಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳೇ ನನಗೆ ಶ್ರೀರಕ್ಷೆ’ ಎಂದು ಬೈರತಿ ಬಸವರಾಜ ಹೇಳಿದರು. ಸಾವಿರಾರು ಬೆಂಬಲಿಗರೊಂದಿಗೆ ಮೆರವಣಿಗೆಯಲ್ಲಿ ಸಾಗಿ ನಾಮಪತ್ರ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ‘ಕಾಂಗ್ರೆಸ್ ಪಕ್ಷಕ್ಕೆ ಅಭ್ಯರ್ಥಿಯೇ ಸಿಗುತ್ತಿಲ್ಲ. ಹೀಗಿರುವಾಗ ಎದುರಾಳಿ ಯಾರೇ ಆದರೂ ತಲೆಕೆಡಿಸಿಕೊಳ್ಳುವುದಿಲ್ಲ. ನನ್ನ ಪ್ರಮಾಣಿಕತೆ, ಅಭಿವೃದ್ಧಿಯೇ ನನಗೆ ಮೂಲಮಂತ್ರ’ ಎಂದು ತಿಳಿಸಿದರು. ಬಿಜೆಪಿ ಮುಖಂಡರಾದ ಜಯಪ್ರಕಾಶ್, ಎಸ್.ಜಿ.ನಾಗರಾಜ್, ಅಂತೋಣಿಸ್ವಾಮಿ, ವಿ.ಸುರೇಶ್, ಶ್ರೀಕಾಂತ್ ಇದ್ದರು.

ಗಾಂಧಿನಗರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಪ್ತಗಿರಿಗೌಡ ಅವರು ಬೆಂಬಲಿಗರೊಂದಿಗೆ ಮೆರವಣಿಗೆಯಲ್ಲಿ ಸಾಗಿ ನಾಮಪತ್ರ ಸಲ್ಲಿಸಿದರು

ಕ್ಷೇತ್ರ	ಸರ್ವಜ್ಞನಗರ
ಅಭ್ಯರ್ಥಿ	ಕೆ.ಜೆ. ಜಾರ್ಜ್
ಪಕ್ಷ	ಕಾಂಗ್ರೆಸ್
ಕುಟುಂಬದ ಒಟ್ಟು ಆಸ್ತಿ	₹214.85 ಕೋಟಿ
ಕುಟುಂಬದ ಒಟ್ಟು ಸಾಲ	₹37.70 ಕೋಟಿ
ಶಿಕ್ಷಣ	ಬಿ.ಎ ಪೂರ್ಣಗೊಂಡಿಲ್ಲ
ಚರಾಸ್ತಿ	₹173.73 ಕೋಟಿ
ಸ್ಥಿರಾಸ್ತಿ	₹41.12 ಕೋಟಿ
ಅಭ್ಯರ್ಥಿಯ ಹೆಸರಿನಲ್ಲಿರುವ ಆಸ್ತಿ	₹113.17 ಕೋಟಿ
ಅಭ್ಯರ್ಥಿಯ ಸಾಲ	₹22.80 ಕೋಟಿ
ಪತ್ನಿ ಹೆಸರಿನಲ್ಲಿರುವ ಆಸ್ತಿ	₹101.68 ಕೋಟಿ
ಪತ್ನಿಯ ಸಾಲ	₹14.90 ಕೋಟಿ

ಕ್ಷೇತ್ರ	ವಿಜಯನಗರ
ಅಭ್ಯರ್ಥಿ	ಎಂ. ಕೃಷ್ಣಪ್ಪ
ಪಕ್ಷ	ಕಾಂಗ್ರೆಸ್
ಕುಟುಂಬದ ಒಟ್ಟು ಆಸ್ತಿ	₹296.25 ಕೋಟಿ
ಕುಟುಂಬದ ಒಟ್ಟು ಸಾಲ	₹77.14 ಕೋಟಿ
ಅಪರಾಧ ಪ್ರಕರಣ	ಒಂದು ಖಾಸಗಿ ದೂರು (ವಜಾಗೊಂಡಿದೆ)
ಶಿಕ್ಷಣ	ಬಿಎಸ್.ಸಿ
ಚರಾಸ್ತಿ	₹62.22 ಕೋಟಿ
ಸ್ಥಿರಾಸ್ತಿ	₹107.31 ಕೋಟಿ
ಎಷ್ಟು ಹೆಚ್ಚಳ	₹43.37 ಕೋಟಿ
ಅಭ್ಯರ್ಥಿಯ ಆಸ್ತಿ	₹169.53 ಕೋಟಿ
ಅಭ್ಯರ್ಥಿಯ ಸಾಲ	₹40.50 ಕೋಟಿ
ಪತ್ನಿ ಹೆಸರಿನಲ್ಲಿರುವ ಆಸ್ತಿ	₹126.39 ಕೋಟಿ
ಪತ್ನಿಯ ಸಾಲ	₹36.64 ಕೋಟಿ



ಕ್ಷೇತ್ರ	ಬೆಂಗಳೂರು ದಕ್ಷಿಣ
ಅಭ್ಯರ್ಥಿ	ಆರ್.ಕೆ.ರಮೇಶ್
ಪಕ್ಷ	ಕಾಂಗ್ರೆಸ್
ಅಭ್ಯರ್ಥಿಯ ಕುಟುಂಬದ ಒಟ್ಟು ಆಸ್ತಿ	₹94.71 ಕೋಟಿ
ಕುಟುಂಬದ ಒಟ್ಟು ಸಾಲ	₹31.70 ಕೋಟಿ
ಅಪರಾಧ ಪ್ರಕರಣ	5
ಶಿಕ್ಷಣ	ಐಟಿಐ
ಚರಾಸ್ತಿ	₹22.17 ಕೋಟಿ
ಸ್ಥಿರಾಸ್ತಿ	₹72.54 ಕೋಟಿ
ವಾಹನಗಳು	ಎರಡು ಕಾರು
ಎಷ್ಟು ಹೆಚ್ಚಳ	₹58.61 ಕೋಟಿ
ಅಭ್ಯರ್ಥಿಯ ಹೆಸರಿನಲ್ಲಿರುವ ಆಸ್ತಿ	₹86.24 ಕೋಟಿ
ಅಭ್ಯರ್ಥಿಯ ಸಾಲ	₹27.89 ಕೋಟಿ
ಪತ್ನಿ ಹೆಸರಿನಲ್ಲಿರುವ ಆಸ್ತಿ	₹7.07 ಕೋಟಿ
ಪತ್ನಿಯ ಸಾಲ	₹3.26 ಕೋಟಿ
ಅವಿಭಕ್ತ ಕುಟುಂಬದ ಆಸ್ತಿ	₹1.39 ಕೋಟಿ

ಕ್ಷೇತ್ರ	ಮಹದೇವಪುರ
ಅಭ್ಯರ್ಥಿ	ಎಚ್.ನಾಗೇಶ್
ಪಕ್ಷ	ಕಾಂಗ್ರೆಸ್
ಅಭ್ಯರ್ಥಿಯ ಕುಟುಂಬದ ಒಟ್ಟು ಆಸ್ತಿ	₹29.44 ಕೋಟಿ
ಕುಟುಂಬದ ಒಟ್ಟು ಸಾಲ	₹12.32 ಕೋಟಿ
ಅಪರಾಧ ಪ್ರಕರಣ	1
ಶಿಕ್ಷಣ	ಬಿ.ಇ (ಎಲೆಕ್ಟ್ರಿಕಲ್)
ಚರಾಸ್ತಿ	₹1.31 ಕೋಟಿ
ಸ್ಥಿರಾಸ್ತಿ	₹28.13 ಕೋಟಿ
ಎಷ್ಟು ಹೆಚ್ಚಳ	₹16.18 ಕೋಟಿ
ಅಭ್ಯರ್ಥಿಯ ಹೆಸರಿನಲ್ಲಿರುವ ಆಸ್ತಿ	₹22.51 ಕೋಟಿ
ಅಭ್ಯರ್ಥಿಯ ಸಾಲ	₹11.58 ಕೋಟಿ
ಪತ್ನಿ ಹೆಸರಿನಲ್ಲಿರುವ ಆಸ್ತಿ	₹6.92
ಪತ್ನಿಯ ಸಾಲ	₹74 ಲಕ್ಷ
ಮಕ್ಕಳ ಹೆಸರಿನಲ್ಲಿರುವ ಆಸ್ತಿ	ಇಲ್ಲ



ಕ್ಷೇತ್ರ	ಕೆ.ಆರ್.ಪುರಂ
ಅಭ್ಯರ್ಥಿ	ಬಿ.ಎ. ಬಸವರಾಜ (ಬೈರತಿ)
ಪಕ್ಷ	ಬಿಜೆಪಿ
ಅಭ್ಯರ್ಥಿಯ ಕುಟುಂಬದ ಒಟ್ಟು ಆಸ್ತಿ	₹113.06 ಕೋಟಿ
ಕುಟುಂಬದ ಒಟ್ಟು ಸಾಲ	₹23.18 ಕೋಟಿ
ಅಪರಾಧ ಪ್ರಕರಣ	3
ಶಿಕ್ಷಣ	ಪಿಯುಸಿ
ಚರಾಸ್ತಿ	₹32.54 ಕೋಟಿ
ಸ್ಥಿರಾಸ್ತಿ	₹80.51 ಕೋಟಿ
ಎಷ್ಟು ಹೆಚ್ಚಳ	₹22.15 ಕೋಟಿ
ಅಭ್ಯರ್ಥಿಯ ಹೆಸರಿನಲ್ಲಿರುವ ಆಸ್ತಿ	₹90.93 ಕೋಟಿ
ಅಭ್ಯರ್ಥಿಯ ಸಾಲ	₹23.18 ಕೋಟಿ
ಪತ್ನಿ ಹೆಸರಿನಲ್ಲಿರುವ ಆಸ್ತಿ	₹22.13 ಕೋಟಿ
ಪತ್ನಿಯ ಸಾಲ	ಇಲ್ಲ
ಅವಿಭಕ್ತ ಕುಟುಂಬದ ಆಸ್ತಿ	₹5.37 ಕೋಟಿ

ಕ್ಷೇತ್ರ	ಮಹದೇವಪುರ
ಅಭ್ಯರ್ಥಿ	ಮಂಜುಳಾ ಲಿಂಬಾವಳಿ
ಪಕ್ಷ	ಬಿಜೆಪಿ
ಅಭ್ಯರ್ಥಿಯ ಕುಟುಂಬದ ಒಟ್ಟು ಆಸ್ತಿ	₹48.15 ಕೋಟಿ
ಕುಟುಂಬದ ಒಟ್ಟು ಸಾಲ	₹14.29 ಕೋಟಿ
ಅಪರಾಧ ಪ್ರಕರಣ	ಇಲ್ಲ
ಶಿಕ್ಷಣ	ಪಿಯುಸಿ
ಚರಾಸ್ತಿ	₹19.69 ಕೋಟಿ
ಸ್ಥಿರಾಸ್ತಿ	₹28.46 ಕೋಟಿ
ಅಭ್ಯರ್ಥಿಯ ಹೆಸರಿನಲ್ಲಿರುವ ಆಸ್ತಿ	₹37.07
ಅಭ್ಯರ್ಥಿಯ ಸಾಲ	₹9.99 ಕೋಟಿ
ಪತಿ ಹೆಸರಿನಲ್ಲಿರುವ ಆಸ್ತಿ	₹11.08 ಕೋಟಿ
ಪತಿಯ ಸಾಲ	₹4.30 ಕೋಟಿ
ಮಕ್ಕಳ ಹೆಸರಿನಲ್ಲಿರುವ ಆಸ್ತಿ	ಇಲ್ಲ

ಸೆಲೆಬ್ರಿಟಿ ಮಾತು

ಮತದಾನದಿಂದಷ್ಟೇ ಬದಲಾವಣೆ ಸಾಧ್ಯ

ಸಂಗೀತ ಶೃಂಗೇರಿ, ನಟಿ

ಪ್ರತಿನಿತ್ಯ ದಾರಿಯಲ್ಲಿ ಓಡಾಡುವ ನಾವು ಅದು ಸರಿ ಇಲ್ಲ, ಇದು ಸರಿ ಇಲ್ಲ ಎಂದು ದೂರು ಹೇಳುತ್ತಲೇ ಇರುತ್ತೇವೆ. ಸರ್ಕಾರಗಳನ್ನು ಆಯ್ಕೆ ಮಾಡುವವರು ನಾವು ತಾನೇ? ಪ್ರತಿಯೊಬ್ಬರೂ ಮತದಾನ ಮಾಡಿದರೆ ರಾಜ್ಯ, ದೇಶದ ಅಭಿವೃದ್ಧಿ ಸಾಧ್ಯ. ಸೂಕ್ತ ಜನಪ್ರತಿನಿಧಿಯ ಆಯ್ಕೆಯೂ ಅಷ್ಟೇ ಮುಖ್ಯ. ಹೀಗಿದ್ದರಷ್ಟೇ ನಮಗೆ ಫಲಿತಾಂಶ ಸಿಗಲು ಸಾಧ್ಯ. ನಿಮಗೆ ಅಭ್ಯರ್ಥಿಗಳು ಇಷ್ಟವಿಲ್ಲದಿದ್ದರೆ ನೋಟ ಎನ್ನುವ ಆಯ್ಕೆಯೂ ಇದೆ. ಅದನ್ನಾದರೂ ಚಲಾಯಿಸಿ. ಮತದಾನ ಮಾಡಿದರೆ ಬದಲಾವಣೆ ಖಂಡಿತವಾಗಿಯೂ ಸಾಧ್ಯ.

ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಮಾಡಿಲ್ಲ: ಎಸ್.ಟಿ. ಸೋಮಶೇಖರ್

ಕೆಂಗೇರಿ: 'ಐದು ವರ್ಷಕ್ಕೆ ಒಮ್ಮೆ ಬರುವವರಿಗಿಂತ ಸೇವಾ ಮನೋಭಾವದೊಂದಿಗೆ ಕ್ಷೇತ್ರದ ಜನತೆಯ ಜೊತೆ ನಿರಂತರ ಸಂಪರ್ಕದಲ್ಲಿರುವವರನ್ನು ಬೆಂಬಲಿಸಿ' ಎಂದು ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಮಂಗಳವಾರ ಕೆಂಗೇರಿ, ಉಲ್ಲಾಳು ವಾರ್ಡ್‌ನಲ್ಲಿ ಮನೆಮನೆ ಪ್ರಚಾರ ನಡೆಸಿ ಅವರು ಮಾತನಾಡಿದರು. ಬೆಳಗ್ಗಿನಿಂದಲೇ ಮತ ಬೇಟೆಗೆ ಇಳಿದ ಸಚಿವರು ನೆಲಗುಳಿ, ತರಳು, ಸೋಮನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಭರ್ಜರಿ ಪ್ರಚಾರ ಸಭೆಗಳನ್ನು ನಡೆಸಿ ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷದ ಹಲವು ಕಾರ್ಯಕರ್ತರನ್ನು ಪಕ್ಷಕ್ಕೆ ಬರಮಾಡಿಕೊಂಡರು.

‘ಅಭಿವೃದ್ಧಿ ವಿಚಾರದಲ್ಲಿ ಯಾವುದೇ ರಾಜಕೀಯ ಮಾಡಿಲ್ಲ. ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಲಾಗಿದೆ. ಕಣ್ಣೀರಿಗೆ ಮರುಳಾಗಬೇಡಿ. ವಿಪಕ್ಷಗಳ ಆರೋಪಗಳು ನಿರಾಧಾರ. ಕೋವಿಡ್ ಸಂಕಷ್ಟದ ಸಮಯದಲ್ಲಿ ವಿರೋಧ ಪಕ್ಷದವರು ಕ್ಷೇತ್ರದ ಜನರ ಕಷ್ಟ ಆಲಿಸಲಿಲ್ಲ. ಈಗ ಕಣ್ಣೀರು ಹಾಕುತ್ತಿದ್ದಾರೆ’ ಎಂದು ಕಿಡಿಕಾರಿದರು. ‘ಅಭಿವೃದ್ಧಿ ವಿಚಾರದಲ್ಲಿ ಯಾವುದೇ ತಾರತಮ್ಯ ಮಾಡಲಿಲ್ಲ. ಕೋವಿಡ್ ಸಮಯದಲ್ಲಿ ಪಕ್ಷಬೇಧವಿಲ್ಲದೆ ಜನಸಾಮಾನ್ಯರಿಗೆ ನೆರವು ಒದಗಿಸಲಾಗಿತ್ತು. ಜನರ ಮೇಲಿನ ಕಾಳಜಿಯನ್ನು ಕಂಡು ಬಿಜೆಪಿಗೆ ಸೇರ್ಪಡೆ ಆಗುತ್ತಿದ್ದೇವೆ’ ಎಂದು ಕಾರ್ಯಕರ್ತರು ಹೇಳಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಉಸ್ತುವಾರಿಯಾಗಿ ನೇಮಕಗೊಂಡಿರುವ ಜಾರ್ಖಂಡ್‌ನ ಬಿಜೆಪಿ ಶಾಸಕ ಮನೀಶ್ ಜೈಸ್ವಾಲ್ ಕೂಡ ಪ್ರಚಾರದಲ್ಲಿ ಭಾಗಿಯಾಗಿದ್ದರು.

ಯಶವಂತಪುರ ಕ್ಷೇತ್ರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜೆಡಿಎಸ್, ಕಾಂಗ್ರೆಸ್ ಕಾರ್ಯಕರ್ತರನ್ನು ಎಸ್.ಟಿ.ಸೋಮಶೇಖರ್ ಪಕ್ಷಕ್ಕೆ ಬರಮಾಡಿಕೊಂಡರು





ಗಾಯಗಳಿಗೆ ಎಲೆಕ್ಟ್ರಾನಿಕ್ ಬ್ಯಾಂಡೇಜ್

ನೇಸರ ಕಾಡನಕುಪ್ಪೆ

ಗಾಯಕ್ಕೆ ಬಟ್ಟೆಯ ಕಟ್ಟು ಕಟ್ಟುವುದು ಅತಿ ಪುರಾತನ ಚಿಕಿತ್ಸಾ ಪದ್ಧತಿ. ಗಾಯಕ್ಕೂ ಬಟ್ಟೆಗೂ ನಡುವೆ ಔಷಧವನ್ನು ಲೇಪಿಸುವುದು ಅಥವಾ ಹೊಲಿಗೆಗಳನ್ನು ಹಾಕುವುದು ಇತ್ಯಾದಿ ಸರಳ ವೈದ್ಯಕೀಯ ಪದ್ಧತಿಗಳು ಬಹುಕಾಲದಿಂದ ಚಾಲ್ತಿಯಲ್ಲಿದೆ. ಇದೀಗ ಹೊಸತೊಂದು ವಿಧಾನದ ಅನ್ವೇಷಣೆಯಾಗಿದೆ. ಇದು ಎಲೆಕ್ಟ್ರಾನಿಕ್ ಬ್ಯಾಂಡೇಜ್. ತನ್ನೊಳಗಿರುವ ಎಲೆಕ್ಟ್ರಾನಿಕ್ ಸಾಧನಗಳ ಸಹಾಯದಿಂದ ಗಾಯವನ್ನು ಬಹುಬೇಗನೇ ವಾಸಿಮಾಡುವ ಶಕ್ತಿ ಇದಕ್ಕಿದೆ.

ಅಮೆರಿಕದ ಇಲಿನಾಯ್ಸ್ ನಾರ್ತ್ ವೆಸ್ಟರ್ನ್ ವಿಶ್ವವಿದ್ಯಾನಿಲಯದ ಜೀವವೈದ್ಯಕೀಯ ಎಂಜಿನಿಯರುಗಳಾದ ಗಿಲೆರ್ಮೋ ಎ. ಅಮೀರ್ ಹಾಗೂ ಜಾನ್ ಎ. ರಾಜರ್ಸ್ ಅವರ ತಂಡವು ಈ ಸಂಶೋಧನೆಯನ್ನು ಮಾಡಿದೆ. ಈ ಸಂಶೋಧನೆಯ ಫಲವಾಗಿ, ರೋಗಿಯ ಗಾಯ ಬೇಗ ವಾಸಿಯಾಗುವುದಲ್ಲದೇ, ಗಾಯದ ಕಲೆ ಕಡಿಮೆಯಾಗುವಂತೆ ಮಾಡುವುದು ಹಾಗೂ ಚಿಕಿತ್ಸೆಯ ವೆಚ್ಚವನ್ನು ಕಡಿತಗೊಳಿಸುವುದು ಸಾಧ್ಯವಾದಂತೆ ಆಗುತ್ತದೆ.

ಇತ್ತೀಚಿನ ದಿನಗಳಲ್ಲಿ ಬ್ಯಾಂಡೇಜ್ ಬಳಕೆಯನ್ನೇ ವೈದ್ಯರು ಕಡಿಮೆ ಮಾಡುತ್ತಿದ್ದಾರೆ. ತೆರೆದ ಗಾಯ ಬೇಗನೇ ವಾಸಿಯುವುದು ಎಂಬ ವಾದವೂ ಇದೆ. ಹಿಂದೆಯಲ್ಲಾ ಅಪಘಾತಗಳಲ್ಲಿ ಮೂಳೆ ಮುರಿದಾಗ 'ಪ್ಲಾಸ್ಟರ್ ಆಫ್ ಪ್ಯಾರಿಸ್' ಮಾದರಿಯಲ್ಲಿ ಊನಗೊಂಡ ಭಾಗ ಅಲುಗಾಡದಂತೆ ಕಟ್ಟುವ ಪದ್ಧತಿಯಿತ್ತು. ಈಗ ಆ ಪದ್ಧತಿಯನ್ನು ನಿಧಾನವಾಗಿ ಕೈಬಿಡಲಾಗುತ್ತಿದೆ. ಹೊಲಿಗೆಯ ಬದಲಾಗಿ ಸ್ಟೇಪ್ಲರ್‌ಗಳನ್ನು ಬಳಸುವುದು, ಸಿಮೆಂಟ್ ಕಟ್ಟದೇ ಕೇವಲ ತೆಳುವಾದ ಬಟ್ಟೆಯಿಂದ ಬ್ಯಾಂಡೇಜ್ ಮಾಡುವುದನ್ನು ಅನುಸರಿಸಲಾಗುತ್ತಿದೆ. ಏಕೆಂದರೆ ಬದಲಾದ ಚಿಕಿತ್ಸೆಯ ವಿಧಾನ ಮತ್ತು ವ್ಯಾಖ್ಯಾನ ಇದಕ್ಕೆ ಕಾರಣವಾಗಿದೆ.

ಈಗ ಅನ್ವೇಷಣೆಗೊಂಡಿರುವ ಸಂಶೋಧನೆಯು ಇದೇ ಮಾದರಿಯ ಹೆಜ್ಜೆಯನ್ನು ಅನುಸರಿಸಿದ್ದಾಗಿದೆ. ಅಂದರೆ, ತ್ವರಿತ ಚಿಕಿತ್ಸೆ ಮತ್ತು ಹೊಸ ವ್ಯಾಖ್ಯಾನದ ಗುಣಪಡಿಸುವ ವಿಧಾನದ್ದು. 'ಮಧುಮೇಹ ಮುಂತಾದ ಸಮಸ್ಯೆಗಳಿರುವ ರೋಗಿಗಳ ಗಾಯ ಬೇಗನೇ ವಾಸಿಯಾಗುವುದಿಲ್ಲ. ಅದಕ್ಕೆ ಹೆಚ್ಚಿನ ಜಾಗ್ರತೆಯ ಅವಶ್ಯಕತೆ ಇರುತ್ತದೆ. ಈ ನಿಟ್ಟಿನಲ್ಲಿ ನಮ್ಮ ಸಂಶೋಧನೆಯಾಗಿದೆ. ನಮ್ಮ ಬ್ಯಾಂಡೇಜ್‌ನಲ್ಲಿ ಸಾಂಪ್ರದಾಯಿಕವಾದ ಔಷಧದ ಲೇಪನವೂ ಇರುತ್ತದೆ. ಜೊತೆಗೆ, ಕೆಲವು ಎಲೆಕ್ಟ್ರಾನಿಕ್ ಸಾಧನಗಳಿದ್ದು, ಅವು ಗಾಯವನ್ನು ಬೇಗ ಮಾಗುವಂತೆ ಉತ್ತೇಜಿಸುತ್ತವೆ' ಎನ್ನುತ್ತಾರೆ, ಗಿಲೆರ್ಮೋ ಅಮೀರ್.

ನಮ್ಮ ದೇಹ ಕಾರ್ಯನಿರ್ವಹಿಸಬೇಕಾದರೆ ವಿದ್ಯುತ್ ಸಂಜ್ಞೆಗಳ ಅಗತ್ಯ ಅತಿ ಮುಖ್ಯ. ಮಾನವ ದೇಹದಲ್ಲಿ ಅತಿ ದೊಡ್ಡ ಪ್ರಮಾಣದಲ್ಲೇ ವಿದ್ಯುತ್ ಸಂಚಾರವೂ ಇರುತ್ತದೆ. ಇದು ದೇಹವನ್ನು ಜೀವಂತವಾಗಿಯೂ, ಆರೋಗ್ಯವಂತವಾಗಿಯೂ ಕಾಪಾಡಿಕೊಳ್ಳುತ್ತದೆ. ಈ ಸರಳ ಕಾರ್ಯವೈಖರಿಯನ್ನು ಇಲ್ಲಿನ ವಿಜ್ಞಾನಿಗಳ ತಂಡ ಅಳವಡಿಸಿಕೊಂಡಿದೆ. ವಿಜ್ಞಾನಿಗಳು ಸಂಶೋಧಿಸಿರುವ ಈ ಬ್ಯಾಂಡೇಜಿನಲ್ಲಿ ದೇಹದಲ್ಲಿರುವ ವಿದ್ಯುತ್ ಅನ್ನು ಗುರುತಿಸಿ, ಬಳಸಿಕೊಳ್ಳುವ ಸೆನ್ಸರ್‌ಗಳನ್ನು ಅಳವಡಿಸಲಾಗಿರುತ್ತದೆ. ಈ ಸೆನ್ಸರ್‌ಗಳು ದೇಹದ ವಿದ್ಯುತ್ ಅನ್ನು ಗ್ರಹಿಸಿ ಗಾಯವಾಗಿರುವ ಭಾಗದ ಸುತ್ತಲೂ ವಿದ್ಯುತ್ ಪ್ರವಾಹಗಳನ್ನು ಸೃಷ್ಟಿಸುತ್ತವೆ. ಇದರಿಂದ ಗಾಯ ವಾಸಿಯುವ ವೇಗವು ಹೆಚ್ಚಾಗುತ್ತದೆ.

'ಕೆಲವು ಸಂದರ್ಭಗಳಲ್ಲಿ ಗಾಯದ ವಿಧಕ್ಕೆ ಅನುಸಾರವಾಗಿ ಬ್ಯಾಂಡೇಜ್‌ನ ವಿದ್ಯುತ್ ಗ್ರಹಿಕೆಯ ಪ್ರಮಾಣ ಸಾಲದೇ ಇರಬಹುದು. ಅಂತಹ ವಿಶೇಷ ಸಂದರ್ಭಗಳಿಗಾಗಿ ಬ್ಯಾಂಡೇಜಿನಲ್ಲೇ ನ್ಯಾನೋ ಬ್ಯಾಟರಿಗಳನ್ನು ಅಳವಡಿಸಲಾಗಿರುತ್ತದೆ. ಇವು ಅತಿ ಸೂಕ್ಷ್ಮವಾದ ಬ್ಯಾಟರಿಗಳು. ಗಾಯ ವಾಸಿಯಾಗಲು ಬೇಕಾದ ವಿದ್ಯುತ್ ಅನ್ನು ಈ ಬ್ಯಾಂಡೇಜ್ ಗಾಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ವರ್ಗಾಯಿಸುತ್ತವೆ' ಎನ್ನುತ್ತಾರೆ, ಸಹ ಸಂಶೋಧಕ ಜಾನ್ ರಾಜರ್ಸ್.

ಅಲ್ಲದೇ, ಈ ಬ್ಯಾಂಡೇಜ್‌ಗಳನ್ನು ಒಮ್ಮೆ ಗಾಯಕ್ಕೆ ಹಚ್ಚಿದರೆ ಅವನ್ನು ತೆಗೆಯಬೇಕಾಗಿಲ್ಲ. ಅವು ಗಾಯ ವಾಸಿಯಾದಂತೆ ಕರಗಿಹೋಗುತ್ತವೆ. ಅಲ್ಲದೇ, ಇವು ಸಾಂಪ್ರದಾಯಿಕ ಬ್ಯಾಂಡೇಜ್‌ನಂತೆ ಬಟ್ಟೆ ಅಥವಾ ಸಿಂಥೆಟಿಕ್ ಸಾಮಗ್ರಿಯಿಂದ ಮಾಡಿರದೇ ಲೇಪನದ ಸ್ವರೂಪದಲ್ಲೂ ಇರುತ್ತವೆ. ಈ ಬ್ಯಾಂಡೇಜ್ ಹಾಕಲು ಒಂದು ಸಾಧನವನ್ನೂ ಬಳಸಲಾಗುತ್ತದೆ. ಈ ಸಾಧನವು ಗಾಯವನ್ನು ಗುರುತಿಸಿ, ಅದರ ತೀವ್ರತೆ, ಗಾತ್ರಕ್ಕೆ ಅನುಸಾರವಾಗಿ ಬ್ಯಾಂಡೇಜ್ ಅನ್ನು ಲೇಪಿಸುತ್ತದೆ. ಗಾಯದ ಸ್ವರೂಪಕ್ಕೆ ಅನುಗುಣವಾಗಿ ಬಟ್ಟೆ ಅಥವಾ ಸಿಂಥೆಟಿಕ್ ಸಾಮಗ್ರಿಯ ಎಲೆಕ್ಟ್ರಾನಿಕ್ ಬ್ಯಾಂಡೇಜ್ ಅನ್ನೂ ಬಳಸಲಾಗುವುದು ಎನ್ನುತ್ತಾರೆ, ವಿಜ್ಞಾನಿಗಳು.

'ಮಾಲಿಬ್ಡಿನಮ್' ಎಂಬ ಅಪರೂಪದ ಲೋಹವನ್ನು ಈ ಬ್ಯಾಂಡೇಜ್ ತಯಾರಿಯಲ್ಲಿ ಬಳಸಿದ್ದಾರೆ. ಇದನ್ನು ಎಲೆಕ್ಟ್ರಾನಿಕ್ ಚಿಪ್ ಹಾಗೂ ಸೆಮಿಕಂಡಕ್ಟರ್‌ಗಳ ಉತ್ಪಾದನೆಯಲ್ಲಿ ಬಳಸಲಾಗುತ್ತದೆ. ಈ ಲೋಹವನ್ನು ಅತಿ ತೆಳುವಾಗಿ ಬಳಸಿದಾಗ ಅದು ದೇಹದೊಳಗೆ ಕರಗುವ ಗುಣವನ್ನು ಹೊಂದಿರುವುದನ್ನು ಈ ವಿಜ್ಞಾನಿಗಳು ಕಂಡುಕೊಂಡಿದ್ದಾರೆ. ಇದರಿಂದ ಆರೋಗ್ಯದ ಮೇಲೆ ಯಾವುದೇ ಅಡ್ಡಪರಿಣಾಮ ಇಲ್ಲದೇ ಇರುವುದೂ ವಿಶೇಷ.

ಚಾಟ್ ಜಿಪಿಟಿ ಮತ್ತು ಪರೀಕ್ಷೆಗಳ ಸತ್ವಪರೀಕ್ಷೆ

ಕ್ಷಮಾ ವಿ. ಭಾನುಪ್ರಕಾಶ್

ಮೌಲ್ಯಮಾಪನ ಮಾಡುತ್ತ ಕುಳಿತಿದ್ದ ಸೌಪರ್ಣಿಕಾಗೆ ಫ್ಯಾನ್ ಕೆಳಗೂ ಧಗೆ! ಒಂದೇ ಬಗೆಯ ಉತ್ತರಗಳು, ಪಾಸ್ ಆಗುವುದೇ ಸಾಧ್ಯವಿಲ್ಲ ಎಂಬಂತಿದ್ದ ವಿದ್ಯಾರ್ಥಿಗಳು ಫಸ್ಟ್ ಕ್ಲಾಸ್ ಅಂಕಗಳನ್ನು ತೆಗೆದಿರುವಾಗ, ತನ್ನ ಪುನರಾವರ್ತನೆ ಕ್ಲಾಸುಗಳು ಅಷ್ಟು ಪ್ರಬಲ ಪ್ರಭಾವ ಬೀರಿದ್ದವಾ ಅಥವಾ ಕಾಪಿ ಹೊಡೆದಿದ್ದಾರಾ ಎಂಬ ಪ್ರಶ್ನೆಗಳು ಮನದಲ್ಲಿ ಮೂಡಿ, ಎರಡನೆಯದ್ದೇ ನಿಜ ಎನಿಸಿ ಕಸಿವಿಸಿ ಹೆಚ್ಚಾಗಿತ್ತು. ಪೋಷಕರು, ಶಿಕ್ಷಕರು ಅದೆಷ್ಟೇ ಹುಷಾರಾಗಿದ್ದರೂ ವಿದ್ಯಾರ್ಥಿಗಳು ರಂಗೋಲಿ ಕೆಳಗೆ ತೂರುವವರೇ! ಅದರಲ್ಲೂ ಈಗ ಹೊಚ್ಚಹೊಸ 'ಚಾಟ್-ಜಿಪಿಟಿ' ಕೂಡ ಕೈಗೆ ಸಿಕ್ಕಿದೆ!

ಚಾಟ್-ಜಿಪಿಟಿ – ಎಂಬುದೇನು ಎಂದು ಈಗ ಎಲ್ಲರಿಗೂ ಗೊತ್ತೇ ಇದೆ. ಸರಳವಾಗಿ ಹೇಳಬೇಕೆಂದರೆ, 'ಆರ್ಟಿಫೀಶಿಯಲ್ ಇಂಟೆಲಿಜೆನ್ಸ್'(ಎಐ)ನ ಹೊಸದೊಂದು ರೂಪವಿದು, ಅಷ್ಟೇ. ಗೂಗಲ್ ಅಸಿಸ್ಟೆಂಟ್‌ನ ಸಹಾಯ ಪಡೆಯುವ, ಮಾತೆತ್ತಿದರೆ ಎಲ್ಲಕ್ಕೂ ಅಂತರ್ಜಾಲವನ್ನು ಜಾಲಾಡುವ ಎಲ್ಲರಿಗೂ ಇದರ ಬಳಕೆ ಹೇಗೆಂದು ಈಗಾಗಲೇ ಗೊತ್ತಾಗಿದೆ. ಇಂಟರ್ನಲ್ಸ್‌ನ ಅಂಕಗಳಿಗೋಸ್ಕರ ಕಡೇ ಕ್ಷಣದಲ್ಲಿ ಅಸೈನ್‌ಮೆಂಟ್ ಬರೆಯುವ ವಿದ್ಯಾರ್ಥಿಗಳಿಗಂತೂ ಚಾಟ್ ಜಿಪಿಟಿ ವರವೇ ಎನಿಸಿಬಿಟ್ಟಿದೆ. ಪುಸ್ತಕಗಳ ರಾಶಿಯನ್ನು ಅರಗಿಸಿಕೊಂಡು, ಮೆದುಳಿಗೆ ಕೆಲಸಕೊಟ್ಟು, ಮಾಹಿತಿಯನ್ನು ಮಥಿಸಿ ಬರವಣಿಗೆಗೆ ಕೈಯಿಡುತ್ತಿದ್ದ ತಲೆಮಾರಿನ ಬಗ್ಗೆ ಮಾತಾಡುತ್ತಿಲ್ಲ. ಲೈಬ್ರರಿಯ ದಿಕ್ಕೇ ತಿಳಿದಿರದ ತಲೆಮಾರಿನ ಕಥೆ-ವ್ಯಥೆಯಿದು. ಮೊದಲೆಲ್ಲಾ ಗೂಗಲ್, ಯಾಹೂನಂತಹ ಸರ್ಚ್ ಇಂಜಿನ್‌ಗಳಲ್ಲಿ ಪ್ರಶ್ನೆ ಹುಡುಕಿ, ಅದಕ್ಕೆ ಉತ್ತರವಾಗಿ ಸಿಗುವ ಜಾಲತಾಣಗಳಲ್ಲಿ ಮೊದಲ ಎರಡೋ ಮೂರೋ ಕ್ಲಿಕ್ ಮಾಡಿ, ಅದರೊಳಗಿನ ವಸ್ತುವನ್ನು ಯಥಾವತ್ತು ಕಾಗದದ ಮೇಲೆ ಇಳಿಸುತ್ತಿದ್ದರು; ತರಗತಿಯಲ್ಲಿ ಎಲ್ಲರದ್ದೂ ಅದೇ ಕಥೆಯಾದ್ದರಿಂದ, ಸರಿಸುಮಾರು ಎಲ್ಲರ ಅಸೈನ್‌ಮೆಂಟ್ ಉತ್ತರಗಳೂ ಹೆಚ್ಚೂ ಕಡಿಮೆ ಒಂದೇ ಬಗೆಯವು. ಈಗ ಚಾಟ್-ಜಿಪಿಟಿಯ ಮೂಲಕ 'ಆರ್ಟಿಫೀಶಿಯಲ್ ಇಂಟೆಲಿಜೆನ್ಸ್'ನ ಸಹಾಯದಿಂದ 'ನಿಜವಾದ ಸೃಜನಶೀಲ' ಬರಹ ಕಾಣುವಂತಾಗಿದೆ ಎಂದರೆ, ಪರಿಸ್ಥಿತಿಯ ವ್ಯಂಗ್ಯವೇ ಸರಿ!

ಸೃಜನಶೀಲವೆಂದರೆ, ಖಂಡಿತವಾಗಿ ನಾವೇನು ಚಾಟ್ ಜಿಪಿಟಿಯ ಬರಹಗಳಲ್ಲಿ ಕವಿಸಮಯದ ಕನಸು ಕಾಣುವಂತಿಲ್ಲ; ತನ್ನೊಳಗೆ ಫೀಡ್ ಮಾಡಲಾದ ಜಾಲತಾಣಗಳ ಅಂಶವನ್ನು ಒಂದು ಮೊತ್ತ ಮಾಡಿ, ಹತ್ತು ಬಗೆಯಲ್ಲಿ ಸೃಜನಶೀಲವೆನಿಸುವಂತೆ ತುತ್ತ ಮಾಡಿ ತಿನಿಸುತ್ತದೆ, ಅಷ್ಟೇ! ಆದರೆ, ನೈಸರ್ಗಿಕ ಭಾಷೆಗಳ ಕಲಿಕೆಯೆಡೆಗೆ ಸಾಗಿರುವ ಈ ತಂತ್ರಜ್ಞಾನ, ನಮ್ಮನ್ನು ಮತ್ತಷ್ಟು ಚಕಿತರನ್ನಾಗಿಸುವ ದಿನಗಳು ದೂರವಿಲ್ಲ ಎನ್ನುತ್ತಾರೆ, ತಜ್ಞರು. ವಿದ್ಯಾರ್ಥಿಗಳಂತೂ ಅಸೈನ್‌ಮೆಂಟುಗಳಿಗೆ, ತರಗತಿಯ ಯೋಜನೆ, ಚಟುವಟಿಕೆಗಳಿಗೆ ಮಾತ್ರವಲ್ಲದೇ ಪರೀಕ್ಷೆಯಲ್ಲಿ ನಕಲು ಮಾಡುವುದಕ್ಕೂ ಇದನ್ನೇ ಅವಲಂಬಿಸುತ್ತಿದ್ದಾರೆ ಎಂಬುದು ಹೊಚ್ಚಹೊಸ ಸುದ್ದಿ. ಈಗಷ್ಟೆ ನಡೆದಿರುವ ವಿವಿಧ ಬೋರ್ಡ್ ಪರೀಕ್ಷೆಗಳಲ್ಲೂ ಚಾಟ್‌ಜಿಪಿಟಿಯ ಪ್ರತ್ಯಕ್ಷ/ಪರೋಕ್ಷ ಬಳಕೆಯಾಗಿದೆ ಎಂದು ಕಳ್ಳಧ್ವನಿಯಲ್ಲಿ ಉಸುರುತ್ತಾರೆ, ಕೆಲವು ತರಲೆಗಳು. ಅದಕ್ಕೇ ಫೋನ್ ಬಿಡಿ, ಕೊನೆಗೆ ವಾಚುಗಳನ್ನೂ ಧರಿಸಿ ಪರೀಕ್ಷಾ ಕೊಠಡಿಯೊಳಗೆ ಕಾಲಿರಿಸುವಂತಿಲ್ಲ ಎಂಬುದು ಹೊಸ ನಿಯಮ; ಸ್ಮಾರ್ಟ್‌ವಾಚುಗಳಂತೆ ಕಾಣದ ಸ್ಮಾರ್ಟ್‌ವಾಚುಗಳ ಕಾಲ ಇದು ಎಂಬುದು ಪರೀಕ್ಷಾ ಮೇಲ್ವಿಚಾರಕರಿಗೂ ಗೊತ್ತು. ಗ್ಯಾಡ್ಜೆಟ್‌ಗಳನ್ನು ಗೇಟಿನ ಹೊರಗೇ ಕಸಿದುಕೊಳ್ಳುವ ಸೆಕ್ಯುರಿಟಿಗೆ ಚಳ್ಳೆಹಣ್ಣು ತಿನ್ನಿಸಲು, ವಿದ್ಯಾರ್ಥಿಗಳು, ಮತ್ತೆ ಹಳೆಯ ಪದ್ಧತಿಗೇ ಸೈ ಎಂದಿದ್ದಾರೆ. ಕಾಪಿ ಚೀಟಿಗಳ ಬಳಕೆಗೆ ಜೈ ಎಂದಿದ್ದಾರೆ. ಆದರೆ, ಇಲ್ಲಿ ಟ್ವಿಸ್ಟ್ ಏನು ಗೊತ್ತೇ? ಪರೀಕ್ಷೆಯಲ್ಲಿ ನಕಲು ಮಾಡುವುದಕ್ಕೆ ಬೇಕಾದ ಪುಟ್ಟ ಪುಟ್ಟ ಕಾಪಿಚೀಟಿಗಳನ್ನು ತಯಾರಿಸುವುದೂ ಚಾಟ್‌ಜಿಪಿಟಿಯ ಮೂಲಕವೇ ಅಂತೆ! ಬಲ್ಲ, ಅಲ್ಲಲ್ಲ, ಕಳ್ಳಮೂಲಗಳಿಂದ ತಿಳಿದದ್ದು.



ಆದರೆ, ಕೆಲವು ಶೈಕ್ಷಣಿಕ ಬೋರ್ಡ್‌ಗಳೇ ಈಗ ಈ ತಂತ್ರಜ್ಞಾನದ ಬಳಕೆಗೆ ಹಸಿರು ನಿಶಾನೆ ತೋರಿಸಿವೆ ಎಂದರೆ ಅಚ್ಚರಿಯೇ ಆಗುತ್ತದೆ. ಉದಾಹರಣೆಗೆ ಅಂತರರಾಷ್ಟ್ರೀಯ ಶೈಕ್ಷಣಿಕ ಪಠ್ಯಕ್ರಮಗಳಾದ ಐ.ಬಿ. ಮತ್ತು ಐ.ಜಿ.ಸಿ.ಎಸ್.ಇ.ಗಳಲ್ಲಿ ಚಾಟ್ ಜಿಪಿಟಿಯೂ ಸೇರಿದಂತೆ ತಂತ್ರಜ್ಞಾನದ ಬಳಕೆಗೆ ಅನುಮತಿ ಸಿಕ್ಕಿದೆ. ಐಬಿ ಪಠ್ಯಕ್ರಮದಲ್ಲಂತೂ, ಅದು ಚಟುವಟಿಕೆ, ಯೋಜನೆ, ಅಸೈನ್‌ಮೆಂಟ್‌ಗಳಾದರೂ ಸರಿ, ಪರೀಕ್ಷೆಯಾದರೂ ಸರಿ, ಅಲ್ಲಿ ಚಾಟ್ ಜಿಪಿಟಿ ತಂತ್ರಜ್ಞಾನಕ್ಕೆ ಕೆಂಪುಹಾಸಿನ ಸ್ವಾಗತ ಸಿಕ್ಕಿದೆ. ಐಬಿ ಪಠ್ಯಕ್ರಮದಲ್ಲಿ ಸಿಕ್ಕಷ್ಟು ಮುಕ್ತವಾಗಿ ಐಜಿಸಿಎಸ್‌ಇಯಲ್ಲಿ ಅನುಮತಿ ಸಿಗದ ಕಾರಣ, ಪರೀಕ್ಷೆಗಳನ್ನು ಹಾಗೂ ಪರೀಕ್ಷೆಗೆ ಪೂರಕವಾಗಿ ನಡೆಯುವ ಚಟುವಟಿಕೆಗಳನ್ನು ನಿರ್ದಿಷ್ಟ ಬಗೆಯ ವಾತಾವರಣದಲ್ಲಿ, ಕೆಲವೇ ತಂತ್ರಜ್ಞಾನಗಳ ಬಳಕೆ ಸಾಧ್ಯವಾಗುವ, ಆದರೆ, ನಿರ್ಬಂಧಗಳಿರುವ ಕಂಪ್ಯೂಟರ್‌ಗಳನ್ನೇ ಬಳಸುವಂತಹ ನಿಬಂಧನೆಗಳನ್ನು ಹಾಕಲಾಗಿದೆ. ಐಬಿ, ಐಜಿಸಿಎಸ್‌ಇ ಪಠ್ಯಕ್ರಮಗಳು ನಿಮಗೆ ಹೊಸದಾಗಿದ್ದರೆ, ಇವೆಲ್ಲ ನಿಮಗೆ ಅಚ್ಚರಿ ಎನಿಸಬಹುದು. ಆದರೆ, ಮಾಹಿತಿಯನ್ನು ಉರು ಹೊಡೆದು, ಉತ್ತರ ಪತ್ರಿಕೆಯಲ್ಲಿ ಯಥಾವತ್ತಾಗಿ ಉದುರಿಸುವ ಪರೀಕ್ಷಾ ಪದ್ಧತಿಗೂ, ಈ ಪಠ್ಯಕ್ರಮಗಳ ಪರೀಕ್ಷಾ ಪದ್ಧತಿಗಳಿಗೂ ಅಜಗಜಾಂತರ. ಇಲ್ಲಿ, ಕೊಟ್ಟ ವಿಷಯವನ್ನು ವಿಶ್ಲೇಷಿಸಿ, ಸ್ವಂತ ಅಭಿಪ್ರಾಯ ಮಂಡಿಸಬೇಕಾಗುತ್ತದೆ. ಹಾಗಾಗಿ, ಅದು ಕೆಮಿಸ್ಟ್ರಿಯ ಆವರ್ತನ ಕೋಷ್ಟಕವಿರಬಹುದು, ಗಣಿತದ ಫಾರ್ಮುಲಾಗಳಿರಬಹುದು – ಎಲ್ಲವನ್ನೂ ಅವರಿಗೆ ಪ್ರಶ್ನೆಪತ್ರಿಕೆಯ ಜೊತೆಗೆ ನೀಡಲಾಗಿರುತ್ತದೆ. ಅದನ್ನು ಬಳಸಿಕೊಂಡೇ ಬರೆಯಬಹುದು, ಕ್ಯಾಲ್ಕುಲೇಟರ್‌ಅನ್ನು ಬಳಸಿಯೇ ಗಣಿತದ ಸಮಸ್ಯೆಯನ್ನು ಪರಿಹರಿಸಬಹುದು. ಅದಕ್ಕೆ ಈಗ ಹೊಸ ಸೇರ್ಪಡೆ, ಚಾಟ್-ಜಿಪಿಟಿ.

ಅಂತರರಾಷ್ಟ್ರೀಯ ಪಠ್ಯಕ್ರಮಗಳಲ್ಲಿ, ಎಲ್ಲಾ ವಿಷಯಗಳ ಒಂದು ಪರೀಕ್ಷೆ, ಅಥವಾ ಕೆಲವು ನಿರ್ದಿಷ್ಟ ವಿಷಯಗಳ ಪರೀಕ್ಷೆಗಳೆಲ್ಲವೂ ಆನ್‌ಲೈನ್. ಆಗ, ಸಾಮಾನ್ಯವಾಗಿ, ಅವಶ್ಯಕತೆಯಿಲ್ಲದ ಹೊರತು, ಬೇರೆ ಜಾಲತಾಣಗಳ ಸಹಾಯ ಪಡೆಯುವಂತಿಲ್ಲ, ಹಾಗಾಗಿ ಅವುಗಳನ್ನು ಬ್ಲಾಕ್ ಮಾಡಲಾಗಿರುತ್ತದೆ. ಆದರೆ, ಚಾಟ್-ಜಿಪಿಟಿಯನ್ನು ಬಳಸಿದರೂ ಸರಿ, ನಿಮ್ಮ ವಿಶ್ಲೇಷಣೆ ನಿಮ್ಮದೇ ಆಗಿರಲಿ, ಜೊತೆಗೆ ಚಾಟ್-ಜಿಪಿಟಿಯ ಸಹಾಯ ಪಡೆದಿದ್ದಲ್ಲಿ ಅದರ ಹೆಸರನ್ನೂ ಕಡೆಗೆ ನಮೂದಿಸಿ, ಧನ್ಯವಾದ ತಿಳಿಸಿ ಎನ್ನುತ್ತಾರೆ ಐಬಿಯ ಮೌಲ್ಯಮಾಪನ ತತ್ವಗಳ ಮುಖ್ಯಸ್ಥ ಮ್ಯಾಟ್ ಗ್ಲಾನ್ವಿಲ್. ಯಾವುದೇ ಪರೀಕ್ಷೆಯ ಮೂಲ ಉದ್ದೇಶವೇ ಅದು ತಾನೆ? ಕಲಿಕೆಯ ಉದ್ದೇಶ ಪೂರ್ಣವಾಗಿದೆಯೇ ಎಂಬುದನ್ನು ಅವಲೋಕಿಸಿ, ಅರ್ಥೈಸಿಕೊಳ್ಳುವ ಸಲುವಾಗಿ ತಾನೇ ಪರೀಕ್ಷೆಗಳನ್ನು ಮಾಸಿಕ, ಅರ್ಧವಾರ್ಷಿಕ ಹಾಗೂ ವಾರ್ಷಿಕವಾಗಿ ನಡೆಸುವುದು? ಕಲಿಕೆಯ ಉದ್ದೇಶ ಪೂರ್ಣವಾಗುವುದನ್ನು ಕೇವಲ ಅಂಕಗಳಿಂದ ಅಳೆಯಲು ಸಾಧ್ಯವಿಲ್ಲ, ಅದು ಅನೇಕ ಆಯಾಮಗಳ ಒಟ್ಟಂದ ಎಂದು ಅರಿವಾದಾಗ ಮಾತ್ರ ಚಾಟ್ ಜಿಪಿಟಿಯಂತಹ ಯಾವುದೇ ತಂತ್ರಜ್ಞಾನವಾಗಲೀ, ಅದು 'ಶಿಕ್ಷಣದ/ ಸೃಜನಶೀಲತೆಯ ಶತ್ರು'ವಲ್ಲ ಎಂಬುದು ಅರಿವಾಗುತ್ತದೆ.

ಪಿಯುಸಿ– ಸಿಇಟಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

CHEMISTRY

65) The IUPAC name of $[Pt(NH_3)_4][PtCl_4]$ is:
a) Tetra ammine palatinate (0) tetra chloride platinum (IV)
b). Tetra ammine platinum (II) tetra chloride palatinate (II)
c) Tetra ammine platinum (0) tetra chloride platinum (IV)
d) Tetra ammine palatinate (II) tetra chloride platinum (II)

Ans: (d)

Expln:- The coordination complex must be neutral. In all the options, the oxidation states of Pt are given such that we get an overall neutral complex. Again, while naming a complex, the cationic part should be named first followed by the anionic part. While naming the anionic part, the name of the metal should end with the suffix –ate. From this, we can conclude that the IUPAC name of $[Pt(NH_3)_4][PtCl_4]$ can be either (A) or (D). But the most common oxidation state of Pt is +2 and +4 and in both the parts of the complex, Pt has the same coordination number

66) Which of the following pairs of ions are isoelectronic and is isostructural?
a) CO_3^{2-}, NO_3^- b) ClO_3^-, CO_3^{2-}
c) SO_3^{2-}, NO_3^- d) ClO_3^-, SO_3^{2-}

Ans:-a

67) Affinity for hydrogen decreases in the group from fluorine to iodine. Which of the halogen acids should have highest bond dissociation enthalpy?
a) HF b) HCL
c) HBr d) HI

Ans:a

68) Bond dissociation enthalpy of E-H (E = element) bonds is given below. Which of the compounds will act as strongest reducing agent?

Compound	NH_3	PH_3	AsH_3	SbH_3
Δ_{diss} (E-H)/kJ mol^{-1}	389	322	297	255

a) NH_3 b) PH_3
c) AsH_3 d) SbH_3

Ans:-d

69) On heating with concentrated NaoH solution in an inert atmosphere of CO_2, white phosphorus gives a gas. Which of the following statement is incorrect about the gas?
a) It is highly poisonous and has smell like fish.
b) It's solution in water decomposes in the presence of light.
c) It is more basic than NH_3.
d) It is less basic than NH_3.

Ans:-C

70) Which of the following acids forms three series of salts?
a) H_3PO_2 b) H_3BO_3
c) H_3PO_4 d) H_3PO_3

Ans:-C

71) Strong reducing behaviour of H_3PO_2 is due to
a) Low oxidation state of phosphorus
b) Presence of two-OH groups and one P-H bond
c) Presence of one –OH group and two P-H bonds
d) High electron gain enthalpy of phosphorus

Ans:-C

72) On heating lead nitrate forms oxides of nitrogen and lead. The oxides formed are ________.
a) N_2O, PbO b) NO_2, PbO
c) NO, PbO d) NO, PbO_2

Ans:-b

73) Which of the following elements does not show allotropy?
a) Nitrogen b) Bismuth
c) Antimony d) Arsenic

Ans:-a

74) Maximum covalency of nitrogen is _____.
a) 3 b) 5
c) 4 d) 6

Ans:-C

75) Which of the following statements is wrong?
a) Single N-N bond is stronger than the single P-P bond.
b) PH_3 can act as a ligand in the formation of coordination compound with transition elements.
c) NO_2 is paramagnetic in nature.
d) Covalency of nitrogen in N_2O_5 is four.

Ans:-a

76) Prolonged exposure of chloroform in humans may cause damage to the liver. It is due to the formation of the following compound:
a). CH_2Cl_2 b) Cl_2
c) CCl_4 d) $COCl_2$

Ans: (d)

Expln:- When chloroform is oxidised, it forms phosgene which is poisonous.

$$CHCl_3 \xrightarrow{[O]} COCl_2 + HCl$$

77) A brown ring is formed in the ring test for NO_3^- ion. It is due to the formation of ....
a) $[Fe(H_2O)_5(NO)]^{2+}$ b) $FeSO_4.NO_2$
c) $[Fe(H_2O)(NO)_2]^{2+}$ d) $FeSO_4.HNO_3$

Ans:-a

BIOLOGY

60) Which of the given statement is correct in the context of observing DNA separated by agarose gel electrophoresis?
a) DNA can be seen in visible light
b) DNA can be seen without staining in visible light
c) Ethidium bromide stained DNA can be seen in visible light
d) Ethidium bromide stained DNA can be seen under exposure to UV light

Ans:- d

61) The hybridisation between naturally incompatible plants like potato and tomato can be achieved through
a) mutation breeding
b) artificial pollination
c) somatic hybridisation
d) conventional breeding

Ans: (c)

Expln:- Mutation breeding refers to the process by which the seed is exposed to radiation or chemicals in order to develop an improved mutant variant. It can help to improve individual plants' yield and resistance properties.

Conventional breeding is the development of new varieties (cultivars) of plants by using natural processes and traditional methods such as selection and breeding of high yielding varieties. Since potato and tomato belong to two different species and thus cannot be hybridized by conventional breeding methods.

A pollination technique in which the desired pollen grains are used for pollination by artificial means is known as artificial pollination. Since potato and tomato are incompatible, even artificial pollination cannot be used as the pollen grains will not germinate to form the pollen tube on incompatible species.

The fusion of the protoplasm of two different plant cells in order to produce a hybrid variety is called somatic hybridization. The protoplasts of two plants can be made to fuse with a chemical called Polyethylene glycol (PEG). Thus, somatic hybridization would be the best suitable method in developing the hybridized variety between potato and tomato.

62) Making two varieties of a cattle breed like Red Dane which have no common ancestors on either sides of their pedigree up to 4-6 generations is an example for
(a) Inbreeding (b) Cross breeding
(c) Out crossing (d) Inter-specific hybridization

Ans:(c):

Expl:- out crossing is the phenomenon of mating of two animals within the same breed having no common ancestors on either side of their pedigree upto 4-6 generations, while inbreeding is the crossing of closely related animals within the same breed for 4-6 generations, cross breeding is the breeding of unrelated animals either of the same breeds, but not having common ancestor for 4-6 generations. And interspecific hybridization is the mating of animals of two different species. -

63) Identify the hormones, *A*, *B* and *C* that are labeled in the given flow chart



(a) A-GnRH, B-ICSH, C-FSH
(b) A-GH, B-FSH, C-LH
(C) A-GnRH, B-PRL, C-ICSH
(d) A-GnRH, B-FSH, C-LH

Ans:(d)

Expl:- Hypothalamus is located in the basal part of diencephalon. It controls the anterior and posterior lobes of pituitary gland to secrete different hormones. For gonadotropin releasing hormone hypothalamus stimulates the anterior lobe of pituitary to secrete gonadotropins like Follicle Stimulating Hormone (FSH) and luteinizing Hormone (LH) or InterstitialCell stimulating Hormone (ICSH) by the ovary and testes respectively.

64) **Statement (A)** Photorespiration decreases photosynthetic output.
Statement (B) In photorespiratory pathway, neither ATP nor NADPH is produced.
(a) Both the statements 'A' and 'B' are correct
(b) Both the statements 'A' and 'B' are wrong
(c) Statement 'A' is correct and statement 'B' is wrong
(d) Statement 'B' is correct and statement 'A' is wrong

Ans:a

Expl:- Photorespiration is a light dependent cyclic phenomenon of Oxygenation of RuBP and release of CO_2 by the photosynthetic organs of plant. Photorespiration is considered as a Wasteful process because there is no synthesis of sugar and ATP or NADPH also the CO_2 is released with the utilisation of ATP.

It decreases the overall photosynthetic output in C_3 palnts. C_4 plants lacks the process of photorespiration thus, the productivity and yields in these plants are better than those in C_3 and other plants

(Contd.........)

ಸುಡಾನ್‌ನಲ್ಲಿ ಸಿಲುಕಿರುವ ಹಕ್ಕಿಪಿಕ್ಕಿ ಜನಾಂಗದ 800ಕ್ಕೂ ಅಧಿಕ ಜನರ ಮೊರೆ

‘ಪ್ರಧಾನಿಯವರೇ, ದಯವಿಟ್ಟು ನಮ್ಮನ್ನು ರಕ್ಷಿಸಿ’

• ಡಿ.ಕೆ.ಬಸವರಾಜು

ದಾವಣಗೆರೆ: ಸೇನೆ ಮತ್ತು ಅರೆಸೇನಾ ಪಡೆ ನಡುವಿನ ಸಂಘರ್ಷದಿಂದ ನಲುಗಿರುವ ಸುಡಾನ್‌ನ ರಾಜಧಾನಿ ಖಾರ್ಟೂಮ್ ಮತ್ತು ಒಂಡರ್ಮನ್ ನಗರಗಳಲ್ಲಿ ಸಿಲುಕಿಕೊಂಡಿರುವ ರಾಜ್ಯದ 800ಕ್ಕೂ ಅಧಿಕ ಕನ್ನಡಿಗರು ಆತಂಕಕ್ಕೆ ಒಳಗಾಗಿದ್ದಾರೆ.

ಆಯುರ್ವೇದ ಗಿಡಮೂಲಿಕೆ ವ್ಯಾಪಾರಕ್ಕಾಗಿ ಸುಡಾನ್‌ನ ವಿವಿಧ ನಗರಗಳಿಗೆ ತೆರಳಿರುವವರಲ್ಲಿ ದಾವಣಗೆರೆ, ಶಿವಮೊಗ್ಗ ಮತ್ತು ಮೈಸೂರು ಜಿಲ್ಲೆಯ 800ಕ್ಕೂ ಅಧಿಕ ಜನರಿದ್ದು, ಇವರೆಲ್ಲ ಅಲೆಮಾರಿಗಳಾಗಿರುವ ಹಕ್ಕಿಪಿಕ್ಕಿ ಜನಾಂಗದವರಾಗಿದ್ದಾರೆ.

ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಗೋಪನಾಳು ಮತ್ತು ಅಸ್ತಾಪನಹಳ್ಳಿ ಗ್ರಾಮದ 150 ಜನ, ಶಿವಮೊಗ್ಗ ಜಿಲ್ಲೆಯ 400, ಮೈಸೂರು ಜಿಲ್ಲೆಯ 250ರಿಂದ 300 ಜನ ಅತಂತ್ರರಾಗಿದ್ದಾರೆ. ಮೂರ್ನಾಲ್ಕು ದಿನಗಳಿಂದ ಆಹಾರ, ನೀರು ಸಿಗದೇ ಪರಿತಪಿಸುತ್ತಿರುವುದಾಗಿ ಅವರು ಸಂಬಂಧಿಕರಿಗೆ ಕರೆ ಮಾಡಿ ತಿಳಿಸಿದ್ದಾರೆ.

ಖಾರ್ಟೂಮ್ ನಗರದಲ್ಲಿ ಕಳೆದ ಮೂರ್‌ನಾಲ್ಕು ದಿನಗಳಿಂದ ಬಾಂಬ್ ಮತ್ತು ಕ್ಷಿಪಣಿ ದಾಳಿಗಳು ನಡೆಯುತ್ತಿವೆ. ಅಲ್ಲಿ ಸಿಲುಕಿರುವ ಕನ್ನಡಿಗರು ಜೀವ ಭಯದಿಂದ ದಿನ ಕಳೆಯುತ್ತಿದ್ದಾರೆ. ಅತಂತ್ರರಾಗಿರುವ ಅವರೆಲ್ಲರನ್ನೂ ಸುರಕ್ಷಿತವಾಗಿ ಸ್ವದೇಶಕ್ಕೆ ಕರೆ ತರುವಂತೆ ಸಮುದಾಯದ ಹಿರಿಯರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದ್ದಾರೆ.

ಆಯುರ್ವೇದ ಗಿಡ ಮೂಲಿಕೆಗಳ ವ್ಯಾಪಾರ ಮಾಡುವುದಲ್ಲದೆ, ಮಸಾಜ್ ಮಾಡುವ ಉದ್ಯೋಗ ಅರಸಿ ಇವರೆಲ್ಲ ಪ್ರತಿವರ್ಷ ಸುಡಾನ್ ಸೇರಿದಂತೆ ಆಫ್ರಿಕದ ವಿವಿಧ ದೇಶಗಳಿಗೆ ತೆರಳಿದ್ದಾರೆ.

ಎಂಟು ತಿಂಗಳ ಹಿಂದೆ ಉದ್ಯೋಗ ಅರಸಿ ಇಲ್ಲಿಗೆ ಬಂದಿದ್ದು, ಸಂಘರ್ಷಪೀಡಿತ ದೇಶದಿಂದ ಸುರಕ್ಷಿತವಾಗಿ ಕರೆಸಿಕೊಳ್ಳಲು ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಖಾರ್ಟೂಮ್ ನಗರದಲ್ಲಿ ಸಿಲುಕಿಕೊಂಡಿರುವ ಚನ್ನಗಿರಿ ತಾಲ್ಲೂಕಿನ ಗೋಪನಾಳು ಗ್ರಾಮದ ಎಸ್. ಪ್ರಭು, ಅವರ ಪತ್ನಿ ಸೋನಿಯಾ ಹಾಗೂ ಜೆ.ಉಷಾ, ನಂದೀಶ, ತಬ್ಬು ಅವರು ದೂರವಾಣಿ ಕರೆಯ ಮೂಲಕ ‘ಪ್ರಜಾವಾಣಿ’ ಎದುರು ಮನವಿ ಮಾಡಿದರು.

‘ನಮ್ಮೊಂದಿಗೆ ಶಿವಮೊಗ್ಗ ಜಿಲ್ಲೆಯ 7 ಜನ, ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ 19 ಜನ ಇದ್ದಾರೆ. ಊಟ, ತಿಂಡಿ ಸಿಗದೇ ಎಲ್ಲರೂ ಪರದಾಡುತ್ತಿದ್ದೇವೆ. ಮದ್ದು-ಗುಂಡುಗಳ ದಾಳಿ, ಕ್ಷಿಪಣಿಗಳ ಸದ್ದಿನಿಂದಾಗಿ ಭಯದಲ್ಲೇ ಬದುಕುತ್ತಿದ್ದೇವೆ’ ಎಂದು ಅವರು ತಿಳಿಸಿದರು.

‘ಹೊಟ್ಟೆಪಾಡಿಗಾಗಿ ನಮ್ಮವರು ಪ್ರತಿವರ್ಷ ಆಫ್ರಿಕ ದೇಶಗಳಿಗೆ ತೆರಳಿ ಗಿಡಮೂಲಿಕೆಗಳ ವ್ಯಾಪಾರ ಮಾಡುತ್ತಾರೆ. 6ರಿಂದ 8 ತಿಂಗಳು ಅಲ್ಲಿದ್ದು ತಾಯ್ನಾಡಿಗೆ ಮರಳುತ್ತಾರೆ. ಕೆಲವು ದಿನ ಊರಲ್ಲಿದ್ದು, ಮತ್ತೆ ವಿದೇಶಕ್ಕೆ ತೆರಳುತ್ತಾರೆ. ಸಂಕಷ್ಟಕ್ಕೆ ಸಿಲುಕಿರುವ ಎಲ್ಲರನ್ನೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಬೇಕು. ಈ ಕುರಿತು ಆಯಾ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಲಾಗುವುದು’ ಎಂದು ಹಕ್ಕಿಪಿಕ್ಕಿ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಪುನೀತ್‌ಕುಮಾರ್ ಆರ್. ತಿಳಿಸಿದರು.

ಸಂಘರ್ಷಪೀಡಿತ ಸುಡಾನ್‌ನ ರಾಜಧಾನಿ ಖಾರ್ಟೂಮ್ ನಗರದಲ್ಲಿ ಸಿಲುಕಿರುವ ಕನ್ನಡಿಗರು.

ವಿದೇಶದಲ್ಲಿರುವ ಭಾರತೀಯರ ಸಂಕಷ್ಟವನ್ನು ಚುನಾವಣಾ ರಾಜಕೀಯಕ್ಕೆ ಬಳಸಿಕೊಳ್ಳುವುದು ಬೇಜವಾಬ್ದಾರಿಯುತ ನಡವಳಿಕೆ

ಎಸ್.ಜೈಶಂಕರ್ ವಿದೇಶಾಂಗ ಸಚಿವ

ಸಂಕಷ್ಟದಲ್ಲಿ ಸಿಲುಕಿದವರ ಮಾಹಿತಿ ಸಿಕ್ಕಿದೆ. ಎಲ್ಲರನ್ನೂ ತಾಯ್ನಾಡಿಗೆ ಸುರಕ್ಷಿತವಾಗಿ ಕರೆತರುವಂತೆ ಸರ್ಕಾರಕ್ಕೆ ಕೋರುತ್ತೇನೆ

ಜಿ.ಎಂ. ಸಿದ್ದೇಶ್ವರ, ಸಂಸದ

ಕನ್ನಡಿಗರ ವಾಪಸಾತಿ: ಕ್ರಮಕ್ಕೆ ಸಿದ್ದರಾಮಯ್ಯ ಆಗ್ರಹ

ಬೆಂಗಳೂರು: ‘ನಾಗರಿಕ ಯುದ್ಧ ನಡೆಯುತ್ತಿರುವ ಸುಡಾನ್‌ನಲ್ಲಿ ಕರ್ನಾಟಕದ ಹಕ್ಕಿ ಪಿಕ್ಕಿ ಬುಡಕಟ್ಟಿನ 31 ಜನರು ಸಿಲುಕಿಕೊಂಡಿದ್ದಾರೆಂದು ವರದಿಯಾಗಿದೆ. ಪ್ರಧಾನಿ ಕಚೇರಿ, ನರೇಂದ್ರ ಮೋದಿ, ಗೃಹ ಸಚಿವಾಲಯ, ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮತ್ತು ಬಸವರಾಜ ಬೊಮ್ಮಾಯಿ ತಕ್ಷಣ ಮಧ್ಯಪ್ರವೇಶಿಸಿ, ಅವರ ಸುರಕ್ಷಿತ ವಾಪಸಾತಿಯನ್ನು ಖಚಿತಪಡಿಸಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಾರೆ.

‘ಕಳೆದ ಕೆಲವು ದಿನಗಳಿಂದ ಸುಡಾನ್‌ನಲ್ಲಿ ಹಕ್ಕಿ ಪಿಕ್ಕಿಗಳು ಆಹಾರವಿಲ್ಲದೆ ಕಷ್ಟಪಡುತ್ತಿದ್ದಾರೆ. ಅವರನ್ನು ಮರಳಿ ಕರೆದುಕೊಂಡು ಬರಲು ಸರ್ಕಾರ ಇನ್ನೂ ಯಾವುದೇ ಕ್ರಮ ಕೈಗೊಂಡಿಲ್ಲ. ಕೇಂದ್ರ ಸರ್ಕಾರವು ತಕ್ಷಣವೇ ರಾಜತಾಂತ್ರಿಕ ಚರ್ಚೆಗಳನ್ನು ಆರಂಭಿಸಬೇಕು. ಹಕ್ಕಿ ಪಿಕ್ಕಿಗಳ ಸುರಕ್ಷತೆ ಖಚಿತಪಡಿಸಿಕೊಳ್ಳಲು ಅಂತರರಾಷ್ಟ್ರೀಯ ಏಜೆನ್ಸಿಗಳನ್ನು ಸಂಪರ್ಕಿಸಬೇಕು’ ಎಂದು ಅವರು ಹೇಳಿದ್ದಾರೆ.

‘ಸುಡಾನ್‌ನಲ್ಲಿ ನಡೆಯುತ್ತಿರುವ ನಾಗರಿಕ ಯುದ್ಧದಲ್ಲಿ ನಾವು ಒಬ್ಬ ಭಾರತೀಯ ಮತ್ತು ಇತರ 60 ಮಂದಿಯನ್ನು ಕಳೆದುಕೊಂಡಿರುವುದು ದುರದೃಷ್ಟಕರ’ ಎಂದಿದ್ದಾರೆ.

ಜನನ-ಮರಣ ನೋಂದಣಿ ತಿದ್ದುಪಡಿ ಅಧಿಸೂಚನೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನನ-ಮರಣಗಳ ನೋಂದಣಿಗೆ ಸಂಬಂಧಿಸಿದ ವ್ಯಾಜ್ಯಗಳ ವಿಚಾರಣೆ ನಡೆಸಿ ತೀರ್ಮಾನ ಕೈಗೊಳ್ಳುವ ಅಧಿಕಾರವನ್ನು ಕಂದಾಯ ಇಲಾಖೆಯ ಉಪವಿಭಾಗಾಧಿಕಾರಿಗೆ ವರ್ಗಾಯಿಸಿದ್ದ, ‘ಕರ್ನಾಟಕ ಜನನ ಮರಣಗಳ ನೋಂದಣಿ (ತಿದ್ದುಪಡಿ) ಅಧಿನಿಯಮಗಳು-2022 ಅನ್ನು ಹೈಕೋರ್ಟ್ ರದ್ದುಪಡಿಸಿದೆ.

ತಿದ್ದುಪಡಿ ನಿಯಮಗಳು ಜಾರಿಗೆ ಸಂಬಂಧಿಸಿದಂತೆ 2022ರ ಜುಲೈ18ರಂದು ರಾಜ್ಯ ಸರ್ಕಾರ ಹೊರಡಿಸಿರುವ ಅಧಿಸೂಚನೆ ರದ್ದುಪಡಿಸಬೇಕು‘ ಎಂದು ಕೋರಿ ಬೀದರ್ ವಕೀಲರ ಸಂಘದ ಅಧ್ಯಕ್ಷ ಸುದರ್ಶನ ವಿ. ಬಿರಾದಾರ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಇದರಿಂದಾಗಿ ಈ ಹಿಂದಿನ ವ್ಯವಸ್ಥೆಯೇ ಪುನಃ ಚಾಲ್ತಿಗೆ ಬರಲಿದೆ. ಜನನ-ಮರಣಗಳ ನೋಂದಣಿಗೆ ಸಂಬಂಧಿಸಿದ ವ್ಯಾಜ್ಯಗಳವಿಚಾರಣೆ ನಡೆಸಿ ತೀರ್ಮಾನಿಸವ ಅಧಿಕಾರ ಜೆಎಂಎಫ್‌ಸಿ ಕೋರ್ಟ್ ವ್ಯಾಪ್ತಿಗೆ ಒಳಪಡಲಿದೆ.

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದಾರೆ. ಇದರಿಂದ ಕಾಂಗ್ರೆಸ್‌ಗೆ ಲಾಭ ಆಗುವುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ-04, ಭೂತರಾಮನಹಟ್ಟಿ, ಬೆಳಗಾವಿ-591156

(ನ್ಯಾಕ್ ಮಾನ್ಯತೆ ಬಿ+ಗ್ರೇಡ್-2021)

web site: www.rcub.ac.in E-mail: rcuregistrar@gmail.com

Phone No: 0831-2565203/34 registrar@rcub.ac.in

ಕುಲಸಚಿವರ ಕಾರ್ಯಾಲಯ

ಕ್ರಮ ಸಂ. ರಾಚವಿ/ಬೆಳಗಾವಿ/ಕುಸಕಾ/2023-24/179 ದಿನಾಂಕ: 18.04.2023

-:ತಿದ್ದುಪಡಿಯ ಟೆಂಡರ್ ಪ್ರಕಟಣೆ:-

(E-procurement ಮೂಲಕ)

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ, ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದಂತೆ ಸೆಪ್ಟೆಂಬರ್-2023 ರಿಂದ ಜರುಗಲಿರುವ ಹಾಗೂ ತದ ನಂತರದ ಸಾಲಿನಲ್ಲಿ ಜರುಗಲಿರುವ ವಿವಿಧ ಪದವಿ ಪರೀಕ್ಷೆಗಳಿಗಾಗಿ ಮುಖ್ಯ ಉತ್ತರ ಪತ್ರಿಕೆ ಹಾಗೂ ಪ್ರಾಯೋಗಿಕ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡುವ ಮುದ್ರಣ ಸಂಸ್ಥೆಗಳಿಂದ ದಿನಾಂಕ: 21.03.2023 ರಂದು ಇ-ಪ್ರೊಕ್ಯೂರಮೆಂಟ್ ಟೆಂಡರ್ ಆಹ್ವಾನಿಸಲಾಗಿತ್ತು. ಆದರೆ, ಈ ಟೆಂಡರ್ ಪ್ರಸ್ತಾವನೆಯಲ್ಲಿ ಕೆಲವೊಂದು ವ್ಯತ್ಯಾಸಗಳು ಕಂಡುಬಂದಿರುವುದರಿಂದ ಇದೀಗ ತಿದ್ದುಪಡಿಯ ಟೆಂಡರನ್ನು ಪ್ರಕಟಿಸಲಾಗಿದೆ. ಆದ್ದರಿಂದ ಆಸಕ್ತ ನೊಂದಾಯಿತ ಮುದ್ರಣ ಸಂಸ್ಥೆಗಳು ತಮ್ಮ ಅರ್ಜಿ/ಪ್ರಸ್ತಾವನೆಗಳನ್ನು ಇ-ಪ್ರೊಕ್ಯೂರಮೆಂಟ್ website: http://eproc.karnataka.gov.in ಮೂಲಕ ದಿನಾಂಕ: 24.04.2023 ರಂದು ಸಂಜೆ 04.00 ಗಂಟೆಯ ಒಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಮಾಹಿತಿಗಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವೆಬ್‌ಸೈಟ್:www.rcub.ac.in ನಲ್ಲಿ ನೋಡಬಹುದು.

ಸಹಿ/-

ಕುಲಸಚಿವರು

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,ಬೆಳಗಾವಿ

ಸುಡಾನ್: 24 ಗಂಟೆ ಕದನ ವಿರಾಮ

200ರ ಗಡಿದಾಟಿದ ಸಾವಿನ ಸಂಖ್ಯೆ • ತಪ್ಪದ ಆತಂಕ, ಜನರ ಗುಳೆ

ಖಾರ್ಟೂಮ್ (ಎ.ಪಿ): ಪರಸ್ಪರ ಗುಂಡಿನ ಚಕಮಕಿ, ಶೆಲ್ ದಾಳಿಯಿಂದ ಜನರನ್ನು ಆತಂಕಕ್ಕೆ ದೂಡಿದ್ದ ಸುಡಾನ್‌ನ ಸೇನೆ ಮತ್ತು ಅರೆ ಸೇನಾಪಡೆ 24 ಗಂಟೆ ಕದನವಿರಾಮ ಘೋಷಿಸಲು ಸಮ್ಮತಿಸಿವೆ.

ಮಂಗಳವಾರ ಸಂಜೆಯಿಂದ ಕದನ ವಿರಾಮ ಜಾರಿಗೆ ಬಂದಿದೆ. ಇದಕ್ಕೆ ಉಭಯ ಬಣಗಳು ಒಪ್ಪಿವೆ ಎಂದು ಸೇನೆಯ ಉನ್ನತಾಧಿಕಾರಿ ಶಾಮ್ಸ್ ಎಲ್ ದಿನ್ ಕಬ್ಬಾಷಿ ಅವರ ಹೇಳಿಕೆ ಉಲ್ಲೇಖಿಸಿ ಸ್ಥಳೀಯ ಮಾಧ್ಯಮ ವರದಿ ಮಾಡಿದೆ. ಸಂಘರ್ಷ ಶನಿವಾರ ಆರಂಭವಾಗಿತ್ತು.

ರಾಜಧಾನಿ ಖಾರ್ಟೂಮ್ ಮತ್ತು ಇತರ ನಗರಗಳಲ್ಲಿ ಗುಂಡಿನ ದಾಳಿ, ಸ್ಫೋಟಕ್ಕೆ ಸಂಬಂಧಿಸಿದ ಶಬ್ದ ಮಂಗಳವಾರವೂ ಮುಂದುವರಿದಿತ್ತು. ಹಿಂಸೆಗೆ ಬಲಿಯಾದವರ ಸಂಖ್ಯೆ 200ರ ಗಡಿ ದಾಟಿದೆ. ಗಾಯಾಳುಗಳ ಸಂಖ್ಯೆ 1,800ಕ್ಕೂ ಹೆಚ್ಚಾಗಿದೆ. ವೈದ್ಯರು ನೀಡಿದ ಮಾಹಿತಿ ಪ್ರಕಾರ, ಮೃತರಲ್ಲಿ 97 ನಾಗರಿಕರು ಸೇರಿದ್ದಾರೆ ಎಂದು ವರದಿ ತಿಳಿಸಿದೆ.

ಭೀತಿಗೆ ಒಳಗಾಗಿದ್ದ ಲಕ್ಷಾಂತರ ಜನರು ಮನೆಯೊಳಗೆ ಅಡಗಿಕೊಂಡಿದ್ದರು. ರಾಜಧಾನಿಯಿಂದ ಸುರಕ್ಷಿತ ಸ್ಥಳಗಳಿಗೆ ಗುಳೆ ಹೊರಟಿದ್ದರು. ಲಗೇಜು, ಕುಟುಂಬ ಸದಸ್ಯರೊಂದಿಗೆ ಜನರು ಗುಳೆ ಹೊರಟ್ಟಿದ್ದ ದೃಶ್ಯಗಳು ಕಂಡವು. ಉಭಯ ಬಣಗಳ ಯೋಧರು ದಟ್ಟ ಜನವಸತಿ ಇರುವ ಪ್ರದೇಶಗಳಲ್ಲೂ ಟ್ಯಾಂಕರ್‌ಗಳು, ಶಸ್ತ್ರಾಸ್ತ್ರ ಬಳಸುತ್ತಿವೆ. ತಲಾ 10 ಸಾವಿರಕ್ಕೂ ಅಧಿಕ ಯೋಧರು ಶಸ್ತ್ರಸಜ್ಜಿತರಾಗಿ ರಸ್ತೆಗಿಳಿದಿದ್ದಾರೆ.

ಅನಿಶ್ಚಿತ ಪರಿಸ್ಥಿತಿಯ ಪರಿಣಾಮ ಆಸ್ಪತ್ರೆಗಳಿಗೆ ಅಗತ್ಯ ವಸ್ತುಗಳ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಗಾಯಗೊಂಡವರ ಸಂಖ್ಯೆಯು ಹೆಚ್ಚಾಗಿದೆ. ಕಾರ್ಯದೊತ್ತಡದ ಪರಿಣಾಮ, ಅನೇಕ ಆಸ್ಪತ್ರೆಗಳು ಬಾಗಿಲು ಬಂದ್ ಮಾಡಿವೆ ಎಂದು ವರದಿ ತಿಳಿಸಿದೆ.

ಖಾರ್ಟೂಮ್‌ನಲ್ಲಿರುವ ಸೇನಾ ಕೇಂದ್ರ ಕಚೇರಿ ಸಂಘರ್ಷದ ಕೇಂದ್ರ ತಾಣವೂ ಆಗಿದ್ದು, ಶೆಲ್ ಪ್ರಯೋಗ, ಗುಂಡಿನ ದಾಳಿಗೆ ಸಾಕ್ಷಿಯಾಗಿ ದಟ್ಟ ಬಿಳಿ ಹೊಗೆ ಆಗಸವನ್ನು ಸೇರುತ್ತಿದೆ.

88 ವಿದ್ಯಾರ್ಥಿಗಳು ಅತಂತ್ರ: ಖಾರ್ಟೂಮ್ ವಿ.ವಿ. ಗ್ರಂಥಾಲಯದಲ್ಲಿ 88 ವಿದ್ಯಾರ್ಥಿಗಳು ಸಿಕ್ಕಿಬಿದ್ದಿದ್ದಾರೆ. ಎರಡು ದಿನದ ಹಿಂದೆ ಒಬ್ಬ ವಿದ್ಯಾರ್ಥಿ ಮೃತಪಟ್ಟಿದ್ದ. ನೀರು, ಅಹಾರದ ಅಭಾವವಿದ್ದು, ಎಲ್ಲರು ನೆಲದ ಮೇಲೆ ಮಲಗಿರುವ ವಿಡಿಯೊ ಜಾಲತಾಣದಲ್ಲಿ ಹಂಚಿಕೆಯಾಗಿದೆ.

ಅಮೆರಿಕದ ರಾಯಭಾರಿ ಕಚೇರಿಯ ಹಿರಿಯ ಅಧಿಕಾರಿ, ಐರೋಪ್ಯ ರಾಷ್ಟ್ರಗಳ ರಾಜತಾಂತ್ರಿಕರ ನಿವಾಸದ ಬಳಿಯೂ ಶೆಲ್ ದಾಳಿ ನಡೆದಿದ್ದು, ಆತಂಕವನ್ನು ಹೆಚ್ಚಿಸಿದೆ.

ಘರ್ಷಣೆಯಿಂದಾಗಿ ಅತಂತ್ರರಾಗಿರುವ ನಾಗರಿಕರು ರಾಜಧಾನಿ ಖಾರ್ಟೂಮ್‌ನಿಂದ ಸುರಕ್ಷಿತ ತಾಣಗಳಿಗೆ ಗುಳೆ ಹೊರಟಿದ್ದಾರೆ —ಎಎಫ್‌ಪಿ ಚಿತ್ರ

ಶಸ್ತ್ರತ್ಯಾಗಕ್ಕೆ ಅಮೆರಿಕ, ಜಿ 7 ಶೃಂಗದ ಆಗ್ರಹ

ಸುಡಾನ್‌ನಲ್ಲಿ ಕದನ ವಿರಾಮದ ಜೊತೆಗೆ ಶಸ್ತ್ರತ್ಯಾಗ ಮಾಡಬೇಕು ಎಂಬ ಒತ್ತಾಯ ಅಂತರರಾಷ್ಟ್ರೀಯ ಸಮುದಾಯದಿಂದ ತೀವ್ರವಾಗಿದೆ. ಅಮೆರಿಕ, ವಿಶ್ವಸಂಸ್ಥೆ, ಹಲವು ರಾಷ್ಟ್ರಗಳು ಈ ಆಗ್ರಹ ಮಾಡಿವೆ.

ಸುಡಾನ್‌ನ ಸೇನೆಗೆ ಬೆಂಬಲವಾಗಿ ನಿಂತಿರುವ ಈಜಿಪ್ಟ್ ಮತ್ತು ಅರೆಸೇನಾ ಪಡೆಯಾದ ಆರ್‌ಎಸ್‌ಎಫ್‌ಗೆ ಬೆನ್ನೆಲುಬಾಗಿರುವ ಸೌದಿ ಅರೇಬಿಯಾ, ಯುಎಇ ಕೂಡಾ ಉಭಯಬಣಗಳಿಗೆ ಶಸ್ತ್ರತ್ಯಾಗಕ್ಕೆ ಮನವಿ ಮಾಡಿವೆ.

ಟರ್ಮಿನಲ್: ₹55 ಕೋಟಿ ಅಕ್ರಮ

ಒಂದನೇ ಪುಟದಿಂದ...

ಆಡಳಿತ ಮಂಡಳಿ ನಿರ್ದೇಶಕರಾಗಿರುವ ಲಾರಿ ಮಾಲೀಕರ ಸಂಘದ ಪ್ರತಿನಿಧಿಗಳಾದ ಚನ್ನಾರೆಡ್ಡಿ, ಶ್ರೀನಿವಾಸ ರಾವ್, ರಾಮಚಂದ್ರ, ಬಾಷಾ ಮತ್ತು ಸೋಮಸುಂದರ್ ಅವರು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರಿಗೆ ಅಕ್ರಮಕ್ಕೆ ಸಂಬಂಧಿಸಿದಂತೆ ದೂರು ಸಲ್ಲಿಸಿದ್ದರು. ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ವಿಚಾರಣೆ ಆರಂಭಿಸಿರುವ ಲೋಕಾಯುಕ್ತರು, ಆರೋಪದ ಕುರಿತು ತನಿಖೆ ನಡೆಸಿ ವರದಿ ನೀಡುವಂತೆ ಲೋಕಾಯುಕ್ತ ಪೊಲೀಸರಿಗೆ ನಿರ್ದೇಶನ ನೀಡಿದ್ದರು.

ಶಾಂತಿನಗರ ಬಿಎಂಟಿಸಿ ಕಚೇರಿ ಆವರಣದಲ್ಲಿರುವ ದೇವರಾಜ ಅರಸು ಟ್ರಕ್ ಟರ್ಮಿನಲ್ ಕಚೇರಿಯಲ್ಲಿ ಮಂಗಳವಾರ ಮಧ್ಯಾಹ್ನ ಶೋಧ ಮಾಡಿದ ಲೋಕಾಯುಕ್ತ ಪೊಲೀಸರು, ಕಡತಗಳನ್ನು ವಶಪಡಿಸಿಕೊಂಡಿದ್ದಾರೆ. ಮಂಗಳವಾರ ರಾತ್ರಿಯವರೆಗೂ ಕಾರ್ಯಾಚರಣೆ ನಡೆಸಿದ್ದು, ಕಚೇರಿಗೆ ಬೀಗ ಹಾಕಲಾಗಿದೆ. ಬುಧವಾರವೂ ಕಾರ್ಯಾಚರಣೆ ಮುಂದುವರಿಯಲಿದೆ. ಲೋಕಾಯುಕ್ತದ ಬೆಂಗಳೂರು ನಗರ ಘಟಕದ ಎಸ್‌ಪಿ ಕೆ.ವಿ. ಅಶೋಕ್ ಕಾರ್ಯಾಚರಣೆ ನಡೆಯುತ್ತಿದೆ.

ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012. ದೂರವಾಣಿ: 080-23460460 (5 ಲೈನ್ಸ್), ಇ-ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.12/2022-23 ದಿನಾಂಕ: 18-04-2023

2023ನೇ ಸಾಲಿಗೆ ಬಿ.ಎಸ್.ಸಿ. (ನರ್ಸಿಂಗ್) ಕೋರ್ಸುಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ ಪ್ರವೇಶ

ಸರ್ಕಾರದ ಆದೇಶ ಸಂಖ್ಯೆ ಎಂಇಡಿ 51 ಆರ್‌ಜಿಯು 2023 ದಿನಾಂಕ: 13-04-2023 ರ ಅನ್ವಯ 2023ನೇ ಸಾಲಿನ ಬಿ.ಎಸ್.ಸಿ (ನರ್ಸಿಂಗ್) ಕೋರ್ಸುಗಳ ಪ್ರವೇಶಕ್ಕೂ ಸಹ ಅಭ್ಯರ್ಥಿಗಳು ಪ್ರಾಧಿಕಾರವು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಹಾಜರಾಗಬೇಕಿರುತ್ತದೆ.

ಅರ್ಹತೆ: ಅಭ್ಯರ್ಥಿಯು ಎರಡನೇ ಪಿಯುಸಿ / 12ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಇಂಗ್ಲೀಷನ್ನು ಅಭ್ಯಸಿಸಿ ಒಟ್ಟಾರೆ ಕನಿಷ್ಠ ಶೇಕಡ 45ರಷ್ಟು ಅಂಕಗಳನ್ನು ಪಿಸಿಬಿ ವಿಷಯಗಳಲ್ಲಿ ಪಡೆದು ತೇರ್ಗಡೆ ಹೊಂದಿರಬೇಕು. (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಾದ ಪ್ರವರ್ಗ-1, 2ಎ, 2ಬಿ, 3ಎ ಮತ್ತು 3ಬಿಗಳಿಗೆ ಸೇರಿರುವ ಅಭ್ಯರ್ಥಿಗಳು ಶೇ. 40%) SC / ST / OBC ಅರ್ಹತಾ ಮಾನದಂಡಗಳು ಕರ್ನಾಟಕ SC / ST / OBC ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.

ಈ ಹಿನ್ನಲೆಯಲ್ಲಿ ಬಿ.ಎಸ್.ಸಿ (ನರ್ಸಿಂಗ್) ಕೋರ್ಸುಗಳ ಪ್ರವೇಶಾತಿಗೆ ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು ದಿನಾಂಕ: **18-04-2023 ರ ರಾತ್ರಿ 8.00 ರಿಂದ 22-04-2023 ರ ರಾತ್ರಿ 11.59 ರವರೆಗೆ** ಸಿಇಟಿ-2023 ಕ್ಕೆ ನೋಂದಣಿ ಮಾಡಿಕೊಂಡು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿದೆ ಹಾಗೂ ದಿನಾಂಕ: **23-04-2023 ರೊಳಗೆ** ನಿಗದಿತ ಶುಲ್ಕವನ್ನು ಪಾವತಿಸಬಹುದಾಗಿದೆ. ನಂತರ ಬಿ.ಎಸ್.ಸಿ (ನರ್ಸಿಂಗ್) ಕೋರ್ಸುಗಳ ಪ್ರವೇಶಾತಿಗೆ ಅರ್ಹತೆ ಪಡೆಯಲು ಅಭ್ಯರ್ಥಿಗಳು ಪ್ರಾಧಿಕಾರವು ನಡೆಸುವ ಸಿಇಟಿ-2023ಕ್ಕೆ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರದ ವಿಷಯಗಳಿಗೆ ಹಾಜರಾಗಬೇಕು.

ಕರ್ನಾಟಕೇತರ ಅಭ್ಯರ್ಥಿಗಳಿಗೆ ಯಾವುದೇ ಮೀಸಲಾತಿಯ ಸವಲತ್ತುಗಳು ಅನ್ವಯಿಸುವುದಿಲ್ಲ. ಕರ್ನಾಟಕೇತರ ಅಭ್ಯರ್ಥಿಗಳು ಸರ್ಕಾರದ ಪಾಲಿನ ಬಿ.ಎಸ್.ಸಿ ನರ್ಸಿಂಗ್ ಕೋರ್ಸುಗಳ ಪ್ರವೇಶಕ್ಕೂ ಅರ್ಹತೆ ಪಡೆಯುವುದಿಲ್ಲ.

ಸಿಇಟಿ-2023ಕ್ಕೆ ಈಗಾಗಲೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಕರ್ನಾಟಕದ ಅಭ್ಯರ್ಥಿಗಳು ಬಿ.ಎಸ್.ಸಿ (ನರ್ಸಿಂಗ್) ಕೋರ್ಸುಗಳ ಪ್ರವೇಶಾತಿಗೆ ಪ್ರತ್ಯೇಕವಾಗಿ ನೋಂದಣಿ ಮಾಡುವ ಅವಶ್ಯಕತೆ ಇರುವುದಿಲ್ಲ.

ಪ್ರಾಧಿಕಾರದ ವೆಬ್‌ಸೈಟ್: http://kea.kar.nic.in ನಲ್ಲಿ ಅರ್ಜಿ ಸಲ್ಲಿಸುವ ವಿಧಾನ, ವಿದ್ಯಾರ್ಹತೆ ಹಾಗೂ ಇತರೆ ವಿವರಗಳ ಮಾಹಿತಿಯನ್ನು ಪಡೆಯಬಹುದಾಗಿದೆ.

ಸಿಇಟಿ-2023ಕ್ಕೆ ನೋಂದಣಿ ಹಾಗೂ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ದಿನಾಂಕ ವಿಸ್ತರಣೆ

2023ನೇ ಸಾಲಿನ ವಿವಿಧ ವೃತ್ತಿಪರ ಕೋರ್ಸುಗಳ ಸರ್ಕಾರಿ ಸೀಟುಗಳ ಪ್ರವೇಶಕ್ಕಾಗಿ ಪ್ರವೇಶಾತಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ದಿನಾಂಕ: 20-05-2023 ಮತ್ತು 21-05-2023 ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅಧಿಸೂಚನೆಯನ್ನು ಪ್ರಕಟಿಸಿ ಅರ್ಹ ಕರ್ನಾಟಕದ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿತ್ತು ಹಾಗೂ ದಿನಾಂಕ: 10-04-2023 ರವರೆಗೆ ಅರ್ಜಿ ಶುಲ್ಕವನ್ನು ಪಾವತಿಸಲು ದಿನಾಂಕವನ್ನು ವಿಸ್ತರಿಸಲಾಗಿತ್ತು.

ಕರ್ನಾಟಕದ ಅರ್ಹ ಅಭ್ಯರ್ಥಿಗಳು ಇಲ್ಲಿಯವರೆಗೆ ಸಿಇಟಿ-2023ಕ್ಕೆ ನೋಂದಣಿ ಮಾಡದಿದ್ದಲ್ಲಿ ಅಥವಾ ನೋಂದಣಿ ಮಾಡಿ ಆನ್‌ಲೈನ್ ಮೂಲಕ ಅರ್ಜಿ ಭರ್ತಿ ಮಾಡದೇ ಇದ್ದಲ್ಲಿ, ಅಥವಾ ಶುಲ್ಕ ಪಾವತಿ ಮಾಡದೇ ಇದ್ದಲ್ಲಿ, ದಿನಾಂಕ: **22-04-2023ರ ವರೆಗೆ** ನೋಂದಣಿ ಮಾಡಲು ಮತ್ತು ಅರ್ಜಿ ಸಲ್ಲಿಸಲು ಹಾಗೂ ದಿನಾಂಕ: **23-04-2023 ರವರೆಗೆ** ಶುಲ್ಕವನ್ನು ಪಾವತಿಸಲು ಅಂತಿಮ ಅವಕಾಶವನ್ನು ನೀಡಲಾಗಿರುತ್ತದೆ. ಸಿಇಟಿ-2023 ಕ್ಕೆ ಅರ್ಜಿ ಸಲ್ಲಿಸಲು ಯಾವುದೇ ಕಾರಣಕ್ಕೂ ದಿನಾಂಕವನ್ನು ಮತ್ತೊಮ್ಮೆ ವಿಸ್ತರಿಸಲಾಗುವುದಿಲ್ಲ.

ರಾಷ್ಟ್ರೀಯತೆಯನ್ನು ತಿದ್ದುಪಡಿ ಮಾಡಿಕೊಳ್ಳದೆ ಇರುವ ಓಸಿಐ ಅಭ್ಯರ್ಥಿಗಳು ನೇರವಾಗಿ ಪ್ರಾಧಿಕಾರಕ್ಕೆ ನಿಗದಿತ ಶುಲ್ಕವನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದ ಡಿಡಿ ಯೊಂದಿಗೆ ದಿನಾಂಕ: 21-04-2023 ರೊಳಗೆ ಹಾಜರಾಗುವುದು.

ಸಹಿ/-

ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ವಾ.ಪ್ರ/16/2023-24

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಸೀಮೆಯ ಇತಿಹಾಸ ಪ್ರಸಿದ್ಧ ಮಹಾಲಿಂಗೇಶ್ವರ ದೇವಳದಲ್ಲಿ ಬ್ರಹ್ಮರಥೋತ್ಸವ ಮತ್ತು ‘ಪುತ್ತೂರು ಬೆಡಿ’ ಖ್ಯಾತಿಯ ಸುಡುಮದ್ದು ಪ್ರದರ್ಶನ ಸೋಮವಾರ ತಡರಾತ್ರಿ ವೈಭವದಿಂದ ನಡೆಯಿತು

‘ಮುಸ್ಲಿಂ ಮೀಸಲು ರದ್ದು: ಇನ್ನೊಂದು ವಾರ ಜಾರಿ ಇಲ್ಲ’

ಒಂದನೇ ಪುಟದಿಂದ...

ಇದನ್ನು ಪ್ರಶ್ನಿಸಿ ಎಲ್. ಗುಲಾಮ್ ರಸೂಲ್ ಮತ್ತು ಇತರರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಪ್ರಕರಣದ ವಿಚಾರಣೆ ನಡೆಸಿದ್ದ ಪೀಠವು, ‘ರಾಜ್ಯ ಸರ್ಕಾರದ ನಿರ್ಧಾರವು ದೋಷಪೂರಿತ ಹಾಗೂ ಪ್ರಮಾದದಿಂದ ಕೂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ’ ಎಂದು ಕಳೆದ ಗುರುವಾರ ಹೇಳಿತ್ತು.

‘ಮಾರ್ಚ್ 27ರ ಆದೇಶದ ಆಧಾರದ ಮೇಲೆ ಯಾವುದೇ ಶೈಕ್ಷಣಿಕ ಸಂಸ್ಥೆಗಳಿಗೆ ಪ್ರವೇಶಾತಿ ನೀಡುವುದಿಲ್ಲ ಮತ್ತು ಯಾವುದೇ ಉದ್ಯೋಗಗಳಿಗೆ ನೇಮಕಾತಿ ಮಾಡುವುದಿಲ್ಲ’ ಎಂದು ಸರ್ಕಾರ ಭರವಸೆ ನೀಡಿತ್ತು.

ಮುಸ್ಲಿಮರಿಗೆ ಇದ್ದ ಶೇ 4ರಷ್ಟು ಮೀಸಲಾತಿಯನ್ನು ಲಿಂಗಾಯತರಿಗೆ ಹಾಗೂ ಒಕ್ಕಲಿಗರಿಗೆ ತಲಾ ಶೇ 2ರಷ್ಟು ಹಂಚುವ ನಿರ್ಣಯವನ್ನು ಕರ್ನಾಟಕ ಸರ್ಕಾರ ಮಾಡಿತ್ತು. ಮುಸ್ಲಿಮರನ್ನು ಆರ್ಥಿಕವಾಗಿ ದುರ್ಬಲ ವರ್ಗದ (ಇಡಬ್ಲ್ಯುಎಸ್) ಪಟ್ಟಿಗೆ ಸೇರಿಸುವ ನಿರ್ಧಾರವನ್ನೂ ತೆಗೆದುಕೊಂಡಿತ್ತು.

ಮೂವರಿಗೆ ಕಸಾಪ ಪ್ರಶಸ್ತಿ

ಬಸವರಾಜ ಸಾದರ

ಬಸವರಾಜ ಪಾಟೀಲ ಸೇಡಂ

ಸೌಮ್ಯಾ ಪುತ್ರನ್

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ‘ಪಾಂಡಪ್ಪ ಲಕ್ಷ್ಮಣ ಹೂಗಾರ ದತ್ತಿ’ ಹಾಗೂ ‘ಡಾ ಎಚ್. ವಿಶ್ವನಾಥ್ ಮತ್ತು ಎಂ.ಎಸ್. ಇಂದಿರಾ ದತ್ತಿ’ ಪ್ರಶಸ್ತಿಯನ್ನು ಘೋಷಿಸಿದ್ದು, ಬಸವರಾಜ ಪಾಟೀಲ ಸೇಡಂ ಸೇರಿ ಮೂವರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಶಿಕ್ಷಣ ಕ್ಷೇತ್ರದ ಸಾಧನೆಗೆ 2020ನೇ ಸಾಲಿನ ‘ಪಾಂಡಪ್ಪ ಲಕ್ಷ್ಮಣ ಹೂಗಾರ ದತ್ತಿ’ ಪ್ರಶಸ್ತಿಗೆ ಸೇಡಂ ಅವರನ್ನು ಆಯ್ಕೆ ಮಾಡಲಾಗಿದೆ. 2021ನೇ ಸಾಲಿಗೆ ಸಮಾಜ ಸೇವೆ ಕ್ಷೇತ್ರದಲ್ಲಿ ಬೆಂಗಳೂರಿನ ‘ಸಂಧ್ಯಾ ದೀಪ ಸಂಸ್ಥೆ’ ಹಾಗೂ 2022ನೇ ಸಾಲಿಗೆ ವಚನ ಸಾಹಿತ್ಯ ಕ್ಷೇತ್ರದಲ್ಲಿ ಧಾರವಾಡದ ಬಸವರಾಜ ಸಾದರ ಅವರನ್ನು ಆಯ್ಕೆ ಮಾಡಲಾಗಿದೆ. ವಿಶೇಷ ದೃಷ್ಟಿಚೇತನ ಲೇಖಕರಿಗಾಗಿ ಮೀಸಲಿರುವ ಡಾಎಚ್. ವಿಶ್ವನಾಥ್ ಮತ್ತು ಎಂ.ಎಸ್. ಇಂದಿರಾ ದತ್ತಿ’ ಪ್ರಶಸ್ತಿಗೆ ‘ಬೆಳ್ಳಿ ಸೀಮೆಯ ರೈಲ್ವೆ ಸ್ಟೇಷನ್’ ಕಾದಂಬರಿಯ ಲೇಖಕಿ, ಉಡುಪಿಯ ಸೌಮ್ಯಾ ಪುತ್ರನ್ ಆಯ್ಕೆಯಾಗಿದ್ದಾರೆ. ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆಗಳನ್ನು ನಡೆಸಿದೆ ಎಂದು ಕಸಾಪ ತಿಳಿಸಿದೆ.

ಅನಧಿಕೃತ ಶಾಲೆ ಮುಚ್ಚಲು ಮೇ 25ರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರಾಜ್ಯದಲ್ಲಿನ ಅನಧಿಕೃತ ಶಾಲೆಗಳನ್ನು ಮುಚ್ಚಲು ಮೇ 25ರವರೆಗೆ ಗಡುವು ನೀಡಿದೆ.

’ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅನಧಿಕೃತ ಶಾಲೆಗಳ ಪಟ್ಟಿಯನ್ನು ಶಿಕ್ಷಣ ಇಲಾಖೆ ಬಿಡುಗಡೆ ಮಾಡಬೇಕು. ದೂರುಗಳು ಬಂದರೂ, ಕ್ರಮ ಕೈಗೊಳ್ಳದೆ ಸಮಯ ವ್ಯರ್ಥ ಮಾಡಬಾರದು. ಪಟ್ಟಿಯನ್ನು ಒದಗಿಸಿದರೆ ಪೋಷಕರಿಗೂ ಅನುಕೂಲವಾಗುತ್ತದೆ. ಮಕ್ಕಳನ್ನು ಶಾಲೆಗೆ ಸೇರಿಸುವ ಮೊದಲು ಪೋಷಕರು ಶಾಲಾ ಪೂರ್ವಾಪರ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ’ ಎಂದು ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಸಮನ್ವಯ ಸಮಿತಿ

(ಕೆಪಿಎಂಟಿಸಿಸಿ) ಶಿಕ್ಷಣ ಇಲಾಖೆಯನ್ನು ಆಗ್ರಹಿಸಿತ್ತು.

‘ತಪಾಸಣೆ ಮಾಡಿದರೆ ಐದು ಸಾವಿರಕ್ಕೂ ಹೆಚ್ಚು ಅನಧಿಕೃತ ಶಾಲೆಗಳು ಸಿಗುತ್ತವೆ. ಆದರೆ, ಶಿಕ್ಷಣ ಇಲಾಖೆಯ ಭ್ರಷ್ಟ ಅಧಿಕಾರಿಗಳೇ ಅನಧಿಕೃತ ಶಾಲೆಗಳನ್ನು ಪೋಷಿಸಿಕೊಂಡು ಬರುತ್ತಿದ್ದಾರೆ’ ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಸಂಘ (ರುಪ್ಸ) ಆರೋಪಿಸಿತ್ತು.

ಈ ಎಲ್ಲ ಬೆಳವಣಿಗೆಳ ಮಧ್ಯೆ ಶಿಕ್ಷಣ ಇಲಾಖೆ 1,316 ಅನಧಿಕೃತ ಶಾಲೆಗಳನ್ನು ಗುರುತಿಸಿದೆ. ಇನ್ನಷ್ಟು ಶಾಲೆಗಳ ತಪಾಸಣಾ ಕಾರ್ಯ ಮುಂದುವರಿದ್ದು, ಶಿಕ್ಷಣ ಇಲಾಖೆಯ ಆಯುಕ್ತರು ಸುತ್ತೋಲೆ ಹೊರಡಿಸಿ, ಕಠಿಣ ಕ್ರಮದ ಎಚ್ಚರಿಕೆ ನೀಡಿದ್ದಾರೆ.

ಅನಧಿಕೃತ ಶಾಲೆಗಳು 2023-24ರ ಶೈಕ್ಷಣಿಕ ವರ್ಷಕ್ಕೆ ಮಕ್ಕಳನ್ನು ದಾಖಲು ಮಾಡಿಕೊಳ್ಳಬಾರದು. ನೋಂದಣಿ ಮಾಡಿಕೊಂಡ ಶಾಲೆಗಳು ಯಾವ ಪಠ್ಯಕ್ರಮದ ಬೋಧನೆಗೆ ಅನುಮತಿ ಪಡೆಯಲಾಗಿದೆಯೋ ಅದೇ ಪಠ್ಯಕ್ರಮ ಬೋಧನೆ ಮಾಡಬೇಕು. ಅನುಮತಿ ಪಡೆದಷ್ಟೇ ಮಾಧ್ಯಮ, ವಿಭಾಗಗಳನ್ನು ನಡೆಸಬೇಕು. ಇಲಾಖೆ ಪೂರ್ವಾನುಮತಿ ಇಲ್ಲದೇ ಶಾಲೆಗಳನ್ನು ಸ್ಥಳಾಂತರ ಮಾಡಬಾರದು. ಕರ್ನಾಟಕ ಪಠ್ಯಪುಸ್ತಕ ಸಂಘ ಸರಬರಾಜು ಮಾಡುವ ಪಠ್ಯಪುಸ್ತಕಗಳನ್ನೇ ಖರೀದಿ ಮಾಡಬೇಕು. ಮೇ 25ರ ನಂತರ ರಾಜ್ಯದಲ್ಲಿ ಅನಧಿಕೃತ ಶಾಲೆಗಳು ಪತ್ತೆಯಾದರೆ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಶಿಕ್ಷಣ ಇಲಾಖೆ ಎಚ್ಚರಿಸಿದೆ.

ಸೂಚನೆ

ಔದ್ಯಮಿಕ ನ್ಯಾಯಾಧೀಕರಣ, ನ್ಯಾಯ ದೇಗುಲ, ಹೆಚ್.ಸಿದ್ದಯ್ಯ ರಸ್ತೆ, ಬೆಂಗಳೂರು-560 027

ಕ್ರ.ಸಂ.	ಅರ್ಜಿದಾರರು	ಪ್ರತಿವಾದಿಗಳು	ಅರ್ಜಿ ಕ್ರಮ ಸಂಖ್ಯೆ	ವಿಚಾರಣೆ ದಿನಾಂಕ
1	ವಿಭಾಗೀಯ ನಿಯಂತ್ರಣಾಧಿಕಾರಿ, ಪಶ್ಚಿಮ ವಲಯ, ಬೆಂ.ಮ.ಸಾ.ಸಂಸ್ಥೆ.	ಶ್ರೀಮತಿ ಯಾಸ್ಮೀನ್ ಬಾನು, D/o ಅಮೀರ್ ಜಾನ್, ಹುಲಕುಂಟೆ ಪೋಸ್ಟ್, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ 572113	SLA No. 486/2019	15-5-2023
2	ವಿಭಾಗೀಯ ನಿಯಂತ್ರಣಾಧಿಕಾರಿ, ಕೇಂದ್ರೀಯ ವಲಯ, ಬೆಂ.ಮ.ಸಾ.ಸಂಸ್ಥೆ.	ಯಮನಪ್ಪ S/o ತಿಪ್ಪಣ್ಣಯ, ಯಕಲಾಸಪುರ ಗ್ರಾಮ, ವಾಟಗಲ್ ಪೋಸ್ಟ್, ಮಾನವಿ ತಾಲ್ಲೂಕು, ರಾಯಚೂರು ಜಿಲ್ಲೆ- 584 120	SLA No. 134/2021	15-5-2023
3	ವಿಭಾಗೀಯ ನಿಯಂತ್ರಣಾಧಿಕಾರಿ, ಈಶಾನ್ಯ ವಲಯ, ಬೆಂ.ಮ.ಸಾ.ಸಂಸ್ಥೆ.	ಬಾಲರಾಜ್ ಅಮೃತ್ತೂರು (ಚಳ್ಳಕೆರೆ), ಬಾಣಸವಾಡಿ ಪೋಸ್ಟ್, ಬೆಂಗಳೂರು-560 043.	SLA No. 582/2021	15-5-2023
4	ವಿಭಾಗೀಯ ನಿಯಂತ್ರಣಾಧಿಕಾರಿ, ದಕ್ಷಿಣ ವಲಯ, ಬೆಂ.ಮ.ಸಾ.ಸಂಸ್ಥೆ.	ಮುಕ್ತಮ್ ಹುಸೇನ್ S/o ಜಾಫರ್ ಸಾಹೇಬ್, ಹುಳಿ ಪೋಸ್ಟ್, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ- 591126	SLA No. 533/2018	23-5-2023
5	ವಿಭಾಗೀಯ ನಿಯಂತ್ರಣಾಧಿಕಾರಿ, ದಕ್ಷಿಣ ವಲಯ, ಬೆಂ.ಮ.ಸಾ.ಸಂಸ್ಥೆ.	ಮುನಿಸ್ವಾಮಿಗೌಡ ಸಿ.ವಿ S/o ವೆಂಕಟೇಶಗೌಡ ಕೆ ಎಂ, ಚಲದಿಗಾನಹಳ್ಳಿ ಗ್ರಾಮ & ಅಂಚೆ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ-563 126	SLA No. 96/2021	23-5-2023
6	ವಿಭಾಗೀಯ ನಿಯಂತ್ರಣಾಧಿಕಾರಿ, ದಕ್ಷಿಣ ವಲಯ, ಬೆಂ.ಮ.ಸಾ.ಸಂಸ್ಥೆ.	ಮಂಜುನಾಥ್ ಜಿ S/o ಗೋಪಾಲ್, ಗಿರಿಗೌಡನದೊಡ್ಡಿ, ತಾಳಗುಪ್ಪೆ ಪೋಸ್ಟ್, ಉತ್ತರಹಳ್ಳಿ, ಬೆಂಗಳೂರು ದಕ್ಷಿಣ ತಾಲ್ಲೂಕು- 560 082.	SLA No. 419/2022	23-5-2023
7	ವಿಭಾಗೀಯ ನಿಯಂತ್ರಣಾಧಿಕಾರಿ, ಉತ್ತರ ವಲಯ, ಬೆಂ.ಮ.ಸಾ.ಸಂಸ್ಥೆ.	ಶ್ರೀಕಾಂತ್ ಕುಟಕೋಳಿ S/o ಯಮನಪ್ಪ ಉಗರ, ಬಿದ್ರಕ್ ಪೋಸ್ಟ್, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ-571320	SLA No. 1218/2021	23-5-2023
8	ವಿಭಾಗೀಯ ನಿಯಂತ್ರಣಾಧಿಕಾರಿ, ಕೇಂದ್ರೀಯ ವಲಯ, ಬೆಂ.ಮ.ಸಾ.ಸಂಸ್ಥೆ.	ದೇವರಾಜ್ S/o ಶಿವಣ್ಣ ಚಕ್ರಿ, ಬೈರವಾಡ ಗ್ರಾಮ & ಪೋಸ್ಟ್, ಲಿಂಗಸೂಗೂರು ತಾಲ್ಲೂಕು ರಾಯಚೂರು ಜಿಲ್ಲೆ- 584 125	SLA No. 420/2019	23-5-2023
9	ವಿಭಾಗೀಯ ನಿಯಂತ್ರಣಾಧಿಕಾರಿ, ಪಶ್ಚಿಮ ವಲಯ, ಬೆಂ.ಮ.ಸಾ.ಸಂಸ್ಥೆ.	ತೋಪೇಗೌಡ S/o ಹನುಮಂತಯ್ಯ, ಕತ್ರಿಘಟ್ಟ ಗ್ರಾಮ, ಉತ್ರಿದುರ್ಗ ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ- 572 126	SLA No. 462/2018	23-5-2023
10	ವಿಭಾಗೀಯ ನಿಯಂತ್ರಣಾಧಿಕಾರಿ, ಈಶಾನ್ಯ ವಲಯ, ಬೆಂ.ಮ.ಸಾ.ಸಂಸ್ಥೆ.	ಗಂಗರಾಜು.ಬಿ.ಎ S/o ಆಂಜಿನಪ್ಪ, ರಾಜಘಟ್ಟ ಗ್ರಾಮ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-561 203	SLA No. 81/2020	24-5-2023
11	ವಿಭಾಗೀಯ ನಿಯಂತ್ರಣಾಧಿಕಾರಿ, ಪೂರ್ವ ವಲಯ, ಬೆಂ.ಮ.ಸಾ.ಸಂಸ್ಥೆ.	ಶ್ರೀನಿವಾಸರೆಡ್ಡಿ S/o ವೆಂಕಟರಮಣರೆಡ್ಡಿ, ಬಂಡೇನಲ್ಲಸಂದ್ರ ಗ್ರಾಮ, ಹುಲಿಮಂಗಲ ಪೋಸ್ಟ್, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ- 562 106.	SLA No. 332/2020	24-5-2023
12	ವಿಭಾಗೀಯ ನಿಯಂತ್ರಣಾಧಿಕಾರಿ, ಉತ್ತರ ವಲಯ, ಬೆಂ.ಮ.ಸಾ.ಸಂಸ್ಥೆ.	ಎನ್.ಮನ್ಸೂರ್ ಅಹಮ್ಮದ್ S/o ನೂರ ಅಹಮ್ಮದ್, ಸುಭಾಷ್‌ನಗರ, 1ನೇ ಕ್ರಾಸ್, ಲಕ್ಷ್ಮೀನಾರಾಯಣ ಬಿಲ್ಡಿಂಗ್, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ- 562 123	SLA No. 33/2020	24-5-2023
13	ವಿಭಾಗೀಯ ನಿಯಂತ್ರಣಾಧಿಕಾರಿ, ದಕ್ಷಿಣ ವಲಯ, ಬೆಂ.ಮ.ಸಾ.ಸಂಸ್ಥೆ.	ಮಾರುತಿ ಪ್ರಸನ್ನ ಎಂ S/o ಮಹೇಶ್ವರಪ್ಪ, ಸಂಡೇಕೆರೆ ಪೋಸ್ಟ್, ರಾಮಜೋಗಿಹಳ್ಳಿ ಗ್ರಾಮ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ- 577 532.	SLA No. 259/2022	25-5-2023
14	ವಿಭಾಗೀಯ ನಿಯಂತ್ರಣಾಧಿಕಾರಿ, ದಕ್ಷಿಣ ವಲಯ, ಬೆಂ.ಮ.ಸಾ.ಸಂಸ್ಥೆ.	ಎಸ್.ಸುನೀಲ್‌ಕುಮಾರ್ S/o ಶಂಕರೇಗೌಡ, ಗಾಡಿಜೋಗಿ ಹುಂಡಿ, ಮದಗನಹಳ್ಳಿ ಪೋಸ್ಟ್, ಬನ್ನೂರು ಹೋಬಳಿ, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ-571124.	SLA No. 267/2022	25-5-2023
15	ವಿಭಾಗೀಯ ನಿಯಂತ್ರಣಾಧಿಕಾರಿ, ಉತ್ತರ ವಲಯ, ಬೆಂ.ಮ.ಸಾ.ಸಂಸ್ಥೆ.	ದೀಪು ವರ್ಮಾ S/o ವಿನೋದ ವರ್ಮಾ ಎಸ್ ವಿ, ನಂ. 196/29, 7ನೇ ಕ್ರಾಸ್, ಹೆಚ್.ಎಂ.ಟಿ. ಎಕ್ಸ್‌ಟೆನ್ಷನ್, ಮತ್ತಿಕೆರೆ, ಬೆಂಗಳೂರು-560 054.	SLA No. 411/2022	29-5-2023
16	ವಿಭಾಗೀಯ ನಿಯಂತ್ರಣಾಧಿಕಾರಿ, ಉತ್ತರ ವಲಯ, ಬೆಂ.ಮ.ಸಾ.ಸಂಸ್ಥೆ.	ರಂಗಸ್ವಾಮಿ.ಕೆ S/o ಕಾಳಯ್ಯ, ಮುತ್ತಿಗೆ ಗ್ರಾಮ, ಮಾಕಳಿ ಪೋಸ್ಟ್, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ- 573 102.	SLA No. 415/2022	29-5-2023
17	ವಿಭಾಗೀಯ ನಿಯಂತ್ರಣಾಧಿಕಾರಿ, ಪಶ್ಚಿಮ ವಲಯ, ಬೆಂ.ಮ.ಸಾ.ಸಂಸ್ಥೆ.	ಹೆಚ್ ಎಂ ನಾಗರಾಜ್ S/o ಹೆಚ್ ಸಿ ಮಲ್ಲಪ್ಪ, ನಂ. 115, 2ನೇ ಕ್ರಾಸ್, 2ನೇ ಮುಖ್ಯ ರಸ್ತೆ, ರಾಜಾಜಿನಗರ, ಬೆಂಗಳೂರು -560 010.	SLA No. 247/2018	29-5-2023
18	ವಿಭಾಗೀಯ ನಿಯಂತ್ರಣಾಧಿಕಾರಿ, ಪಶ್ಚಿಮ ವಲಯ, ಬೆಂ.ಮ.ಸಾ.ಸಂಸ್ಥೆ.	ಪ್ರಕಾಶ್ ಜೆ S/o ಜಗಪ್ಪ, ಕಲ್ಲೇಶ್ವರನಗರ, ಚಾಮುಂಡೇಶ್ವರಿ ದೇವಸ್ಥಾನದ ಹಿಂದೆ, ಪರಿವರ್ತನಾನಗರ, ಐಯುಡಿಪಿ ಲೇಔಟ್, ಬೆಂಗಳೂರು ರಸ್ತೆ, ಚಿತ್ರದುರ್ಗ-577 501	SLA No. 259/2019	29-5-2023
19	ವಿಭಾಗೀಯ ನಿಯಂತ್ರಣಾಧಿಕಾರಿ, ಪಶ್ಚಿಮ ವಲಯ, ಬೆಂ.ಮ.ಸಾ.ಸಂಸ್ಥೆ.	ಮಹಮ್ಮದ್ ಖಯಂ S/o ಗಫರ್ ಸಾಬ್, ಮಡಕಿ ಪೋಸ್ಟ್, ಅಳಂದ ತಾಲ್ಲೂಕು, ಗುಲಬರ್ಗಾ ಜಿಲ್ಲೆ-585 314.	SLA No. 381/2019	30-5-2023
20	ವಿಭಾಗೀಯ ನಿಯಂತ್ರಣಾಧಿಕಾರಿ, ಈಶಾನ್ಯ ವಲಯ, ಬೆಂ.ಮ.ಸಾ.ಸಂಸ್ಥೆ.	ಭುವನ್ ಎನ್ S/o ನಾರಾಯಣಸ್ವಾಮಿ, ನಂ.48, 9ನೇ ಬಿ ಕ್ರಾಸ್, 4ನೇ ಬ್ಲಾಕ್, ಹೆಣ್ಣೂರು ಕ್ರಾಸ್, ಕಲ್ಯಾಣನಗರ ಪೋಸ್ಟ್, ಬೆಂಗಳೂರು- 560 049	SLA No. 210/2020	5-6-2023
21	ವಿಭಾಗೀಯ ನಿಯಂತ್ರಣಾಧಿಕಾರಿ, ಪಶ್ಚಿಮ ವಲಯ, ಬೆಂ.ಮ.ಸಾ.ಸಂಸ್ಥೆ.	ಕುಮಾರಸ್ವಾಮಿ ನಾಯಕ್ S/o ಲೇ.ಸೂರ್ಯ ನಾಯಕ್, ಹಿರೇಕಬ್ಬಳಗೆರೆ, ಗೊಲ್ಲರಹಟ್ಟಿ, ಬಲ್ಲಾಳ್ ಪೋಸ್ಟ್, ಚಿತ್ರದುರ್ಗ ತಾಲ್ಲೂಕು & ಜಿಲ್ಲೆ- 577 502.	SLA No. 87/2021	7-6-2023
22	ವಿಭಾಗೀಯ ನಿಯಂತ್ರಣಾಧಿಕಾರಿ, ಈಶಾನ್ಯ ವಲಯ, ಬೆಂ.ಮ.ಸಾ.ಸಂಸ್ಥೆ.	ವಿಜಯಕುಮಾರ್.ಎಸ್ S/o ಶಿವರಾಮಯ್ಯ, ನಂ. 403, 4ನೇ ಕ್ರಾಸ್, ಸಂಜೀವಿನಿ ನಗರ, ಹೆಗ್ಗನಹಳ್ಳಿ ಕ್ರಾಸ್, ವಿಶ್ವನೀಡಂ ಪೋಸ್ಟ್, ಬೆಂಗಳೂರು-560 091.	SLA No. 296/2022	24-6-2023

ಮೇಲೆ ಹೆಸರಿಸಿರುವ ಅರ್ಜಿದಾರರು ಮೇಲ್ಕಂಡ ಪ್ರತಿವಾದಿಗಳನ್ನು ಬೆಂ.ಮ.ಸಾ.ಸಂಸ್ಥೆಯ ಸೇವೆಯಿಂದ ವಜಾಗೊಳಿಸಲು ಕೈಗಾರಿಕಾ ವಿವಾದ ಕಾರ್ಮಿಕ ಕಾಯ್ದೆ ಪರಿಚ್ಛೇದ 33 (2) (ಬಿ) ರಡಿಯಲ್ಲಿ ಅನುಮೋದನೆ ಕೋರಿರುತ್ತಾರೆ. ಆದ್ದರಿಂದ ಮೇಲೆ ನಮೂದಿಸಿರುವ ವಿಚಾರಣಾ ದಿನಾಂಕದಂದು ಬೆಳಗ್ಗೆ 11:00 ಗಂಟೆಗೆ ಗೌರವಾನ್ವಿತ ಔದ್ಯಮಿಕ ನ್ಯಾಯಾಲಯ, ಹೆಚ್.ಸಿದ್ದಯ್ಯ ರಸ್ತೆ, ಬೆಂಗಳೂರು-560 027, ಇಲ್ಲಿ ಹಾಜರಾಗಿ ಪ್ರತಿವಾದಿಗಳು ಆಕ್ಷೇಪಣೆಗಳನ್ನು ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ. ತಪ್ಪಿದಲ್ಲಿ ಏಕಪಕ್ಷೀಯವಾಗಿ ಕ್ರಮ ಕೈಗೊಳ್ಳಲಾಗುವುದು.

ಸಹಿ/- (ಶಿರಸ್ತೆದಾರರು), ಔದ್ಯಮಿಕ ನ್ಯಾಯಾಧೀಕರಣ

ಸಂಕ್ಷಿಪ್ತ ಸುದ್ದಿ

ಪಕ್ಷದಲ್ಲೇ ಉಳಿಯುವೆ: ರಾಮದಾಸ್

ಮೈಸೂರು: 'ಬಿಜೆಪಿ ನನ್ನ ತಾಯಿ. ಈ ಪಕ್ಷದಲ್ಲೇ ಉಳಿಯುವೆ. ಕೃಷ್ಣರಾಜ ಕ್ಷೇತ್ರದ ಅಭ್ಯರ್ಥಿ ಪರ ಪ್ರಚಾರ ನಡೆಸುವೆ' ಎಂದು ಶಾಸಕ ಎಸ್.ಎ. ರಾಮದಾಸ್ ತಿಳಿಸಿದರು.

ಪಕ್ಷದ ಟಿಕೆಟ್ ತಪ್ಪಿದ್ದರಿಂದ ಮುನಿಸಿಕೊಂಡಿದ್ದ ಅವರು ಮಂಗಳವಾರ ಬೆಂಬಲಿಗರೊಂದಿಗೆ ಚರ್ಚಿಸಿದ ನಂತರ ಸುದ್ದಿಗೋಷ್ಠಿಯಲ್ಲಿ ತಮ್ಮ ನಿರ್ಧಾರವನ್ನು ಪ್ರಕಟಿಸಿದರು.

'ಕಠಿಣ ಪರಿಸ್ಥಿತಿಗಳು ಬಂದರೂ ಪಕ್ಷದ ವಿರುದ್ಧ ಎಂದೂ ಮಾತನಾಡಲಿಲ್ಲ. ನಾನು ಆರ್‌ಎಸ್‌ಎಸ್ ಸ್ವಯಂಸೇವಕ. ಪಕ್ಷದ ನಿರ್ಧಾರ ಗೌರವಿಸುವೆ. ದೇಶದ ಯಾವುದೇ ಶಾಸಕರೂ ನೀಡದಷ್ಟು ಪ್ರೀತಿಯನ್ನು 25 ವರ್ಷಗಳಿಂದ ನರೇಂದ್ರ ಮೋದಿ ನೀಡಿದ್ದಾರೆ. ಅದನ್ನು ಕಳೆದುಕೊಳ್ಳಲಾರೆ' ಎಂದರು.

ಕಾಂಗ್ರೆಸ್‌ನಲ್ಲೇ ಇರುವೆ: 'ಈ ಚುನಾವಣೆಯಲ್ಲಿ ನಾನು ಯಾವುದೇ ಪಕ್ಷದಿಂದ ಅಥವಾ ಪಕ್ಷೇತರನಾಗಿ ಸ್ಪರ್ಧಿಸುವುದಿಲ್ಲ. ಕಾಂಗ್ರೆಸ್‌ನಲ್ಲೇ ಇರುತ್ತೇನೆ' ಎಂದು ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ವಂಚಿತರಾದ ಮಾಜಿ ಶಾಸಕ ವಾಸು ತಿಳಿಸಿದ್ದಾರೆ.

ಪಕ್ಷ ತೊರೆದ ಶೆಟ್ಟರ್ ಜೊತೆ ಗುರುತಿಸಿಕೊಳ್ಳದಂತೆ ಹಿರಿಯ ಮುಖಂಡರಿಂದ ಸೂಚನೆ

ಶೆಟ್ಟರ್ ಬೆಂಬಲಿಗರಿಗೆ ಬಿಜೆಪಿ ತಾಕೀತು

• ಶ್ರೀಕಾಂತ ಕಲ್ಲಮ್ಮನವರ

ಹುಬ್ಬಳ್ಳಿ: ಪಕ್ಷ ತೊರೆದು ಕಾಂಗ್ರೆಸ್ ಸೇರಿರುವ ಜಗದೀಶ ಶೆಟ್ಟರ್ ಅವರಿಗೆ ಬೆಂಬಲ ನೀಡದಂತೆ, ಅವರ ಜೊತೆ ಗುರುತಿಸಿಕೊಳ್ಳದಂತೆ ಬೆಂಬಲಿಗರು ಹಾಗೂ ಮಹಾನಗರ ಪಾಲಿಕೆ ಸದಸ್ಯರ ಮೇಲೆ ಬಿಜೆಪಿ ಹಿರಿಯ ಮುಖಂಡರು ಒತ್ತಡ ಹೇರುತ್ತಿದ್ದಾರೆ. ಇದರಿಂದಾಗಿ ಶೆಟ್ಟರ್ ಜೊತೆಗೆ ಹೋಗಬೇಕೋ, ಬೇಡವೋ ಎನ್ನುವ ಗೊಂದಲದಲ್ಲಿ ಬೆಂಬಲಿಗರು ಇದ್ದಾರೆ ಎಂದು ವಿಶ್ವಾಸನೀಯ ಮೂಲಗಳು ತಿಳಿಸಿವೆ.

ಮೂವತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲ ಪಕ್ಷ ಕಟ್ಟಿ ಬೆಳೆಸಿದ ಶೆಟ್ಟರ್ ಅವರಿಗೆ ಬಿಜೆಪಿಯಲ್ಲಿ ಹಲವಾರು ಹಿತೈಷಿಗಳು, ಬೆಂಬಲಿಗರು ಇದ್ದಾರೆ. ನಿಗಮ-ಮಂಡಳಿಗಳ ಅಧ್ಯಕ್ಷರು, ಮಹಾನಗರ ಪಾಲಿಕೆ ಸದಸ್ಯರು ಇದ್ದಾರೆ. ಆದರೆ ಈಗ ಪಕ್ಷ ತೊರೆದ ಶೆಟ್ಟರ್ ಅವರನ್ನು ಹಿಂಬಾಲಿಸದಂತೆ ತಡೆಯುವ ಕ್ರಮವಾಗಿ ಬಿಜೆಪಿಯ ಹಿರಿಯ ನಾಯಕರು ಇವರೆಲ್ಲರ ಜೊತೆ ಹಲವು ಸುತ್ತಿನ ಸಭೆಗಳನ್ನು ಮಾಡಿದ್ದಾರೆ.

ಶೆಟ್ಟರ್ ಪ್ರತಿನಿಧಿಸುವ ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ಕ್ಷೇತ್ರದ ವ್ಯಾಪ್ತಿಯ ಒಳಪಡುವ ಮಹಾನಗರ ಪಾಲಿಕೆಯ 16 ವಾರ್ಡ್‌ಗಳಲ್ಲಿ ಬಿಜೆಪಿ ಸದಸ್ಯರಿದ್ದಾರೆ. ಇವರಲ್ಲಿ ಬಹುತೇಕರು ಶೆಟ್ಟರ್ ಅವರಿಗೆ ಬಿಜೆಪಿ ಟಿಕೆಟ್ ನೀಡಬೇಕೆಂದು ಪಕ್ಷದ ವರಿಷ್ಠರ ಮೇಲೆ ಒತ್ತಡ ಹೇರಿದ್ದರು. ಟಿಕೆಟ್ ಸಿಗದ ಅಸಮಾಧಾನಗೊಂಡ ಶೆಟ್ಟರ್ ಕಾಂಗ್ರೆಸ್ ಕೈ ಹಿಡಿದ ನಂತರ, ಇವರ್‍ಯಾರೂ ಬಹಿರಂಗವಾಗಿ ಕಾಣಿಸಿಕೊಂಡಿಲ್ಲ.

ಉಳಿಸಿಕೊಳ್ಳುವ ಪ್ರಯತ್ನ: ಶೆಟ್ಟರ್ ರಾಜೀನಾಮೆಯಿಂದ ಪಕ್ಷಕ್ಕೆ ಆಗಬಹುದಾದ ಹಾನಿಯನ್ನು ತಡೆಯಲು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ನೇತೃತ್ವದಲ್ಲಿ ಬಿಜೆಪಿಯ ಹಿರಿಯ ನಾಯಕರು, ಪಕ್ಷದ ಪದಾಧಿಕಾರಿಗಳು ಹಾಗೂ ಸದಸ್ಯರ ಹಲವು ಸಭೆ ನಡೆಸಿದ್ದಾರೆ. ವಿಶೇಷವಾಗಿ ಮಹಾನಗರ ಪಾಲಿಕೆ ಸದಸ್ಯರ ಮೇಲೆ ಗಮನ ಕೇಂದ್ರೀಕರಿಸಿದ್ದಾರೆ. ವ್ಯಕ್ತಿಗಿಂತ ಪಕ್ಷ ಮುಖ್ಯ, ಪಕ್ಷದಲ್ಲಿಯೇ ಮುಂದುವರಿದರೆ ಮುಂಬರುವ ದಿನಗಳಲ್ಲಿ ಮತ್ತಷ್ಟು ಅವಕಾಶಗಳು ದೊರೆಯಲಿವೆ ಎಂದು ಭರವಸೆ ನೀಡಿ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಯಾವ ಕಾರಣಕ್ಕೂ ಶೆಟ್ಟರ್ ಜೊತೆ ಹೋಗುವುದಿಲ್ಲ' ಎಂದು ಕೆಲವು ಸದಸ್ಯರಿಂದ ಹೇಳಿಕೆ ಪಡೆದಿದ್ದಾರೆ. ಅದನ್ನು ವಿಡಿಯೊ ರೆಕಾರ್ಡ್ ಕೂಡ ಮಾಡಿದ್ದಾರೆ ಎನ್ನಲಾಗುತ್ತಿದೆ.

ಇವಲ್ಲ ಬೆಳವಣಿಗೆಗಳಿಂದ ಹಲವು ನಾಯಕರು ಬಹಿರಂಗವಾಗಿ ಏನನ್ನೂ ಹೇಳದೆ ಮೌನಕ್ಕೆ ಶರಣಾಗಿದ್ದಾರೆ. ಕೆಲವರು ಶೆಟ್ಟರ್ ಜೊತೆ ಹೋಗಬೇಕೋ, ಹೋಗಬಾರದೋ ಎನ್ನುವ ಗೊಂದಲದಲ್ಲಿ ಉಳಿದಿದ್ದಾರೆ. ಬೆರಳೆಣಿಕೆಯಷ್ಟು ಜನರು ಮಾತ್ರ ಬಹಿರಂಗವಾಗಿ ಶೆಟ್ಟರ್ ಬೆಂಬಲಕ್ಕೆ ನಿಂತಿದ್ದಾರೆ.

'ಜೋಶಿ ಅವರು ಸಭೆ ನಡೆಸಿ, ಪಾಲಿಕೆ ಸದಸ್ಯರ ಮೇಲೆ ಒತ್ತಡ ಹೇರುವ ಕೆಲಸ ಮಾಡಿದ್ದಾರೆ' ಎಂದು ಮಲ್ಲಿಕಾರ್ಜುನ ಸಾವಕಾರ 'ಪ್ರಜಾವಾಣಿ'ಗೆ ತಿಳಿಸಿದರು.

'ಬಿಜೆಪಿಯ ಹಿರಿಯ ಮುಖಂಡರು ಶೆಟ್ಟರ್ ಬೆಂಬಲಿಗರನ್ನು ಹಿಡಿದಿಡುವ ಕೆಲಸ ಮಾಡುತ್ತಿದ್ದಾರೆ. ಅವರು ಎಷ್ಟೇ ಒತ್ತಡ ಹಾಕಿದರೂ ಒಂದೆರಡು ದಿನಗಳಲ್ಲಿ ಹಲವರು ಪಕ್ಷದಿಂದ ಹೊರಬಂದು ಶೆಟ್ಟರ್ ಅವರ ಜೊತೆಗೂಡಲಿದ್ದಾರೆ' ಎಂದು ನಾಗೇಶ ಕಲಬುರ್ಗಿ ವಿಶ್ವಾಸ ವ್ಯಕ್ತಪಡಿಸಿದರು.

ಕಟ್ಟಾ ಬೆಂಬಲಿಗರಿಬ್ಬರು ರಾಜೀನಾಮೆ

ಶೆಟ್ಟರ್ ಅವರ ಕಟ್ಟಾ ಬೆಂಬಲಿಗರೆಂದೇ ಗುರುತಿಸಿಕೊಂಡಿರುವ ಸಾಬೂನು ಮತ್ತು ಮಾರ್ಜಕ ಮಂಡಳಿಯ ಮಾಜಿ ನಿರ್ದೇಶಕ ಮಲ್ಲಿಕಾರ್ಜುನ ಸಾವಕಾರ, ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ನಾಗೇಶ ಕಲಬುರ್ಗಿ ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ.

ಶೆಟ್ಟರ್‌ಗೆ ಟಿಕೆಟ್ ನೀಡುವಂತೆ ವರಿಷ್ಠರ ಮೇಲೆ ಒತ್ತಡ ಹೇರಲು ರಾಜೀನಾಮೆಗೆ ಮುಂದಾಗಿದ್ದೆವು. ಆದರೆ, ಈಗ ನಾವ್ಯಾರೂ (16 ಜನ ಪಾಲಿಕೆ ಸದಸ್ಯರು) ಅವರ ಜೊತೆ ಹೋಗುವುದಿಲ್ಲ

–ರಾಜಣ್ಣ ಕೊರವಿ, ಪಾಲಿಕೆ ಸದಸ್ಯ

ಯಾದಗಿರಿ ಕ್ಷೇತ್ರದ ಪಕ್ಷೇತರರಾಗಿ ಯಂಕಪ್ಪ ದೇವಿಂದ್ರಪ್ಪ ರಾಮಸಮುದ್ರ ಅವರು ಮಂಗಳವಾರ ಠೇವಣಿ ರೂಪದಲ್ಲಿ ನೀಡಿದ ₹10 ಸಾವಿರ ಮೌಲ್ಯದ ನಾಣ್ಯಗಳನ್ನು ಚುನಾವಣೆ ಸಿಬ್ಬಂದಿ ಎಣಿಸಿದರು

₹ 1ರ ನಾಣ್ಯಗಳನ್ನು ಠೇವಣಿ ಇಟ್ಟ ಯುವಕ

ಪ್ರಜಾವಾಣಿ ವಾರ್ತೆ

ಯಾದಗಿರಿ: ಯಂಕಪ್ಪ ದೇವಿಂದ್ರಪ್ಪ ರಾಮಸಮುದ್ರ ಎಂಬುವವರು ಯಾದಗಿರಿ ಕ್ಷೇತ್ರದಲ್ಲಿ ಪಕ್ಷೇತರರಾಗಿ ಮಂಗಳವಾರ ನಾಮಪತ್ರ ಸಲ್ಲಿಸಿದರು. ಕ್ಷೇತ್ರದಲ್ಲಿ ಒಂದು ವರ್ಷ ಪಾದಯಾತ್ರೆ ಕೈಗೊಂಡು ಗ್ರಾಮಸ್ಥರಿಂದ ಸಂಗ್ರಹಿಸಿದ ₹ 10 ಸಾವಿರದಷ್ಟು ₹ 1ರ ನಾಣ್ಯಗಳನ್ನು ಚುನಾವಣಾಧಿಕಾರಿಗೆ ಠೇವಣಿ ರೂಪದಲ್ಲಿ ಅವರು ನೀಡಿದರು. ಅವುಗಳನ್ನು ಎಣಿಸಲು ಮೂವರು ಸಿಬ್ಬಂದಿಗೆ 2 ಗಂಟೆಗೂ ಹೆಚ್ಚು ಸಮಯ ಬೇಕಾಯಿತು.

ಮೈಸೂರು ವಿಶ್ವವಿದ್ಯಾಲಯದಿಂದ ರಾಜ್ಯಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವೀಧರ ಆಗಿರುವ 27 ವರ್ಷದ ಯಂಕಪ್ಪ 4 ವರ್ಷಗಳಿಂದ ಮನೆಯಿಂದ ದೂರವುಳಿದು, ಗ್ರಾಮ ಮತ್ತು ತಾಂಡಾಗಳು ಸೇರಿದಂತೆ ವಿವಿಧೆಡೆ ಓಡಾಡಿ ಮತದಾನ, ಶಿಕ್ಷಣ, ಉದ್ಯೋಗ ಸೇರಿ ವಿವಿಧ ವಿಷಯಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸಿದ್ದಾರೆ.

'ಜನರಲ್ಲಿ ಜಾಗೃತಿ ಮೂಡಿಸಲು ಎಲ್ಲಾ ಕಡೆ ಓಡಾಡಿದೆ. ಭಿಕ್ಷೆ ಬೇಡಿ ಊಟ ಮಾಡಿದೆ. ಅಲ್ಲಲ್ಲಿ ದೇವಸ್ಥಾನ, ಸರ್ಕಾರಿ ಶಾಲೆಗಳಲ್ಲಿ ಉಳಿದು ಜನರೊಂದಿಗೆ ಸಂವಾದಿಸಿದೆ' ಎಂದು ಯಂಕಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

'ಯಂಕಪ್ಪ ಒಬ್ಬೊಬ್ಬರಿಂದ ₹ 1 ನಾಣ್ಯವನ್ನಷ್ಟೆ ಸಂಗ್ರಹಿಸಿದ್ದಾರೆ. ₹10 ನೋಟು ಕೊಟ್ಟರೂ ಸ್ವೀಕರಿಸಿಲ್ಲ. ಬಡತನವಿದ್ದರೂ ಜನಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ' ಎಂದು ರಾಮಸಮುದ್ರದ ತೋಟೇಂದ್ರ ರಾಮಸಮುದ್ರ ತಿಳಿಸಿದರು.

ಪಕ್ಷೇತರರಾಗಿ ಫೈಟರ್ ರವಿ ನಾಮಪತ್ರ

ನಾಗಮಂಗಲ (ಮಂಡ್ಯ ಜಿಲ್ಲೆ): ಮಲ್ಲಿಕಾರ್ಜುನ (ಫೈಟರ್ ರವಿ) ನಾಗಮಂಗಲ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ಮಂಗಳವಾರ ನಾಮಪತ್ರ ಸಲ್ಲಿಸಿದರು.

ಅವರು ಬಿಜೆಪಿ ಟಿಕೆಟ್ ಪ್ರಬಲ ಆಕಾಂಕ್ಷಿಯಾಗಿದ್ದರು. ಆದರೆ, ಪಕ್ಷ ಸುಧಾ ಶಿವರಾಮೇಗೌಡರಿಗೆ ಟಿಕೆಟ್ ನೀಡಿದೆ. ರೌಡಿಶೀಟರ್ ಆರೋಪದ ಹಿನ್ನೆಲೆಯಲ್ಲಿ ಟಿಕೆಟ್ ನಿರಾಕರಿಸಿತ್ತು. ಇದರಿಂದ ಅಸಮಾಧಾನಗೊಂಡಿದ್ದ ಅವರು ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು.

ಬೆಂಬಲಿಗರೊಂದಿಗೆ ತಾಲ್ಲೂಕು ಕಚೇರಿವರೆಗೆ ಮೆರವಣಿಗೆಯಲ್ಲಿ ಬಂದ ಫೈಟರ್ ರವಿ ಉಮೇದುವಾರಿಕೆ ಸಲ್ಲಿಸಿದರು. ಈ ವೇಳೆ ಕೆಲವರು ಬಿಜೆಪಿ ಬಾವುಟ ಹಿಡಿದು ಅವರ ಪರ ಜೈಕಾರ ಹಾಕಿದರು. ಅಭಿಮಾನಿಗಳು, ಬೆಂಬಲಿಗರು ಪಟಾಕಿ ಸಿಡಿಸಿದರು. ಹೆಗಲ ಮೇಲೆ ಹೊತ್ತು ಮೆರವಣಿಗೆ ಮಾಡಿದರು.

ಮಂಗಳವಾರ 770 ನಾಮಪತ್ರ ಸಲ್ಲಿಕೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮಂಗಳವಾರ ಒಟ್ಟು 770 ನಾಮಪತ್ರಗಳು ಸಲ್ಲಿಕೆಯಾಗಿವೆ. ಇದರೊಂದಿಗೆ ವಿಧಾನಸಭಾ ಚುನಾವಣೆಗೆ ಸಲ್ಲಿಕೆಯಾದ ಒಟ್ಟು ನಾಮಪತ್ರಗಳ ಸಂಖ್ಯೆ 2,033ಕ್ಕೆ ತಲುಪಿದೆ.

ಮಾರ್ಚ್ 13ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗಿತ್ತು. ಆರಂಭದ ದಿನ 221 ನಾಮಪತ್ರಗಳು ಸಲ್ಲಿಕೆಯಾಗಿದ್ದವು. ಶನಿವಾರ 200 ಹಾಗೂ ಸೋಮವಾರ 621 ನಾಮಪತ್ರಗಳನ್ನು ಸಲ್ಲಿಸಲಾಗಿತ್ತು. ಮಂಗಳವಾರ 621 ಮಂದಿ 770 ನಾಮಪತ್ರಗಳನ್ನು ಸಲ್ಲಿಸಿದ್ದಾರೆ.

ಮಂಗಳವಾರ ನಾಮಪತ್ರ ಸಲ್ಲಿಸಿದವರಲ್ಲಿ 564 ಪುರುಷರು ಮತ್ತು 57 ಮಂದಿ ಮಹಿಳೆಯರು. ಬಿಜೆಪಿಯ 130, ಕಾಂಗ್ರೆಸ್‌ನ 116, ಜೆಡಿಎಸ್‌ನ 75, ಆಮ್ ಆದ್ಮಿ ಪಕ್ಷದ 61, ಬಹುಜನ ಸಮಾಜ ಪಕ್ಷದ 20, ಸಿಪಿಎಂನ ಒಬ್ಬರು, ನೋಂದಾಯಿತ ಮಾನ್ಯತೆ ಪಡೆಯದ ಪಕ್ಷಗಳ 161 ಮಂದಿ ಹಾಗೂ 206 ಪಕ್ಷೇತರರು ಇದರಲ್ಲಿ ಸೇರಿದ್ದಾರೆ.

ಚುನಾವಣಾ ತರಬೇತಿಗೆ ಬಂದಿದ್ದ ಸಿಬ್ಬಂದಿ ಸಾವು

ಹನೂರು (ಚಾಮರಾಜನಗರ): ಪಟ್ಟಣದ ವಿವೇಕಾನಂದ ಶಾಲೆಯಲ್ಲಿ ಮಂಗಳವಾರ ಚುನಾವಣಾ ಸಿಬ್ಬಂದಿಗೆ ಆಯೋಜಿಸಿದ್ದ ತರಬೇತಿಯಲ್ಲಿ ಭಾಗವಹಿಸಿದ್ದ ಸಿಬ್ಬಂದಿ ಜಗದೀಶ್ (40) ಎಂಬುವವರು ಮೆಟ್ಟಿಲು ಹತ್ತು ವಾಗ ಜಾರಿ ಬಿದ್ದು ಮೃತಪಟ್ಟಿದ್ದಾರೆ.

'ಬೆಳಿಗ್ಗೆ ಪರಿಶೀಲಿಸಿದ್ದ ವೈದ್ಯರು ಜಗದೀಶ್ ಮೃತಪಟ್ಟಿದ್ದಾರೆ ಎಂದು ಘೋಷಿಸಿದ್ದರು. ಮಧ್ಯಾಹ್ನ ಮರಣೋತ್ತರ ಪರೀಕ್ಷೆಗೂ ಮುನ್ನ ಪರಿಶೀಲಿಸಿದಾಗ ನಾಡಿಮಿಡಿತ ಇತ್ತು ಎಂದು ಹನೂರು ತಾಲ್ಲೂಕು ವೈದ್ಯಾಧಿಕಾರಿ ಹೇಳಿದ್ದರು. ನಂತರ ಮೈಸೂರು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿನ ವೈದ್ಯರು ಮೃತಪಟ್ಟಿದ್ದಾರೆ ಎಂದು ಘೋಷಿಸಿದರು' ಎಂದು ಡಿಎಚ್‌ಒ ಡಾ.ವಿಶ್ವೇಶ್ವರಯ್ಯ 'ಪ್ರಜಾವಾಣಿ'ಗೆ ತಿಳಿಸಿದರು.

ಪಿಡಿಒ ಅಮಾನತು

ಮುಡಿಪು (ದಕ್ಷಿಣ ಕನ್ನಡ): ಪಕ್ಷವೊಂದರ ಪರ ಪ್ರಚಾರ ಮಾಡುತ್ತಿದ್ದಾರೆ ಎಂಬ ಆರೋಪದ ಮೇರೆಗೆ ಹರೇಕಳ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಯಶವಂತ ಬೆಳ್ಚಡ ಅವರನ್ನು ಅಮಾನತುಗೊಳಿಸಿ ಜಿಲ್ಲಾಧಿಕಾರಿ ರವಿಕುಮಾರ್ ಆದೇಶ ಹೊರಡಿಸಿದ್ದಾರೆ.

ರಾಜ್ಯವ್ಯಾಪಿ ಸಂಚರಿಸಲು ಪ್ರಗತಿಪರ ಚಿಂತಕರ ಒಕ್ಕೂಟ ನಿರ್ಧಾರ

'ಎದ್ದೇಳು ಕರ್ನಾಟಕ' ಅಭಿಯಾನ

ಪ್ರಜಾವಾಣಿ ವಾರ್ತೆ

ಧಾರವಾಡ: 'ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ಉಂಟು ಮಾಡುತ್ತಿರುವ ಬಿಜೆಪಿಯನ್ನು ಅಧಿಕಾರದಿಂದ ದೂರ ಇಡಲು ನಾಗರಿಕರ ನೈತಿಕ ಪ್ರಜ್ಞೆಯ ಜಾಗೃತಿಗಾಗಿ 'ಎದ್ದೇಳು ಕರ್ನಾಟಕ' ಅಭಿಯಾನವನ್ನು ತೀವ್ರಗೊಳಿಸಲು ಪ್ರಗತಿಪರ ಚಿಂತಕರ ಒಕ್ಕೂಟ ನಿರ್ಧರಿಸಿದೆ' ಎಂದು ಚಿಂತಕ ಗಣೇಶ ದೇವಿ ಹೇಳಿದರು.

ಮಂಗಳವಾರ ಪ್ರಗತಿಪರ ಚಿಂತಕರ ಚಿಂತನ-ಮಂಥನ ಸಭೆಯಲ್ಲಿ, ಬಿಜೆಪಿಯ ಸಂವಿಧಾನ ವಿರೋಧಿ ನಡೆ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ಉಂಟು ಮಾಡುತ್ತಿರುವ ಬಗ್ಗೆ ಸಮಗ್ರ ಚರ್ಚೆಯ ನಂತರ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದರು.

'ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಕರ್ನಾಟಕದ ಪರಂಪರೆಯ ಮೇಲೆ ದಾಳಿ ಮಾಡುತ್ತಿದೆ. ಪ್ರಜಾಪ್ರಭುತ್ವ, ಸಂವಿಧಾನ, ಅಭಿವ್ಯಕ್ತಿ ಸ್ವಾತಂತ್ರ್ಯ, ಕೋಮು ಸಾಮರಸ್ಯ, ಸಾಮಾಜಿಕ ಭದ್ರತೆ ದುರ್ಬಲಗೊಳ್ಳುವ ಸಂದರ್ಭಗಳು ಎದುರಾಗಿವೆ. ಪ್ರಜಾಪ್ರಭುತ್ವದ ರಕ್ಷಣೆ ಹಾಗೂ ಕರ್ನಾಟಕದ ಅಸ್ಮಿತೆಯ ಉಳಿವಿಗಾಗಿ ಅಭಿಯಾನ ಈಗಾಗಲೇ ಆರಂಭಗೊಂಡಿದೆ. ಅದನ್ನು ಇನ್ನಷ್ಟು ತೀವ್ರಗೊಳಿಸಲಾಗುವುದು' ಎಂದರು.

'ದೇಶಕ್ಕೆ ಅನುಭವ ಮಂಟಪದ ಪರಿಕಲ್ಪನೆ ನೀಡಿದ ಕರ್ನಾಟಕ ರಾಜ್ಯಕ್ಕೆ ಬಿಜೆಪಿ ಅರ್ಹ ಪಕ್ಷವಲ್ಲ. ರಾಜ್ಯದಲ್ಲಿ ಆಡಳಿತ ಮಾಡುವ ಅರ್ಹತೆಯೂ ಅದಕ್ಕಿಲ್ಲ. ಆ ನೈತಿಕತೆ, ಅರ್ಹತೆ ಕಳೆದುಕೊಂಡ ಬಿಜೆಪಿಯನ್ನು ಸೋಲಿಸಿ, ದೇಶಕ್ಕೆ ಪರಿವರ್ತನೆಯ ಸಂದೇಶ ನೀಡಬೇಕಿದೆ. ಬಿಜೆಪಿ ಸರ್ಕಾರ ಸಾಮಾಜಿಕ, ಸಾಂಸ್ಕೃತಿಕ ನಿಬಂಧನೆಗಳಿಗೆ ಪ್ರತಿರೋಧವಾಗಿ ನಡೆದುಕೊಂಡಿದ್ದು, ಸಂಪ್ರದಾಯಗಳ ಮೇಲೆ ದಾಳಿ ಮಾಡಿದೆ. ಅದರ ವಿರುದ್ಧ ಸಮುದಾಯ ಒಗ್ಗೂಡ ಬೇಕಿದ್ದು, ಜನತೆಯಲ್ಲಿ ನೈತಿಕ ಪ್ರಜ್ಞೆಯ ಅರಿವು ಮೂಡಿಸಿ, ಬಿಜೆಪಿಯನ್ನು ಅಧಿಕಾರದಿಂದ ದೂರ ಇಡುವ ಅನಿವಾರ್ಯತೆ ಇದೆ' ಎಂದು ದೇವಿ ಹೇಳಿದರು.

'ಸಾಹಿತಿಗಳು, ಲೇಖಕರು ಹಾಗೂ ಚಿಂತಕರು ತಮ್ಮ ಜೀವನದ ಅನುಭವ, ಜ್ಞಾನದ ಮೂಲಕವೇ ಆಗಿದ್ದು, ಯಾವುದೇ ಪಕ್ಷದಿಂದಲ್ಲ. ಹೀಗಾಗಿ ಪಕ್ಷಕ್ಕೆ ಅಂಟಿಕೊಳ್ಳದೇ ಸಮಾಜದ ಏಳಿಗೆಗಾಗಿ ಎಲ್ಲರೂ ಕೈಜೋಡಿಸಬೇಕು' ಎಂದು ಮನವಿ ಮಾಡಿದರು.

ಇದಕ್ಕೂ ಮೊದಲು ನಡೆದ ಆನ್‌ಲೈನ್ ವೇದಿಕೆಯಲ್ಲಿ, ಚಿಂತಕರಾದ ಜಯಾ ಮೆಹ್ತಾ, ದೇವನೂರ ಮಹಾದೇವ, ರಾಜೇಂದ್ರ ಚೆನ್ನಿ ಸೇರಿದಂತೆ ಹಲವರು ವಿಚಾರ ಮಂಡಿಸಿದರು. ಪ್ರಗತಿಪರ ಚಿಂತಕರ ಒಕ್ಕೂಟಕ್ಕೆ ರಾಜ್ಯ ಹಾಗೂ ದೇಶದ ವಿವಿಧ ಸಂಘ–ಸಂಸ್ಥೆಗಳು, ಚಿಂತಕರು ಬೆಂಬಲ ಸೂಚಿಸಿದ್ದಾರೆ. ರಹಮತ್ ತರೀಕೆರೆ, ಜಿ.ಬಿ. ಪಾಟೀಲ, ಎನ್‌.ಜಿ. ರಾಮಚಂದ್ರ, ಶಂಕರ ಹಲಗತ್ತಿ, ಡಾ. ಅಶೋಕ ಪಾಲ್, ತಾರಾ ರಾವ್, ಎ.ಎಂ. ಖಾನ್ ಪಾಲ್ಗೊಂಡಿದ್ದರು.

ಬಿಜೆಪಿ ಸೇರಿದ ಬಿ.ವಿ.ನಾಯಕ

ರಾಯಚೂರು: ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ವಿ.ನಾಯಕ ಅವರು ತಮ್ಮ ಹುದ್ದೆಗೆ ಮತ್ತು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಮಂಗಳವಾರ ರಾಜೀನಾಮೆ ಸಲ್ಲಿಸಿದ್ದಾರೆ. ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ.

ರಾಜೀನಾಮೆ ಪತ್ರವನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ರವಾನಿಸಿದ್ದು, ಹುಬ್ಬಳ್ಳಿಯಲ್ಲಿ ಬಿಜೆಪಿಯ ಪ್ರಮುಖ ನಾಯಕರ ಸಮ್ಮುಖದಲ್ಲಿ ಪಕ್ಷಕ್ಕೆ ಸೇರಿದರು. ಮಾನ್ವಿ ಕ್ಷೇತ್ರಕ್ಕೆ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಬಿ.ವಿ.ನಾಯಕ ಬಿಜೆಪಿ ಸೇರಿದ್ದಾರೆ. ಅವರ ತಂದೆ ಮಾಜಿ ಸಂಸದ ದಿ.ವೆಂಕಟೇಶ ನಾಯಕ ಮನೆತನದವರು ಈವರೆಗೆ ದೇವದುರ್ಗ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದರು.

ನಾನು ಸಿ.ಎಂ ಆಗುವುದನ್ನು ಯಾರೂ ತಡೆಯಲಾಗದು: ಎಚ್‌ಡಿಕೆ

ಪಾಂಡವಪುರ (ಮಂಡ್ಯ ಜಿಲ್ಲೆ): 'ತಾಯಿ ಚಾಮುಂಡೇಶ್ವರಿಯ ಆಶೀರ್ವಾದವಿದ್ದು, ನಾನು ಮುಖ್ಯಮಂತ್ರಿಯಾಗುವುದು ನಿಶ್ಚಿತ. ಅದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಮಂಗಳವಾರ ವಿಶ್ವಾಸ ವ್ಯಕ್ತಪಡಿಸಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯದಾದ್ಯಂತ ಜೆಡಿಎಸ್ ಪರವಾದ ವಾತಾವರಣವಿದೆ. ಬೆಳಗಾವಿ, ಬಳ್ಳಾರಿ ಜಿಲ್ಲೆಗಳಲ್ಲಿ ಜೆಡಿಎಸ್‌ಗೆ ನೆಲೆ ಇಲ್ಲ ಎನ್ನುತ್ತಿದ್ದರು. ಆದರೆ, ಈಗ ಆ ಜಿಲ್ಲೆಗಳಲ್ಲೂ ತಲಾ 2–3 ಸ್ಥಾನಗಳನ್ನು ಗೆಲ್ಲುವ ಶಕ್ತಿ ಪಕ್ಷಕ್ಕೆ ಬಂದಿದೆ' ಎಂದರು.

'ನಾನು ಮಂಡ್ಯದಲ್ಲಿ ಸ್ಪರ್ಧಿಸುವಂತೆ ಇಲ್ಲಿಯ ಜನರು ಅಪೇಕ್ಷೆ ಪಡುತ್ತಿದ್ದಾರೆ. ಆದರೆ, ಚನ್ನಪಟ್ಟಣ ಕ್ಷೇತ್ರದಲ್ಲಿ ಮಾತ್ರ ಸ್ಪರ್ಧಿಸುತ್ತೇನೆ' ಎಂದು ಸ್ಪಷ್ಟಪಡಿಸಿದರು.

ಶೇ 3ರಷ್ಟು ಲಿಂಗಾಯತರ ಮತ ಕಾಂಗ್ರೆಸ್‌ನತ್ತ: ಡಿಕೆಶಿ

ಬೆಂಗಳೂರು: 'ಬಿಜೆಪಿ ತ್ಯಜಿಸಿ ಜಗದೀಶ ಶೆಟ್ಟರ್ ಮತ್ತ ಲಕ್ಷ್ಮಣ ಸವದಿ ಕಾಂಗ್ರೆಸ್ ಸೇರಿದ್ದರಿಂದ ವೀರಶೈವ ಲಿಂಗಾಯತರ ಶೇ 2ರಿಂದ 3ರಷ್ಟು ಮತ ಪಕ್ಷಕ್ಕೆ ಬರಲಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು. ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ನಮ್ಮ ಸಮೀಕ್ಷೆ ಪ್ರಕಾರ ನಾವು 141 ಸೀಟು ಗೆಲ್ಲುತ್ತಿದ್ದೆವು. ಆದರೆ, ಈ ಇಬ್ಬರ ಸೇರ್ಪಡೆಯಿಂದ 150 ಸೀಟು ಗೆಲ್ಲುತ್ತೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಕಾಂಗ್ರೆಸ್ ಸಿದ್ಧಾಂತ ಒಪ್ಪಿ ಬರುವ ಬಿಜೆಪಿ, ಜೆಡಿಎಸ್ ನಾಯಕರು, ಕಾರ್ಯಕರ್ತರಿಗೆ ಮುಕ್ತ ಆಹ್ವಾನ ನೀಡುತ್ತೇನೆ. ಚಾಮರಾಜನಗರದಿಂದ ಬೀದರ್‌ವರೆಗೆ ಈ ಇಬ್ಬರ ಬೆಂಬಲಿಗರು, ಅಭಿಮಾನಿಗಳಿದ್ದು, ಎಲ್ಲರೂ ಕಾಂಗ್ರೆಸ್‌ನತ್ತ ಒಲವು ತೋರುತ್ತಿದ್ದಾರೆ' ಎಂದರು.

ಎಸ್‌.ಆರ್‌. ಪಾಟೀಲರನ್ನು ಹೀನಾಯವಾಗಿ ನಡೆಸಿಕೊಂಡಿದ್ದೇಕೆ: ಬೊಮ್ಮಾಯಿ ಪ್ರಶ್ನೆ



ಬಾಗಲಕೋಟೆ: ವೀರಶೈವ ಲಿಂಗಾಯತ ನಾಯಕ ಎಸ್‌.ಆರ್‌. ಪಾಟೀಲಗೆ ಟಿಕೆಟ್ ನೀಡದೆ ಹೀನಾಯವಾಗಿ ನಡೆಸಿಕೊಳ್ಳುತ್ತಿರುವುದೇಕೆ ಎಂದು ಪ್ರಶ್ನಿಸುವ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾಂಗ್ರೆಸ್ ನಾಯಕರಿಗೆ ತಿರುಗೇಟು ನೀಡಿದರು.

ಮಂಗಳವಾರ ಮುಧೋಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಚುನಾವಣೆ ಬಂದಾಗಷ್ಟೇ ಕಾಂಗ್ರೆಸ್ ಮುಖಂಡರಿಗೆ ಲಿಂಗಾಯತರು ನೆನಪಾಗುತ್ತಾರೆ. ಮೊದಲು ಪಕ್ಷದಲ್ಲಿರುವವರಿಗೆ ಗೌರವ ನೀಡಲಿ' ಎಂದರು.

'ಕಾಂಗ್ರೆಸ್ 1967ರ ನಂತರ ರಾಜ್ಯದಲ್ಲಿ ಲಿಂಗಾಯತ ಮುಖ್ಯಮಂತ್ರಿ ಮಾಡಿಲ್ಲ. ವೀರೇಂದ್ರ ಪಾಟೀಲ ಅವರನ್ನು ಅವಮಾನ ಮಾಡಿ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲಾಯಿತು' ಎಂದು ಟೀಕಿಸಿದರು.

'ಲಿಂಗಾಯತ ಸಮಾಜವನ್ನು ಒಡೆಯಲು ಹೊರಟವರಿಗೆ ಈಗ ಪ್ರೀತಿ ಉಕ್ಕಿ ಹರಿಯುತ್ತಿದೆ. 2009ರಿಂದಲೇ 2ಎ ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿದ್ದರು. ಆ ಪ್ರಸ್ತಾವವನ್ನು ಕಾಂಗ್ರೆಸ್ ಸರ್ಕಾರ ತಿರಸ್ಕರಿಸಿತ್ತು. ನಮ್ಮ ಸರ್ಕಾರ ಮೀಸಲಾತಿ ಹೆಚ್ಚಿಸಿದೆ' ಎಂದರು.

'ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ 'ಜಿಲೇಬಿ' (ಗೌಡ, ಲಿಂಗಾಯತ, ಬ್ರಾಹ್ಮಣ) ಎಂದು ಫೈಲ್ ಇರುತ್ತಿತ್ತು. ಕೃಷ್ಣಾ ಮೇಲ್ದಂಡೆ ಯೋಜನೆ ಹಿನ್ನಡೆಗೂ ಕಾಂಗ್ರೆಸ್ ಕಾರಣ ಎಂದು ದೂರಿದರು. ಬಿಜೆಪಿ ಎಲ್ಲರಿಗೂ ಸಾಮಾಜಿಕ ನ್ಯಾಯ ಒದಗಿಸುವ ಕೆಲಸ ಮಾಡಿದೆ. ಜಗದೀಶ ಶೆಟ್ಟರ್ ಅವರಿಗೆ ಟಿಕೆಟ್ ಸಿಗದಿರಲು ಬಿ.ಎಲ್. ಸಂತೋಷ ಕಾರಣ ಎಂಬ ಆರೋಪ ಸರಿಯಲ್ಲ' ಎಂದು ಬೊಮ್ಮಾಯಿ ಹೇಳಿದರು.

ಲಿಂಗಾಯತರನ್ನೇ ಸಿ.ಎಂ ಮಾಡುವುದಾಗಿ ಕಾಂಗ್ರೆಸ್ ಘೋಷಿಸಲಿ: ನಳಿನ್ ಸವಾಲು



ಮಂಗಳೂರು: 'ಲಿಂಗಾಯತರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡುವುದಾಗಿ ಕಾಂಗ್ರೆಸ್ ಪಕ್ಷವು ಘೋಷಿಸಲಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸವಾಲು ಹಾಕಿದರು.

'ಬಿಜೆಪಿಯಿಂದ ಲಿಂಗಾಯಿತರಿಗೆ ಅನ್ಯಾಯ ಆಗುತ್ತಿದೆ' ಎಂಬ ಕಾಂಗ್ರೆಸ್ ಮುಖಂಡರ ಹೇಳಿಕೆಗೆ ಇಲ್ಲಿ ಮಂಗಳವಾರ ಪ್ರತಿಕ್ರಿಯಿಸಿದ ಅವರು, 'ಎಲ್ಲಾ ಸಂದರ್ಭಗಳಲ್ಲೂ ಬಿಜೆಪಿ ಮಾತ್ರ ಲಿಂಗಾಯತರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದೆ. ರಾಜ್ಯದಲ್ಲಿ ಈ ಸಲವೂ ಬಿ.ಎಸ್. ಯಡಿಯೂರಪ್ಪ ಮಾರ್ಗದರ್ಶನದಲ್ಲಿ ಮತ್ತು ಬೊಮ್ಮಾಯಿ ನೇತೃತ್ವದಲ್ಲಿ ಚುನಾವಣೆ ಎದುರಿಸುತ್ತೇವೆ. ಇನ್ನು ಮುಂದೆಯೂ ಲಿಂಗಾಯತರನ್ನೇ ಮುಖ್ಯಮಂತ್ರಿ ಮಾಡಲಿದ್ದೇವೆ. ಬೇರೆ ಯಾವ ಪಕ್ಷಕ್ಕೂ ಆ ತಾಕತ್ತು ಇಲ್ಲ' ಎಂದರು.

ಬಿಜೆಪಿಯೂ ಕುಟುಂಬ ರಾಜಕಾರಣ ಮಾಡುತ್ತಿದೆ ಎಂಬ ಟೀಕೆಗೆ ಉತ್ತರಿಸಿದ ಅವರು, 'ಕಾರ್ಯಕರ್ತರಿಗೆ ರಾಷ್ಟ್ರೀಯ ನಾಯಕರು ಟಿಕೆಟ್ ನೀಡುವುದಕ್ಕೂ ಹಾಗೂ ಮನೆಯವರೇ ಮನೆಯಲ್ಲಿ ಕುಳಿತುಕೊಂಡು ಮನೆಯವರಿಗೆ ಸೀಟು ಕೊಡುವುದಕ್ಕೂ ವ್ಯತ್ಯಾಸ ಇದೆ. ಪಕ್ಷವು ಕಾರ್ಯಕರ್ತರಾಗಿ ದುಡಿದವರ ಕುಟುಂಬದವರಿಗೆ ಟಿಕೆಟ್ ಘೋಷಣೆ ಮಾಡುವುದು ತಪ್ಪಲ್ಲ. ಅದು ಕುಟುಂಬ ರಾಜಕಾರಣ ಆಗುವುದಿಲ್ಲ. ಅವರಿಗೆ ಟಿಕೆಟ್ ನೀಡುವುದು ರಾಷ್ಟ್ರೀಯ ನಾಯಕರ ನಿರ್ಧಾರ. ಒಂದೇ ಮನೆಯಲ್ಲಿ ಮಗ, ಮತ್ತೊಬ್ಬ ಮಗ, ಸೊಸೆ, ಮತ್ತೊಬ್ಬ ಸೊಸೆ, ಮೊಮ್ಮಗನಿಗೆ ಟಿಕೆಟ್ ನೀಡುವ ಕುರಿತು ಮನೆಯಲ್ಲೇ ತೀರ್ಮಾನಿಸುವುದು ಕುಟುಂಬ ರಾಜಕಾರಣ' ಎಂದರು.

'ನಾವು ಕ್ರಾಂತಿಕಾರಕ ಬದಲಾವಣೆ ಮಾಡಿದ್ದೇವೆ. ಚುನಾವಣೆ ಸಂದರ್ಭದಲ್ಲಿ 77 ಹೊಸ ಮುಖಗಳನ್ನು ಅಭ್ಯರ್ಥಿಗಳನ್ನಾಗಿಸುವ ಧೈರ್ಯವನ್ನು ತೋರಿದ್ದೇವೆ. ಈ ಕ್ರಾಂತಿಕಾರಿ ಹೆಜ್ಜೆ ರಾಜ್ಯದಲ್ಲೂ ಯಶಸ್ವಿಯಾಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕ್ಷೇತ್ರ	ಗೋವಿಂದರಾಜ ನಗರ
ಅಭ್ಯರ್ಥಿ ಹೆಸರು	ಪ್ರಿಯಕೃಷ್ಣ
ಪಕ್ಷ	ಕಾಂಗ್ರೆಸ್
ಅಪರಾಧ ಪ್ರಕರಣ	ಒಂದು
ಶಿಕ್ಷಣ	ಬಿಎಸ್‌.ಸಿ
ಚರಾಸ್ತಿ	₹ 935 ಕೋಟಿ
ಸ್ಥಿರಾಸ್ತಿ	221.83 ಕೋಟಿ
ಎಷ್ಟು ಹೆಚ್ಚಳ	₹ 246.83 ಕೋಟಿ
ಅಭ್ಯರ್ಥಿಯ ಆಸ್ತಿ	₹ 1,156.83 ಕೋಟಿ
ಅಭ್ಯರ್ಥಿಯ ಸಾಲ	₹ 881.99 ಕೋಟಿ



ಆಸ್ತಿ ವಿವರ

ಕ್ಷೇತ್ರ	ಗಂಗಾವತಿ
ಅಭ್ಯರ್ಥಿ ಹೆಸರು	ಜನಾರ್ದನ ರೆಡ್ಡಿ
ಪಕ್ಷ	ಕಲ್ಯಾಣ ರಾಜ್ಯ ಪ್ರಗತಿ ಪಕ್ಷ
ಅಭ್ಯರ್ಥಿಯ ಕುಟುಂಬದ ಒಟ್ಟು ಆಸ್ತಿ	₹246.46 ಕೋಟಿ
ಅಪರಾಧ ಪ್ರಕರಣ	19
ಶಿಕ್ಷಣ	10ನೇ ತರಗತಿ
ಚರಾಸ್ತಿ	₹132.84 ಕೋಟಿ
ಸ್ಥಿರಾಸ್ತಿ	₹113.62 ಕೋಟಿ
ಅಭ್ಯರ್ಥಿಯ ಹೆಸರಿನಲ್ಲಿರುವ ಆಸ್ತಿ	₹37.20 ಕೋಟಿ
ಪತ್ನಿ ಹೆಸರಿನಲ್ಲಿರುವ ಆಸ್ತಿ	₹200.61 ಕೋಟಿ
ಮಕ್ಕಳ ಹೆಸರಿನಲ್ಲಿರುವ ಆಸ್ತಿ	₹8.65 ಕೋಟಿ
ಸಾಲ	ಇಲ್ಲ



• ಕೋಟ್ಯಧಿಪತಿಯಾದರೂ ರೆಡ್ಡಿ ಪತ್ನಿ ಅರುಣಾ ಲಕ್ಷ್ಮಿ ಬಳಿ ಸ್ವಂತ ಕಾರಿಲ್ಲ

ಮಾನ್ ಮೆರವಣಿಗೆ ಹುಬ್ಬಳ್ಳಿ-ಧಾರವಾಡ ಪೂರ್ವ ವಿಧಾನಸಭಾ ಕ್ಷೇತ್ರದ ಆಮ್ ಆದ್ಮಿ ಪಕ್ಷದ ಅಭ್ಯರ್ಥಿ ಬಸವರಾಜ ತೇರದಾಳ ಪರ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರು ಹುಬ್ಬಳ್ಳಿಯಲ್ಲಿ ಮಂಗಳವಾರ ರೋಡ್ ಶೋ ನಡೆಸಿದರು -ಪ್ರಜಾವಾಣಿ ಚಿತ್ರ/ ಗುರು ಹಬೀಬ

ಮುತಾಲಿಕ್ ಆದಾಯ: ಜನರ ದೇಣಿಗೆ

ಉಡುಪಿ: ಕಾರ್ಕಳ ವಿಧಾನಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಶ್ರೀರಾಮಸೇನೆಯ ಮುಖ್ಯಸ್ಥ ಪ್ರಮೋದ ಮುತಾಲಿಕ್ ನಾಮಪತ್ರ ಸಲ್ಲಿಸಿದರು.

ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಆಸ್ತಿ ವಿವರದ ಪ್ರಕಾರ ಪ್ರಮೋದ ಮುತಾಲಿಕ್ ಕೈಯಲ್ಲಿ ₹10,500 ನಗದು, ಖಾತೆಯಲ್ಲಿ ₹3,000 ಹಾಗೂ ಅಂಚೆ ಇಲಾಖೆಯ ಎನ್‌ಎಸ್‌ಸಿ ಬಾಂಡ್‌ನಲ್ಲಿ ₹2.50 ಲಕ್ಷ ಠೇವಣಿ ಸೇರಿ ₹2.63 ಲಕ್ಷ ಹಣ ಹೊಂದಿದ್ದಾರೆ. ಇದರ ಹೊರತಾಗಿ ಯಾವುದೇ ಆಸ್ತಿ, ಸ್ವಂತ ವಾಹನ ಇಲ್ಲ. ಹಾಗೆಯೇ ಸಾಲವನ್ನೂ ಮಾಡಿಲ್ಲ. ಅವಿವಾಹಿತರಾಗಿರುವ ಮುತಾಲಿಕ್ ಅವರು, ಜನರು ಕೊಟ್ಟ ದೇಣಿಗೆಯೇ ಆದಾಯದ ಮೂಲ ಎಂದು ತಿಳಿಸಿದ್ದಾರೆ.

ಪ್ರಕರಣಗಳು: ಪ್ರಮೋದ ಮುತಾಲಿಕ್ ಮೇಲೆ ಯಾದಗಿರಿ ನಗರ, ಶೃಂಗೇರಿ, ಬೆಂಗಳೂರು ಹೈಗ್ರೌಂಡ್ ಠಾಣೆ, ಬಬಲೇಶ್ವರ, ನವನಗರ, ಜೇವರ್ಗಿ, ಮುರುಡೇಶ್ವರ ಠಾಣೆಗಳಲ್ಲಿ ಒಟ್ಟು 7 ಅಪರಾಧ ಪ್ರಕರಣಗಳು ಇವೆ.

ಪ್ರಚೋದನಾಕಾರಿ ಭಾಷಣ, ಶಸ್ತ್ರಾಸ್ತ್ರ ಕಾಯ್ದೆ ಉಲ್ಲಂಘನೆ, ಮಾನನಷ್ಟ ಮೊಕದ್ದಮೆ, ಜೀವ ಬೆದರಿಕೆ, ಧಾರ್ಮಿಕ ಭಾವನೆಗೆ ಧಕ್ಕೆ, ಅವಾಚ್ಯ ಶಬ್ದಗಳಿಂದ ನಿಂದನೆ, ಕೋಮುಗಲಭೆಯ ಆರೋಪಗಳು ಸಹ ಮುತಾಲಿಕ್ ಮೇಲಿವೆ.

ಜೆಡಿಎಸ್ 3ನೇ ಪಟ್ಟಿ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಮಪತ್ರ ಸಲ್ಲಿಕೆಗೆ ಎರಡು ದಿನಗಳಷ್ಟೇ ಬಾಕಿ ಉಳಿದಿದ್ದು, ಜೆಡಿಎಸ್ ಪಕ್ಷವು 30ರಿಂದ 35 ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿಯನ್ನು ಬುಧವಾರ ಬಿಡುಗಡೆ ಮಾಡಲು ನಿರ್ಧರಿಸಿದೆ.

ಮೂಡಿಗೆರೆ ಕ್ಷೇತ್ರದಿಂದ ಮಾಜಿ ಶಾಸಕ ಎಂ.ಪಿ. ಕುಮಾರಸ್ವಾಮಿ, ಬೀದರ್ ಕ್ಷೇತ್ರದಿಂದ ಸೂರ್ಯಕಾಂತ ನಾಗಮಾರಪಲ್ಲಿ, ಕೊಪ್ಪಳದಿಂದ ಸಿ.ವಿ. ಚಂದ್ರಶೇಖರ್ ಸೇರಿದಂತೆ ಹಲವು ಅಭ್ಯರ್ಥಿಗಳ ಹೆಸರುಗಳನ್ನು ಅಂತಿಮಗೊಳಿಸಲಾಗಿದೆ. ಶಿವಮೊಗ್ಗ ನಗರಕ್ಕೂ ಪ್ರಬಲ ಅಭ್ಯರ್ಥಿ ಕಣಕ್ಕಿಳಿಸಲು ಮಾತುಕತೆ ಅಂತಿಮ ಹಂತದಲ್ಲಿದೆ ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

ಬಳ್ಳಾರಿ ನಗರ ಕ್ಷೇತ್ರಕ್ಕೆ ಜೆಡಿಎಸ್‌ನಿಂದ ಕಣಕ್ಕಿಳಿಯಲು ಮಾಜಿ ಸಂಸದ ಅನಿಲ್ ಲಾಡ್ ಬಯಸಿದ್ದಾರೆ. ಎಚ್‌.ಡಿ. ದೇವೇಗೌಡ ಅವರೊಂದಿಗೆ ಚರ್ಚಿಸುವಂತೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಸೂಚಿಸಿದ್ದಾರೆ ಎಂದು ಗೊತ್ತಾಗಿದೆ.

ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಪ್ರಭಾಕರ ರೆಡ್ಡಿ ಅವರ ಬದಲಿಗೆ ಹಿಂದಿನ ಚುನಾವಣೆಯಲ್ಲಿ ಅಭ್ಯರ್ಥಿಯಾಗಿದ್ದ ಸುಷ್ಮಾ ರಾಜಗೋಪಾಲ ರೆಡ್ಡಿ ಅವರನ್ನೇ ಕಣಕ್ಕಿಳಿಸುವ ನಿರ್ಧಾರ ಕೈಗೊಳ್ಳಲಾಗಿದೆ. ಶಿವಮೊಗ್ಗ ನಗರ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಕಣಕ್ಕಿಳಿಯಲು ಮಾಜಿ ಶಾಸಕ ಕೆ.ಬಿ. ಪ್ರಸನ್ನಕುಮಾರ್ ಟಿಕೆಟ್ ಕೇಳಿದ್ದಾರೆ. ಮತ್ತೊಬ್ಬ ಪ್ರಭಾವಿ ಮುಖಂಡರನ್ನು ಸೆಳೆಯುವ ಪ್ರಯತ್ನವೂ ನಡೆಯುತ್ತಿದೆ ಎಂದು ಮೂಲಗಳು ಹೇಳಿವೆ.

ಕಾಂಗ್ರೆಸ್ 4ನೇ ಪಟ್ಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣೆಗೆ ನಾಲ್ಕನೇ ಪಟ್ಟಿಯನ್ನು (ಏಳು ಅಭ್ಯರ್ಥಿಗಳು) ಕಾಂಗ್ರೆಸ್ ಮಂಗಳವಾರ ರಾತ್ರಿ ಪ್ರಕಟಿಸಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿನಿಧಿಸುವ ಶಿಗ್ಗಾವಿ ಕ್ಷೇತ್ರಕ್ಕೆ ಮೊಹಮ್ಮದ್ ಯೂಸುಫ್ ಸವಣೂರು ಅವರನ್ನು ಹುರಿಯಾಳುವನ್ನಾಗಿ ಮಾಡಿದೆ.

ಪಕ್ಷವು ಈವರೆಗೆ ಒಟ್ಟು 216 ಕ್ಷೇತ್ರಗಳಿಗೆ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಖೈರುಗೊಳಿಸಿದ್ದು, ಎಂಟು ಕ್ಷೇತ್ರಗಳಿಗೆ ಇನ್ನಷ್ಟೇ ಪ್ರಕಟಿಸಬೇಕಿದೆ. ಅದರಲ್ಲಿ ಕಾಂಗ್ರೆಸ್‌ನ ಹಾಲಿ ಶಾಸಕರು ಇರುವ ಪುಲಕೇಶಿನಗರ (ಅಖಂಡ ಶ್ರೀನಿವಾಸಮೂರ್ತಿ) ಹಾಗೂ ಶಿಡ್ಲಘಟ್ಟ (ವಿ.ಮುನಿಯಪ್ಪ) ಕ್ಷೇತ್ರಗಳು ಸೇರಿವೆ. ಲಿಂಗಸುಗೂರು ಕ್ಷೇತ್ರದಲ್ಲಿ ಹಾಲಿ ಶಾಸಕ ಡಿ.ಎಸ್. ಹೂಲಗೇರಿ ಅವರಿಗೆ ಪಕ್ಷ ಮಣೆ ಹಾಕಿದೆ. ಆದರೆ, ಹರಿಹರದಲ್ಲಿ ಶಾಸಕ ಎಂ. ರಾಮಪ್ಪ ಅವರಿಗೆ ಟಿಕೆಟ್ ನಿರಾಕರಿಸಿದೆ.

ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರಿಗೆ ಹುಬ್ಬಳ್ಳಿ-ಧಾರವಾಡ ಕೇಂದ್ರ ಕ್ಷೇತ್ರದ ಟಿಕೆಟ್ ನೀಡಲಾಗಿದೆ. ಅವರಿಗೆ ಸೋಮವಾರವೇ ಬಿ-ಫಾರಂ ವಿತರಿಸಲಾಗಿತ್ತು. ಶ್ರವಣಬೆಳಗೊಳದಲ್ಲಿ ವಿಧಾನ ಪರಿಷತ್‌ನ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಅವರಿಗೆ ಅವಕಾಶ ನೀಡಲಾಗಿದೆ. ಚಿಕ್ಕಮಗಳೂರಿನಲ್ಲಿ ಬಿಜೆಪಿ ತೊರೆದು ಈಚೆಗೆ ಕಾಂಗ್ರೆಸ್ ಸೇರಿದ್ದ ನಗರಸಭೆ ಮಾಜಿ ಅಧ್ಯಕ್ಷ ಎಚ್‌.ಡಿ.ತಮ್ಮಯ್ಯ ಅವರಿಗೆ ಟಿಕೆಟ್ ಒಲಿದಿದೆ.

ಸಿ.ಟಿ.ರವಿ ಆಪ್ತ ವಲಯದಲ್ಲಿದ್ದ ತಮ್ಮಯ್ಯ ಅವರು ಬಿಜೆಪಿ ಟಿಕೆಟ್‌ಗೆ ಬೇಡಿಕೆ ಇಟ್ಟಿದ್ದರು. ಅಲ್ಲಿ ಟಿಕೆಟ್ ಸಿಗುವುದಿಲ್ಲ ಎಂದು ಗೊತ್ತಾದ ಕೂಡಲೇ ಕೈ ಪಾಳಯಕ್ಕೆ ಜಿಗಿದಿದ್ದರು.

ಈ ಹಿಂದಿನ ಚುನಾವಣೆಗಳಲ್ಲಿ ಬೊಮ್ಮಾಯಿ ವಿರುದ್ಧ ಮುಸ್ಲಿಂ ಅಭ್ಯರ್ಥಿಯನ್ನು ಪಕ್ಷವು ಕಣಕ್ಕೆ ಇಳಿಸಿತ್ತು. ಈ ಸಲ ಮಾಜಿ ಸಚಿವ ವಿನಯ ಕುಲಕರ್ಣಿ ಅವರನ್ನು ಹುರಿಯಾಳುವನ್ನಾಗಿ ಮಾಡಲು ಪಕ್ಷದ ವಲಯದಲ್ಲಿ ಗಂಭೀರ ಚರ್ಚೆಗಳು ನಡೆದಿದ್ದವು. ಆದರೆ, ಪಕ್ಷವು ಮುಸ್ಲಿ ಸಮುದಾಯದ ಅಭ್ಯರ್ಥಿಗೆ ಮಣೆ ಹಾಕಿದೆ. ಕ್ಷೇತ್ರದಲ್ಲಿ ಮುಸ್ಲಿಂ ಸಮುದಾಯದವರು ನಿರ್ಣಾಯಕ ಸಂಖ್ಯೆಯಲ್ಲಿದ್ದಾರೆ.

ಯಾವೆಲ್ಲ ಕ್ಷೇತ್ರಗಳು ಬಾಕಿ: ಪುಲಕೇಶಿ ನಗರ, ಸಿ.ವಿ. ರಾಮನ್ ಗರ, ಮುಳಬಾಗಿಲು, ರಾಯಚೂರು ನಗರ, ಅರಕಲಗೂಡು, ಮಂಗಳೂರು ಉತ್ತರ, ಶಿಡ್ಲಘಟ್ಟ, ಕೆ.ಆರ್ ಪುರ.

28 ರ‍್ಯಾಲಿ, ರೋಡ್ ಶೋಗಳಲ್ಲಿ ಮೋದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಇದೇ 28 ರಿಂದ ರಾಜ್ಯದಲ್ಲಿ ಚುನಾವಣಾ ಪ್ರಚಾರ ಆರಂಭಿಸಲಿದ್ದು, ವಿವಿಧ ಜಿಲ್ಲೆಗಳಲ್ಲಿ ಒಟ್ಟು 28 ರ‍್ಯಾಲಿಗಳು ಮತ್ತು ರೋಡ್ ಶೋಗಳಲ್ಲಿ ಭಾಗವಹಿಸಲಿದ್ದಾರೆ.

ಇದೇ ವೇಳೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಚುನಾವಣೆ ಮುಗಿಯುವರೆಗೆ ಬೆಂಗಳೂರಿನಲ್ಲೇ ವಾಸ್ತವ್ಯ ಹೂಡಿ ಪಕ್ಷದ ಚುನಾವಣಾ ಉಸ್ತುವಾರಿಯನ್ನು ನೇರವಾಗಿ ತಮ್ಮ ತೆಕ್ಕೆಗೆ ತೆಗೆದುಕೊಳ್ಳಲಿದ್ದಾರೆ. ಪಕ್ಷವನ್ನು ಗೆಲುವಿನ ದಡವನ್ನು ಮುಟ್ಟಿಸಲು ಕಾರ್ಯತಂತ್ರಗಳನ್ನು ರೂಪಿಸಲಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಅಲ್ಲದೇ, ಇದೇ 30 ರಿಂದ ಮೇ 5 ರವರೆಗೆ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರೂ ರಾಜ್ಯದಲ್ಲಿ ಬಿರುಸಿನ ಚುನಾವಣಾ ಪ್ರಚಾರ ನಡೆಸಲಿದ್ದು, ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳ ಮುಖ್ಯಮಂತ್ರಿಗಳೂ ಪ್ರಚಾರ ಕಾರ್ಯಕ್ಕೆ ಬರಲಿದ್ದಾರೆ. ಕೇಂದ್ರ ಸಚಿವ ನಿತಿನ್ ಗಡ್ಕರಿ, ಸಚಿವೆಯರಾದ ಸ್ಮೃತಿ ಇರಾನಿ, ನಿರ್ಮಲಾ ಸೀತಾರಾಮನ್ ಅವರೂ ಸೇರಿ ಹಲವರು ಭಾಗಹಿಸಲಿದ್ದಾರೆ.

'ಇತರ ರಾಜ್ಯಗಳ ಬಿಜೆಪಿ ಶಾಸಕರು, ಸಚಿವರು ವಿವಿಧ ಕ್ಷೇತ್ರಗಳಲ್ಲಿ ಪ್ರಚಾರ ಮತ್ತು ಮತಯಾಚನೆ ಮಾಡುವ ಸಂಬಂಧ ಈಗಾಗಲೇ ಕಾರ್ಯಾಚರಣೆಗೆ ಇಳಿದಿದ್ದಾರೆ. ಈ ಬಾರಿ ಪ್ರಚಾರ ಕಾರ್ಯ ಅಬ್ಬರದಿಂದ ಕೂಡಿರಲಿದ್ದು, ರಾಜ್ಯದಲ್ಲಿ ಬಿ.ಎಸ್.ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಅವರು ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡಲಿದ್ದಾರೆ' ಎಂದು ಮೂಲಗಳು ಹೇಳಿವೆ.

ಮೋದಿ ಮತ್ತು ಇತರರ ಪ್ರಚಾರ ರ‍್ಯಾಲಿಗಳು ಹಾಗೂ ರೋಡ್ ಶೋಗಳನ್ನು ಎಲ್ಲೆಲ್ಲಿ ನಡೆಸಬೇಕು ಎಂಬುದನ್ನು ನಿಗದಿ ಮಾಡುವ ಕಾರ್ಯ ಬಹುತೇಕ ಅಂತಿಮಗೊಂಡಿದೆ. ತಳಮಟ್ಟದಲ್ಲಿ ಈಗಾಗಲೇ ಪ್ರಚಾರ ಕಾರ್ಯ ಆರಂಭವಾಗಿದ್ದು, ನಿತ್ಯವೂ ಕ್ಷೇತ್ರದ ಬಗ್ಗೆ ಮಾಹಿತಿಗಳನ್ನು ತರಿಸಿಕೊಂಡು ಅಭ್ಯರ್ಥಿಗಳ ಸ್ಥಿತಿಗತಿಗಳನ್ನು ವಿಶ್ಲೇಷಿಸಲಾಗುತ್ತಿದೆ ಎಂದೂ ಬಿಜೆಪಿ ನಾಯಕರೊಬ್ಬರು ಹೇಳಿದರು.

ಧಾರವಾಡ ಪ್ರವೇಶಕ್ಕೆ ಅನುಮತಿ ನಿರಾಕರಣೆ

ವಿನಯ ಕುಲಕರ್ಣಿ

ಬೆಂಗಳೂರು: 'ಚುನಾವಣಾ ಪ್ರಚಾರ ನಿಮಿತ್ತ ಧಾರವಾಡ ಜಿಲ್ಲೆ ಪ್ರವೇಶಿಸಿ 50 ದಿನಗಳ ಕಾಲ ಅಲ್ಲಿಯೇ ಇರಲು ಅನುಮತಿ ನೀಡಬೇಕು' ಎಂದು ಕೋರಿದ್ದ ಧಾರವಾಡ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವಿನಯ ಕುಲಕರ್ಣಿ ಅವರ ಮನವಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತಿರಸ್ಕರಿಸಿದೆ.

ಈ ಕುರಿತಂತೆ ಕಾಯ್ದಿರಿಸಿದ್ದ ಆದೇಶವನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಬಿ.ಜಯಂತ್ ಕುಮಾರ್ ಮಂಗಳವಾರ ಪ್ರಕಟಿಸಿದರು.

'ಜಿ.ಪಂ ಸದಸ್ಯ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದಲ್ಲಿ 15ನೇ ಆರೋಪಿಯಾಗಿರುವ ವಿನಯ ಕುಲಕರ್ಣಿ ವಿರುದ್ಧ ಗಂಭೀರ ಆಪಾದನೆಗಳಿವೆ. ಈ ಕಾರಣಕ್ಕಾಗಿಯೇ ಅವರು ಧಾರವಾಡ ಜಿಲ್ಲೆ ಪ್ರವೇಶಿಸದಂತೆ ಸೆಷನ್ಸ್ ಕೋರ್ಟ್ ನಿರ್ಬಂಧ ಹೇರಿದೆ. ವಿಚಾರಣಾ ನ್ಯಾಯಾಲಯದಲ್ಲಿ ಇನ್ನೂ ವಿಚಾರಣೆ ಆರಂಭವಾಗಿಲ್ಲ. ಈ ಹಂತದಲ್ಲಿ ಅವರಿಗೆ ಧಾರವಾಡ ಪ್ರವೇಶಿಸಲು ಅನುಮತಿ ನೀಡಿದರೆ, ಅವರು ಸಾಕ್ಷಿಗಳನ್ನು ಬೆದರಿಸುವ ಸಾಧ್ಯತೆ ಇದೆ' ಎಂದು ವಿವರಿಸಲಾಗಿದೆ.

ಹಿನ್ನೆಲೆಗೆ ಸರಿದ 'ಹಿಂದುತ್ವ', 'ಮುಸ್ಲಿಂ ಗೂಂಡಾಗಿರಿ' ವಿಚಾರ • ಬಗರ್‌ಹುಕುಂ ಸಾಗುವಳಿದಾರರ ಸಮಸ್ಯೆ, ಕಸ್ತೂರಿರಂಗನ್ ವರದಿ ವಿಚಾರಗಳು ಮುನ್ನೆಲೆಗೆ

ಭ್ರಷ್ಟಾಚಾರದ ಹೊದಿಕೆ, ಅಭಿವೃದ್ಧಿ ಕನವರಿಕೆ

• ವಿನಾಯಕ ಭಟ್

ದಾವಣಗೆರೆ: ಚುನಾವಣಾ ವರ್ಷದ ಆರಂಭದಲ್ಲೇ ಸದ್ದು ಮಾಡಿದ್ದ 'ಹಿಂದುತ್ವ', 'ಮುಸ್ಲಿಂ ಗೂಂಡಾಗಿರಿ' ವಿಚಾರಗಳು ಇದೀಗ ಕ್ಷೀಣಿಸಿದೆ. ಶಿವಮೊಗ್ಗ, ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲೀಗ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು 'ಅಭಿವೃದ್ಧಿ' ಹಾಗೂ 'ಭ್ರಷ್ಟಾಚಾರ' ವಿಚಾರಗಳನ್ನೇ ಪ್ರಮುಖ ಅಸ್ತ್ರಗಳನ್ನಾಗಿ ವಿಧಾನಸಭಾ ಚುನಾವಣಾ ಕಣದಲ್ಲಿ ಪ್ರಯೋಗಿಸುತ್ತಿವೆ.

ರಾಜ್ಯದಲ್ಲಿ ಬಿಜೆಪಿಯನ್ನು ಕಟ್ಟಿ ಬೆಳೆಸಿ ಅಧಿಕಾರಕ್ಕೆ ತಂದಿದ್ದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಶಾಸಕ ಕೆ.ಎಸ್. ಈಶ್ವರಪ್ಪ ಅವರು ಚುನಾವಣಾ ರಾಜಕಾರಣಕ್ಕೆ ನಿವೃತ್ತಿ ಘೋಷಿಸಿದ್ದಾರೆ. ಶಿವಮೊಗ್ಗ ಜಿಲ್ಲೆಯ ರಾಜಕಾರಣದಲ್ಲಿ ಈ ಬಾರಿ 'ಹೊಸ ನೀರು' ಹರಿಯಲು ದಾರಿ ಮಾಡಿಕೊಟ್ಟಿರುವುದು ವಿಶೇಷವಾಗಿದೆ.

ಬಜರಂಗದಳದ ಕಾರ್ಯಕರ್ತ ಹರ್ಷ ಹತ್ಯೆ, ಹಿಜಾಬ್ ವಿವಾದ, ಸಾವರ್ಕರ್ ಭಾವಚಿತ್ರವಿರುವ ಫ್ಲೆಕ್ಸ್ ಅಳವಡಿಕೆ ವಿಚಾರಗಳಿಗೆ ನಡೆದ ಕೋಮುಗಲಭೆಗಳು, ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ತೀರ್ಥಹಳ್ಳಿಯ ಶಾರಿಕ್ ಬಂಧನದ ವಿಚಾರಗಳು ಶಿವಮೊಗ್ಗ ಜಿಲ್ಲೆಯ ಜನರ ನೆಮ್ಮದಿಯನ್ನು ಕೆಡಿಸಿತ್ತು. ಒಂದು ಕಾಲದಲ್ಲಿ 'ಸಮಾಜವಾದ'ಕ್ಕೆ ಹೆಸರಾಗಿದ್ದ ಶಿವಮೊಗ್ಗದಲ್ಲಿ 'ಕೋಮುವಾದ' ವಿಜ್ರಂಭಿಸಿತ್ತು.

ಬಿಜೆಪಿಯು 'ಹಿಂದುತ್ವ'ವನ್ನು ಮತ್ತೆ ಮುಂಚೂಣಿಗೆ ತರಲು ಮುಂದಾದ ಬೆನ್ನಲ್ಲೇ ಕಾಂಗ್ರೆಸ್– ಜೆಡಿಎಸ್ ಪಕ್ಷದವರು ವಿವಿಧ ಸಂಘಟನೆಗಳ ಜೊತೆಗೂಡಿ 'ಶಾಂತಿ–ಸೌಹಾರ್ದ'ಕ್ಕಾಗಿ ಹೋರಾಟ ನಡೆಸಿ ಜನರ ವಿಶ್ವಾಸ ಗಳಿಸಲು ಮುಂದಾಗಿದ್ದರು.

'ಕೆಂಪುಕೋಟೆ ಮೇಲೂ ಕೇಸರಿ ಧ್ವಜ ಹಾರಿಸುತ್ತೇವೆ' ಹಾಗೂ 'ಅಲ್ಲಾನಿಗೆ ಕಿವಿ ಕೇಳಿಸುವುದಿಲ್ಲವೇ' ಎಂದು ಕೆ.ಎಸ್. ಈಶ್ವರಪ್ಪ ನೀಡಿದ್ದ ವಿವಾದಾತ್ಮಕ ಹೇಳಿಕೆಗಳು ಬಿಜೆಪಿಗೆ ಮುಜುಗರ ತಂದಿತ್ತು. ಇನ್ನೊಂದೆಡೆ ವಿಧಾನ ಪರಿಷತ್ ಸದಸ್ಯ ಆಯನೂರು ಮಂಜುನಾಥ್ ಅವರು ಈಶ್ವರಪ್ಪ ವಿರುದ್ಧ ಸಮರ ಸಾರಿ, ಅವರ ಕ್ಷೇತ್ರದಿಂದಲೇ ವಿಧಾನಸಭೆಗೆ ಸ್ಪರ್ಧಿಸುವುದಾಗಿ ಪಟ್ಟು ಹಿಡಿದಿದ್ದರು. ಈ ಬೆಳವಣಿಗೆಗಳಿಂದ ಪಕ್ಷಕ್ಕೆ ಹಿನ್ನಡೆಯಾಗುವ ಆತಂಕ ಎದುರಾದ ಬೆನ್ನಲ್ಲೇ ಬಿಜೆಪಿ ವರಿಷ್ಠರು, ಈಶ್ವರಪ್ಪ ಅವರಿಂದ 'ಚುನಾವಣಾ ರಾಜಕಾರಣದಿಂದ ನಿವೃತ್ತಿ' ಘೋಷಿಸುವಂತೆ ಮಾಡಿದ್ದಾರೆ. ಆ ಮೂಲಕ ಶಿವಮೊಗ್ಗದಲ್ಲಿ ಮತ್ತೆ ಮುಸ್ಲಿಂ ಮತದಾರರನ್ನು ಪಕ್ಷದತ್ತ ಸೆಳೆಯಲು ಯತ್ನಿಸಿದ್ದಾರೆ. 'ಹಿಂದುತ್ವ' ವಿಚಾರಕ್ಕಿಂತಲೂ ಹೆಚ್ಚಾಗಿ ವಿಮಾನ ನಿಲ್ದಾಣ ನಿರ್ಮಾಣ ಸೇರಿ ವಿವಿಧ ಅಭಿವೃದ್ಧಿ ಯೋಜನೆಗಳನ್ನೇ ಬಿಜೆಪಿ ಇದೀಗ ಪ್ರಚಾರದ ಸರಕನ್ನಾಗಿ ಮಾಡಿಕೊಂಡಿದೆ.

ಶರಾವತಿ ಹಿನ್ನೀರು ಸಂತ್ರಸ್ತರಿಗೆ ಹಕ್ಕುಪತ್ರ ಸಿಗದಿರುವುದು, ಬಗರ್ ಹುಕುಂ ಸಾಗುವಳಿದಾರರ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಕೆಪಿಸಿಸಿ ಹಿಂದುಳಿದ ವರ್ಗಗಳ ಸಮಿತಿ ಅಧ್ಯಕ್ಷ ಮಧು ಬಂಗಾರಪ್ಪ ನೇತೃತ್ವದಲ್ಲಿ ಆಯನೂರಿನಿಂದ ಶಿವಮೊಗ್ಗ ವರೆಗೆ ಪಾದಯಾತ್ರೆ ನಡೆಸುವ ಮೂಲಕ ಕಾಂಗ್ರೆಸ್ ರೈತರ ಬೆಂಬಲಕ್ಕೆ ನಿಂತಿತ್ತು. ಭದ್ರಾವತಿಯ ವಿಐಎಸ್‌ಎಲ್ ಕಾರ್ಖಾನೆ ಮುಚ್ಚುತ್ತಿರುವುದು, ಕಸ್ತೂರಿರಂಗನ್ ವರದಿ ವಿಚಾರಗಳೂ ಚುನಾವಣೆಯಲ್ಲಿ ಚರ್ಚೆಯ ವಿಷಯವಾಗಿದೆ.

ಈಶ್ವರಪ್ಪ ವಿರುದ್ಧ ಕಮಿಷನ್ ಆರೋಪ ಮಾಡಿದ್ದ ಬೆಳಗಾವಿಯ ಗುತ್ತಿಗೆದಾರ ಸಂತೋಷ ಪಾಟೀಲ ಆತ್ಮಹತ್ಯೆ ಪ್ರಕರಣ, ಗೃಹ ಸಚಿವರ ವಿರುದ್ಧ ಆರೋಪ ಕೇಳಿಬಂದ ಪಿಎಸ್‌ಐ ನೇಮಕಾತಿ ಹಗರಣಗಳನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಹಾಗೂ ಜೆಡಿಎಸ್ ಆಡಳಿತ ವಿರೋಧಿ ಅಲೆಯನ್ನು ಎಬ್ಬಿಸಲು ಯತ್ನಿಸುತ್ತಿದೆ. ತೀರ್ಥಹಳ್ಳಿ ಕ್ಷೇತ್ರದಲ್ಲಿ ಇದುವರೆಗೂ ಹಾವು– ಮುಂಗುಸಿಯಂತೆ ಕಿತ್ತಾಡುತ್ತಿದ್ದ ಮಾಜಿ ಸಚಿವ ಕಿಮ್ಮನೆ ರತ್ನಾಕರ ಹಾಗೂ ಡಿಸಿಸಿ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಆರ್.ಎಂ. ಮಂಜುನಾಥಗೌಡ ಇದೀಗ ಒಂದಾಗಿ ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು 'ಖೆಡ್ಡಾ'ದಲ್ಲಿ ಬೀಳಿಸಲು ತಂತ್ರ ರೂಪಿಸುತ್ತಿದ್ದಾರೆ.

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರವು ಶಿಫಾರಸು ಮಾಡಿರುವುದಕ್ಕೆ ವಿಶೇಷವಾಗಿ ಬಂಜಾರ, ಭೋವಿ ಸಮುದಾಯದ ಆಕ್ರೋಶ ಸ್ಫೋಟಗೊಂಡಿದೆ. ಶಿಕಾರಿಪುರದಲ್ಲಿ ನಡೆದ ಪ್ರತಿಭಟನೆ ವೇಳೆ ಯಡಿಯೂರಪ್ಪ ಅವರ ಮನೆ ಮೇಲೆ ಕಲ್ಲು ತೂರಲಾಗಿತ್ತು. ಶಿಕಾರಿಪುರದ ತಾಂಡಾಗಳಿಗೆ ಪ್ರಚಾರಕ್ಕೆ ತೆರಳಿದಾಗ ಬಿಜೆಪಿ ಅಭ್ಯರ್ಥಿ ಬಿ.ವೈ. ವಿಜಯೇಂದ್ರ ಅವರಿಗೆ ಪ್ರತಿರೋಧ ವ್ಯಕ್ತವಾಗುತ್ತಿದೆ. ಒಳ ಮೀಸಲಾತಿ ಕಲ್ಪಿಸುವ ಹಾಗೂ ಮುಸ್ಲಿಮರಿಗೆ 2ಬಿ ಮೀಸಲಾತಿ ರದ್ದುಗೊಳಿಸಿರುವ ವಿವಾದದ ಲಾಭವನ್ನು ಪಡೆಯಲು ಕಾಂಗ್ರೆಸ್ ಹವಣಿಸುತ್ತಿದೆ.

ನೀರಾವರಿ ರಾಜಕಾರಣ: ಬರಪೀಡಿತ ಚಿತ್ರದುರ್ಗ ಜಿಲ್ಲೆಯಲ್ಲಿ ಈ ಬಾರಿಯೂ 'ನೀರಾವರಿ ರಾಜಕಾರಣ' ಮುಂದುವರಿದಿದೆ. ಎರಡು ದಶಕಗಳಾದರೂ ಪೂರ್ಣಗೊಳ್ಳದ ಭದ್ರಾ ಮೇಲ್ದಂಡೆ ಯೋಜನೆಯನ್ನೇ ಮುಂದಿಟ್ಟುಕೊಂಡು ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ರಾಜಕಾರಣ ಮಾಡುತ್ತಿವೆ.

ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಡಿಪಿಆರ್ ತಯಾರಿಸಲಾಗಿತ್ತು ಎಂದು ಜೆಡಿಎಸ್ ಹೇಳುತ್ತಿದ್ದರೆ, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಯೋಜನಾ ವೆಚ್ಚವನ್ನು ₹ 12,500 ಕೋಟಿಗೆ ಹೆಚ್ಚಿಸಿದ್ದರಿಂದಲೇ ಕಾಮಗಾರಿ ವೇಗ ಪಡೆದುಕೊಂಡಿತು ಎಂದು ಕಾಂಗ್ರೆಸ್ ಪ್ರತಿಪಾದಿಸುತ್ತಿದೆ. 'ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಕಾಮಗಾರಿ ಆರಂಭಿಸಲಾಗಿತ್ತು. ಕೇಂದ್ರ ಸರ್ಕಾರವು ಈ ಯೋಜನೆಗೆ ₹ 5,300 ಕೋಟಿ ಅನುದಾನ ಘೋಷಿಸಿದ್ದು, 'ಡಬಲ್ ಎಂಜಿನ್' ಸರ್ಕಾರದಿಂದಾಗಿ ರೈತರ ಬಹುದಿನಗಳ ಕನಸು ನನಸಾಗುತ್ತಿದೆ' ಎಂದು ಬಿಜೆಪಿಯು ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ಪ್ರಚಾರ ಮಾಡುತ್ತಿದೆ.

ಮೊಳಕಾಲ್ಮುರು, ಚಳ್ಳಕೆರೆ ತಾಲ್ಲೂಕುಗಳಿಗೆ ಕುಡಿಯುವ ನೀರು ಪೂರೈಸುವ ಯೋಜನೆ; ವಾಣಿವಿಲಾಸ ಸಾಗರದ ಕಾಲುವೆ ಪುನಶ್ಚೇತನ ವಿಚಾರಗಳೂ ಇದೀಗ ಮುಂಚೂಣಿಗೆ ಬಂದಿದೆ.

ಚಿತ್ರದುರ್ಗದಲ್ಲಿ ಆಡಳಿತ ಪಕ್ಷದ ಶಾಸಕರೊಬ್ಬರ ಮೇಲೆ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷರು ಮಾಡಿದ್ದ ಕಮಿಷನ್ ಆರೋಪಗಳನ್ನೂ ಕಾಂಗ್ರೆಸ್, ಜೆಡಿಎಸ್‌ನವರು ಚುನಾವಣಾ ಅಸ್ತ್ರವನ್ನಾಗಿ ಪ್ರಯೋಗಿಸುತ್ತಿದ್ದಾರೆ.

ಸದ್ದು ಮಾಡುತ್ತಿರುವ ಮಾಡಾಳ್ ಪ್ರಕರಣ: ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದಲ್ಲಿ (ಕೆ.ಎಸ್.ಡಿ.ಎಲ್) ಟೆಂಡರ್ ಕೊಡಿಸಲು ಪುತ್ರನ ಮೂಲಕ ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಬಲೆಗೆ ಬಿದ್ದ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಪ್ರಕರಣ ರಾಜ್ಯದಲ್ಲೇ ಸಂಚಲನ ಮೂಡಿಸಿತ್ತು. ಇದೀಗ ದಾವಣಗೆರೆ ಜಿಲ್ಲೆಯಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್‌ನವರು '40 ಪರ್ಸೆಂಟ್ ಸರ್ಕಾರ' ಎಂದು 'ಭ್ರಷ್ಟಾಚಾರದ ಅಸ್ತ್ರ'ವನ್ನು ಬಿಜೆಪಿ ಮೇಲೆ ಪ್ರಯೋಗಿಸುತ್ತಿದ್ದಾರೆ. ಚನ್ನಗಿರಿ ಕ್ಷೇತ್ರದಲ್ಲಿ ಮಾಡಾಳ್ ಕುಟುಂಬಕ್ಕೆ ಟಿಕೆಟ್ ನೀಡದ ಬಿಜೆಪಿಯ ವರಿಷ್ಠರು, 'ಭ್ರಷ್ಟಾಚಾರ ಸಹಿಸಲ್ಲ' ಎಂಬ ಸಂದೇಶ ರವಾನಿಸಿ, ಪಕ್ಷದ ಘನತೆಗೆ ಕುಂದುಂಟಾಗುತ್ತಿರುವುದನ್ನು ತಡೆಯಲು ಯತ್ನಿಸಿದ್ದಾರೆ.

92 ವರ್ಷದ ಶಾಸಕ ಶಾಮನೂರು ಶಿವಂಕರಪ್ಪ ಹಾಗೂ ಅವರ ಪುತ್ರ ಎಸ್.ಎಸ್. ಮಲ್ಲಿಕಾರ್ಜುನ ಅವರಿಗೇ ಮತ್ತೆ ಟಿಕೆಟ್ ನೀಡುವ ಮೂಲಕ ಕಾಂಗ್ರೆಸ್ 'ಕುಟುಂಬ ರಾಜಕಾರಣ'ಕ್ಕೆ ಮಣೆ ಹಾಕುತ್ತಿದೆ ಎಂದು ಬಿಜೆಪಿಯವರು ಸ್ಥಳೀಯವಾಗಿ ಪ್ರಚಾರದ ವಿಷಯವನ್ನಾಗಿಸಿಕೊಂಡಿದ್ದಾರೆ.

ಮಾಯಕೊಂಡ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಮಾಜಿ ಶಾಸಕ ಬಸವರಾಜ ನಾಯ್ಕ ವಿರುದ್ಧ 11 ಜನ ಆಕಾಂಕ್ಷಿಗಳು ಸೇರಿ ಬಂಡಾಯ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲು ಮುಂದಾಗಿರುವುದಕ್ಕೆ ವಿರೋಧ ಪಕ್ಷದವರು, 'ಕಮಲ'ಕ್ಕೆ ಕೆಸರು ಮೆತ್ತಿಕೊಳ್ಳುತ್ತಿದೆ ಎಂದು ಕುಹಕವಾಡುತ್ತಿದ್ದಾರೆ.

ಪೂರಕ ಮಾಹಿತಿ: ವೆಂಕಟೇಶ್ ಜಿ.ಎಚ್., ಜಿ.ಬಿ. ನಾಗರಾಜ್, ಬಾಲಕೃಷ್ಣ ಪಿ.ಎಚ್.

ಪಕ್ಷಗಳ ಬಲಾಬಲ



ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿ

ನೈಸರ್ಗಿಕ ಸಂಪತ್ತು ಲೂಟಿ ಮಾಡುವುದೇ ಇಂದು ಅಭಿವೃದ್ಧಿಯಾಗಿದೆ. ಕೃಷಿಯಿಂದ ಜನ ವಿಮುಖರಾಗುತ್ತಿರುವುದರಿಂದ ಚುನಾವಣೆಯಲ್ಲಿ ರೈತರ ಸಮಸ್ಯೆಗಳು ಆದ್ಯತೆ ವಿಷಯವಾಗುತ್ತಿಲ್ಲ

ನಂದೀಶ್ ಬಿ.ಎನ್., ಪ್ರಗತಿಪರ ರೈತ, ಶಿಕಾರಿಪುರ

ಭದ್ರಾ ಮೇಲ್ದಂಡೆ ಯೋಜನೆಯ ಕಿರೀಟ ತೊಡಲು ರಾಜಕಾರಣಿಗಳು ಪೈಪೋಟಿಗೆ ಇಳಿದಿದ್ದು ವಿಷಾದಕರ. ನೀರು ತರುವ ಪ್ರಯತ್ನವನ್ನು ಯಾರೂ ಮಾಡುತ್ತಿಲ್ಲ

ಟಿ.ನುಲೇನೂರು ಶಂಕರಪ್ಪ, ರಾಜ್ಯ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ರಾಜ್ಯ ರೈತ ಸಂಘ

ಮಠಾಧಿಪತಿಗಳ ರಾಜಧರ್ಮ

ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿರುವ ವಿವಿಧ ಸಮುದಾಯಗಳ ಮಠಗಳು ತಮ್ಮ ಸಮುದಾಯದವರಿಗೆ ಟಿಕೆಟ್ ಕೊಡಿಸುವುದು ಹಾಗೂ ಚುನಾವಣೆಯಲ್ಲಿ ಅವರು ಗೆಲ್ಲುವಂತೆ ಮಾಡಲು ಪ್ರಭಾವ ಬೀರುತ್ತಿರುವುದು ಗುಟ್ಟಾಗಿಯೇನೂ ಉಳಿದಿಲ್ಲ. 'ರಾಜಕೀಯ ಪಕ್ಷಗಳು ಭೋವಿ ಸಮಾಜದವರಿಗೆ ಟಿಕೆಟ್ ನೀಡುವಲ್ಲಿ ಅನ್ಯಾಯ ಮಾಡಿವೆ' ಎಂದು ಚಿತ್ರದುರ್ಗದ ಭೋವಿ ಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಿರಿಗೆರೆಯ ತರಳಬಾಳು ಮಠ, ಚಿತ್ರದುರ್ಗದ ಮುರುಘಾ ಮಠ, ಹರಿಹರದ ಪಂಚಮಸಾಲಿ ಗುರುಪೀಠ, ವಾಲ್ಮೀಕಿ ಗುರುಪೀಠ, ಕನಕ ಗುರುಪೀಠ, ಚಿತ್ರದುರ್ಗ ಜಿಲ್ಲೆಯಲ್ಲಿರುವ ಭಗೀರಥ ಗುರುಪೀಠ, ಮಾದಾರ ಗುರುಪೀಠಗಳು ರಾಜಕಾರಣದ ಮೇಲೆ ಪ್ರಭಾವ ಬೀರುವಂಥವು. ಅಂತೆಯೇ ವಿವಿಧ ರಾಜಕೀಯ ಪಕ್ಷಗಳ ನಾಯಕರು ಇಲ್ಲಿನ ಮಠಗಳಿಗೆ ಭೇಟಿ ನೀಡಿ ಆ ಸಮುದಾಯದವರನ್ನು ತಮ್ಮ ಮತಬುಟ್ಟಿಗೆ ಹಾಕಿಕೊಳ್ಳಲು ಯತ್ನಿಸುತ್ತಾರೆ.

ಪರಿಣಾಮ ಬೀರಬಹುದಾದ ವಿಷಯಗಳು

ಶಿವಮೊಗ್ಗ ಜಿಲ್ಲೆ

- ಶರಾವತಿ ಮುಳುಗಡೆ ಸಂತ್ರಸ್ತರ ಸಮಸ್ಯೆ
- ಬಗರ್‌ಹುಕುಂ ಸಾಗುವಳಿದಾರರ ಸಮಸ್ಯೆ
- ಶಿವಮೊಗ್ಗ ನಗರದಲ್ಲಿ ನಡೆದ ಕೋಮುಗಲಭೆ
- ವಿಐಎಸ್‌ಎಲ್ ಕಾರ್ಖಾನೆ ಮುಚ್ಚುವ ನಿರ್ಧಾರ
- ಅಡಿಕೆಗೆ ರೋಗಬಾಧೆ ಹಾಗೂ ಬೆಲೆ ಅಸ್ಥಿರತೆ

ಚಿತ್ರದುರ್ಗ ಜಿಲ್ಲೆ

- ಮಂದಗತಿಯಲ್ಲಿ ಸಾಗುತ್ತಿರುವ ಭದ್ರಾ ಮೇಲ್ದಂಡೆ ಯೋಜನೆ
- ವಾಣಿವಿಲಾಸ ಸಾಗರದ ಕಾಲುವೆ ಆಧುನೀಕರಣ
- ನನೆಗುದಿಗೆ ಬಿದ್ದ ದಾವಣಗೆರೆ–ಚಿತ್ರದುರ್ಗ–ತುಮಕೂರು ನೇರ ರೈಲು ಮಾರ್ಗ
- ಇನ್ನೂ ಪುನರಾರಂಭವಾಗದ ವಾಣಿವಿಲಾಸ ಸಕ್ಕರೆ ಕಾರ್ಖಾನೆ
- ಆರಂಭಗೊಳ್ಳದ ಸರ್ಕಾರಿ ವೈದ್ಯಕೀಯ ಕಾಲೇಜು

ದಾವಣಗೆರೆ ಜಿಲ್ಲೆ

- ಮಂಜೂರಾಗದ ಸರ್ಕಾರಿ ವೈದ್ಯಕೀಯ ಕಾಲೇಜು
- ಸಾಕಾರಗೊಳ್ಳದ ಕೈಗಾರಿಕಾ ಕಾರಿಡಾರ್
- ಈಡೇರದ ಮಾಯಕೊಂಡ ತಾಲ್ಲೂಕು ಬೇಡಿಕೆ
- ನನೆಗುದಿಗೆ ಬಿದ್ದಿರುವ ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆ
- ಪೂರ್ಣಗೊಳ್ಳದ ಕೆರೆ ತುಂಬಿಸುವ ಯೋಜನೆಗಳು

ಗಾಳಿ ಮಾತು

ಸ್ವರೂಪ್‌ಗೆ ಬಿ–ಫಾರಂ; ಸಿ–ಫಾರಂ ಯಾರಿಗೆ?

ಮೂರು ತಿಂಗಳಿಂದ ಕುತೂಹಲ ಕೆರಳಿಸಿದ್ದ ಹಾಸನ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಟಿಕೆಟ್ ಅನ್ನು ಎಚ್.ಪಿ. ಸ್ವರೂಪ್ ಅವರಿಗೆ ನೀಡಲಾಗಿದೆ. ಆದರೆ, 'ಸಿ–ಫಾರಂ' ಬೇರೊಬ್ಬರಿಗೆ ಸಿಗಲಿದೆಯೇ ಎನ್ನುವ ಚರ್ಚೆಗಳು ಶುರುವಾಗಿವೆ.

ವಿವಿಧ ರಾಜಕೀಯ ಪಕ್ಷಗಳಲ್ಲಿ ಬಿ–ಫಾರಂ ಕೊಡುವ ಸಂಪ್ರದಾಯವಿದ್ದು, ಜೆಡಿಎಸ್‌ನಲ್ಲಿ ಕೊನೆಯ ಗಳಿಗೆಯಲ್ಲಿ ಸಿ–ಫಾರಂ ಕೊಡುವ ಸಂಪ್ರದಾಯ ನಡೆದುಕೊಂಡು ಬಂದಿದೆ. ಕಳೆದ ಬಾರಿಯ ಚುನಾವಣೆಯಲ್ಲಿ ದೇವನಹಳ್ಳಿ ಕ್ಷೇತ್ರದಲ್ಲಿ ಬಿ–ಫಾರಂ ಒಬ್ಬರಿಗೆ, ಸಿ–ಫಾರಂ ಇನ್ನೊಬ್ಬರಿಗೆ ಕೊಡಲಾಗಿತ್ತಂತೆ.

ಇದೀಗ ಹಾಸನ ಕ್ಷೇತ್ರದಲ್ಲಿ ತೀವ್ರ ಪೈಪೋಟಿಯ ನಡುವೆ ಸ್ವರೂಪ್ ಟಿಕೆಟ್ ಪಡೆದಿದ್ದಾರೆ. ಪಟ್ಟಿ ಬಿಡುಗಡೆಯ ಮುನ್ನವೇ ಸ್ವರೂಪ್‌ಗೆ, ಎಚ್.ಡಿ. ಕುಮಾರಸ್ವಾಮಿ ಬಿ–ಫಾರಂ ಕೊಟ್ಟಿದ್ದರು ಎನ್ನುವ ಮಾತುಗಳೂ ಕೇಳಿ ಬರುತ್ತಿವೆ. ಇದರಿಂದ ರೇವಣ್ಣ ಕುಟುಂಬ ಸಿಟ್ಟಾಗಿರುವುದು ಬಟಾಬಯಲಾಗಿದೆ.

ಪಟ್ಟಿ ಬಿಡುಗಡೆಯ ಸಂದರ್ಭದಲ್ಲಿಯೇ 'ಎಚ್.ಡಿ.ಕುಮಾರಸ್ವಾಮಿ ಅವರೇ ಹಾಸನ ಕ್ಷೇತ್ರ ನೋಡಿಕೊಳ್ಳಲಿದ್ದಾರೆ' ಎನ್ನುವ ಮೂಲಕ ತಮಗೂ ಹಾಸನ ಕ್ಷೇತ್ರಕ್ಕೂ ಸಂಬಂಧವೇ ಇಲ್ಲ ಎನ್ನುವಂತೆ ಎಚ್.ಡಿ. ರೇವಣ್ಣ ಮಾತನಾಡಿದ್ದಾರೆ ಎನ್ನುವ ಮಾತು ಮಾತನಾಡುವವರ ಬಾಯಿಗೆ ತಾಂಬೂಲವಾಗಿದೆಯಂತೆ.

ಇದೀಗ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಚನ್ನಪಟ್ಟಣ, ರಾಮನಗರ ಹಾಗೂ ರಾಜ್ಯದ ಇನ್ನುಳಿದ ಕ್ಷೇತ್ರಗಳ ಜೊತೆಗೆ ಹಾಸನದ ಉಸ್ತುವಾರಿ ನೋಡಿಕೊಳ್ಳುವುದು ಕಷ್ಟಕರ. ಹಾಗಾಗಿ ರೇವಣ್ಣ ಬೆಂಬಲಿತ ಅಭ್ಯರ್ಥಿಯೊಬ್ಬರಿಗೆ ಸಿ–ಫಾರಂ ನೀಡಲಾಗುತ್ತದೆಯಂತೆ ಎನ್ನುವ ಮಾತುಗಳು ಜೆಡಿಎಸ್‌ನ ಒಂದು ಪಾಳೆಯದಲ್ಲಿ ಕೇಳಿಬರುತ್ತಿವೆ. ನಾಮಪತ್ರ ಸಲ್ಲಿಕೆಗೆ ಇನ್ನೂ ಎರಡು ದಿನ ಇದ್ದು, ಅಷ್ಟರಲ್ಲಿಯೇ ಸಿ–ಫಾರಂ ಯಾರಿಗಾದರೂ ಕೊಡುತ್ತಾರಂತೆ. ಅವರೇ ಅಧಿಕೃತ ಅಭ್ಯರ್ಥಿ ಆಗುತ್ತಾರಂತೆ.

ಮಾತಿನೇಟು

ವಿ.ಸೋಮಣ್ಣ ವಸತಿ ಸಚಿವರಾಗಿ ವರುಣ ಕ್ಷೇತ್ರಕ್ಕೆ ಒಂದು ಮನೆಯನ್ನಾದರೂ ಕಟ್ಟಿಕೊಟ್ಟಿದ್ದಾರಾ? ನಾಲ್ಕು ವರ್ಷಗಳಲ್ಲಿ ಮೈಸೂರು ತಾಲ್ಲೂಕಿಗೆ ಅವರ ಕೊಡುಗೆ ಏನು? ಇಲ್ಲಿಯವರೆಗೂ ಅಭಿವೃದ್ಧಿ ಕೆಲಸ ಮಾಡಿದವರು ಯಾರು? ವರುಣದಲ್ಲಿ ನಾವು ನಾಲ್ಕು ಸೇತುವೆಗಳನ್ನು ನಿರ್ಮಿಸಿದ್ದೇವೆ. ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿದ್ದೇವೆ. ಕೆರೆಗಳಿಗೆ ನೀರು ತುಂಬಿಸಿದ್ದೇವೆ. ಸೂರಿಲ್ಲದವರಿಗೆ ಸೂರು ನೀಡಿದ್ದೇವೆ. ರಸ್ತೆಗಳನ್ನು ನಿರ್ಮಿಸಿಕೊಟ್ಟಿದ್ದೇವೆ. ಇದನ್ನು ಅವರು ಮಾಡಿದ್ದಾರಾ? ವರುಣವನ್ನು ಗೋವಿಂದರಾಜ ನಗರದಂತೆ ಅಭಿವೃದ್ಧಿ ಮಾಡುವೆ ಎನ್ನುವುದಾದರೆ ಅಲ್ಲಿಂದ ಇಲ್ಲಿಗೇಕೆ ಓಡಿಬಂದರು? ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಯಾವುದೇ ಅಭಿವೃದ್ಧಿ ಕೆಲಸವನ್ನೂ ಅವರು ಮಾಡಿಲ್ಲ.

ಸಿದ್ದರಾಮಯ್ಯ, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ

'ನಾನು ಲಿಂಗಾಯತ ನಾಯಕ ಹೌದೊ, ಅಲ್ಲವೊ ಎಂದು ಜನ ತೀರ್ಮಾನಿಸುತ್ತಾರೆ. ಅದನ್ನು ಹೇಳಲು ಅರವಿಂದ ಬೆಲ್ಲದ ಯಾರು? ಪಕ್ಷದ ನಿರ್ದೇಶನದ ಮೇರೆಗೆ ಕೆ.ಎಸ್. ಈಶ್ವರಪ್ಪ ಪತ್ರ ಬರೆದಿದ್ದಾರೆ. ಅದನ್ನು ಗಂಭೀರವಾಗಿ ಪರಿಗಣಿಸಬೇಕಿಲ್ಲ. ಹಿಂದೆ ಆರೋಪ– ಪ್ರತ್ಯಾರೋಪ ಮಾಡಿದ್ದವರು ಜೊತೆಗೂಡಿ ಪ್ರಚಾರ ಮಾಡಲೇಬೇಕಾಗುತ್ತದೆ. ಅದಕ್ಕೆ ರಾಜಕೀಯ ಎನ್ನುವುದು. ಕಾಂಗ್ರೆಸ್‌ನವರು 15 ಜನ ಬಿಜೆಪಿಗೆ ಬಂದಾಗ, ಯಡಿಯೂರಪ್ಪ ಅವರ ಪರವಾಗಿ ಪ್ರಚಾರ ಮಾಡಲಿಲ್ಲವೇ?'

ಜಗದೀಶ ಶೆಟ್ಟರ್, ಕಾಂಗ್ರೆಸ್ ಅಭ್ಯರ್ಥಿ, ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರ



ಸಂಸದೆ ಸುಮಲತಾ ದುರಹಂಕಾರದ ಮಾತುಗಳನ್ನಾಡುತ್ತಿದ್ದಾರೆ. ಮಂಡ್ಯ ಕ್ಷೇತ್ರದಿಂದ ಸ್ಪರ್ಧೆ ಬಗ್ಗೆ ಸವಾಲು ಹಾಕುತ್ತಿದ್ದಾರೆ. ಅವರು ಮಂಡ್ಯದಿಂದ ಸ್ಪರ್ಧಿಸಿದರೆ ನಾನು ಸ್ಪರ್ಧಿಸುವುದಿಲ್ಲ. ಒಬ್ಬ ಸಾಮಾನ್ಯ ಮಹಿಳೆಯನ್ನು ಕಣಕ್ಕಿಳಿಸಿ ಗೆಲ್ಲಿಸಿಕೊಂಡು ಬರುತ್ತೇನೆ

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

2018 ಮತ್ತು 2023ರಲ್ಲಿ ಕೊಪ್ಪಳ ವಿಧಾನಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ತಪ್ಪಿಸಿದ ಸಂಸದ ಸಂಗಣ್ಣ ಕರಡಿ ಜೊತೆ ಮಾತನಾಡಲು ಈಗ ಏನೂ ಉಳಿದಿಲ್ಲ. ಆ ಹಂತ ದಾಟಿ ಹೋಗಿದೆ. ಅವರಿಗೆ ನನ್ನೊಂದಿಗೆ ಮಾತನಾಡುವ ಯಾವ ನೈತಿಕತೆಯೂ ಇಲ್ಲ. ನನ್ನ ಜೀವನದಲ್ಲಿ ಅವರಿಗೆ ತಂದೆ ಸಮಾನ ಗೌರವ ಹಾಗೂ ರಾಜಕೀಯ ಗುರು ಎಂಬ ಸ್ಥಾನಮಾನ ಕೊಟ್ಟಿದ್ದೆ. ಆದರೆ, ಬ್ಲ್ಯಾಕ್‌ಮೇಲ್ ತಂತ್ರ ಮಾಡಿ ನನಗೆ ಟಿಕೆಟ್ ತಪ್ಪಿಸಿದರು. ಚುನಾವಣೆಯಲ್ಲಿ ತಿರುಗೇಟು ನೀಡುವೆ.

ಸಿ.ವಿ. ಚಂದ್ರಶೇಖರ್, ಜೆಡಿಎಸ್ ಅಭ್ಯರ್ಥಿ, ಕೊಪ್ಪಳ

ಪ್ರಜಾ ಪತ್ರ

ಯೋಗ್ಯ ಅಭ್ಯರ್ಥಿ ಆಯ್ಕೆ ಮಾಡಿ

ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಸಂವಿಧಾನದ ಬಗ್ಗೆ ತಿಳಿವಳಿಕೆ ಇರಬೇಕು. ಮತದಾರರು ಸಹ ಪ್ರಜ್ಞಾವಂತ ಜನನಾಯಕನನ್ನು ಆಯ್ಕೆ ಮಾಡಬೇಕು. ಪ್ರತಿಯೊಬ್ಬರು ಕಡ್ಡಾಯವಾಗಿ ಮತದಾನ ಮಾಡಬೇಕು. ದೇಶವನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸಲು ಅಭ್ಯರ್ಥಿಗೆ ಆದ್ಯತೆ ನೀಡಬೇಕು. ನಿರುದ್ಯೋಗ ಹೋಗಲಾಡಿಸುವ, ನಿಸ್ವಾರ್ಥ ಸೇವೆ ಸಲ್ಲಿಸುವ, ಉಚಿತ ಶಿಕ್ಷಣ, ಆರೋಗ್ಯ ಸೇರಿ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಆದ್ಯತೆ ನೀಡುವ ಮತ್ತು ಜನರ ಕಷ್ಟಗಳಿಗೆ ಸ್ಪಂದಿಸುವ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು.

ಮಂಜುಳಾ ಸಿ., ಹಗರಿಬೊಮ್ಮನಹಳ್ಳಿ, ವಿಜಯನಗರ

ಅಭಿವೃದ್ಧಿ ಆಧರಿಸಿ ಮತ ನೀಡಿ

ರಾಜ್ಯದಲ್ಲಿ ಚುನಾವಣಾ ಪ್ರಕ್ರಿಯೆ ರಂಗೇರಿದ್ದು, ರಾಜಕೀಯ ಪಕ್ಷಗಳು ಅಧಿಕಾರಕ್ಕಾಗಿ ಹರಸಾಹಸ ಮಾಡುತ್ತಿವೆ. ಪ್ರತಿಯೊಂದು ಪಕ್ಷಗಳು ತನ್ನದೇ ಆದ ಪ್ರಚಾರ ತಂತ್ರಗಾರಿಕೆಯಲ್ಲಿ ತೊಡಗಿವೆ. ಪಕ್ಷಗಳ ಪ್ರಬಲ ನಾಯಕರು, ಸಿನಿಮಾ ನಟರು ಸೇರಿ ವಿವಿಧ ಕ್ಷೇತ್ರದ ಸಾಧಕರನ್ನು ಕರೆಸಿ ಪ್ರಚಾರದಲ್ಲಿ ತೊಡಗಿದ್ದಾರೆ. ಮತ ಕೇಳಲು ಬರುವ ಮುಖಂಡರು ಮಾಡಿರುವ ಅಭಿವೃದ್ಧಿಯ ಮಾನದಂಡವನ್ನು ಆಧರಿಸಿ ಈ ಬಾರಿ ಅವರನ್ನು ಆಯ್ಕೆ ಮಾಡಬೇಕು. ಪ್ರಜಾಪ್ರಭುತ್ವದ ಲಕ್ಷಣವೇ ಕಲ್ಯಾಣ ರಾಜ್ಯ. ರಾಜಕೀಯ ಪಕ್ಷಗಳು ಅಭಿವೃದ್ಧಿಯನ್ನು ಮುಂದಿಟ್ಟು ಮತವನ್ನು ಕೇಳುವುದು ಪ್ರಜಾಪ್ರಭುತ್ವದ ಶ್ರೀಮಂತಿಕೆಯನ್ನು ಎತ್ತಿಹಿಡಿಯುತ್ತದೆ. ಮೂಲ ಸೌಕರ್ಯಗಳು, ಶೈಕ್ಷಣಿಕ ಪ್ರಗತಿ ಸೇರಿ ಅಭಿವೃದ್ಧಿಯ ಅಂಶಗಳನ್ನು ಜನರ ಮುಂದಿಡಬೇಕಿದೆ. ಹಿಂದಿನ ಪ್ರಣಾಳಿಕೆಯ ಎಷ್ಟು ಅಂಶಗಳನ್ನು ಈಡೇರಿಸಿದ್ದಾರೆ. ಅವು ಎಷ್ಟರ ಮಟ್ಟಿಗೆ ಜನರಿಗೆ ತಲುಪಿವೆ ಎನ್ನುವ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಮತದಾನ ಮಾಡಬೇಕಾಗಿದೆ.

ಸಿದ್ದರಾಜು ಕೆ.ಎಸ್., ಮೈಸೂರು

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಮತದಾರರಿಗೆ ನೀಡಿದ್ದ ಸ್ಟೌ ಸಿಡಿತ

ಪ್ರಜಾವಾಣಿ ವಾರ್ತೆ

ಮಂಚೇನಹಳ್ಳಿ (ಚಿಕ್ಕಬಳ್ಳಾಪುರ): ರಾಜಕೀಯ ಪಕ್ಷದ ಅಭ್ಯರ್ಥಿಯೊಬ್ಬರು ಮತದಾರರಿಗೆ ಹಂಚಿದ್ದ ಗ್ಯಾಸ್ ಸ್ಟೌ ಮಂಗಳವಾರ ತಾಲ್ಲೂಕಿನ ಪುರ ಗ್ರಾಮದಲ್ಲಿ ಸಿಡಿದಿದೆ.

ಮಹಿಳಾ ಮತದಾರರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಚುನಾವಣೆ ಘೋಷಣೆಗೂ ಮುನ್ನವೇ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ಮನೆ, ಮನೆಗೂ ಗ್ಯಾಸ್ ಸ್ಟೌ ಹಂಚಲಾಗಿತ್ತು.

ಪುರ ಗ್ರಾಮದ ವೆಂಕಟೇಶ್ ಎಂಬುವರ ಪತ್ನಿ ಸ್ಟೌ ಮೇಲೆ ಬೇಳೆ ಬೇಯಿಸಲು ಇಟ್ಟು ಹೊರಗಡೆ ಕೆಲಸದಲ್ಲಿ ನಿರತರಾಗಿದ್ದರು. ಕೆಲ ಸಮಯದ ಬಳಿಕ ಅಡುಗೆ ಮನೆಯಿಂದ ಸ್ಫೋಟದ ಸದ್ದು ಕೇಳಿದೆ. ಒಳಹೋಗಿ ನೋಡಿದಾಗ ಸ್ಟೌ ಸಿಡಿದು ಛಿದ್ರಗೊಂಡಿತ್ತು. ಅದರ ಮೇಲೆ ಇಟ್ಟಿದ್ದ ಕುಕ್ಕರ್ ಕೆಳಗೆ ಬಿದ್ದಿತ್ತು. ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಗ್ಯಾಸ್ ಸ್ಟೌ ಸಿಡಿದಿರುವುದು

'ನೀವು ಕೊಟ್ಟ ಉಡುಗೊರೆಯಾಗಿ ಕೊಟ್ಟ ಕಳಪೆ ಸ್ಟೌನಿಂದ ಪ್ರಾಣಕ್ಕೆ ತೊಂದರೆಯಾಗಿದ್ದರೆ ಯಾರು ಜವಾಬ್ದಾರಿ' ಎಂದು ವೆಂಕಟೇಶ್ ಸಾಮಾಜಿಕ ಜಾಲತಾಣದಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸ್ಟೌ ಸ್ಫೋಟಗೊಂಡ ಬಳಿಕ ಅದರ ಚಿತ್ರ ಮತ್ತು ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ತಕ್ಷಣ ಪಕ್ಷದ ಸ್ಥಳೀಯ ಮುಖಂಡರು ಮತ್ತು ಅಭ್ಯರ್ಥಿಯ ಫೌಂಡೇಶನ್ ಕಡೆಯುವರು ಸ್ಫೋಟವಾಗಿದ್ದ ಸ್ಟೌ ಕೊಂಡೊಯ್ದಿದ್ದಾರೆ.

ಈ ಘಟನೆಯ ನಂತರ ಭಯಗೊಂಡಿರುವ ಗ್ರಾಮದ ಮಹಿಳೆಯರು ತಮ್ಮ ಮನೆಗಳಿಗೂ ಉಡುಗೊರೆಯಾಗಿ ನೀಡಿದ್ದ ಸ್ಟೌ ಬಳಕೆಗೆ ಹಿಂಜರಿಯುತ್ತಿದ್ದಾರೆ. ಕಳಪೆ ಗುಣಮಟ್ಟದ ಸ್ಟೌ ಕೊಟ್ಟ ಮುಖಂಡರ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಕೆಲ ದಿನಗಳ ಹಿಂದೆಯೂ ಇದೇ ಅಭ್ಯರ್ಥಿ ನೀಡಿದ್ದ ಸ್ಟೌ ಸಿಡಿದು ಮಹಿಳೆಯ ಕೈ ಸುಟ್ಟಿರುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

₹6.90ಕೋಟಿ ಮೌಲ್ಯದ ಆಭರಣ ವಶ

ಹಾವೇರಿ: ನಗರದ ಹೊರವಲಯದಲ್ಲಿರುವ ಅಜ್ಜಯ್ಯನ ಗುಡಿ ಚೆಕ್ ಪೋಸ್ಟ್‌ನಲ್ಲಿ ಮಂಗಳವಾರ ದಾಖಲೆ ಇಲ್ಲದೆ ಸಾಗಿಸುತ್ತಿದ್ದ ಕೋಟ್ಯಂತರ ಮೌಲ್ಯದ 11 ಕೆ.ಜಿ.ಯಷ್ಟು ಚಿನ್ನ, 70 ಕೆ.ಜಿ.ಯಷ್ಟು ಬೆಳ್ಳಿಯ ಆಭರಣಗಳನ್ನ ಚುನಾವಣಾ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಹಾವೇರಿ ಎಸ್.ಎಸ್.ಟಿ ತಂಡದ ಅಧಿಕಾರಿಗಳು ₹6 ಕೋಟಿ 90 ಲಕ್ಷ ಮೌಲ್ಯದ ಚಿನ್ನಾಭರಣಗಳು ಎಂದು ಅಂದಾಜಿಸಿದ್ದಾರೆ.

ಹುಬ್ಬಳ್ಳಿಯಿಂದ ಹಾವೇರಿ ಮತ್ತು ದಾವಣಗೆರೆಯ ಚಿನ್ನದ ಅಂಗಡಿಗಳಿಗೆ ಈ ಆಭರಣಗಳನ್ನು ಸಾಗಿಸಲಾಗುತ್ತಿತ್ತು. ಅದನ್ನು ಜಿ.ಪಂ ಸಿಇಒ ನೇತೃತ್ವದ ಸಮಿತಿಗೆ ವರ್ಗಾಯಿಸಲಾಗಿದೆ.

ಸೆಲೆಬ್ರಿಟಿ ಮಾತು

ವಿವೇಚನೆಯಿಂದ ಮತ ಚಲಾಯಿಸಿ

ಡಿ. ವೀರೇಂದ್ರ ಹೆಗ್ಗಡೆ, ಧರ್ಮಾಧಿಕಾರಿ, ಧರ್ಮಸ್ಥಳ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳಾಗಿದ್ದು, ಹೆಚ್ಚಿನ ಹಕ್ಕು ಮತ್ತು ಕರ್ತವ್ಯವನ್ನು ಹೊಂದಿರುತ್ತಾರೆ. ಮತದಾನ ಮಾಡುವುದು ಪ್ರತಿ ನಾಗರಿಕನ ಪವಿತ್ರ ಹಕ್ಕು ಮತ್ತು ಕರ್ತವ್ಯ. ಯಾವುದೇ ಆಮಿಷಕ್ಕೊಳಗಾಗದೆ ಎಲ್ಲರೂ ಮತದಾನ ಮಾಡಬೇಕು. ಕೆಲವರು ಉದಾಸೀನ ಮಾಡಿ ಅಥವಾ ಯಾವುದೋ ನೆಪ ಒಡ್ಡಿ ಮತದಾನ ಮಾಡದಿರುವುದು ಕಂಡು ಬರುತ್ತದೆ. ಎಲ್ಲರೂ ವಿವೇಚನೆಯಿಂದ ಅರ್ಹ ಅಭ್ಯರ್ಥಿಯನ್ನು ಆರಿಸುವ ಮೂಲಕ ಉತ್ತಮ ನಾಯಕತ್ವದೊಂದಿಗೆ ಉಜ್ವಲ ಭವಿಷ್ಯವನ್ನು ರೂಪಿಸುವಂತಾಗಲಿ.

ಹುಲಿವೇಷ... ಮಂಗಳೂರು ಉತ್ತರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ವೈ. ಭರತ್ ಶೆಟ್ಟಿ ಅವರು ನಾಮಪತ್ರ ಸಲ್ಲಿಸುವುದಕ್ಕೆ ಮುನ್ನ ಮಂಗಳೂರಿನ ಕಾವೂರಿನಲ್ಲಿ ನಡೆಸಿದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಹುಲಿವೇಷಧಾರಿಗಳು. ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ಕ್ಷೇತ್ರದ ಕೂಗು

- **ರಾಯಚೂರು ನಗರ**
- **ಶಾಸಕ: ಡಾ.ಶಿವರಾಜ ಪಾಟೀಲ** (ಬಿಜೆಪಿ)
- ರಾಯಚೂರು ನಗರದಲ್ಲಿ 24/7 ಶುದ್ಧ ಕುಡಿಯುವ ನೀರು ಪೂರೈಸುವ ಯೋಜನೆ ಜಾರಿಯಾಗಿಲ್ಲ. ಅರ್ಧಕ್ಕೆ ನಿಂತಿರುವ ಒಳಚರಂಡಿ ಕಾಮಗಾರಿ ಪೂರ್ಣಗೊಂಡಿಲ್ಲ. ಮಾವಿನಕೆರೆಯನ್ನು ಅಭಿವೃದ್ಧಿಪಡಿಸಿ, ಪ್ರವಾಸಿ ತಾಣ ಆಗಿಸುವ ಕಾರ್ಯವೂ ನಡೆದಿಲ್ಲ. ಧೂಳಿನ ಸಮಸ್ಯೆ ಪೂರ್ಣಪ್ರಮಾಣದಲ್ಲಿ ನಿವಾರಣೆಯಾಗಿಲ್ಲ.

- **ರಾಯಚೂರು ಗ್ರಾಮೀಣ**
- **ಶಾಸಕ: ಬಸನಗೌಡ ದದ್ದಲ** (ಕಾಂಗ್ರೆಸ್)
- ಪ್ರತಿ ಗ್ರಾಮದಲ್ಲೂ ಕುಡಿಯುವ ನೀರಿನ ಸಮಸ್ಯೆಯಿದ್ದು, ಈವರೆಗೆ ಈಡೇರಿಲ್ಲ. ನೀರಿನ ಬವಣೆ ತಪ್ಪಿಸಲು ಕ್ರಮ ಕೈಗೊಳ್ಳಲಾಗಿಲ್ಲ. ಉತ್ತಮ ಗುಣಮಟ್ಟದ ರಸ್ತೆಗಳು ನಿರ್ಮಾಣವಾಗಿಲ್ಲ. ಶುದ್ಧ ಕುಡಿಯುವ ನೀರಿನ ಘಟಕಗಳ ಕೊರತೆ ಇದೆ. ಹೈನುಗಾರಿಕೆ ಉತ್ತೇಜಿಸಲು ಬಡವರಿಗೆ ಎಮ್ಮೆಗಳನ್ನು ಸಹಾಯಧನದಲ್ಲಿ ಒದಗಿಸುವ ಕಾರ್ಯ ನಡೆದಿಲ್ಲ.

- **ಲಿಂಗಸುಗೂರು**
- **ಶಾಸಕ: ಡಿ.ಎಚ್.ಹೂಲಗೇರಿ** (ಕಾಂಗ್ರೆಸ್)
- ಏತ ನೀರಾವರಿ ಯೋಜನೆಗಳ ಪುನಶ್ಚೇತನಗೊಂಡಿಲ್ಲ. ಗ್ರಾಮೀಣ, ತಾಂಡಾ, ದೊಡ್ಡಿ, ಹಟ್ಟಿ ಪ್ರದೇಶಗಳಿಗೆ ಶುದ್ಧ ಕುಡಿಯುವ ನೀರು ಸಿಗುವುದಿಲ್ಲ. ಜಲದುರ್ಗ, ಮುದಗಲ್ಲ ಕೋಟೆ ಉತ್ಸವ ಎಂಬುದು ಭರವಸೆಗೆ ಸೀಮಿತ. ಗದಗ-ವಾಡಿ ರೈಲ್ವೆ ಮಾರ್ಗ, ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಗೆ ಆದ್ಯತೆ ಸಿಕ್ಕಿಲ್ಲ. ಪ್ರವಾಸೋದ್ಯಮ ದೃಷ್ಟಿಯಿಂದಲೂ ನಿರ್ಲಕ್ಷ್ಯ

- **ದೇವದುರ್ಗ**
- **ಶಾಸಕ: ಕೆ.ಶಿವನಗೌಡ ನಾಯಕ** (ಬಿಜೆಪಿ)
- ದೇವದುರ್ಗ ತಾಲ್ಲೂಕಿನಲ್ಲಿ ಸಮಗ್ರ ನೀರಾವರಿ ವ್ಯವಸ್ಥೆ ಜಾರಿಗೊಂಡಿಲ್ಲ. ಎಂಜಿನಿಯರಿಂಗ್ ಕಾಲೇಜು ಸ್ಥಾಪನೆಯಾಗಿಲ್ಲ. ತಾಲ್ಲೂಕಿನ ರೈತರಿಗೆ 3 ಫೇಸ್ ವಿದ್ಯುತ್‌ನ್ನು 24 ಗಂಟೆಯೂ ಪೂರೈಸುವ ಭರವಸೆ ಈಡೇರಿಲ್ಲ. ನಾಲ್ಕು ಹೋಬಳಿ ಮಟ್ಟದಲ್ಲಿ ಪದವಿ ಕಾಲೇಜುಗಳು ಆರಂಭವಾಗಿಲ್ಲ. ಕುಡಿಯುವ ನೀರು ಒದಗಿಸಲು ಹೊಸ ಕೆರೆಗಳ ನಿರ್ಮಾಣ ಕಾರ್ಯ ನಡೆದಿಲ್ಲ.

- **ಮಾನ್ವಿ**
- **ಶಾಸಕ: ರಾಜಾ ವೆಂಕಟಪ್ಪ ನಾಯಕ** (ಜೆಡಿಎಸ್)
- ಮಾನ್ವಿ ಪಟ್ಟಣದಲ್ಲಿ ಮಿನಿವಿಧಾನಸೌಧ ನಿರ್ಮಾಣ ಕಾರ್ಯ ಮತ್ತು ಶಾಶ್ವತ ಕುಡಿಯುವ ನೀರಿನ ಯೋಜನೆ ಪೂರ್ಣಗೊಂಡಿಲ್ಲ. ಡಿಪ್ಲೊಮಾ ಕಾಲೇಜು ಹಾಗೂ ಮಹಿಳಾ ಸರ್ಕಾರಿ ಪದವಿ ಕಾಲೇಜು ಮಂಜೂರು ಆಗಿಲ್ಲ. ಮುಷ್ಟೂರು ಹಾಗೂ ದೋತರಬಂಡಿ ಹಳ್ಳದ ಸೇತುವೆ ನಿರ್ಮಾಣ ಕಾಮಗಾರಿ ಕೈಗೊಂಡಿಲ್ಲ.



- **ಸಿಂಧನೂರು**
- **ಶಾಸಕ: ವೆಂಕಟರಾವ್ ನಾಡಗೌಡ** (ಜೆಡಿಎಸ್)
- ಸಿಂಧನೂರು ನಗರದಲ್ಲಿ ಸರ್ಕಾರಿ ವೃತ್ತಿಪರ ಕೋರ್ಸ್ ಕಾಲೇಜುಗಳು ಸ್ಥಾಪನೆಯಾಗಿಲ್ಲ. ಒಳಚರಂಡಿ ಯೋಜನೆ ಹಾಗೂ 24/7 ನಿರಂತರ ನೀರು ಯೋಜನೆ ಪೂರ್ಣಗೊಂಡಿಲ್ಲ. ಸಾರ್ವಜನಿಕ ಉದ್ಯಾನ ಮತ್ತು ಬೈಪಾಸ್ ರಸ್ತೆ ನಿರ್ಮಿಸಿಲ್ಲ. ರೈಲ್ವೆ ಯೋಜನೆ ಪೂರ್ಣಗೊಳಿಸಿಲ್ಲ.

- **ಮಸ್ಕಿ**
- **ಶಾಸಕ: ಬಸನಗೌಡ ತುರ್ವಿಹಾಳ** (ಕಾಂಗ್ರೆಸ್)
- ಮಸ್ಕಿ ತಾಲ್ಲೂಕು ಆಗಿ 5 ವರ್ಷವಾದರೂ ಪೂರ್ಣ-ಪ್ರಮಾಣದ ತಾಲ್ಲೂಕು ಕಚೇರಿಗಳು ಅರಂಭವಾಗಿಲ್ಲ. ರಸ್ತೆ, ನೀರು ಮತ್ತು ಮೂಲಸೌಲಭ್ಯ ಪೂರೈಕೆ ಪೂರ್ಣಪ್ರಮಾಣದಲ್ಲಿ ಈಡೇರಿಲ್ಲ.



❦ ಸುಭಾಷಿತ ❦

ಎಲ್ಲಿ ನಿಮಗೆ ಕಷ್ಟ ಕಾಣುತ್ತದೋ ಅಲ್ಲಿ ನನಗೆ ಅವಕಾಶ ಕಾಣುತ್ತದೆ.

–ಆಲ್ಬರ್ಟ್ ಐನ್‌ಸ್ಟೀನ್

ಕುಡಿಯುವ ನೀರಿನ ಬವಣೆ ನಿವಾರಣೆಗೆ ಸಿಗಲಿ ಆದ್ಯತೆ

ರಾಜ್ಯದಲ್ಲಿ ಬೇಸಿಗೆಯ ಧಗೆ ಈ ಸಲ ವಿಪರೀತಕ್ಕೆ ಹೋದಂತೆ ಭಾಸವಾಗುತ್ತಿದೆ. ಕುಡಿಯುವ ನೀರಿನ ಕೊರತೆಯ ಜೊತೆಗೆ ಬಿಸಿಗಾಳಿಯ ಅಟಾಟೋಪವೂ ಹೆಚ್ಚಾಗಿದೆ. ಮಧ್ಯಾಹ್ನದ ಕೆಂಡದಂತಹ ಬಿಸಿಲಿಗೆ ಬಯಲುಸೀಮೆ, ಮಲೆನಾಡು ಎನ್ನುವ ಭೇದವಿಲ್ಲದೆ ಜನ ತತ್ತರಿಸಿ ಹೋಗಿದ್ದಾರೆ. ಅದರಲ್ಲೂ ರಾಜ್ಯದ 14 ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ ಎಂದೂ ವರದಿಯಾಗಿದೆ. ಕಲ್ಯಾಣ ಕರ್ನಾಟಕ ಹಾಗೂ ಬಯಲುಸೀಮೆಯ ಬಹುತೇಕ ಜಲಮೂಲಗಳು ಬತ್ತಿ ಹೋಗಿದ್ದರಿಂದ ಕುಡಿಯುವ ನೀರಿಗೆ ತತ್ವಾರ ಎದ್ದಿದೆ. ನೀರಿಗಾಗಿ ಜನಸಾಮಾನ್ಯರು ತಾಪತ್ರಯ ಅನುಭವಿಸುತ್ತಿರುವ ಈ ಹಂತದಲ್ಲಿ ಇಡೀ ಆಡಳಿತ ವ್ಯವಸ್ಥೆಯು ತನ್ನೆಲ್ಲ ಗಮನವನ್ನು ಚುನಾವಣೆಯತ್ತ ಕೇಂದ್ರೀಕರಿಸಿದೆ. ಸಂಶಯವೇ ಇಲ್ಲ, ಚುನಾವಣೆಯಂತಹ ಮಹತ್ತರ ಕಾರ್ಯದಲ್ಲಿ ಆಡಳಿತ ಯಂತ್ರ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದು ಅನಿವಾರ್ಯ ಕೂಡ. ಆದರೆ, ಆ ಭರಾಟೆಯಲ್ಲಿ ಕುಡಿಯುವ ನೀರಿನ ಕೊರತೆಯಂತಹ ಸಮಸ್ಯೆಯನ್ನು ಕಡೆಗಣಿಸಲು ಆಗದು. ಕಲ್ಯಾಣ ಕರ್ನಾಟಕದ ಕೆರೆಗಳೆಲ್ಲ ಬರಿದಾಗಿವೆ. ಮಲೆನಾಡಿನ ನದಿಗಳೂ ತಳಕಂಡಿವೆ. ಹಲವೆಡೆ ವಾರಕ್ಕೊಮ್ಮೆ ಮಾತ್ರ ನೀರು ಪೂರೈಕೆ ಮಾಡಲಾಗುತ್ತಿದೆ. ನಗರ ಪ್ರದೇಶಗಳಲ್ಲಿ ಟ್ಯಾಂಕರ್ ನೀರು ದುಬಾರಿ ಬೆಲೆಗೆ ಬಿಕರಿಯಾಗುತ್ತಿದೆ. ರಾಜ್ಯದ ನೂರಾರು ಗ್ರಾಮಗಳ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಬರ ಎದುರಾಗಿರುವುದು ಪರಿಸ್ಥಿತಿಯ ಗಾಂಭೀರ್ಯವನ್ನು ಸೂಚಿಸುತ್ತದೆ. ಜಾನುವಾರುಗಳಿಗೆ ಮೇವಿನ ಕೊರತೆಯೂ ತೀವ್ರವಾಗಿ ಬಾಧಿಸುತ್ತಿರುವ ಕುರಿತು ವರದಿಗಳಿವೆ. ಎಲ್ಲೆಲ್ಲಿ ಅಗತ್ಯವೋ ಅಲ್ಲಿ ಗೋಶಾಲೆಗಳನ್ನು ತೆರೆಯುವ ಕೆಲಸವೂ ಆಗಿಲ್ಲ ಎನ್ನುವುದು ರೈತರ ಅಳಲು. ನೀರು, ಮೇವಿಲ್ಲದೆ ಕಟ್ಟಿಹಾಕಿದ ಗೂಟದ ಸುತ್ತ ಗಿರಕಿ ಹೊಡೆಯುವ ದನಗಳ ಸ್ಥಿತಿ ನೆನಪಿಸಿಕೊಂಡರೆ ಕರುಳು ಚುರ್ ಎನ್ನುತ್ತದೆ. ಯಾವ, ಯಾವ ಪ್ರದೇಶದಲ್ಲಿ ನೀರಿನ ಕೊರತೆ ಇದೆ ಎಂಬ ಮಾಹಿತಿಯು ಕಂದಾಯ ಇಲಾಖೆಯ ವಿಪತ್ತು ನಿರ್ವಹಣಾ ಕೋಶದ ಬಳಿ ಇದ್ದೇ ಇರುತ್ತದೆ. ಅದಕ್ಕೆ ತಕ್ಕಂತೆ ಮುಂಚಿತವಾಗಿ ಕ್ರಿಯಾಯೋಜನೆಯನ್ನು ರೂಪಿಸದೆ ಕಾಲಹರಣ ಮಾಡಿರುವುದು ಪ್ರಮಾದ. ನೀರಿನ ಕೊರತೆಯಂತಹ ಸಮಸ್ಯೆಗಳನ್ನು ಬೇಗ ಪರಿಹರಿಸದೆ ಚುನಾವಣೆ ಮುಗಿಯಲಿ ಎಂದು ಮುಂದೆ ಹಾಕಲು ಸಾಧ್ಯವೇ ಇಲ್ಲ.

ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಅಧಿಕಾರಿಗಳು ತಕ್ಷಣ ಸ್ಪಂದಿಸಬೇಕು. ಚುನಾವಣೆ ಕೆಲಸದ ನೆಪದಡಿ ಅಲಕ್ಷ್ಯ ಮಾಡುವುದು ಅಕ್ಷಮ್ಯ

ನಮ್ಮ ರಾಜ್ಯವು ಕಳೆದ ಮಳೆಗಾಲದಲ್ಲಿ ಅತಿವೃಷ್ಟಿಗೆ ಸಾಕ್ಷಿಯಾದರೂ ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಬರ ಉಂಟಾಗಿರುವುದು ವೈರುಧ್ಯ. ಜಲಾಶಯಗಳಲ್ಲಿ ತಕ್ಕಮಟ್ಟಿಗೆ ನೀರಿನ ಲಭ್ಯತೆ ಉಂಟಾದರೂ ಅದರಿಂದ ಮೈಮರೆಯುವ ಹಾಗಿಲ್ಲ ಮತ್ತು ಕೊರತೆಯನ್ನೆಲ್ಲ ಅದರಿಂದ ನಿವಾರಿಸಲೂ ಸಾಧ್ಯವಿಲ್ಲ. ಬೇಸಿಗೆ ಪರಿಸ್ಥಿತಿಯನ್ನು ನಿಭಾಯಿಸಲು ಪ್ರತಿಯೊಂದು ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯಪಡೆಗಳನ್ನು ರಚಿಸಲಾಗಿರುತ್ತದೆ. ಮಳೆಗಾಲ ಶುರುವಾಗುವವರೆಗೆ ಎಲ್ಲೆಲ್ಲಿ ನೀರಿನ ಕೊರತೆ ಇದೆಯೋ ಅಲ್ಲಲ್ಲಿ ಸಮರ್ಪಕವಾಗಿ ಪೂರೈಕೆ ಮಾಡಬೇಕಾದ ಜವಾಬ್ದಾರಿಯನ್ನು ಈ ಕಾರ್ಯಪಡೆಗಳು ಹೊತ್ತಿರುತ್ತವೆ. ಇಂತಹ ಕಾರ್ಯಪಡೆಗಳು ಈ ಸಲ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬ ದೂರುಗಳಿವೆ. ಈ ವಿಷಯದಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮುತುವರ್ಜಿ ವಹಿಸಿ, ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಳ್ಳಬೇಕು. ಚುನಾವಣೆ ಮುಖ್ಯವಾದರೂ ಜನರಿಗೆ ಜೀವಜಲ ಒದಗಿಸುವುದು ಅಷ್ಟೇ ಮುಖ್ಯ ಎನ್ನುವುದನ್ನು ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಡಬೇಕು. ದಶಕಗಳಿಂದ ನೂರಾರು ಗ್ರಾಮಗಳಿಗೆ ಪ್ರತೀ ಬೇಸಿಗೆಯಲ್ಲಿ ಟ್ಯಾಂಕರ್ ಮೂಲಕವೇ ನೀರು ಪೂರೈಸುತ್ತಿದ್ದರೂ ಅದಕ್ಕೊಂದು ಶಾಶ್ವತವಾದ ವ್ಯವಸ್ಥೆ ಮಾಡಬೇಕು ಎಂಬ ದೂರಾಲೋಚನೆಯು ನಮ್ಮ ಆಡಳಿತ ವ್ಯವಸ್ಥೆಗೆ ಇದುವರೆಗೆ ಹೊಳೆಯದಿರುವುದು ದುರ್ದೈವ. ಮಹತ್ವಾಕಾಂಕ್ಷೆಯ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ರಾಜ್ಯದಾದ್ಯಂತ ಅನುಷ್ಠಾನಕ್ಕೆ ಬಂದರೂ ಯೋಜನೆಯ ವ್ಯಾಪ್ತಿಗೆ ಒಳಪಟ್ಟ ಬಹುತೇಕ ಗ್ರಾಮಗಳು ನೀರಿನ ಸಮಸ್ಯೆಯಿಂದ ಹೊರತಾಗಿಲ್ಲ ಎನ್ನುವುದು ಕಟುವಾಸ್ತವ. ನಮ್ಮ ಯೋಜನೆಗಳು ಹೇಗೆ ಅನುಷ್ಠಾನಗೊಳ್ಳುತ್ತವೆ ಎಂಬುದಕ್ಕೂ ಈಗಿನ ಪರಿಸ್ಥಿತಿ ಕನ್ನಡಿ ಹಿಡಿಯುತ್ತದೆ. ಬೇಸಿಗೆಯ ನೀರು, ಮೇವಿನ ಕೊರತೆಯನ್ನು ಆ ಋತುವಿನ ತಾತ್ಕಾಲಿಕ ಸಮಸ್ಯೆ ಎಂದುಕೊಂಡು, ತಾತ್ಕಾಲಿಕ ಪರಿಹಾರಕ್ಕೆ ಮಾತ್ರ ಮೊರೆಹೋಗುತ್ತಿರುವುದು ಸಮಸ್ಯೆ ಹಾಗೇ ಉಳಿದುಕೊಂಡು ಬರಲು ಕಾರಣವಾಗಿದೆ. ಗ್ರಾಮಗಳು ಮಾತ್ರವಲ್ಲ, ಬೆಂಗಳೂರು ಸೇರಿದಂತೆ ನಗರ ಪ್ರದೇಶಗಳಲ್ಲೂ ಕುಡಿಯುವ ನೀರಿನ ಕೊರತೆ ಇದೆ. ಮಳೆನೀರು ಸಂಗ್ರಹ, ಸಂಸ್ಕರಿತ ತ್ಯಾಜ್ಯ ನೀರಿನ ಮರುಬಳಕೆಯಂತಹ ಕ್ರಮಗಳ ಕಡೆಗೂ ಗಮನಹರಿಸಬೇಕಿದೆ. ಹಾಗೆಯೇ ಗ್ರಾಮೀಣ ಪ್ರದೇಶಗಳಲ್ಲಿ ಶಾಶ್ವತ ನೀರು ಪೂರೈಕೆ ಯೋಜನೆ ಅನುಷ್ಠಾನಕ್ಕೆ ತರುವುದು ಆದ್ಯತೆಯಾಗಬೇಕಿದೆ. ಆದರೆ, ಇಂತಹ ಆದ್ಯತೆಗಳು ಸರ್ಕಾರದ ಮಹತ್ವದ ಕೆಲಸಗಳ ಪಟ್ಟಿಯಿಂದ ಜಾರಿ ನೇಪಥ್ಯಕ್ಕೆ ಸರಿಯುತ್ತಿರುವುದು ದುರದೃಷ್ಟಕರ.

ರಾಹುಲ್ ಅವರು ಪಕ್ಷದ ಶಕ್ತಿ, ದೌರ್ಬಲ್ಯಗಳನ್ನು ಪ್ರಾಮಾಣಿಕವಾಗಿ ವಿಶ್ಲೇಷಿಸಬೇಕು

ಅಹಂ ಬದಿಗಿಡಿ, ವಾಸ್ತವ ಎದುರಿಸಿ

ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ರಾಹುಲ್ ಗಾಂಧಿ ಅವರು ವಂಶಪಾರಂಪರ್ಯ ರಾಜಕಾರಣದ ಪಕ್ಷವೊಂದರ ಪ್ರಮುಖ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ. ಆದರೆ ತಾವು ವಂಶಪಾರಂಪರ್ಯ ರಾಜಕಾರಣದಲ್ಲಿ ನಂಬಿಕೆ ಇರಿಸಿದವರಲ್ಲ, ತಾವು ಪ್ರಜಾತಂತ್ರವಾದಿ ಎಂದು ತೋರಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. 'ರಾಜಕಾರಣದಲ್ಲಿ ರಾಹುಲ್ ಅವರಿಗೆ ಗಂಭೀರ ಆಸಕ್ತಿಯಿಲ್ಲ' ಎಂಬ ಹಣೆಪಟ್ಟಿಯನ್ನು ಪೂರ್ತಿಯಾಗಿ ಅಳಿಸಿಹಾಕಲು ಅವರಿಗೆ ಆಗುತ್ತಿಲ್ಲ. ಬಿಜೆಪಿಯು ಈ ಬಗೆಯ ಚಿತ್ರಣವನ್ನು ಕಟ್ಟಿಕೊಟ್ಟಿದೆ ಮತ್ತು ಅದು ರಾಹುಲ್ ಅವರಿಗೆ ಬಲವಾಗಿ ಅಂಟಿಕೊಂಡಿದೆ.

ರಾಹುಲ್ ಅವರು ತಮ್ಮನ್ನು ಯುವ ಬಂಡಾಯಗಾರ ಎಂಬುದಾಗಿ ಭಾವಿಸಿದ್ದಾರೆ. ಆದರೆ ರಾಹುಲ್ ಅವರು ಯಾವ ಗುರಿಯೂ ಇಲ್ಲದ ಬಂಡಾಯಗಾರ ಎಂದು ಹೇಳುವುದಿದೆ. ರಾಹುಲ್ ಅವರು ನಿರ್ದಿಷ್ಟವಾಗಿ ಪ್ರತಿಪಾದಿಸುವುದು ಏನನ್ನು ಎಂಬುದನ್ನು ಗುರುತಿಸುವುದು ಕಷ್ಟ. ನರೇಂದ್ರ ಮೋದಿ ಅವರನ್ನು ಗುರಿಯಾಗಿಸಿಕೊಂಡು ಟೀಕೆ ಮಾಡುತ್ತಿದ್ದರೆ ಸಾಕಾಗುವುದಿಲ್ಲ. ರಾಹುಲ್ ಅವರು ಭಾರತದ ಕುರಿತು ತಮ್ಮದೇ ಆದ ಸ್ಪಷ್ಟ, ದೂರದೃಷ್ಟಿಯ ಚಿತ್ರಣವೊಂದನ್ನು ನೀಡಬೇಕು– ಅರ್ಥ ವ್ಯವಸ್ಥೆ, ಉದ್ಯೋಗ ಸೃಷ್ಟಿ, ತಮ್ಮ ಪಕ್ಷವು ಅಲ್ಪಸಂಖ್ಯಾತರ ತುಷ್ಟೀಕರಣದಲ್ಲಿ ತೊಡಗಿಸಿಕೊಂಡಿದೆ ಎಂಬ ಆರೋಪದ ಬಗ್ಗೆ, ರಾಹುಲ್ ಅವರು ಹಿಂದೂ ವಿರೋಧಿ ಎಂದು ಬಿಜೆಪಿ ಸೃಷ್ಟಿಸಿರುವ ಚಿತ್ರಣದ ಬಗ್ಗೆ ಸ್ಪಷ್ಟ ವಿವರಣೆಗಳನ್ನು ನೀಡಬೇಕು. ಮೋದಿ ಅವರು ಕೆಲವು ಬಂಡವಾಳಶಾಹಿಗಳ, ಅದರಲ್ಲೂ ಮುಖ್ಯವಾಗಿ ಅದಾನಿ ಸಮೂಹದ ಪರವಾಗಿದ್ದಾರೆ ಎಂದು ರಾಹುಲ್ ಅವರು ನಿರಂತರವಾಗಿ ವಾಗ್ದಾಳಿ ನಡೆಸುತ್ತ ಬಂದಿದ್ದಾರೆ. ಆದರೆ ಈ ಆರೋಪಗಳು ರಾಜಕೀಯದ ಅಲೆಯನ್ನು ರಾಹುಲ್ ಪರವಾಗಿ ತಿರುಗಿಸಲು ಸಾಕಾಗುವುದಿಲ್ಲ. ಏಕೆಂದರೆ ಇದೇ ಬಗೆಯ ತಪ್ಪುಗಳನ್ನು ಕಾಂಗ್ರೆಸ್ ತಾನು ಅಧಿಕಾರದಲ್ಲಿ ಇದ್ದಾಗಲೂ ಮಾಡಿದೆ.

ರಾಹುಲ್ ಈಗ ಯುವಕರಲ್ಲ; ಜೂನ್‌ಗೆ ಅವರಿಗೆ 53 ವರ್ಷ ತುಂಬಲಿದೆ. ಆದರೆ ರಾಹುಲ್ ಅವರಲ್ಲಿ ಗಂಭೀರ ಸಮಸ್ಯೆಯೊಂದಿದೆ. ಪ್ರಜಾತಂತ್ರವಾದಿಯಾಗಿ ಕಾಣಿಸಿಕೊಳ್ಳುವ ಹಂಬಲ ಅವರಲ್ಲಿದ್ದರೂ ಅವರನ್ನು ವಂಶಪಾರಂಪರ್ಯವಾದದ ರಾಜಕಾರಣಿಯನ್ನಾಗಿ ಭಾವಿಸಲಾಗುತ್ತಿದೆ. ಯಾವುದೇ ಅಧಿಕಾರವಿಲ್ಲದಿದ್ದರೂ ಪಕ್ಷದಲ್ಲಿ ಅವರು ಪ್ರಮುಖ ತೀರ್ಮಾನಗಳನ್ನು ಈಗಲೂ ತೆಗೆದುಕೊಳ್ಳುತ್ತಾರೆ. ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಈಚೆಗೆ ನಡೆದ ಚುನಾವಣೆಯು ನಿಜ ಚುನಾವಣೆಯಂತೆ ಇರಲಿಲ್ಲ. ಯುವಕರು ಹಾಗೂ ಪಕ್ಷದ ಹಳಬರ ನಡುವೆ ರಾಹುಲ್ ಸಿಕ್ಕಿಬಿದ್ದಿದ್ದಾರೆ. ಇವೆಲ್ಲವೂ ಅವರಿಗೆ ತಮ್ಮ ಪಕ್ಷವನ್ನು ಬಲಿಷ್ಠವಾಗಿಸುವಲ್ಲಿ ಅಡ್ಡಿಯಾಗುತ್ತಿವೆ.

ರಾಹುಲ್ ಅವರು ಈಚೆಗೆ ಬ್ರಿಟನ್ನಿನ ಸಂಸತ್ತಿನಲ್ಲಿ, ಅಲ್ಲಿನ ಪತ್ರಕರ್ತರ ಜೊತೆ ಹಾಗೂ ಅಲ್ಲಿನ ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಜೊತೆ ನಡೆಸಿದ ಸಂವಾದವು ಅವರನ್ನು ಪ್ರಬುದ್ಧ ವ್ಯಕ್ತಿಯನ್ನಾಗಿ ತೋರಿಸಿವೆ. ಅವರು 'ಪಪ್ಪು' ಅಲ್ಲ. ಅವರಿಗೆ ಹಾಗೂ ಅವರ ಕುಟುಂಬದ ಹೆಸರಿಗೆ ಚರಿಷ್ಮಾ ಇರುವ ಕಾರಣ, ಅವರು ಜನರ ಸಮೂಹವನ್ನು ಮತ್ತು ಮಾಧ್ಯಮಗಳ ಗಮನವನ್ನು ಸೆಳೆಯುತ್ತಾರೆ. ಹೀಗಿದ್ದರೂ ದೇಶದೊಳಗೆ ಅವರನ್ನು ನಿರ್ಧಾರ ಕೈಗೊಳ್ಳಲಾಗದ ಹಾಗೂ ದುರ್ಬಲ ವ್ಯಕ್ತಿಯಾಗಿ ಕಾಣಲಾಗುತ್ತಿರುವುದು ಹಾಗೂ ಮೋದಿ ಅವರನ್ನು ಬಲಿಷ್ಠ ಮತ್ತು ದೃಢ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯದ ವ್ಯಕ್ತಿಯನ್ನಾಗಿ ಕಾಣಲಾಗುತ್ತಿರುವುದು ಏಕೆಂಬುದು ವಿವರಣೆಗೆ ಸಿಗುತ್ತಿಲ್ಲ.

ಮಧ್ಯಪ್ರದೇಶದಲ್ಲಿ ಕಮಲನಾಥ್ ಮತ್ತು ಜ್ಯೋತಿರಾದಿತ್ಯ ಸಿಂಧಿಯಾ ನಡುವಿನ ಸಮಸ್ಯೆಯನ್ನು, ಪಂಜಾಬ್‌ನಲ್ಲಿ ನವಜೋತ್ ಸಿಧು ಮತ್ತು ಕ್ಯಾಪ್ಟನ್ ಅಮರೀಂದರ್ ಸಿಂಗ್ ನಡುವಿನ ಭಿನ್ನಾಭಿಪ್ರಾಯವನ್ನು, ರಾಜಸ್ಥಾನದಲ್ಲಿ ಅಶೋಕ್ ಗೆಹಲೋತ್ ಮತ್ತು ಸಚಿನ್ ಪೈಲಟ್ ನಡುವಿನ ಸಂಘರ್ಷವನ್ನು ರಾಹುಲ್ ಅವರು ಅಪ್ರಬುದ್ಧವಾಗಿ ನಿಭಾಯಿಸಿದ ಬಗೆಯನ್ನು ಗಮನಿಸಿ. ರಾಹುಲ್ ಅವರ ನಡೆಗಳು ತಮ್ಮದೇ ಪಕ್ಷದ ಸರ್ಕಾರಗಳನ್ನು ಅಸ್ಥಿರಗೊಳಿಸಿದವು, ಎರಡು ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರ ಕಳೆದುಕೊಂಡಿತು. ರಾಜಸ್ಥಾನದಲ್ಲಿ ಪಕ್ಷದ ನೇತೃತ್ವದ ಸರ್ಕಾರವು ಅಸ್ಥಿರಗೊಂಡಿದೆ, ಗೆಹಲೋತ್ ಮತ್ತು ಪೈಲಟ್ ನಡುವಿನ ಸಂಘರ್ಷವು ಮುಂದುವರಿದಿದೆ.

ಬಲ ಕಳೆದುಕೊಂಡಿದ್ದ ಪಕ್ಷದ ನೈತಿಕ ಸ್ಥೈರ್ಯವನ್ನು ಹೆಚ್ಚಿಸಲು ಭಾರತ್ ಜೋಡೊ ಯಾತ್ರೆಯು ಪ್ರಶಂಸನೀಯ ಪ್ರಯತ್ನವಾಗಿತ್ತು. ರಾಹುಲ್ ಅವರ ಶಕ್ತಿ, ಇತರರಲ್ಲಿಯೂ ಉತ್ಸಾಹ ತುಂಬುವ ಅವರ ಸಾಮರ್ಥ್ಯ, ಜಾತಿ–ವರ್ಗಗಳ ಭೇದವನ್ನು ಮೀರಿ ನಿಂತು ದೇಶವನ್ನು ಒಂದಾಗಿ ಬೆಸೆಯುವ ಯಾತ್ರೆಯ ಆಶಯವು ಜನಪ್ರಿಯತೆಯನ್ನು ಪಡೆದುಕೊಂಡಿತು. ಯಾತ್ರೆಯು ದೇಶದ ಹಲವೆಡೆ ಸಾಗಿದಂತೆಲ್ಲ ಹಲವಾರು ಸೆಲೆಬ್ರಿಟಿಗಳು ಕೂಡ ಯಾತ್ರೆಯಲ್ಲಿ ಹೆಜ್ಜೆ ಹಾಕಿದರು. ಈ ನಡುವೆ ಎರಡು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆ ಇತ್ತು. ಆದರೆ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವಲ್ಲಿ ರಾಹುಲ್ ಅವರು ಜಾಣತನ ತೋರಲಿಲ್ಲ. ರಾಹುಲ್ ಅವರು ಯಾತ್ರೆಯ ನಡುವಿನಲ್ಲಿ ಕಿರು ಅವಧಿಗೆ ವಿರಾಮ ತೆಗೆದುಕೊಂಡು, ಪಕ್ಷದ ಪರವಾಗಿ ರಾಜ್ಯಗಳಲ್ಲಿ ಪ್ರಚಾರ ನಡೆಸಬೇಕಿತ್ತು. ಆದರೆ ರಾಹುಲ್ ಇಲ್ಲಿ ಮತ್ತೆ ತಪ್ಪು ಮಾಡಿದರು. ಭಾರತ್ ಜೋಡೊ ಯಾತ್ರೆಯು ರಾಜಕೀಯ ಉದ್ದೇಶ ಹೊಂದಿಲ್ಲ ಎಂದು ಎರಡೂ ರಾಜ್ಯಗಳ ಪ್ರಚಾರದಿಂದ ದೂರವುಳಿದರು. ಈ ಚುನಾವಣೆಗಳಲ್ಲಿ ರಾಹುಲ್ ಪ್ರಚಾರ ಕೈಗೊಂಡಿದ್ದಿದ್ದರೆ ಗುಜರಾತ್‌ನಲ್ಲಿ ಕಾಂಗ್ರೆಸ್‌ನ ಸ್ಥಾನಗಳು ಹೆಚ್ಚಾಗಬಹುದಿತ್ತು, ಹಿಮಾಚಲ ಪ್ರದೇಶದಲ್ಲಿ ಪಕ್ಷ ಅಧಿಕಾರ ಹಿಡಿಯಿತಾದರೂ ಇನ್ನಷ್ಟು ಹೆಚ್ಚಿನ ಬಲ ಪಡೆಯುವ ಸಾಧ್ಯತೆ ಇತ್ತು.



ತನ್ನಲ್ಲಿನ ಭೌತಿಕ ಹಾಗೂ ಬೌದ್ಧಿಕ ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸಿ, ಚುನಾವಣೆಯಲ್ಲಿ ಗೆಲುವು ಸಾಧಿಸಬೇಕು ಹಾಗೂ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎಂಬ ಹುಚ್ಚುತನ ಇಲ್ಲದಿದ್ದರೆ ರಾಜಕೀಯ ನಾಯಕ ಇದ್ದು ಪ್ರಯೋಜನವಾದರೂ ಏನು?

ರಾಹುಲ್ ಅವರ ವರ್ಚಸ್ಸು ಯಾತ್ರೆಯ ನಂತರದಲ್ಲಿ ಹೆಚ್ಚಾಗಿತ್ತು. ರಾಹುಲ್ ಅವರ ದೃಢನಿಶ್ಚಯ, ಜನಸಾಮಾನ್ಯರ ಜೊತೆ ಅವರು ಬೆರೆಯುತ್ತಿದ್ದ ರೀತಿ, ದ್ವೇಷದ ವಿರುದ್ಧದ ಸೆಣಸಾಟದಲ್ಲಿ ಪ್ರೀತಿಯೇ ಯಾವತ್ತಿಗೂ ಜಯ ಗಳಿಸುವುದು ಎಂದು ಅವರು ನಿರಂತರವಾಗಿ ಹೇಳುತ್ತಿದ್ದುದು ಹಲವರ ಹೃದಯ ಗೆದ್ದವು. ರಾಹುಲ್ ಹೆಚ್ಚು ಪ್ರಬುದ್ಧರಾಗುತ್ತಿದ್ದಾರೆ ಎಂಬ ಖುಷಿ ಹಲವರಲ್ಲಿ ಮೂಡಿತು. ಆದರೆ, ಬಹಳ ಬೇಗ ಅವರು ವೈಯಕ್ತಿಕವಾಗಿ ಸಮಸ್ಯೆಯ ಸುಳಿಗೆ ಸಿಲುಕಿದರು. 2019ರಲ್ಲಿನ ಮಾನನಷ್ಟ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಎರಡು ವರ್ಷಗಳ ಜೈಲುಶಿಕ್ಷೆಗೆ ಗುರಿಯಾದರು. ಕೋಲಾರದಲ್ಲಿ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಮಾತಿನ ಭರದಲ್ಲಿ ರಾಹುಲ್ ಅವರು, 'ನೀರವ್ ಮೋದಿ, ಲಲಿತ್ ಮೋದಿ, ಪಿಎಂ ಮೋದಿ... ಎಲ್ಲ ಕಳ್ಳರೂ ಮೋದಿ ಎಂಬ ಉಪನಾಮ ಹೊಂದಿರುವುದು ಏಕೆ' ಎಂದರು. ಇದು ಬಹಳ ಮೂರ್ಖತನದಿಂದ ಕೂಡಿದ ಮಾತು. ಭಾರತ್ ಜೋಡೊ ಯಾತ್ರೆಯ ಸಂದರ್ಭದಲ್ಲಿ ಅವರು ಬೋಧಿಸಿದ್ದಕ್ಕೆ ಇದು ಅನುಗುಣವಾಗಿಲ್ಲ. ರಾಹುಲ್ ಅವರಿಗೆ ಕ್ಷಮೆ ಕೋರಲು ಒಂದು ಅವಕಾಶ ಕೊಡಲಾಯಿತು. ಕ್ಷಮೆ ಕೇಳಿದ್ದಿದ್ದರೆ ವಿಷಯ ಅಲ್ಲಿಗೇ ಕೊನೆಗೊಳ್ಳುತ್ತಿತ್ತು. ಔದಾರ್ಯವು ಯಾವಾಗಲೂ ಹೃದಯಗಳನ್ನು ಗೆಲ್ಲುತ್ತದೆ.

ಈಚೆಗೆ ಕ್ಷಮೆ ಮತ್ತು ಸಾವರ್ಕರ್ ಕುರಿತು ರಾಹುಲ್ ಹೇಳಿದ ಮಾತು ಉದ್ಧವ್ ಠಾಕ್ರೆ ಅವರ ಕೋಪಕ್ಕೆ ಕಾರಣವಾಯಿತು. ಬಿಜೆಪಿಯ ಪ್ರಮುಖ ನಾಯಕರು ಬಹಳ ಕೆಟ್ಟ ಮಾತುಗಳನ್ನು ಆಡಿದ್ದಾರೆ ಎಂಬುದು ಕೂಡ ನಿಜ. ಆದರೆ ಕೋಪದಲ್ಲಿ ರಾಹುಲ್ ತಾವೊಬ್ಬ ಮೇಧಾವಿ ಎಂಬುದನ್ನು ಮರೆಯಬಾರದಿತ್ತು. ಅವರು ಈಗ ಪಕ್ಷಕ್ಕೆ ಚುನಾವಣೆಗಳಲ್ಲಿ ಗೆಲುವು ತಂದುಕೊಡುವುದಾಗಿ ನಿರ್ಣಯ ಕೈಗೊಳ್ಳಬೇಕು. ವಾಸ್ತವಕ್ಕೆ ಎದುರಾಗಿ ನಿಲ್ಲಬೇಕು. ಒಬ್ಬ ಮುತ್ಸದ್ದಿಯಾಗಿ ಮೇಲೆಬಂದು, ಮುಂದಿನ ಸರ್ಕಾರವನ್ನು ರಚಿಸಲು ವಿರೋಧ ಪಕ್ಷಗಳನ್ನು ಒಗ್ಗೂಡಿಸಬಲ್ಲರು ಎಂದಾದರೆ, ಅವರು ವಂಶಪಾರಂಪರ್ಯ ರಾಜಕಾರಣವನ್ನು ಬೆಂಬಲಿಸುವ ವ್ಯಕ್ತಿ ಹೌದೋ ಅಲ್ಲವೋ ಎಂಬುದನ್ನು ಯಾರೂ ತಲೆಗೆ ಹಾಕಿಕೊಳ್ಳುವುದಿಲ್ಲ.

ಅದಕ್ಕೂ ಮೊದಲು ರಾಹುಲ್ ಅವರು ಸಂಸ್ಕೃತದ ಈ ಶ್ಲೋಕದ ಅರ್ಥವನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು: ನಾಲಗೆಯ ತುದಿಯಲ್ಲಿ ಲಕ್ಷ್ಮಿ ಇರುತ್ತಾಳೆ, ನಾಲಗೆಯ ತುದಿಯಲ್ಲಿ ಸ್ನೇಹಿತರು ಹಾಗೂ ಬಂಧುಬಾಂಧವರು ಇರುತ್ತಾರೆ, ಮಾತು ನಿಮ್ಮನ್ನು ಜೈಲಿಗೆ ಕಳುಹಿಸಬಹುದು, ಮಾತು ನಿಮ್ಮ ಸಾವಿಗೆ ಕಾರಣವಾಗಬಹುದು, ಒಳ್ಳೆಯ ಮಾತುಗಳಿಗೆ ದಾರಿದ್ರ್ಯವೇಕೆ?

ಚುರುಮುರಿ

ಶೆಟ್ಟರ್ ಸಿಟ್ಟು

● ಮಣ್ಣೆರಾಜು

'**ಶೆಟ್ಟರ್** ಸಿಟ್ಟು, ಸವದಿ ಸಂಕಟ ತಣ್ಣಗಾಯಿತೇನ್ರೀ?...' ಸುಮಿ ಕೇಳಿದಳು.

'ಆಗಲು ಅದು ಸಾಧಾರಣ ನೋವು ಅಲ್ಲವಂತೆ. ಸಾಲದ್ದಕ್ಕೆ, ಮನೆ ಒಡೆಯರೇ ಮನೆ ಒಡೆದರು ಎಂದು ಬಿಜೆಪಿ ನಾಯಕರು ಶೆಟ್ಟರ್, ಸವದಿಯವರನ್ನು ಕೆರಳಿಸಿ ಮತ್ತಷ್ಟು ನರಳಿಸುತ್ತಿದ್ದಾರಂತೆ' ಎಂದ ಶಂಕ್ರಿ.

'ಒಂದು ಕಾಲದಲ್ಲಿ ಟಿಕೆಟ್ ಕೊಡುವ ಸ್ಥಾನದಲ್ಲಿದ್ದ ಶೆಟ್ಟರ್, ಸವದಿಯವರ ಸಾಮರ್ಥ್ಯವನ್ನು ಬಿಜೆಪಿಯವರು ಕಡೆಗಣಿಸಿದ್ದು ಸರಿಯಲ್ಲ ಅಲ್ವೇನ್ರೀ?'

'ಸರಿ, ತಪ್ಪು ಎಂಬುದು ದೆಹಲಿ ದೇವರ ಇಚ್ಛೆ. ಬಿಜೆಪಿಯವರು ಟಿಕೆಟ್ ಕೊಡದೆ ಕೈ ಕೊಟ್ಟಾಗ ಕಾಂಗ್ರೆಸ್‌ನವರು ಕೈ ಹಿಡಿದು ಕಾಪಾಡಿದರು. ಟಿಕೆಟ್ ಸಿಗದ ಸಿಟ್ಟಿನಲ್ಲಿ ಶೆಟ್ಟರ್, ಸವದಿ ಬಿಜೆಪಿ ಹೊಸಿಲು ದಾಟಿ ಹೋಗಿ ಕಾಂಗ್ರೆಸ್ ಹೊಸಿಲು ಮೆಟ್ಟಿದರು'.

'ಹೊಸ ಸೊಸೆ ಸೇರು ಒದ್ದು ಅತ್ತೆ ಮನೆ ಪ್ರವೇಶಿಸಿದಂತೆ ಕಾಂಗ್ರೆಸ್ ಮನೆ ಪ್ರವೇಶಿಸಿರುವ ಈ ನಾಯಕರಿಗೆ ಆ ಮನೆ ವಾತಾವರಣ ಹಿಡಿಸುತ್ತಾ?'

'ಅತ್ತೆ ಮನೆ ಪ್ರವೇಶಿಸಿದಾಗ ಸೊಸೆಗೆ ಎಲ್ಲಾ ಹೊಸದು. ಗಂಡ, ಅತ್ತೆ, ಮಾವ, ಮೈದುನ, ನಾದಿನಿಯ ಗುಣ ಸ್ವಭಾವವೂ ಗೊತ್ತಿರೋಲ್ಲ. ಇವರಲ್ಲಿ ಯಾರು ಅಪಾಯಕಾರಿ, ಇನ್ಯಾರು ಸಹಾಯಕಾರಿ ಎಂದು ತಿಳಿಯಲು ಸಮಯ ಬೇಕು. ಬಿಜೆಪಿ ಮನೆಯಲ್ಲಿ ಬೆಳೆದ ಶೆಟ್ಟರ್, ಸವದಿಗೆ ಕಾಂಗ್ರೆಸ್ ಮನೆಯ ಆಚರಣೆ, ಒಗ್ಗರಣೆಗೆ ಒಗ್ಗಿಕೊಳ್ಳುವುದು ಆರಂಭದಲ್ಲಿ ಕಷ್ಟ ಆಗಬಹುದು, ಸಮಯ ಕಳೆದಂತೆ ಹೊಂದಿಕೊಳ್ತಾರೆ'.

'ಬಿಜೆಪಿ, ಕಾಂಗ್ರೆಸ್ ತತ್ವ ಸಿದ್ಧಾಂತಗಳು ಒಂದಕ್ಕೊಂದು ವ್ಯತಿರಿಕ್ತ. ಬಿಜೆಪಿ ಸಿಲೆಬಸ್ ಓದಿ ಬಂದವರಿಗೆ ಕಾಂಗ್ರೆಸ್ ಕಲ್ಚರ್ ಕಷ್ಟವೇ. ಎಂಜಿನಿಯರಿಂಗ್ ವಿದ್ಯಾರ್ಥಿಯು ಮೆಡಿಕಲ್ ಕಾಲೇಜಿಗೆ ಅಡ್ಮಿಟ್ ಆದಂತೆ ಆಗೋದಿಲ್ವೇ?'

'ಸಬ್ಜೆಕ್ಟ್ ಮುಖ್ಯ ಅಲ್ಲ, ರಿಸಲ್ಟ್ ಮುಖ್ಯ. ಎದುರಾಗಿರುವ ಎಲೆಕ್ಷನ್‌ನಲ್ಲಿ ಪಾಸಾಗಿಬಿಟ್ಟರೆ ಎಲ್ಲವೂ ಸಲೀಸಾಗುತ್ತವೆ...' ಎಂದ ಶಂಕ್ರಿ.

ದಿನದ ಟ್ವೀಟ್

ಸಮಾಜ ಸಿದ್ಧವಿದೆಯೇ?

ಸಲಿಂಗ ಮದುವೆ ಕುರಿತ ಅರ್ಜಿಗಳ ವಿಚಾರಣೆಗೆ ಸುಪ್ರೀಂ ಕೋರ್ಟ್ ಸಿದ್ಧವಿದೆ. ಆದರೆ ಅದನ್ನು ಕೇಳಿಸಿಕೊಳ್ಳಲು ಸಮಾಜ ಸಿದ್ಧವಿದೆಯೇ?



ಕಪಿಲ್ ಸಿಬಲ್, ವಕೀಲ

ಕಿಡಿನುಡಿ

ಜಗದೀಶ ಶೆಟ್ಟರ್ ಅವರ ಕಾಂಗ್ರೆಸ್ ಸೇರ್ಪಡೆ ನಂತರ ಅಲ್ಲಿನ ನಾಯಕರು ಪಕ್ಷಕ್ಕೆ ಆನೆ ಬಲ ಬಂದಿದೆ ಎಂದು ಬೀಗುತ್ತಿದ್ದಾರೆ. ಹಾಗಾದರೆ, ಕಾಂಗ್ರೆಸ್ ಪಕ್ಷ ಇಷ್ಟರವರೆಗೆ ಬಲಿಷ್ಠ ಆಗಿರಲಿಲ್ಲವೇ? ಗೆಲ್ಲುವ ತಾಕತ್ತು ಇರಲಿಲ್ಲವೇ? ನಮ್ಮವರು ಅಲ್ಲಿಗೆ ಹೋದ ಮೇಲೆ ತಾಕತ್ತು ಬಂತೇ?

ಸಿ.ಸಿ.ಪಾಟೀಲ, ಲೋಕೋಪಯೋಗಿ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 19-4-1998

● **ಭ್ರಷ್ಟ ಸಚಿವರ ಕೈಬಿಡಲು ಪ್ರಧಾನಿಗೆ ಜಯಾ ಗಡುವು**

ಚೆನ್ನೈ, ಏ. 18 (ಪಿಟಿಐ)– 'ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಪ್ರಕರಣಗಳನ್ನು ಎದುರಿಸುತ್ತಿರುವ ಎಲ್ಲ ಸಚಿವರನ್ನು ತಕ್ಷಣ ಸಂಪುಟದಿಂದ ಕೈ ಬಿಡಿ ಇಲ್ಲವೇ ಮುತ್ತಯ್ಯ ಅವರನ್ನು ಮತ್ತೆ ಸಂಪುಟಕ್ಕೆ ಸೇರಿಸಿಕೊಳ್ಳಿ' ಎಂದು ಎಐಎಡಿಎಂಕೆ ನಾಯಕಿ ಜಯಲಲಿತಾ ಅವರು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರಿಗೆ ಪತ್ರ ಬರೆಯುವುದರೊಂದಿಗೆ ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರ ಇಕ್ಕಟ್ಟಿಗೆ ಒಳಗಾಗಿದೆ.

ಜೆಎಂಎಂ ಲಂಚ ಹಗರಣದಲ್ಲಿ ಕೇಂದ್ರ ಸಂಪರ್ಕ ಖಾತೆ ಸಚಿವ ಬೂಟಾ ಸಿಂಗ್ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಸುಪ್ರೀಂ ಕೋರ್ಟ್ ಆದೇಶ ನೀಡಿರುವ ಹಿನ್ನೆಲೆಯಲ್ಲಿ ಜಯಾ ಅವರ ಆಗ್ರಹ ವಿಶೇಷ ಮಹತ್ವ ಪಡೆದಿದೆ.

ಒಬ್ಬರಿಗೆ ಒಂದು ಕಾನೂನು, ಮತ್ತೊಬ್ಬರಿಗೆ ಇನ್ನೊಂದು ಕಾನೂನು ಎನ್ನುವ ದ್ವಂದ್ವ ನೀತಿಯನ್ನು ತಕ್ಷಣ ಬಿಟ್ಟುಬಿಡಬೇಕು ಎಂದು ಒತ್ತಾಯಿಸಿರುವ ಅವರು, ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸುತ್ತಿರುವ ಬೂಟಾ ಸಿಂಗ್, ರಾಮಕೃಷ್ಣ ಹೆಗಡೆ ಹಾಗೂ ರಾಜಾ ಚೆಲ್ಲಯ್ಯ ಅವರನ್ನು ತಕ್ಷಣ ಸಂಪುಟದಿಂದ ಕೈಬಿಡಬೇಕು ಎಂದು ಆಗ್ರಹಪಡಿಸಿದ್ದಾರೆ.

ಮುತ್ತಯ್ಯ ಅವರ ರಾಜೀನಾಮೆಯನ್ನು ಅಂಗೀಕರಿಸುವಾಗ 'ಉತ್ತಮ ಆಡಳಿತವನ್ನು ಉಳಿಸಿಕೊಂಡು ಹೋಗುವ ಸಲುವಾಗಿ ರಾಜೀನಾಮೆ ಅಂಗೀಕರಿಸುತ್ತೇನೆ' ಎಂದು ಹೇಳಿದ್ದ ಪ್ರಧಾನಿ, ಈಗ ಅಂಥದೇ ಆರೋಪ ಎದುರಿಸುತ್ತಿರುವ ಇತರ ಸಚಿವರನ್ನು ಸಂಪುಟದಿಂದ ಹೊರಹಾಕಲು ಏಕೆ ಹಿಂದೇಟು ಹಾಕುತ್ತಿದ್ದೀರಿ ಎಂದು ಜಯಾ ಪ್ರಶ್ನಿಸಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 19-4-1973

● **ತೆರಿಗೆಗಳ್ಳರಿಗೆ ಉಗ್ರ ಶಿಕ್ಷೆ ಮಸೂದೆಗೆ ಸಂಪುಟದ ಅಸ್ತು**

ನವದೆಹಲಿ, ಏ. 18– ತೆರಿಗೆ ತಪ್ಪಿಸಿಕೊಳ್ಳಲು ಯತ್ನಿಸುವವರಿಗೆ ತೀವ್ರತರ ದಂಡನೆ ಹಾಗೂ ಕಪ್ಪುಹಣ ಸಂಗ್ರಹಣೆ ವಿರುದ್ಧ ಪರಿಣಾಮಕಾರಿ ಕ್ರಮಗಳ ವಾಂಛೂ ಸಮಿತಿ ಶಿಫಾರಸುಗಳನ್ನು ಜಾರಿಗೆ ತರುವ ಸಮಗ್ರ ಮಸೂದೆಯನ್ನು ಶೀಘ್ರದಲ್ಲೇ ಲೋಕಸಭೆಯಲ್ಲಿ ಮಂಡಿಸಲು ಕೇಂದ್ರ ಸಚಿವ ಸಂಪುಟ ನಿರ್ಧರಿಸಿದೆ.

ಲಕ್ಷ ರೂ. ಮೀರಿದ ತೆರಿಗೆ ತಪ್ಪಿಸಿಕೊಂಡವರಿಗೆ ಐದು ವರ್ಷಗಳವರೆಗೆ ಕಠಿಣ ಶಿಕ್ಷೆ ವಿಧಿಸಬೇಕೆಂಬ ಹಾಗೂ ಕನಿಷ್ಠ ಶಿಕ್ಷೆಯನ್ನು ಎರಡರಿಂದ ಮೂರು ವರ್ಷ ಜೈಲು ವಾಸಕ್ಕೆ ಏರಿಸಬೇಕೆಂಬ ಕರಡು ವಿಧೇಯಕವನ್ನು ಸಂಪುಟ ಇಂದು ಅಂಗೀಕರಿಸಿತು.

● **ಸರ್ಕಾರಿ ಕ್ಷೇತ್ರದ ರೋಗಗ್ರಸ್ತ ಕೈಗಾರಿಕೆಗಳಿಗೆ ಭದ್ರ ನೆಲೆ: ಕೇಂದ್ರದ ನೆರವಿಗೆ ಯತ್ನ**

ಬೆಂಗಳೂರು, ಏ. 18– ರಾಜ್ಯ ಸರ್ಕಾರಿ ಕ್ಷೇತ್ರದಲ್ಲಿರುವ ರೋಗಗ್ರಸ್ತ ಕೈಗಾರಿಕೆಗಳನ್ನು ಭದ್ರ ನೆಲೆಯಲ್ಲಿ ನಿಲ್ಲಿಸಲು, ಕೇಂದ್ರದ ಹಣಕಾಸು ನೆರವನ್ನು ಪಡೆಯುವ ವ್ಯವಸ್ಥೆಯೊಂದನ್ನು ಸರ್ಕಾರ ರೂಪಿಸುತ್ತಿದೆ.

ಈ ವಿಷಯವನ್ನು ಇಂದು ವಿಧಾನಸಭೆಗೆ ತಿಳಿಸಿದ ಕೈಗಾರಿಕಾ ಮಂತ್ರಿ ಎಸ್.ಎಂ. ಕೃಷ್ಣ ಅವರು, 'ಕೆಲವೇ ತಿಂಗಳುಗಳಲ್ಲಿ ಈ ಕಾರ್ಖಾನೆಗಳಿಗೆ ಸಮರ್ಥ ನಾಯಕತ್ವ ನೀಡಿ, ಅವುಗಳನ್ನು ಸರಿಪಡಿಸಲಾಗುವುದು' ಎಂದು ಭರವಸೆ ನೀಡಿದರು.

ಸಂಗತ

ಮೌಲ್ಯಮಾಪನ: ಶೈಕ್ಷಣಿಕ ಅನುಸಂಧಾನ

ಶಿಕ್ಷಕರ ಪಾಲಿಗೆ ಮೌಲ್ಯಮಾಪನ ಶಿಬಿರ ಒಂದು ಅನುಭವ ಮಂಟಪ

● ಬಿ.ಎಸ್.ಭಗವಾನ್

ಉತ್ತರಪತ್ರಿಕೆಗಳ ಮೌಲ್ಯಮಾಪನ ಪರೀಕ್ಷೆಯ ನಿರ್ಣಾಯಕ ಘಟ್ಟ. ಅದು ವಿದ್ಯಾರ್ಥಿಗಳಲ್ಲಿ, ಅವರಿಗಿಂತ ಹೆಚ್ಚಾಗಿ ಪೋಷಕರಲ್ಲಿ ಸಂಚಲನ ಸೃಷ್ಟಿಸುವ ಶೈಕ್ಷಣಿಕ ಮಜಲು. ಬದುಕಿಗಿಂತಲೂ ಮಹತ್ವದ ಪರೀಕ್ಷೆಯಿಲ್ಲ ಎನ್ನುವುದು ಸ್ಪಷ್ಟ. ಮೂರು ತಾಸುಗಳ ಪರೀಕ್ಷೆಯಿಂದ ಜ್ಞಾನಮಟ್ಟ ಅಳತೆ ಮಾಡಲಾಗದು, ಏನಿದ್ದರೂ ಅದು ನೆನಪಿನ ಸಾಮರ್ಥ್ಯದ ಮಾಪನವಷ್ಟೆ ಎನ್ನುವ ಟೀಕೆಗೆ ಅರ್ಥವಿದೆ. ಆದರೆ ಆಯಾ ವ್ಯಾಸಂಗ ವರ್ಷದಲ್ಲಿ ಗಳಿಸಿದ ಅರಿವನ್ನು ತೂಗಿ ನೋಡಲು ಪರೀಕ್ಷೆಯೇ ಇದ್ದುದರಲ್ಲಿ ತಕ್ಕಡಿ. ಪರ್ಯಾಯ ಕಂಡುಕೊಳ್ಳುವವರೆಗೆ ಪರೀಕ್ಷೆಯೇ ಮುಂದುವರಿಯುವುದು ಅನಿವಾರ್ಯ.

ಯಾವುದೇ ಪಬ್ಲಿಕ್ ಪರೀಕ್ಷೆಗೆ ಸಂಬಂಧಿಸಿದಂತೆ ಆರು ದಶಕಗಳಿಗೂ ಹಿಂದೆ 'ಕೇಂದ್ರೀಯ ಮೌಲ್ಯಮಾಪನ' ಎನ್ನುವುದಿರಲಿಲ್ಲ. ಪರೀಕ್ಷೆಗೆ ಕೂರುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯೂ ಆಗ ಬಹಳ ಕಡಿಮೆಯಿತ್ತು. ಉತ್ತರಪತ್ರಿಕೆಗಳು ಆಯಾ ಅಧ್ಯಾಪಕರ ಮನೆಮನೆಗಳಲ್ಲೇ ಮೌಲ್ಯಮಾಪನಗೊಳ್ಳುತ್ತಿದ್ದವು. ಅವರಿಗೆ ಸಂದೇಹಗಳು ಬಂದರೆ ಹಿರಿಯ ಪರೀಕ್ಷಕರನ್ನು ಸಂಪರ್ಕಿಸಿ ಪರಿಹರಿಸಿಕೊಳ್ಳುತ್ತಿದ್ದರು. ಮೆಚ್ಚುಗೆಯ ಅಂಶವೆಂದರೆ, ಎಲ್ಲ ಹಂತಗಳಲ್ಲೂ ಪ್ರಾಮಾಣಿಕತೆ, ಗೋಪ್ಯತೆ ಇರುತ್ತಿತ್ತು. ನಂತರ ವಿಷಯಾನುಕ್ರಮದಲ್ಲಿ ವಿವಿಧ ಊರುಗಳಲ್ಲಿ ಮೌಲ್ಯಮಾಪನ ಕೇಂದ್ರಗಳನ್ನು ಶಿಕ್ಷಣ ಇಲಾಖೆ, ವಿಶ್ವವಿದ್ಯಾಲಯಗಳು ವ್ಯವಸ್ಥಿತವಾಗಿ ಆಯೋಜಿಸತೊಡಗಿದವು.

ಸುಮಾರು 10- 12 ದಿನಗಳವರೆಗೆ ಅಗತ್ಯ ಭದ್ರತೆಯಲ್ಲಿ ಮೌಲ್ಯಮಾಪನ ಶಿಬಿರಗಳು ಏರ್ಪಡುತ್ತವೆ. ದಿನಕ್ಕೆ ಇಷ್ಟು ಉತ್ತರಪತ್ರಿಕೆಗಳನ್ನು ಮೌಲ್ಯಮಾಪನ ಮಾಡಬೇಕೆಂಬ ನಿಯಮವಿದೆ. ಈ ಕ್ರಮಬದ್ಧತೆಯಿಂದ ಯಜ್ಞಸದೃಶವಾಗಿ ಮೌಲ್ಯಮಾಪನ ಕಾರ್ಯ ನೆರವೇರುವುದು. ಒಂದರ್ಥದಲ್ಲಿ ವಿದ್ಯಾರ್ಥಿಗಳ ಪರೀಕ್ಷೆಯಾದ ನಂತರ ಇದೀಗ ಶಿಕ್ಷಕರಿಗೆ ಪರೀಕ್ಷೆ ಎನ್ನೋಣ. ಈ ಪವಿತ್ರ ಕಾರ್ಯದಲ್ಲಿ ಸ್ವಯಂ ಆದೇಶಾತ್ಮಕವಾಗಿ ಶಿಕ್ಷಕರು ತಪ್ಪದೇ ಪಾಲ್ಗೊಳ್ಳಬೇಕು. ಹೊಸದಾಗಿ ಶಿಕ್ಷಕ ಹುದ್ದೆಗೆ ಸೇರಿದವರಿಗಂತೂ ಮೌಲ್ಯಮಾಪನ ಶಿಬಿರ ಹಲವಾರು ಶೈಕ್ಷಣಿಕ ಸಂಗತಿಗಳನ್ನು ಕಲಿಸುವ ವಿಶಿಷ್ಟ ಕಾರ್ಯಾಗಾರ.

ವಿದ್ಯಾರ್ಥಿಗಳ ಎಲ್ಲ ಉತ್ತರಗಳನ್ನೂ ಒಂದೂ ಬಿಡದಂತೆ ಗಮನವಹಿಸಿ ಓದಿಯೇ ಸೂಕ್ತ ಅಂಕ ನೀಡಿದರೆ ಮೌಲ್ಯಮಾಪನಕ್ಕೆ ಘನತೆ, ನ್ಯಾಯ. ಒಂದು ಉತ್ತರ ಅಂಕ ನಿಗದಿಗೇ ಅನರ್ಹ ಎಂದಾದರೂ ಅದನ್ನೂ ಮೌಲ್ಯಮಾಪನ ಮಾಡಬೇಕು. ಅದಕ್ಕೆ ಸಲ್ಲಬೇಕಾದ 'ಸೊನ್ನೆ'ಯನ್ನು ನೀಡಲೇಬೇಕು, ನಮೂದಿಸಲೇಬೇಕು. ಸೊನ್ನೆಯೂ ಒಂದು ಅಂಕವೇ. ಉತ್ತರಪತ್ರಿಕೆಯ ಒಳಗೆ ನಮೂದಿಸಿದ ಅಂಕಗಳ ಮತ್ತು ಮೇಲೆ ನಮೂದಿಸಿದ ಅಂಕಗಳ ಮೊತ್ತ ಒಂದೇ ಇರುವುದು ಮೇಲ್ನೋಟಕ್ಕೆ ಮೌಲ್ಯಮಾಪನದ ನಿಖರತೆಯನ್ನು ಬಿಂಬಿಸುತ್ತದೆ. ಒಂದೆರಡು ಅಂಕ ಹೆಚ್ಚಾದರೂ ಅಡ್ಡಿಯಿಲ್ಲ ಕಡಿಮೆ ಅಂಕ ಬೇಡ ಎನ್ನುವುದು ಹಿರಿಯರ ಅನುಭವದ ಹಿತನುಡಿ.

ಗಡಿಬಿಡಿಯಿಂದ ಏನನ್ನೂ ಸಾಧಿಸಲಾಗದು. ಅನ್ನ ಬೇಯಲು, ಹಾಲು ಉಕ್ಕಲು ಅಥವಾ ಹಿಟ್ಟು ನಾದಲು ಅದರದೇ ಸಮಯ ಅಗತ್ಯ. ನಿಧಾನವೇ ಪ್ರಧಾನವಾಗಿ ಮೌಲ್ಯಮಾಪನ ಆಗಬೇಕಿದೆ. ಅವಸರವು ಮೌಲ್ಯಮಾಪನದ ಕಡುವೈರಿ. ಒಂದೊಂದು ಉತ್ತರ ಪತ್ರಿಕೆಯೂ ಭಿನ್ನ, ಅವುಗಳಲ್ಲಿನ ಒಂದೊಂದು ಉತ್ತರವೂ ಭಿನ್ನ. ಮೌಲ್ಯಮಾಪಕರಿಗೆ ಸವಾಲಾಗದ ಸಂದರ್ಭವೇ ಇರದು. ಪ್ರಶ್ನೆಗಳಿಗಿಂತ ಉತ್ತರಗಳನ್ನು ಎದುರಿಸುವುದು ಕಠಿಣ!

ಮೌಲ್ಯಮಾಪನ ಪ್ರಾರಂಭಗೊಳ್ಳುವ ಒಂದು ವಾರ ಮುನ್ನವೇ ಪ್ರಶ್ನೆಪತ್ರಿಕೆಯನ್ನು ಆಮೂಲಾಗ್ರವಾಗಿ ಓದಿ ಮನನ ಮಾಡಿಕೊಂಡರೆ ಆತ್ಮವಿಶ್ವಾಸದಿಂದಲೂ ನಿರಾಯಾಸವಾಗಿಯೂ ಉತ್ತರಪತ್ರಿಕೆಗಳೊಂದಿಗೆ ಅನುಸಂಧಾನಿಸಬಹುದು. ಮುಖ್ಯ ಪರೀಕ್ಷಕರು ನೀಡುವ 'ಸ್ಕೀಂ' (ಅಂಕ ನಿಗದಿ ಮಾರ್ಗಸೂಚಿ) ಆದೇಶಕ್ಕಿಂತಲೂ ಕರ್ತವ್ಯ ನಿರ್ವಹಣೆಗೆ ಪೂರಕ. ದಿನೇ ದಿನೇ ಮೌಲ್ಯಮಾಪನ ತಂತಾನೆ ವೇಗ ಪಡೆದುಕೊಳ್ಳುವುದು. ಇಡೀ ಶಿಬಿರ ಒಂದು ಮನೆಯೇ ಆಗುವುದು.

ಶಿಕ್ಷಕರು ಉತ್ತರಪತ್ರಿಕೆಗಳಲ್ಲಿ ತಮಗೆ ಬಂದ ಚಿತ್ರ ವಿಚಿತ್ರ ಮನವಿಗಳನ್ನು ಹಂಚಿಕೊಳ್ಳುತ್ತಾರೆ: 'ದಯವಿಟ್ಟು 35 ಅಂಕ ನೀಡಿ, ನೀವೇನೂ ಕಳೆದುಕೊಳ್ಳುವುದಿಲ್ಲ. ಆದರೆ ನನಗದು ಅದೃಷ್ಟವೋ ಅದೃಷ್ಟದ ಬಾಗಿಲು...', 'ನನ್ನನ್ನು ಪಾಸು ಮಾಡಿದರೆ ನಿಮಗುಂಟು ಭಾರಿ ಬಹುಮಾನ'... ಹೀಗೆ. ಪಾಸಿಗಾಗಿ ಗೋಗರೆದು ಒಂದೆರಡು ನೋಟುಗಳನ್ನು ಲಗತ್ತಿಸುವುದೂ ಸಂಭಾವ್ಯ. ಇವರು ಇಷ್ಟೆಲ್ಲ ಜಾಣತನ ಮೆರೆಯುವ ಬದಲು ತುಸು ಶ್ರಮವಹಿಸಿ ಓದಿಕೊಳ್ಳಬಹುದಿತ್ತಲ್ಲ ಎಂಬ ಪ್ರಶ್ನೆ ಸಹಜ.



ಅಂದಹಾಗೆ ಕೆಲವು ವಿದ್ಯಾರ್ಥಿಗಳು ಬರೆಯುವ ಉತ್ತರಗಳು ಮೌಲ್ಯಮಾಪಕರಿಗೆ ಜ್ಞಾನವರ್ಧಿಸುವಂತೆಯೂ ಇರುತ್ತವೆ. ವಿಶೇಷವಾಗಿ ವಿಜ್ಞಾನ ವಿಷಯಗಳಲ್ಲಿ ಪ್ರಮೇಯ, ವ್ಯುತ್ಪನ್ನಗಳಿಗೆ ಸಂಬಂಧಿಸಿದ ಲೆಕ್ಕಾಚಾರಗಳು ಹೀಗೂ ಸಾಧ್ಯವಲ್ಲ ಎಂದು ಖುಷಿ, ಅಚ್ಚರಿ ಮೂಡಿಸುತ್ತವೆ. ಹಾಗಾಗಿ ಅಂಕ ನಿಗದಿಗೆ ತೆರೆದುಕೊಂಡ ವಿದ್ಯಾರ್ಥಿಗಳ ಬರಹ ಶಿಕ್ಷಕರಿಗೆ ಹೊಸ ಹೊಸ ಅರಿವು ಮೂಡಿಸುವುದು ಅತಿಶಯವೇ ಹೌದು. ಬಹು ಎಚ್ಚರಿಕೆಯಿಂದ, ಚಿನ್ನ ತೂಕ ಮಾಡಿದಂತೆ ಮೌಲ್ಯಮಾಪನ ಕಾರ್ಯ ನಿರ್ವಹಿಸದಿದ್ದರೆ ಅದರ ದುಷ್ಪರಿಣಾಮಕ್ಕೆ ಗುರಿಯಾಗುವವರು ವಿದ್ಯಾರ್ಥಿಗಳು, ಪೋಷಕರು. ಇಡೀ ಸಮಾಜದ ಮೇಲೆಯೆ ಬೇಜವಾಬ್ದಾರಿಯುತ ಮೌಲ್ಯಮಾಪನದ ಕೆಟ್ಟ ಛಾಯೆ ಆವರಿಸುತ್ತದೆ. ಅಲಕ್ಷ್ಯದ ಅಂಕ ನಿಗದಿಯಿಂದ ಬುದ್ಧಿವಂತರು ದಡ್ಡರೆಂಬ, ದಡ್ಡರು ಬುದ್ಧಿವಂತರೆಂಬ ತಪ್ಪು ಸಂದೇಶ ಹೊರಬೀಳುವುದು.

ಉತ್ತರಪತ್ರಿಕೆಯ ಖಾಲಿ ಹಾಳೆಗಳನ್ನು ತಪ್ಪದೇ ಹೊಡೆದು ಹಾಕದಿರುವುದೂ ದೊಡ್ಡ ಲೋಪವೇ. ಏಕೆಂದರೆ ಆ ಹಾಳೆಗಳ ದುಬಳಕೆ ಸಾಧ್ಯ. ಅಂಕಗಳೇ ಮಾನದಂಡವಲ್ಲ ಎನ್ನುವ ಮಾತು ಬೇರೆ. ಉತ್ತರ ಪತ್ರಿಕೆಗಳಲ್ಲಿ ಯಾವುದೇ ಅಕ್ರಮಗಳು ಕಂಡುಬಂದರೆ ಮುಖ್ಯ ಮೌಲ್ಯಮಾಪಕರಿಗೆ ಮೌಲ್ಯಮಾಪಕರು ವರದಿ ಸಲ್ಲಿಸಬೇಕಾಗುತ್ತದೆ.

ವಾಚಕರ ವಾಣಿ

ಶಿಕ್ಷೆ ಜಾರಿಯಾಗಬೇಕಾದುದು ವ್ಯಕ್ತಿಗಳಿಂದಲ್ಲ

ಉತ್ತರಪ್ರದೇಶದಲ್ಲಿ ಇತ್ತೀಚೆಗೆ ನಡೆದ ಎನ್‌ಕೌಂಟರ್‌ಗಳ ಕುರಿತಾದ ಸಂಪಾದಕೀಯ (ಪ್ರ.ವಾ., ಏ. 18) ಅತ್ಯಂತ ಸಮಯೋಚಿತವಾಗಿದೆ. ಭಾರತವು ಪ್ರಜಾಪ್ರಭುತ್ವದ ತಾಯಿ ಎಂದು ಹೇಳಿಕೊಳ್ಳುವ ನಾವು ಇಂತಹ ವಿದ್ಯಮಾನಗಳಿಗೆ ಅವಕಾಶ ಕೊಡಬಾರದು. ಯಾವುದೇ ಆರೋಪಿಯನ್ನು ಘನತೆಯಿಂದ ನಡೆಸಿಕೊಳ್ಳಬೇಕಾದ ಅಗತ್ಯದ ಕುರಿತು ಸಂವಿಧಾನದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಶಿಕ್ಷೆ ಎಂಬುದು ಈ ನೆಲದ ಕಾನೂನಿನ ಅಡಿಯಲ್ಲಿ ಸಾಬೀತಾದ ನಂತರವೇ ಜಾರಿಯಾಗಬೇಕೆ ವಿನಾ ಕೆಲವು ವ್ಯಕ್ತಿ ಅಥವಾ ಸರ್ಕಾರದಿಂದ ಅಲ್ಲ.

ಜೀವನ ಎಂಬುದು ಅತಿ ಅಮೂಲ್ಯವಾದುದು, ಅದು ಯಾವುದೇ ಸಮುದಾಯಕ್ಕೆ ಹೊರತಾದುದಲ್ಲ ಎಂಬುದನ್ನು ಯಾರೂ ಮರೆಯಬಾರದು. ಇತ್ತೀಚೆಗೆ ಬಿಡುಗಡೆಯಾದ ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೊ (ಎನ್‌ಸಿಆರ್‌ಬಿ) ಮತ್ತು ಇಂಡಿಯಾ ಜಸ್ಟಿಸ್ ವರದಿಯಲ್ಲಿ, ಉತ್ತರಪ್ರದೇಶ ಅತ್ಯಂತ (18) ಕೆಳಸ್ಥಾನದಲ್ಲಿ ಇರುವುದು ಆ ರಾಜ್ಯದಲ್ಲಿ ಹೆಚ್ಚುತ್ತಿರುವ ಅಪರಾಧ ಕೃತ್ಯಗಳಿಗೆ ಪೂರಕವಾಗಿಯೇ ಇದೆ. ಇಂತಹ ಪ್ರಕರಣಗಳು ಕೊನೆಯಿಲ್ಲದಂತೆ ನಡೆದರೆ ಜನರು ವ್ಯವಸ್ಥೆಯ ಮೇಲೆ ನಂಬಿಕೆಯನ್ನೇ ಕಳೆದುಕೊಳ್ಳಬಹುದು. ಅದಕ್ಕೆ ಆಸ್ಪದ ಕೊಡಬಾರದು. ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಅಂತಹವರನ್ನು ಹತ್ಯೆ ಮಾಡಿದವರಿಗೇ ಕ್ಷಮಾಪಣೆ ನೀಡಿದ ನಾಡು ನಮ್ಮದು. ಈ ವಿಷಯವು ಬರೀ ಆಯೋಗ ರಚಿಸಲಾಗಿದೆ, ಸಮಿತಿ ರಚಿಸಲಾಗಿದೆ, ಎಸ್‌ಐಟಿ ತಂಡ ನೇಮಿಸಲಾಗಿದೆ ಎಂಬಷ್ಟಕ್ಕೇ ಸೀಮಿತವಾಗದೆ, ಆದಷ್ಟು ಬೇಗ ಸತ್ಯ ಹೊರಬರಲಿ. ನಿಜವಾದ ತಪ್ಪಿತಸ್ಥರಿಗೆ ಶಿಕ್ಷೆ ಆಗುವಂತಾಗಲಿ.

ಆನಂದ ಕುಂಬಾರ, ಚಿಕ್ಕಸಿಂದಗಿ, ವಿಜಯಪುರ

ಗಡಿ ರಕ್ಷಣೆ: ಇರಲಿ ಮತ್ತಷ್ಟು ಎಚ್ಚರ

ಪುಲ್ವಾಮಾದಲ್ಲಿ ಪಾಕಿಸ್ತಾನದ ಉಗ್ರರ ದಾಳಿಯನ್ನು ಕೇಂದ್ರ ಸರ್ಕಾರ ಸರಿಯಾಗಿ ಹಿಮ್ಮೆಟ್ಟಿಸಲಿಲ್ಲ ಎಂದು ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಹೇಳಿದ್ದಾರೆ (ಪ್ರ.ವಾ., ಏ. 16). ಆದರೆ, ಗೃಹ ಸಚಿವ ಅಮಿತ್ ಶಾ, ದೇಶದ ಗಡಿ ಸುಭದ್ರವಾಗಿದೆ, ಆ ವಿಷಯದಲ್ಲಿ ರಾಜಿ ಇಲ್ಲ ಎಂದು ಹೇಳಿದ (ಪ್ರ.ವಾ., ಏ. 11) ನಂತರವೂ 'ದೇಶದ ಉತ್ತರ ಮತ್ತು ಪಶ್ಚಿಮ ಗಡಿಗಳು ಸುರಕ್ಷಿತವಾಗಿಲ್ಲ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ (ಪ್ರ.ವಾ., ಏ. 15).

ವಾಜಪೇಯಿ ನೇತೃತ್ವದ ಸರ್ಕಾರ ಇದ್ದಾಗ, ಭಾರತದ ಸೇನೆ ಎಚ್ಚರ ತಪ್ಪಿದ ಪರಿಸ್ಥಿತಿಯಲ್ಲೇ ಪಾಕಿಸ್ತಾನವು ಕಾರ್ಗಿಲ್ ಅನ್ನು ಆಕ್ರಮಿಸಿತು. ಇದು ಎಚ್ಚರಿಕೆ ಗಂಟೆಯಲ್ಲವೇ? ಚುನಾವಣೆಯಲ್ಲಿ ವಿರೋಧ ಪಕ್ಷಗಳನ್ನು ಶತಾಯಗತಾಯ ನಿರ್ನಾಮ ಮಾಡಲು ಪಣ ತೊಟ್ಟಿರುವ ನರೇಂದ್ರ ಮೋದಿ ಮತ್ತು ಅಮಿತ್ ಶಾ, ತಮ್ಮ ಇದೇ ಛಲವನ್ನು ಮಲಿಕ್ ಹಾಗೂ ಭಾಗವತ್ ಅವರ ಹೇಳಿಕೆಗಳ ಹಿನ್ನೆಲೆಯಲ್ಲಿ, ದೇಶದ ಗಡಿ ಸಂರಕ್ಷಣೆಯ ವಿಷಯದಲ್ಲಿಯೂ ತೋರುವುದು ಒಳ್ಳೆಯದಲ್ಲವೇ?

ಕೆ.ಎನ್.ಭಗವಾನ್, ಬೆಂಗಳೂರು

ಕುರುಕ್ಷೇತ್ರದ ಹೋಲಿಕೆ ಎಷ್ಟು ಸಮಂಜಸ?

ವಿಧಾನಸಭೆ ಚುನಾವಣೆ ಕಣವನ್ನು ಮಹಾಭಾರತದಲ್ಲಿ ಬರುವ ಕುರುಕ್ಷೇತ್ರ ಯುದ್ಧಕ್ಕೆ ಕೆಲವು ಟಿ.ವಿ. ಚಾನೆಲ್‌ಗಳಲ್ಲಿ ಹೋಲಿಸುತ್ತಿರುವುದು ಕಂಡುಬರುತ್ತದೆ. ಕುರುಕ್ಷೇತ್ರದ ಕದನವು ಧರ್ಮ, ಅಧರ್ಮಗಳ ನಡುವಿನ ಸಂಘರ್ಷಕ್ಕೆ ಸಂಬಂಧಿಸಿದ್ದು. ಕಥೆಯಲ್ಲಿ ವಿವರಿಸುವಂತೆ, ರಣವೀಳ್ಯ ಪಡೆದು ಬಾಣಗಳಿಗೆ ಎದೆಯೊಡ್ಡಿ ನಿಂತ ಪಾಂಡವ, ಕೌರವರ ಪಂಗಡಗಳ ಮಧ್ಯೆ ನಡೆದ ಯುದ್ಧದ ಸನ್ನಿವೇಶ ರಣರೋಚಕವೂ ಹೌದು. ಅದರಲ್ಲಿ ಯುದ್ಧಕ್ಕೆ ಒಂದು ಬದ್ಧತೆ ಇದೆ. ಕುಂತಿಪುತ್ರ ಕರ್ಣನು ರಣರಂಗದಲ್ಲಿಯೇ ಪ್ರಾಣ ಬಿಟ್ಟನೆ ವಿನಾ ಕೌರವೇಂದ್ರನ ಸ್ನೇಹಕ್ಕೆ ದ್ರೋಹ ಬಗೆಯಲಿಲ್ಲ. ಪಾಂಡವ, ಕೌರವರ ಯುದ್ಧದಲ್ಲಿ ಪ್ರಾಣಭೀತಿಯಿಂದ ಯಾರೂ ಓಡಿ ಹೋಗಲಿಲ್ಲ. ವಿರೋಧಿ ಪಾಳಯಕ್ಕೂ ಜಿಗಿಯಲಿಲ್ಲ. ಅಷ್ಟೇ ಏಕೆ ಸೋಲು ಗೆಲುವು ಯಾರಿಗೇ ಆದರೂ ರಣಹೇಡಿಗಳು ಎರಡೂ ಪಂಗಡಗಳಲ್ಲಿ ಕಾಣುವುದಿಲ್ಲ. ಯುದ್ಧಭೂಮಿಯಲ್ಲಿ ಹೊಂದಾಣಿಕೆಯ ಮಾತೇ ಇರಲಿಲ್ಲ.

ಇಷ್ಟೊಂದು ಪೌರಾಣಿಕ ಮಹತ್ವ ಹೊಂದಿರುವ ಕುರುಕ್ಷೇತ್ರ ಯುದ್ಧವನ್ನು ಈಗಿನ ಚುನಾವಣೆ ಕಣಕ್ಕೆ ಹೋಲಿಸುತ್ತಿರುವುದು ವಿಪರ್ಯಾಸ ಎನಿಸುತ್ತದೆ. ಯಾವ ಸೈದ್ಧಾಂತಿಕ ಹಿನ್ನೆಲೆಯೂ ಇಲ್ಲದೆ ಮರ್ಕಟನಿಗಿಂತಲೂ ಒಂದಷ್ಟು ಹೆಚ್ಚೇ ಅತ್ತಿಂದಿತ್ತ ಜಿಗಿದಾಡುವುದು, ಟಿಕೆಟ್ ಸಿಗದಿದ್ದಕ್ಕೆ ಚೀರಾಟ, ರಂಪಾಟ, ಕಣ್ಣೀರಿಡುವುದು, ನಿನ್ನೆಮೊನ್ನೆ ವಾಚಾಮಗೋಚರವಾಗಿ ನಿಂದಿಸಿದವರ ಹೆಗಲ ಮೇಲೇ ಕೈಹಾಕುವುದು, ಸ್ವಾರ್ಥಸಾಧನೆಗಾಗಿ ಅವಕಾಶವಾದಿ ರಾಜಕಾರಣವೇ ಕಣ್ಣಿಗೆ ರಾಚುತ್ತಿರುವುದನ್ನು ಕುರುಕ್ಷೇತ್ರದಂಥ ಯುದ್ಧಕ್ಕೆ ಹೋಲಿಸುವುದು ಸರಿಯಲ್ಲ. ಕುರುಕ್ಷೇತ್ರ ಕಥನ, ಕದನ ಎಂದರೆ ಈಗಿನ ರಾಜಕಾರಣದಂತೆಯೇ ಇದ್ದಿರಬಹುದು ಎಂದೇ ಭವಿಷ್ಯದ ಪೀಳಿಗೆ ಭಾವಿಸಬಹುದಲ್ಲವೇ?

ನಾರಾಯಣರಾವ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗಾ

ಇದಲ್ಲವೇ ಉತ್ತಮ ಆಡಳಿತದ ಲಕ್ಷಣ?

ಚಿತ್ರದುರ್ಗ ನಗರಕ್ಕೆ ಹೊಂದಿಕೊಂಡಿರುವ ಗ್ರಾಮ ಪಂಚಾಯಿತಿ ಕಚೇರಿಗೆ ಮೊನ್ನೆ ನನ್ನ ಹಿತೈಷಿಗಳಾದ ಹಿರಿಯರೊಬ್ಬರ ಖಾಲಿ ನಿವೇಶನದ ವಾರ್ಷಿಕ ಕಂದಾಯ ಕಟ್ಟಲು ಹೋಗಿದ್ದೆ. ಆ ಭಾಗದ ಸಾರ್ವಜನಿಕರು ತಮ್ಮತಮ್ಮ ಕೆಲಸಕ್ಕಾಗಿ ಅಧಿಕ ಸಂಖ್ಯೆಯಲ್ಲಿಯೇ ಬಂದಿದ್ದರು. ಅಲ್ಲಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಂದವರನ್ನು ಸೌಜನ್ಯದಿಂದ ಮಾತನಾಡಿಸುತ್ತಾ ಅರ್ಜಿ ಅಹವಾಲು ಸ್ವೀಕರಿಸುತ್ತಾ ಕಂಪ್ಯೂಟರ್‌ನಲ್ಲಿ ಕೆಲಸ ಮಾಡಿಕೊಡುತ್ತಿದ್ದರು.

ಈ ನಡುವೆ, ಮನೆ ಕರ ಕಟ್ಟಲು ಬಂದವರೊಬ್ಬರ ಕಂದಾಯದ ಬಿಲ್ ಇಷ್ಟು, ಇದರೊಂದಿಗೆ ನೀರಿನ ಬಾಬ್ತು ಸೇರಿದೆ ಎಂದು ಅಧಿಕಾರಿ ತಿಳಿಸಿದರು. ಮನೆ ಮಾಲೀಕರು 'ಸರ್, ನಮಗೆ ಪಂಚಾಯಿತಿ ವತಿಯಿಂದ ನೀರು ಬರದೆ ಎಷ್ಟೋ ತಿಂಗಳುಗಳಾಗುತ್ತಾ ಬಂತು. ನೀರಿನ ತೆರಿಗೆ ಹೇಗೆ ಕಟ್ಟಲಿ' ಎಂದು ಅಳಲು ತೋಡಿಕೊಂಡರು. ತಕ್ಷಣವೇ ಆ ಭಾಗಕ್ಕೆ ನೀರು ಬಿಡುವ ವ್ಯಕ್ತಿಯನ್ನು ಫೋನ್ ಮೂಲಕ ಸಂಪರ್ಕಿಸಿ, ಅವರ ಮನೆಗೆ ನೀರು ಬಿಡುವ ಕೆಲಸವಾಗಬೇಕೆಂದು ತಾಕೀತು ಮಾಡಿದರು. 'ನೀರಿನ ಮೇಲಿನ ಕಂದಾಯವನ್ನು ನಾವು ವಸೂಲಿ ಮಾಡುತ್ತೇವೆ. ಹೀಗಿರುವಾಗ ನೀರು ಸರಿಯಾಗಿ ಹೋಗದಿದ್ದರೆ ಹೇಗೆ' ಎಂದು ಪ್ರಶ್ನಿಸಿದರು. ನೀರು ಬರುವಂತೆ ಮಾಡಲಾಗುವುದೆಂಬ ಭರವಸೆ ನೀಡಿದಾಗ ಆ ಗ್ರಾಹಕರಲ್ಲಿ ಒಂದು ರೀತಿಯ ಧನ್ಯತಾಭಾವ ಬಂದಂತಿತ್ತು. ಯಾವುದೇ ಸರ್ಕಾರಿ ಅಥವಾ ಖಾಸಗಿ ಕಚೇರಿಗಳಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸುವ ಕೆಲಸವಾಗಬೇಕು. ಅನೇಕ ಕಡೆ ಇಂತಹ ವಾತಾವರಣ ಸಿಗುವುದು ವಿರಳ. ಹಳ್ಳಿಯಿಂದ ದಿಲ್ಲಿಯತನಕ ಕಚೇರಿಗಳಲ್ಲಿ ಈ ಬಗೆಯ ಜನಸ್ನೇಹಿ ನೌಕರರು ಇದ್ದರೆ ಅದು ಉತ್ತಮ ಆಡಳಿತದ ಲಕ್ಷಣ ಅಲ್ಲವೇ?

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಿಪರೀತ ಬಿಸಿಲಿಗೆ ಬಸವಳಿದಿದೆ ದೇಶ

ಗುಜರಾತಿನ ವಡೋದರಾದ ರಸ್ತೆಯೊಂದರ ಡಾಂಬರು ತೀವ್ರ ಬಿಸಿಲಿಗೆ ಕರಗಿತ್ತು

ಪ್ರಜಾವಾಣಿ ವಾರ್ತೆ

ದೇಶದ ಬಹುತೇಕ ರಾಜ್ಯಗಳಲ್ಲಿ ವಾಡಿಕೆಗಿಂತ ಹೆಚ್ಚು ಉಷ್ಣಾಂಶ ದಾಖಲಾಗುತ್ತಿದೆ. ಬಿರುಬೇಸಿಗೆಗೆ ನೆತ್ತಿಯಷ್ಟೇ ಅಲ್ಲ, ನೆಲವೂ ಸುಡುತ್ತಿದೆ. ಫೆಬ್ರುವರಿ ಅಂತ್ಯದಲ್ಲೇ ಆರಂಭವಾದ ಬಿರುಬೇಸಿಗೆ, ಇನ್ನೂ ಹಲವು ದಿನ ಮುಂದುವರಿಯಲಿದೆ. ಒಂದೆರಡು ದಿನಗಳ ನಂತರ ಬಿಸಿಲು ಮತ್ತು ಉಷ್ಣಾಂಶ ಕಡಿಮೆಯಾಗಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ. ಆದರೆ, ಈಗಾಗಲೇ ದೇಶದ ಹಲವೆಡೆ ಜನಜೀವನ ಅಸ್ತವ್ಯಸ್ತವಾಗಿದೆ. ಪೂರ್ವದ ಗುಜರಾತ್‌ನಿಂದ ಆರಂಭವಾಗಿ, ಪಶ್ಚಿಮ ಬಂಗಾಳದವರೆಗೆ ಮಧ್ಯಭಾರತದ ಎಲ್ಲಾ ರಾಜ್ಯಗಳೂ ಬಿಸಿಗಾಳಿಗೆ ತತ್ತರಿಸಿವೆ. ಈಗ ಉತ್ತರದ ರಾಜ್ಯಗಳು ಮತ್ತು ಪೂರ್ವ ಕರಾವಳಿಯ ರಾಜ್ಯಗಳಿಗೂ ಬಿಸಿಗಾಳಿ ಬೀಸುತ್ತಿದೆ. ಕರ್ನಾಟಕಕ್ಕೆ ಬಿಸಿಗಾಳಿ ಬಡಿದಿಲ್ಲವಾದರೂ, ರಾಜ್ಯದಲ್ಲಿ ಬಿಸಿಲಿನ ತಾಪ ವಿಪರೀತವಾಗಿಯೇ ಇದೆ. ಈ ಬಿಸಿಗಾಳಿಯು ತರಹೇವಾರಿ ಸಮಸ್ಯೆಗಳನ್ನು ತಂದೊಡ್ಡುತ್ತಿದೆ. ಅಂತಹ ಸಮಸ್ಯೆಗಳಲ್ಲಿ ಕೆಲವು ರಾಷ್ಟ್ರಮಟ್ಟದಲ್ಲಿ ಹೆಚ್ಚು ಸುದ್ದಿಯಾಗುತ್ತಿವೆ.

ಗುಜರಾತ್‌ನಲ್ಲಿ ಬಿಸಿಗಾಳಿಗೆ ಸಂಬಂಧಿಸಿದ ಹಲವು ವಿಡಿಯೊಗಳು ಒಂದು ವಾರದಿಂದ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ವಡೋದರಾದ ಕೆಲವು ರಸ್ತೆಗಳು ಬಿಸಿಲಿಗೆ ಕರಗುತ್ತಿವೆ. ಹೊಸದಾಗಿ ಡಾಂಬರು ಹಾಕಿದ ಕೆಲವು ರಸ್ತೆಗಳಲ್ಲಂತೂ, ವಾಹನಗಳ ಟೈರ್‌ಗಳು ನೆಲಕ್ಕೆ ಕಚ್ಚಿಕೊಳ್ಳುತ್ತಿವೆ. ವಾಹನಗಳ ಟೈರ್‌ಗಳು ಸಾಗಿದಲ್ಲಿ, ಅಚ್ಚೊತ್ತಿದಂತೆ ಗುರುತು ಬೀಳುತ್ತಿದೆ. ದ್ವಿಚಕ್ರವಾಹನದಲ್ಲಿ ಸಾಗುತ್ತಿದ್ದ ವ್ಯಕ್ತಿಯೊಬ್ಬರು ಅಂತಹ ರಸ್ತೆಯೊಂದರಲ್ಲಿ ಆಯತಪ್ಪಿ ಬಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಬಿಸಿಲಿಗೆ ಮೆತ್ತಗಾಗಿ ಅಂಟುತ್ತಿದ್ದ ಡಾಂಬರು ರಸ್ತೆಯಲ್ಲಿ ದ್ವಿಚಕ್ರವಾಹನದ ಚಕ್ರವು ಸಿಲುಕಿಕೊಂಡಿತ್ತು. ಅದರಿಂದ ಬಿಡಿಸಿಕೊಳ್ಳಲು ಯತ್ನಿಸುತ್ತಿದ್ದ ಸವಾರ, ದ್ವಿಚಕ್ರವಾಹನದ ಸಮೇತ ನೆಲಕ್ಕೆ ಬಿದ್ದಿದ್ದರು. ಅವರ ಕೈಕಾಲುಗಳೂ ಡಾಂಬರಿನಲ್ಲಿ ಸಿಲುಕಿದವು. ನಾಲ್ಕಾರು ಮಂದಿ ದಾರಿಹೋಕರು ಸೇರಿ ಆ ವ್ಯಕ್ತಿಯನ್ನು ರಕ್ಷಿಸಿದ್ದರು. ಜನರ ಚಪ್ಪಲಿ ರಸ್ತೆಯಲ್ಲಿ ಸಿಲುಕಿಕೊಂಡ, ಚಪ್ಪಲಿ ಡಾಂಬರಿನಲ್ಲಿ ಸಿಲುಕಿಕೊಂಡು ಜನರು ನೆಲಕ್ಕೆ ಬಿದ್ದ ಹಲವು ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ. ಜನರು ಮಧ್ಯಾಹ್ನದ ವೇಳೆ ಓಡಾಡುವುದನ್ನು ಕಡಿಮೆ ಮಾಡಿ ಎಂದು ವಡೋದರಾ ಜಿಲ್ಲಾಡಳಿತವು ಸಲಹೆ ನೀಡಿತ್ತು. ಜತೆಗೆ ನಗರದ ಎಲ್ಲಾ ಸಿಗ್ನಲ್ ದೀಪಗಳನ್ನು ಮಧ್ಯಾಹ್ನದ ವೇಳೆ ಬಂದ್ ಮಾಡಿಸಿತ್ತು. ವಾಹನಗಳ ಸವಾರರು ಮತ್ತು ಪ್ರಯಾಣಿಕರು ಬಿಸಿಲಿನಲ್ಲಿ ನಿಲ್ಲದೇ ಇರಲಿ ಎಂಬುದು ಇದರ ಉದ್ದೇಶವಾಗಿತ್ತು.

ಆಂಧ್ರಪ್ರದೇಶದಲ್ಲಿ ಬೃಹತ್ ಬಂಡೆಯೊಂದು ಬಿಸಿಲಿನ ತಾಪಕ್ಕೆ ಎರಡು ಹೋಳಾಗಿದೆ ಎಂಬ ಸುದ್ದಿ ಕಳೆದವಾರ ಹೆಚ್ಚು ಸದ್ದು ಮಾಡಿತ್ತು. ರಾಜ್ಯದ ಕರ್ನೂಲು ಜಿಲ್ಲೆಯ ಗಂಗಂಡ್ಲಾ ಗ್ರಾಮದಲ್ಲಿ ಒಂದು ಬೃಹತ್ ಬಂಡೆ ಸರಿಯಾಗಿ ಮಧ್ಯೆ ಸೀಳಿ ಹೋಗಿತ್ತು. ಮಧ್ಯಾಹ್ನದ ವೇಳೆ ಬಂಡೆ ಎರಡು ಹೋಳಾಗುವಾಗ ಭಾರಿ ಸದ್ದಾಗಿತ್ತು. ಬಿಸಿಲಿನ ತಾಪಕ್ಕೇ ಬಂಡೆ ಹೋಳಾಗಿದೆ ಎಂದು ಅದರ ತಪ್ಪಲಿನ ಗ್ರಾಮದ ನಿವಾಸಿಗಳು ಹೇಳಿದ್ದರು. ಬಂಡೆಯನ್ನು ಪರಿಶೀಲಿಸಿದ ಜಿಲ್ಲಾಡಳಿತದ ಅಧಿಕಾರಿಗಳು, ಬಿಸಿಲಿನ ತಾಪಕ್ಕೇ ಬಂಡೆ ಹೋಳಾಗಿರುವ ಸಾಧ್ಯತೆ ಇದೆ. ಆದರೆ, ಆ ಬಗ್ಗೆ ವೈಜ್ಞಾನಿಕವಾಗಿ ಪರಿಶೀಲನೆ ನಡೆಸಬೇಕಿದೆ. ಆನಂತರವೇ ನೈಜ ಕಾರಣವನ್ನು ದೃಢಪಡಿಸಲು ಸಾಧ್ಯ ಎಂದು ಹೇಳಿದ್ದರು. ಬಂಡೆ ಪೂರ್ತಿ ಒಡೆದುಹೋದರೆ, ಪಕ್ಕದಲ್ಲೇ ಇರುವ ಮನೆಗಳ ಮೇಲೆ ಉರುಳುವ ಅಪಾಯವಿದೆ. ಜತೆಗೆ ಬೃಹತ್ ಬಂಡೆಯ ಮೇಲಿರುವ ಎರಡು ಕಿರುಬಂಡೆಗಳೂ ಉರುಳಿಬೀಳುವ ಅಪಾಯವಿದೆ. ಆದರೆ, ಅಪಾಯಕಾರಿ ಸ್ಥಳದಲ್ಲಿರುವ ಮನೆಗಳನ್ನು ತೆರವು ಮಾಡಲು ಜನರು ಒಪ್ಪುತ್ತಿಲ್ಲ. ಹೀಗಾಗಿ ಜಿಲ್ಲಾಡಳಿತವು, ಬಂಡೆಯ ಸುತ್ತ ಕಾಂಕ್ರೀಟ್‌ನ ಬೃಹತ್ ಕಟ್ಟೆಯನ್ನು ನಿರ್ಮಿಸಲು ಮುಂದಾಗಿದೆ.

ಸದಾ ಪ್ರವಾಸಿಗರಿಂದ ಗಿಜಿಗುಡುವ ಚೆನ್ನೈನ ಮರಿನಾ ಕಡಲತೀರದಲ್ಲಿ ಈಗ ತೀವ್ರ ಬಿಸಿಲಿನ ಕಾರಣ, ಜನರೇ ಇಲ್ಲದಂತಾಗಿದೆ. ವಿಶಾಖಪಟ್ಟಣದ ಕಡಲ ತೀರದಲ್ಲೂ ಇದೇ ಪರಿಸ್ಥಿತಿ ಇದೆ

ಒಡಿಶಾದ ಜಾಜ್‌ಪುರ ಜಿಲ್ಲೆಯ ಕಬಟಬಂಧ ಗ್ರಾಮವು ಅಲ್ಲಿ ನೆಲೆಸಿರುವ ಬಾವಲಿಗಳು ಮತ್ತು ಸಂತಾನೋತ್ಪತ್ತಿಗೆಂದು ಅಲ್ಲಿಗೆ ಬರುವ ವಲಸೆ ಹಕ್ಕಿಗಳಿಗಾಗಿಯೇ ಪ್ರಸಿದ್ಧಿ ಪಡೆದಿದೆ. ಈ ಸಣ್ಣ ಗ್ರಾಮದಲ್ಲಿರುವ ನಾಲ್ಕಾರು ಬೃಹತ್ ಆಲದ ಮರಗಳಲ್ಲಿ ಸಾವಿರಾರು ಬಾವಲಿಗಳಿವೆ. ಒಂದೊಂದು ಮರದಲ್ಲೂ ಕನಿಷ್ಠ ಐದು ಸಾವಿರ ಬಾವಲಿಗಳು ಇವೆ ಎಂದು ಅಂದಾಜಿಸಲಾಗಿದೆ. ಈ ಬಾವಲಿಗಳು ಈಗ ಬಿಸಿಲಿನ ತಾಪಕ್ಕೆ ಸತ್ತು ಬೀಳುತ್ತಿವೆ. ಈ ಗ್ರಾಮದಲ್ಲಿ ಬಾವಲಿಗಳು ದಿನಪೂರ್ತಿ ಕಿಚಗುಡುತ್ತಲೇ ಇರುತ್ತವೆ. ಇಲ್ಲಿನ ಜನ ಬಾವಲಿಗಳು ಮತ್ತು ಅವುಗಳ ಕಿಚಗುಡುವಿಕೆಯು ಅದೃಷ್ಟದ ಸಂಕೇತ ಎಂದು ಭಾವಿಸುತ್ತಾರೆ. ಈಗ ಬಾವಲಿಗಳು ಬಿಸಿಲಿನ ತಾಪಕ್ಕೆ ಸತ್ತು ಬೀಳುತ್ತಿರುವುದು ಆ ಜನರನ್ನು ಆತಂಕಕ್ಕೆ ದೂಡಿದೆ. ಹೀಗಾಗಿ ಆ ಜನರು ಮರದಲ್ಲಿ ನೇತುಬಿದ್ದಿರುವ ಬಾವಲಿಗಳಿಗೆ ಬಿಸಿಲಿನ ತಾಪ ತಗುಲಬಾರದು ಎಂದು ನೀರು ಸಿಂಪಡಿಸುತ್ತಿದ್ದಾರೆ. ನೆಲಕ್ಕೆ ಬೀಳುವ ಬಾವಲಿಗಳಿಗೂ ನೀರು ಸಿಂಪಡಿಸುತ್ತಿದ್ದಾರೆ. ಅರಣ್ಯ ಇಲಾಖೆ ಸಹ ಈ ಕೆಲಸಕ್ಕೆಂದೇ ಹಲವು ಸಿಬ್ಬಂದಿಯನ್ನು ನಿಯೋಜಿಸಿದೆ.



ಬಯಲು ಪ್ರದೇಶಗಳಲ್ಲಿ 40 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಅಧಿಕ, ಕರಾವಳಿಯಲ್ಲಿ 37 ಡಿಗ್ರಿ ಸೆಲ್ಸಿಯಸ್‌ಗಿಂತ ಅಧಿಕ, ಗುಡ್ಡಗಾಡು ಪ್ರದೇಶಗಳಲ್ಲಿ 30 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಅಧಿಕ ಉಷ್ಣಾಂಶ ದಾಖಲಾದರೆ ಅದನ್ನು ಬಿಸಿಗಾಳಿ ಎಂದು ಹವಾಮಾನ ಇಲಾಖೆ ವರ್ಗೀಕರಿಸಿದೆ

ಆಧಾರ: ಪಿಟಿಐ, ಪಿಐಬಿ, ಹವಾಮಾನ ಇಲಾಖೆ ಮುನ್ಸೂಚನೆಗಳು

ತಾಪದ ಪ್ರತಾಪ

ದೇಶದಲ್ಲಿ ಬಿಸಿಲಿನ ಪ್ರತಾಪ ಹಾಗೂ ಬಿಸಿಗಾಳಿಯ ತೀವ್ರತೆ ಎಷ್ಟರಮಟ್ಟಿಗೆ ಇದೆ ಎಂಬುದಕ್ಕೆ ಮಹಾರಾಷ್ಟ್ರದಲ್ಲಿ ಇದೇ ಭಾನುವಾರ ಸಂಭವಿಸಿದ ಅವಘಡವೇ ಸಾಕ್ಷಿ. ಸರ್ಕಾರ ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿದ್ದ 14 ಜನರು ಬಿಸಿಲಿನ ಝಳ ತಾಳಲಾರದೇ ಮೃತಪಟ್ಟಿದ್ದಾರೆ. ನವಿ ಮುಂಬೈನ ಖಾರ್‌ಘರ್ ಎಂಬಲ್ಲಿ ನಡೆದ ಕಾರ್ಯಕ್ರಮದಲ್ಲಿ ಲಕ್ಷಾಂತರ ಜನ ಭಾಗಿಯಾಗಿದ್ದರು. ಕಾರ್ಯಕ್ರಮದ ವೇದಿಕೆಗೆ ಮಾತ್ರ ಪೆಂಡಾಲ್ ಹಾಕಲಾಗಿತ್ತು. ಗಣ್ಯರನ್ನು ಬಿಟ್ಟರೆ ಇನ್ನಾರಿಗೂ ನೆರಳಿನ ವ್ಯವಸ್ಥೆ ಮಾಡಿರಲಿಲ್ಲ. ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಕಲ್ಪಿಸಿದ್ದ ಸರ್ಕಾರವು, ಬಿಸಿಲಿನಿಂದ ರಕ್ಷಿಸಿಕೊಳ್ಳಲು ನೆರಳಿನ ವ್ಯವಸ್ಥೆ ಮಾಡಿರಲಿಲ್ಲ. ಭಾನುವಾರ ಇಲ್ಲಿ ದಾಖಲಾಗಿದ್ದ 38 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ತಾಳಿಕೊಳ್ಳದೆ ಜನರು ಪ್ರಾಣ ಬಿಡಬೇಕಾಯಿತು.

ಮಹಾರಾಷ್ಟ್ರವೂ ಸೇರಿದಂತೆ ದೇಶದಾದ್ಯಂತ ಉಷ್ಣಾಂಶವು ಜನರ ಮೇಲೆ ಪ್ರಹಾರ ಮಾಡುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಬೇಸಿಗೆ ಋತು ಬಿರುಬೇಸಿಗೆಯ ಋತುವಾಗಿ ಮಾರ್ಪಾಡಾಗಿದ್ದು, ವಾಡಿಕೆಗಿಂತ ಹೆಚ್ಚು ಉಷ್ಣಾಂಶ ದಾಖಲಾಗುತ್ತಿದೆ. ಈ ವರ್ಷವಂತೂ ಬೇಸಿಗೆ ಅವಧಿಗಿಂತ ಮೊದಲೇ ಬಿಸಿಲಿನ ಪ್ರತಾಪ ಶುರುವಾಗಿತ್ತು. ಫೆಬ್ರುವರಿ ಕೊನೆ ಭಾಗದಲ್ಲೇ ಸೂರ್ಯ ಸುಡಲು ಆರಂಭಿಸಿದ್ದ. ಮಾರ್ಚ್ ಹೊತ್ತಿಗೆ ಬಿಸಿಗಾಳಿಯೂ ದಾಳಿಯಿಡಲು ಶುರುಮಾಡಿತು. ಹವಾಮಾನ ಇಲಾಖೆಯು (ಐಎಂಡಿ) ಬಿಸಿಗಾಳಿಯ ಮುನ್ಸೂಚನೆ ನೀಡಿತ್ತು.

ಏಪ್ರಿಲ್ ತಿಂಗಳಲ್ಲಿ ದೇಶದ ಹಲವು ಕಡೆಗಳಲ್ಲಿ ಬಿಸಿಗಾಳಿ ಹಾಗೂ ತೀವ್ರ ಉಷ್ಣಾಂಶ ಕಂಡುಬಂದಿದೆ. ಹಿಮಾಲಯ ಪ್ರದೇಶವನ್ನು ಹೊರತುಪಡಿಸಿ, ಕರ್ನಾಟಕವೂ ಸೇರಿದಂತೆ ದೇಶದ ಬಹುತೇಕ ರಾಜ್ಯಗಳಲ್ಲಿ ಉಷ್ಣಾಂಶವು ಈವರೆಗಿನ ಗರಿಷ್ಠ ಮಟ್ಟವನ್ನು ಮೀರಿದೆ. ಬಹುತೇಕ ಕಡೆ ಉಷ್ಣಾಂಶವು 40 ಡಿಗ್ರಿ ಸೆಲ್ಸಿಯಸ್‌ನ ಆಸುಪಾಸಿನಲ್ಲಿದೆ. ಕೆಲವು ಕಡೆಗಳಲ್ಲಿ ವಾಡಿಕೆಗಿಂತ ಸರಾಸರಿ 5 ಡಿಗ್ರಿ ಸೆಲ್ಸಿಯಸ್‌ನಷ್ಟು ಅಧಿಕ ಉಷ್ಣಾಂಶ ದಾಖಲಾಗಿದೆ.

ವಾಯವ್ಯ ಭಾರತ ಹಾಗೂ ಪೂರ್ವ ಭಾರತದ ಹಲವು ರಾಜ್ಯಗಳಲ್ಲಿ ಇದು ಇನ್ನೂ ವಿಕೋಪಕ್ಕೆ ಹೋಗಿದೆ. ಹರಿಯಾಣ, ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಒಡಿಶಾ, ಜಾರ್ಖಂಡ್, ಆಂಧ್ರ ಪ್ರದೇಶದಲ್ಲಿ ಬಿಸಿಗಾಳಿ ದಾಳಿ ನಡೆಸುತ್ತಿದೆ. ಸಿಕ್ಕಿಂ, ಪಂಜಾಬ್‌ನಲ್ಲೂ ಬಹುತೇಕ ಇದೇ ಸ್ಥಿತಿ ಇರಲಿದೆ. ರಾಜಸ್ಥಾನದ ಚುರು ಎಂಬಲ್ಲಿ 42.2 ಡಿಗ್ರಿ ಸೆಲ್ಸಿಯಸ್ ಉಷ್ಣತೆ ಕಂಡುಬಂದಿದೆ. ಈ ರಾಜ್ಯಗಳಲ್ಲಿ ಮುಂದಿನ ಎರಡರಿಂದ ನಾಲ್ಕು ದಿನಗಳವರೆಗೆ ಇದೇ ಪರಿಸ್ಥಿತಿ ಮುಂದುವರಿಯಲಿದೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ.

ಶ್ರೀಕಾಕುಳಂ, ವಿಶಾಖಪಟ್ಟಣ ಮೊದಲಾದ ಜಿಲ್ಲೆಗಳು ಸೇರಿದಂತೆ ಆಂಧ್ರ ಪ್ರದೇಶದ ಉತ್ತರ ಭಾಗ, ಕರಾವಳಿ ಭಾಗದಲ್ಲಿ ಬುಧವಾರವೂ ಬಿಸಿಗಾಳಿ ಬೀಸಲಿದೆ ಎಂದು ಇಲಾಖೆ ತಿಳಿಸಿದೆ. ರಾಯಲಸೀಮಾದಲ್ಲಿ 38ರಿಂದ 42 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರಲಿದೆ. ರಾಜ್ಯದ 116 ಮಂಡಲಗಳಲ್ಲಿ ಬಿಸಿಗಾಳಿಯ ಮುನ್ನೆಚ್ಚರಿಕೆ ನೀಡಿರುವ ರಾಜ್ಯ ಸರ್ಕಾರ, ಮುನ್ನೆಚ್ಚರಿಕೆ ವಹಿಸುವಂತೆ ಜನರಿಗೆ ಕರೆ ನೀಡಿದೆ. ಪಶ್ಚಿಮ ಬಂಗಾಳ, ತ್ರಿಪುರಾದಲ್ಲಿ ವಾರದ ಮಟ್ಟಿಗೆ ಶಾಲೆ, ಕಾಲೇಜು ಬಂದ್ ಮಾಡಲಾಗಿದೆ. ಈ ಮಧ್ಯೆ, ಜಮ್ಮು ಕಾಶ್ಮೀರ, ಲಡಾಖ್, ಪಂಜಾಬ್, ರಾಜಸ್ಥಾನದ ಅಲ್ಲಲ್ಲಿ ಮಳೆಯಾಗುವ ಮುನ್ಸೂಚನೆಯನ್ನೂ ಇಲಾಖೆ ನೀಡಿದೆ.

ಮುಂಬೈನಲ್ಲಿ ಬಿಸಿಲಿನ ತಾಪಕ್ಕೆ 14 ಜನರನ್ನು ಬಲಿ ಪಡೆದ ಕಾರ್ಯಕ್ರಮದಲ್ಲಿ ಸೇರಿದ್ದ ಜನ

ಸಿನಿ ಬಿಟ್ಸ್

‘ಹಯವದನ’ನಿಗೆ ಮದ್ವೆ ಯಾವಾಗ?

‘ಅಯ್ಯೋ ಹುಡ್ಗ ಅಡುಗೆ ಭಟ್ಟನಾ? ಹೋಟ್ಲಲ್ಲಿ ಕೆಲಸ ಮಾಡ್ತಾನಾ? ಹಾಗಿದ್ರೆ ನಮ್ ಹುಡ್ಗಿ ಕೊಡಲ್ಲ ಬಿಡಿ’ ಎನ್ನುವ ಪ್ರಸ್ತುತ, ವಾಸ್ತವ ವಿಷಯವನ್ನೇ ಇಟ್ಟುಕೊಂಡು ‘ರಾಘವೇಂದ್ರ ಸ್ಟೋರ್ಸ್’ ಕಟ್ಟಿದ್ದಾರೆ ನಿರ್ದೇಶಕ ಸಂತೋಷ್ ಆನಂದರಾಮ್. ಸ್ಟೋರ್ಸ್ ಉದ್ಘಾಟನೆಗೆ ಏ.28ರ ಮುಹೂರ್ತ ನಿಗದಿ ಮಾಡಿರುವ ಈ ‘ವೆಡ್ಡಿಂಗ್ ಪ್ಲ್ಯಾನರ್’, ಸುಂದರವಾದ ಆಹ್ವಾನ ಪತ್ರಿಕೆಯನ್ನು ಟ್ರೈಲರ್ ಮೂಲಕ ಕಳುಹಿಸಿಕೊಟ್ಟಿದ್ದಾರೆ.

‘ರಾಜಕುಮಾರ’, ‘ಯುವರತ್ನ’ ಹೀಗೆ ಕೊಂಚ ಹಾಸ್ಯವುಳ್ಳ ಗಂಭೀರ ಸಂದೇಶವನ್ನು ಹೊತ್ತ ಸಿನಿಮಾಗಳನ್ನು ತೆರೆಗೆ ತಂದಿರುವ ಸಂತೋಷ ಆನಂದರಾಮ್, ಈ ಬಾರಿ ಪೂರ್ಣ ಪ್ರಮಾಣದ ಹಾಸ್ಯ ರಸದೌತಣವನ್ನು ಬಡಿಸಲು ಸಜ್ಜಾಗಿರುವಂತಿದೆ. ‘ರಾಘವೇಂದ್ರ ಸ್ಟೋರ್ಸ್’ ಟ್ರೈಲರ್ ಇದಕ್ಕೆ ಸಾಕ್ಷ್ಯ. ‘ಹಯವದನ’ ಎಂಬ ಅಡುಗೆ ಭಟ್ಟನಿಗೆ ಮದುವೆ ಮಾಡಿಸುವುದೇ ಚಿತ್ರದ ಎಳೆ. ಟ್ರೈಲರ್‌ನಲ್ಲಿ ಎಂದಿನಂತೆ ನಟ ಜಗ್ಗೇಶ್ ಅವರು ತಮ್ಮ ತುಂಟತನವನ್ನು ಹೊರಹಾಕಿದ್ದಾರೆ. ಇದಕ್ಕೆ ನಟರಾದ ದತ್ತಣ್ಣ ಹಾಗೂ ಅಚ್ಯುತ್ ಕುಮಾರ್ ಸಾಥ್ ನೀಡಿದ್ದಾರೆ. ಅಜನೀಶ್ ಬಿ. ಲೋಕನಾಥ್ ‘ವಾದ್ಯಗೋಷ್ಠಿ’ ಚಿತ್ರಕ್ಕಿದೆ. ಚಿತ್ರದ ‘ಊಟ–ಉಪಚಾರ’ದ ವ್ಯವಸ್ಥೆ ಹೊಂಬಾಳೆ ಫಿಲ್ಮ್ಸ್‌ನ ವಿಜಯ ಕಿರಗಂದೂರು ಅವರದ್ದು.

‘ಕೆ.ಜಿ.ಎಫ್’, ‘ಕಾಂತಾರ’ದಂತಹ ಹಿಟ್ ಸಿನಿಮಾಗಳನ್ನು ನೀಡಿದ್ದ ಹೊಂಬಾಳೆ ಈ ರೀತಿಯ ಪ್ರಯೋಗಗಳಿಗೂ ಸಾಥ್ ನೀಡುತ್ತಿದೆ. ಹೊಂಬಾಳೆ ಹಾಗೂ ಸಂತೋಷ್ ಕಾಂಬಿನೇಷನ್‌ನಲ್ಲಿ ಮೂಡಿಬಂದಿದ್ದ ‘ರಾಜಕುಮಾರ’ ಹಾಗೂ ‘ಯುವರತ್ನ’ ಬಾಕ್ಸ್ ಆಫೀಸ್‌ನಲ್ಲಿ ಗೆದ್ದಿದ್ದವು. ಇದಾದ ಬಳಿಕ ‘ರಾಘವೇಂದ್ರ ಸ್ಟೋರ್ಸ್’ ಮೂಲಕ ಮತ್ತೊಮ್ಮೆ ಈ ಜೋಡಿ ಒಂದಾಗಿದೆ. ನಾಯಕಿಯಾಗಿ ಶ್ವೇತ ಶ್ರೀವಾಸ್ತವ್, ರವಿಶಂಕರ್ ಗೌಡ ತಾರಾಬಳಗದಲ್ಲಿದ್ದಾರೆ. ❖

ಮತ್ತೆ ಚಿತ್ರರಂಗದಲ್ಲಿ ಸಕ್ರಿಯವಾದ ಮೇಘನಾ ರಾಜ್

ವೈಯಕ್ತಿಕ ಕಾರಣಗಳಿಂದಾಗಿ ಸ್ಯಾಂಡಲ್‌ವುಡ್‌ನಿಂದ ಸಣ್ಣ ವಿರಾಮ ತೆಗೆದುಕೊಂಡಿದ್ದ ನಟಿ ಮೇಘನಾ ರಾಜ್ ‘ತತ್ಸಮ ತದ್ಭವ’ ಚಿತ್ರದ ಮೂಲಕ ಮರುಪ್ರವೇಶ ಪಡೆದಿದ್ದಾರೆ. ಪ್ರಜ್ವಲ್ ದೇವರಾಜ್, ಮೇಘನರಾಜ್, ಶ್ರುತಿ ಮುಖ್ಯಭೂಮಿಕೆಯಲ್ಲಿರುವ ಈ ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದ್ದು, ಬೆಂಗಳೂರಿನಲ್ಲಿ ಚಿತ್ರದ ಅಂತಿಮ ದೃಶ್ಯಗಳನ್ನು ಚಿತ್ರೀಕರಿಸಲಾಯಿತು.

‘ನಿಜವಾದ ಸ್ನೇಹಿತರು ಯಾವಾಗಲೂ ಜತೆಗಿರುತ್ತಾರೆ. ಕಷ್ಟ ಕಾಲದಲ್ಲಿಯೂ ಕೈಹಿಡಿದ ಅಂತಹ ಕೆಲ ಸ್ನೇಹಿತರು ನನ್ನ ಪಾಲಿಗೆ ಸಿಕ್ಕಿದ್ದಾರೆ. ಈ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಮರು ಪ್ರವೇಶ ಪಡೆಯಬೇಕೆಂದು ನನ್ನ ಸ್ನೇಹಿತರೆಲ್ಲ ನನಗಾಗಿಯೇ ಈ ಸಿನಿಮಾ ಮಾಡಿದ್ದಾರೆ. ಪನ್ನಗ ಭರಣ ಹಾಗೂ ಸ್ಫೂರ್ತಿ ಅನಿಲ್ ಚಿತ್ರ ನಿರ್ಮಾಣ ಮಾಡಿದ್ದು, ವಿಶಾಲ್ ಆತ್ರೇಯ ಒಳ್ಳೆಯ ಕಥೆಯೊಂದಿಗೆ ನಿರ್ದೇಶನ ಮಾಡಿದ್ದಾರೆ’ ಎಂದರು ಮೇಘನಾ ರಾಜ್.

‘ನನಗೆ ನಿರ್ದೇಶಕರು ಕಥೆ ಹೇಳಿದಾಗ ಬಹಳ ಇಷ್ಟವಾಯಿತು. ನಟಿ ಮೇಘನಾ ಜತೆಗೆ ಈ ಸಿನಿಮಾ ಎಂದಾಗ ನಮ್ಮದೇ ಸಿನಿಮಾ ಎಂಬ ಭಾವನೆ ಮೂಡಿತು. ಸ್ನೇಹಿತರ ಸಿನಿಮಾದಲ್ಲಿ ಅಭಿನಯಿಸಿದ ಖುಷಿಯಿದೆ’ ಎಂದು ಪ್ರಜ್ವಲ್ ತಿಳಿಸಿದರು.

‘ಇದೊಂದು ಕ್ರೈಮ್ ಥ್ರಿಲ್ಲರ್ ಚಿತ್ರ. ರೀರೆಕಾರ್ಡಿಂಗ್ ನಡೆಯುತ್ತಿದೆ. ಚುನಾವಣೆ ಮುಗಿದ ನಂತರ ತೆರೆಗೆ ಬರುತ್ತೇವೆ’ ಎಂದು ನಿರ್ಮಾಪಕ ಪನ್ನಗ ಭರಣ ಹೇಳಿದರು.

ನಟಿ ಶ್ರುತಿ ಮಾತನಾಡಿ, ‘ಸಮಾಜದಲ್ಲಿ ಯಾವುದೇ ಹೆಣ್ಣಿಗಾದರೂ ಅನುಕಂಪಕ್ಕಿಂತ ಅವಕಾಶ ಕೊಡುವುದು ಮುಖ್ಯ. ನಾನು ಈ ಚಿತ್ರದಲ್ಲಿ ಮನಶ್ಶಾಸ್ತ್ರ ತಜ್ಞೆಯಾಗಿ ಕಾಣಿಸಿಕೊಂಡಿದ್ದೇನೆ’ ಎಂದರು. ಚಿತ್ರಕ್ಕೆ ವಾಸುಕಿ ವೈಭವ್ ಸಂಗೀತ ನಿರ್ದೇಶನವಿದೆ. ❖

ಮೇಘನಾ ರಾಜ್, ಪ್ರಜ್ವಲ್ ದೇವರಾಜ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಇದೇ 14ರಂದು ಬಟಿಂಡಾದ ಸೇನಾನೆಲೆಯಲ್ಲಿ ನಡೆದ ಗುಂಡಿನ ದಾಳಿಯಲ್ಲಿ ನಾಲ್ವರು ಯೋಧರು ಮೃತಪಟ್ಟಿದ್ದರು. ಈ ನಾಲ್ವರು ಸೈನಿಕರು ಹಿಂದೂ ಧರ್ಮೀಯರಾಗಿದ್ದು, ಗುಂಡಿಟ್ಟು ಕೊಂದ ವ್ಯಕ್ತಿ ಸಿಖ್ ಧರ್ಮೀಯ ಎಂಬುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಹೇಳಲಾಗಿದೆ. ಹತ್ಯೆಗೀಡಾದ ಸೈನಿಕರು ‘18 ಹಾರ್ಸ್ ರೆಜಿಮೆಂಟ್’ಗೆ ಸೇರಿದವರು ಎಂಬುದಾಗಿ ‘ಸ್ಯಾಫ್ರನ್ ಡೈರೀಸ್’ ಎಂಬ ಟ್ವಿಟರ್ ಖಾತೆಯಲ್ಲಿ ಉಲ್ಲೇಖಿಸಲಾಗಿದೆ. ಈ ಟ್ವೀಟ್ ಅನ್ನು ಏಳು ಲಕ್ಷಕ್ಕೂ ಅಧಿಕ ಜನರು ವೀಕ್ಷಿಸಿದ್ದಾರೆ. ಆದರೆ ಈ ಮಾಹಿತಿ ತಪ್ಪು.

ಟ್ವೀಟ್‌ನಲ್ಲಿ ಉಲ್ಲೇಖಿಸಿರುವ ‘18 ಹಾರ್ಸ್ ರೆಜಿಮೆಂಟ್’ ಪಾಕಿಸ್ತಾನದ ಸೇನೆಯ ಒಂದು ವಿಭಾಗವಾಗಿದ್ದು, ಬಂಟಿಡಾದಲ್ಲಿ ಹತ್ಯೆಗೀಡಾದ ಯೋಧರು ಈ ವಿಭಾಗಕ್ಕೆ ಸೇರಿದವರು ಎಂಬುದು ತಪ್ಪು ಮಾಹಿತಿ ಎಂದು ಪಿಟಿಐ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. ಭಾರತ ಸೇನೆಯ ‘80 ಆರ್ಟಿಲರಿ ರೆಜಿಮೆಂಟ್’ಗೆ ಸೇರಿದ ಯೋಧರು ಹತ್ಯೆಯಾಗಿದ್ದಾರೆ. ಯೋಧರನ್ನು ಹತ್ಯೆ ಮಾಡಿದ ಆರೋಪಿಗಳು ಯಾವ ಧರ್ಮದವರು ಎಂಬುದು ಇನ್ನೂ ಖಚಿತಪಟ್ಟಿಲ್ಲ. ಎಫ್‌ಐಆರ್‌ನಲ್ಲಿ ಇಬ್ಬರು ಅಪರಿಚಿತರು ಎಂದು ಉಲ್ಲೇಖಿಸಲಾಗಿದೆ. ಈ ಪೈಕಿ ದೇಸಾಯಿ ಮೋಹನ್ ಎಂಬ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಸೋಮವಾರ ಮಾಹಿತಿ ನೀಡಿದ್ದಾರೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಕಣ್ಣೀರಿನಿಂದ ಪರಿಶುದ್ಧತೆ

ಉರಿಯಾರಿ ಮಳೆಗರೆಯೆ ಮರಳಿ ಸಸಿಯೇಳುವುದು|
ಮೆರುಗನೊಂದುವುದು ಪೊನ್ ಪುಟಕಾದ ಬಳಿಕ
ನರಜೀವವಂತು ಶುಚಿಯಹುದು ದುಃಖಾಶ್ರುವಿಂ |
ತರುವಾಯ ಪುನರುದಯ – ಮಂಕುತಿಮ್ಮ || 865 ||

ಪದ-ಅರ್ಥ: ಉರಿಯಾರಿ = ಉರಿ + ಆರಿ, ಮೆರುಗನೊಂದುವುದು = ಮೆರುಗನು + ಹೊಂದುವುದು, ಪೊನ್ = ಬಂಗಾರ, ನರಜೀವವಂತು = ನರಜೀವವು + ಅಂತು, ಪುನರುದಯ = ಪುನರ್ + ಉದಯ.

ವಾಚ್ಯಾರ್ಥ: ಬೇಸಿಗೆಯ ಉರಿ ಆರಿ, ಮಳೆಗರೆದ ಮೇಲೆ ಮತ್ತೆ ಸಸಿ ಬೆಳೆಯುತ್ತದೆ. ಪುಟಕ್ಕಿಟ್ಟ ಮೇಲೆಯೇ ಚಿನ್ನಕ್ಕೆ ಹೊಳಪು ಬರುವುದು. ಮನುಷ್ಯ ಜೀವವೂ ಹಾಗೆಯೇ. ದುಃಖದ ಕಣ್ಣೀರು ಸುರಿದ ಬಳಿಕ ಶುಚಿಯಾಗುತ್ತದೆ. ನಂತರ ಪುನಃ ಜೀವನದ ಉದಯವಾಗುತ್ತದೆ.

ವಿವರಣೆ: ಇದೊಂದು ಆಶಾವಾದವನ್ನು ತಿಳಿಸುವ ಕಗ್ಗ. ನೋವು ದುಃಖಗಳು ಯಾರನ್ನೂ ಬಿಟ್ಟಿದ್ದಲ್ಲ. ದು:ಖ ಬಂದಾಗ ಬದುಕು ಕುಸಿದೇ ಹೋದಂತೆ ಭಾಸವಾಗುತ್ತದೆ. ಮತ್ತೆ ಕೆಲದಿನಗಳ ನಂತರ ನಗು ಮೂಡುತ್ತದೆ. ದುಃಖವೆಂಬುದು ಮೋಡವಿದ್ದಂತೆ. ಯಾವಾಗಲೂ ಮೋಡವಿರುವುದು ಸಾಧ್ಯವೇ? ಬದುಕಿನ ದಾರಿಯ ಗಾಳಿ ಬೀಸಿದಾಗ ಕಾರ್ಮೋಡ ಕೂಡ ಸರಿದು ಹೋಗಿ ಸೂರ್ಯನ ಹೊಂಗಿರಣದ ದರ್ಶನವಾಗುತ್ತದೆ. ಕಾಳ್ಗಿಚ್ಚು ಕಾಡನ್ನು ಆವರಿಸಿದಾಗ ಎಲ್ಲವೂ ಸುಟ್ಟು ಕರಕಾಗಿ ಹೋಗುತ್ತದೆ. ಕಾಡಿನ ಜೀವದ್ರವ್ಯವೆಲ್ಲ ನಾಶವಾಗಿ ಹೋದಂತೆ ತೋರುತ್ತದೆ. ಆದರೆ ಮಳೆಗಾಲ ಬಂದಾಗ, ಭಗವಂತನ ಕೃಪೆ ಮಳೆ ಹನಿಯ ರೂಪದಲ್ಲಿ ಬಂದಂತೆ ನೆಲವನ್ನು ತಂಪುಮಾಡುತ್ತದೆ. ಸೃಷ್ಟಿಯ ಪುನರ್ ಸೃಷ್ಟಿಯ ತಹತಹಿಕೆ ಎಂಥದ್ದೆಂದರೆ, ಎಲ್ಲವೂ ನಾಶವಾದಂತೆ ತೋರಿದ ನೆಲದಾಳದಲ್ಲಿ ಚಿಗುರಲು ಬೀಜಗಳು ಸಿದ್ಧವಾಗಿ ನಿಂತಿವೆ. ಒಂದು ವಾರದಲ್ಲಿ ಹಸುರೆಲ್ಲ ಹೊರಬಂದು, ನೆಲ ಸಸ್ಯಶ್ಯಾಮಲೆಯಾಗುತ್ತದೆ. ಮತ್ತೆ ಜೀವ ತುಡಿಯುತ್ತದೆ. ಭೂಮಿಯಿಂದ ಹೊರತೆಗೆದ ಬಂಗಾರ ಅಷ್ಟು ಆಕರ್ಷಕವಾಗಿ ಕಾಣುವುದಿಲ್ಲ, ಆದರೆ ಅದಕ್ಕೆ ಪುಟಕೊಟ್ಟಾಗ ಮೆರಗು ಬರುತ್ತದೆ. ಪುಟ ಕೊಡುವುದೆಂದರೇನು? ಬಂಗಾರವನ್ನು ಬೆಂಕಿಗೆ ಹಾಕುವುದು. ಅದು ಬಂಗಾರಕ್ಕೆ ಕಷ್ಟವಲ್ಲವೆ? ನೋವು ತರುವುದಿಲ್ಲವೆ? ಆದರೆ ಬೆಂಕಿಯಲ್ಲಿ ಹಾಯ್ದು ಬರುವಾಗ ಬಂಗಾರಕ್ಕೆ ಏನೂ ಆಗುವುದಿಲ್ಲ. ಅದರಲ್ಲಿದ್ದ ಕಸರು, ಕಸ ಸುಟ್ಟು ಹೋಗಿ ಅದು ಪರಿಶುದ್ಧವಾಗುತ್ತದೆ. ಅಗ ಅದಕ್ಕೆ ಹೊಳಪು ಬರುತ್ತದೆ. ಆದ್ದರಿಂದ ಪುಟಕೊಡುವುದು ನೋವು ನೀಡುವ ಕಾರ್ಯವಲ್ಲ, ಚಿನ್ನವನ್ನು ಶುದ್ಧೀಕರಿಸುವ ಪ್ರಕ್ರಿಯೆ. ಕಗ್ಗದ ಮಾತು ತುಂಬ ಸುಂದರ. ಮೈಸುಟ್ಟುಕೊಂಡ ಕಾಡು ಹೇಗೆ ಒಂದು ಮಳೆಯಿಂದ ತನ್ನನ್ನು ಪುನ ರ್ ಸೃಷ್ಟಿಸಿಕೊಳ್ಳುತ್ತದೋ, ಬೆಂಕಿಯ ನೋವನ್ನುಂಡ ಚಿನ್ನ ಹೇಗೆ ಪರಿಶುದ್ಧವಾಗುತ್ತದೋ, ಅಂತೆಯೇ ಮನುಷ್ಯರೂ ಕೂಡ ದುಃಖದ ಮೂಸೆಯಲ್ಲಿ ಹಾದು ಬಂದು, ದುಃಖಾಶ್ರುಗಳನ್ನು ಹರಿಸಿ, ಅದರಿಂದ ಶುಚಿಯಾಗುತ್ತಾರೆ. ಪುಟಕೊಟ್ಟ ವ್ಯಕ್ತಿಗಳಾಗುತ್ತಾರೆ. ನೋವೆಲ್ಲ ಪಾವಕವಾಗುತ್ತದೆ. ಭಗವಂತ ಮನುಷ್ಯರನ್ನು ದುಃಖಸಾಗರದ ಆಳಕ್ಕೆ ಕರೆದೊಯ್ಯುವುದು ಅವರನ್ನು ಮುಳುಗಿಸಲಲ್ಲ, ಅವರನ್ನು ಪರಿಶುದ್ಧರನ್ನಾಗಿಸುವುದಕ್ಕೆ ಎಂಬುದು ನೆನಪಿರಬೇಕು. ಆಗ ಪಡುವ ನೋವು, ಪರಿಶುದ್ಧವಾಗುವ ಕಾರ್ಯ ಎಂಬುದು ಅರ್ಥವಾಗುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಬುಧವಾರ ಏಪ್ರಿಲ್ 19, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಕೃಷ್ಣ ಚತುರ್ದಶಿ ಗಂ. 11-24 ನಕ್ಷತ್ರ: ರೇವತಿ ಗಂ. 23-53 ಯೋಗ: ವೈಧೃತಿ ಗಂ. 15-25, ಕರಣ: ಶಕುನಿ ಗಂ. 11-24, ಮೇಷ ಮಾಸದ 05 ನೇ ದಿನ, ಮಳೆನಕ್ಷತ್ರ: ಅಶ್ವಿನಿ 2. ರಾಹುಕಾಲ : ಮಧ್ಯಾಹ್ನ 12-00 – 01-30 , ಸೂರ್ಯೋದಯ : 06-19 ಸೂರ್ಯಾಸ್ತ : 06-40
ಮುಸ್ಲಿಂ ದಿನಾಂಕ : 27 ರಂಜಾನ್
ದಿನ ವಿಶೇಷ : ಸಬ್-ಎ-ಖಾದರ್ (ಹಿಂದಿನ ದಿನ-ಮುಸ್ಲಿಂ)
ಅದೃಷ್ಟ ಸಂಖ್ಯೆ : 9, 4

ಮೇಷ: ಹೊಸ ನೀರು ಬಂದಾಗ ಹಳೇಯ ನೀರು ಹೋಗುವುದು ಸಹಜವಾದರೂ ಹಳೇಯ ಜನರನ್ನು ಮರೆಯದಿರಿ. ಎದುರಾದ ವ್ಯಕ್ತಿಗಳನ್ನು ಸರಿಯಾಗಿ ಮಾತನಾಡಿಸುವ ಪ್ರವೃತ್ತಿ ಬೆಳೆಸಿಕೊಳ್ಳುವುದು ಉತ್ತಮ.

ವೃಷಭ: ಹರಿತವಾದ ವಸ್ತುಗಳಿಂದ ಸಣ್ಣ-ಪುಟ್ಟ ಗಾಯ ಆಗುವ ಸಾಧ್ಯತೆ ಇದೆ. ರಕ್ತದಾನ ಮಾಡಲು ಬಯಸುವ ವ್ಯಕ್ತಿಗಳು ಅನಗತ್ಯ ಸಲಹೆಗಳಿಗೆ ತಲೆಕೊಡಲು ಹೋಗದಿರಿ. ಹೊಸ ವಸ್ತುಗಳ ಖರೀದಿ ಇಂದು ಬೇಡ.

ಮಿಥುನ: ಹಳೆಯ ಮಿತ್ರರ ಕೆಲವು ಮಾತುಗಳು ಸಂದರ್ಭಕ್ಕನುಸಾರವಾಗಿ ನೆನಪಾಗುತ್ತದೆ. ಹವಾನಿಯಂತ್ರಣದ ವಾತಾವರಣವು ಸರಿಹೋಗದೆಯೇ ಇರಬಹುದು. ಕಿರಿಯರ ಮಾತೆ ಆದರೂ ಕಡೆಗಣಿಸದೆ ಪರಾಮರ್ಶಿಸಿ.

ಕರ್ಕಾಟಕ: ಬೇರೆಯ ವ್ಯಕ್ತಿಯ ಕೆಲವು ವಸ್ತುಗಳು ಅರಿವಿಲ್ಲದಂತೆ ಮನೆಯನ್ನು ಸೇರುವ ಸಾಧ್ಯತೆ ಇದೆ. ಮನೆಯಲ್ಲಿನ ವಿಷಯಗಳನ್ನು ಹೊರಗೆ ಸೋರಿಕೆ ಮಾಡುತ್ತಿರುವ ವ್ಯಕ್ತಿಗಳು ಖಂಡಿತವಾಗಿ ನಿಮ್ಮೊಂದಿಗೆ ಇರುತ್ತಾರೆ.

ಸಿಂಹ: ಬೇರೆ ಬೇರೆ ಕಾರಣಗಳಿಗಾಗಿ ಒಂದೆ ಸ್ಥಳಕ್ಕೆ ಪುನಃ ಭೇಟಿ ನೀಡುವಂತಾಗುತ್ತದೆ. ಮಾನಸಿಕ ಖಿನ್ನತೆಯಿಂದ ಹೊರಬರಲು ವೈದ್ಯರ ಸಹಾಯ ಪಡೆಯುವುದು ಸರಿ. ಆದಾಯದಷ್ಟೇ ಖರ್ಚು ಸಹ ಇರಲಿದೆ.

ಕನ್ಯಾ: ಸಾಮಾಜಿಕ ಜಾಲತಾಣಗಲ್ಲಿ ನಿಮ್ಮನ್ನು ವೀಕ್ಷಿಸಿದ ವ್ಯಕ್ತಿಯಿಂದಾಗಿ ಅನುಕೂಲಗಳಾಗುವ ಸಾಧ್ಯತೆ ಇದೆ. ಮನೆಯಲ್ಲಿ ನಡೆಯುವ ಕಾರ್ಯಕ್ರಮಕ್ಕಾಗಿ ದಿನಸಿ ವಸ್ತುಗಳ ಖರೀದಿ ದೊಡ್ಡ ಮಟ್ಟದಲ್ಲಿ ಮಾಡುವಿರಿ.

ತುಲಾ: ವಿದ್ಯಾಭ್ಯಾಸಕ್ಕಾಗಿ ಮನೆಯಿಂದ ದೂರ ಇರುವ ನಿಮಗೆ ಪ್ರತಿ ಬಾರಿಯ ಶುಭಕಾರ್ಯಗಳು ತಪ್ಪಿ ಹೋಗುವುದನ್ನು ಸಹಿಸಲಾರದೆ ದುಃಖಿತರಾಗುತ್ತೀರಿ. ಕಾರ್ಯಕ್ಷೇತ್ರದ ಬದಲಾವಣೆಗೆ ಪ್ರಯತ್ನಿಸುತ್ತಿರುವವರಿಗೆ ಸುಸಮಯವಾಗಿದೆ.

ವೃಶ್ಚಿಕ: ಮಕ್ಕಳ ಏಳ್ಗೆಯನ್ನು ಕಾಣಬೇಕೆಂದು ಬಯಸುವುದು ಅವರ ಅರಿವಿಗೆ ಬಾರದ ವಿಷಯವಾಗಿ ಉಳಿಯುತ್ತದೆ. ಹಿರಿಯ ನಾಗರಿಕರನ್ನು ಮನೆಯಲ್ಲಿಯೇ ಶುಶ್ರೂಷೆ ಮಾಡುವ ಆಯಾಗಳಿಗೆ ನಿರೀಕ್ಷೆಯ ಹಣ ಸಿಗಲಾಗದು.

ಧನು: ಸದ್ಯಕ್ಕೆ ಸಿಕ್ಕಿರುವ ಯಶಸ್ಸು ಅತ್ಯುನ್ನತ ಮಟ್ಟದ್ದಲ್ಲವಾದ್ದರಿಂದ ಅದನ್ನೆ ಹೆಚ್ಚು ಸಂಭ್ರಮಿಸುವ ಬದಲು ದೊಡ್ಡದ್ದಕ್ಕೆ ಪ್ರಯತ್ನ ಪಡಿ. ಗುರುವಿನ ಆಶೀರ್ವಾದವನ್ನು ಬೇಡಿ ನಿಮ್ಮ ಕೆಲಸವನ್ನು ಶುರು ಮಾಡುವುದು ಸೂಕ್ತಕರ.

ಮಕರ: ಮನೆಗೆ ಹೊಂದಿಕೊಂಡೆ ಇರುವಂತಹ ದೇವಾಲಯದ ಜೀರ್ಣೋದ್ಧಾರ ಮಾಡುವ ಮಾತುಕತೆ ಆಗಬಹುದು. ಎಲ್ಲ ಕಾರ್ಯಗಳಿಗೂ ಹೆಗಲು ಕೊಡುವಂಥ ಸಂಗಾತಿಯನ್ನು ಅಭಿನಂದಿಸಲು ಸಂದರ್ಭ ಒದಗಲಿದೆ.

ಕುಂಭ: ಕೆಲವು ವಿದಾಯಗಳು ಬೇಸರದ ಸಂಗತಿಯಾಗಬಹುದು. ಪ್ರಶಾಂತತೆಯನ್ನು ಅಪೇಕ್ಷಿಸುವ ನಿಮಗೆ ಇಂದು ಜನರ ವಿನಾಕಾರಣದ ಗದ್ದಲಗಳು ತೊಂದರೆಯನ್ನು ಉಂಟುಮಾಡುತ್ತದೆ. ಹಿತವಾದ ಆಹಾರ ಸೇವಿಸಿರಿ.

ಮೀನ: ಔಷಧವಿಜ್ಞಾನದ ಬಗ್ಗೆ ಓದಿಕೊಂಡವರು ಕೆಲಸಕ್ಕೆ ಪ್ರಯತ್ನಿಸುವ ಬದಲು ಉನ್ನತ ವ್ಯಾಸಂಗ ನಡೆಸುವುದು ಒಳ್ಳೆಯದು. ಅಭೀಷ್ಟಗಳನ್ನು ನೆರವೇರಿಸಿಕೊಳ್ಳಲು ದೇವರ ಪ್ರಾರ್ಥನೆಯ ಜೊತೆಗೆ ಪ್ರಯತ್ನವಿರಲಿ.

ಪದಬಂಧ 5293 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಾಲ್ಕು ಆಶ್ರಮಗಳಲ್ಲಿ ಮೂರನೆಯದು (4)
3.ರುಚಿಕಟ್ಟಾದ ಅಡುಗೆಯನ್ನು ಹೀಗೂ ಹೇಳುವರು (4)
5.ಬೆಂಗಳೂರಿನಲ್ಲಿರುವ ಭವ್ಯ ಸರ್ಕಾರಿ ಕಟ್ಟಡ (5)
7.ನಾಗಸ್ವರ ಇಲ್ಲಿ ಕೇಳಿಸುತ್ತಿದೆ (3)
8.ನಿಗದಿತ ಬೆಲೆಗಿಂತ ಹೆಚ್ಚು ಹಣ ಬಯಸುವವನು (5)
11.ಅರಸ ನೋಡಿರುವ ಕಾಡು (3)
12.ಈತ ಅಡುಗೆಯಲ್ಲಿ ನುರಿತವ (5)
15.ವಿವರಗಳಿಂದ ಕೂಡಿದ ಹೇಳಿಕೆ (4)
16.ಅವನ ಸಾವು! (4)

ಮೇಲಿಂದ ಕೆಳಕ್ಕೆ

1.ಇದು ನಿಜವಾಗಿಯೂ ಇರುವಂಥದ್ದು (4)
2.ಮುಖ್ಯವಾದುದು ಇದು (3)
3.ಅಳು ಪದದ ವಿರುದ್ಧ ಪದ (2)
4.ತಲೆ ಮೇಲೆ ಕಲಶ ಹೊತ್ತು ನಡೆಸುವ ಉತ್ಸವ(3)
6.ಸುವಾಸನೆ ಇಲ್ಲಿ ಹರಡಿದೆ (3)
7.ಸಾಗಿಸುವ ಸಾಧನ (3)
8.ರೂಪದೊಂದಿಗೆ ಸೇರಿಕೊಂಡಿರುವ ಸೊಬಗು (3)
9.ಕಚ್ಚಾಪ್ರತಿಯು ಉಲ್ಟಾ ಕಾಣುತ್ತಿದೆಯಲ್ಲಾ? (3)
10.ದಡ್ಡನಲ್ಲದವನ ಬುದ್ಧಿವಂತಿಕೆ! (4)
11.ಹಿತವಲ್ಲದ್ದು ಇದು (3)
14.ಹಾಲಾಹಲದ ಹತ್ತಿರವಿರಿಸಿದ ಕ್ಷೀರ (2)

1		2		■	3			4
	■		■	■		■	■	
5			6		■	7		
	■	■		■	■		■	■
■	■	8			9		■	■
■	■		■	■		■	■	10
11			■	12		13		
	■	■	14	■	■		■	
15				■	16			

5292ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಸ್ಥಾಪಕ 4.ದಮನ
5.ಗುಣಾಕಾರ 6.ಬಡಗಣ
8.ತೆರ 10.ತಮ
13.ದಾಮೋದರ 14.ಹರಿದಾರಿ
15.ದಾಷ್ಟೀಕ 16.ಅವನಿ

ಮೇಲಿಂದ ಕೆಳಕ್ಕೆ:
1.ಉದರವೈರಾಗ್ಯ 2.ಸ್ಥಾನಬದ್ಧತೆ
3.ನಕಾಶೆ 5.ಗುಣವಂತ
7.ಸಿಂಹಾವಲೋಕನ
9.ರಹದಾರಿ
11.ಮಚ್ಚರದಾನಿ 12.ಬೈರಿಗೆ

ಸುಡೊಕು 5679

	5		7		2		8	
						3		4
	7	8	3		9		1	
1							2	3
	2							
8		7			1		5	9
2		3	9		6	5		8
	4	6		8			9	7
	8		5		4		3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ

5678 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಷೇರುಪೇಟೆ ವಹಿವಾಟು 183



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,706
ಇಂದಿನ ಅಂತ್ಯ	17,660
▼	46
ದಿನದ ಕನಿಷ್ಠ	17,766

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹400
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹405

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈಂಡ್)	₹1680(1695)
ಸೋಯಾ (ರಿಫೈಂಡ್)	₹1025(1015)
ಸೂರ್ಯಕಾಂತಿ (ರಿಫೈಂಡ್)	₹1050(1070)
ಪಾಮೋಲಿನ್	₹970(955)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹15400
ಎಸಿ	₹8120
ಆರ್‌ಪಿ	₹10400
ಆರ್‌ಸಿ	₹5650

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1,000-1,500
ಮಧ್ಯಮ	₹700-1,000
ಸಣ್ಣ	₹300-700

ಕೊಬ್ಬರಿ ಧಾರಣೆ

ಅರಸೀಕೆರೆ	₹9350-9360
ತುರುವೇಕೆರೆ	₹9400-9400
ಪುತ್ತೂರು (ಇತರೆ)	₹4500-7500

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹147
ಆರ್‌ಎಸ್‌ಎಸ್-5	₹141.50
ಗುಡ್ ಲಾಟ್	₹131

(ಪ್ರತಿ ಕೆ.ಜಿಗೆ)

ಆ್ಯಪಲ್: ಭಾರತದಲ್ಲಿ ಮೊದಲ ರಿಟೇಲ್ ಮಳಿಗೆ

ಮುಂಬೈ (ಪಿಟಿಐ): ಆ್ಯಪಲ್ ಕಂಪನಿಯ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ (ಸಿಇಒ) ಟಿಮ್ ಕುಕ್ ಅವರು ಭಾರತದಲ್ಲಿ ಕಂಪನಿಯು ಆರಂಭಿಸಿರುವ ಮೊದಲ ರಿಟೇಲ್ ಮಳಿಗೆಯನ್ನು ಮಂಗಳವಾರ ಉದ್ಘಾಟಿಸಿದರು. ಮಳಿಗೆಗೆ ಬಂದ ಗ್ರಾಹಕರನ್ನು ಸ್ವಾಗತಿಸಿದರು.

ಮಳಿಗೆಯಲ್ಲಿ ಏನನ್ನಾದರೂ ಖರೀದಿಸಬೇಕು ಅಥವಾ ಮಳಿಗೆ ಹೇಗಿದೆ ಎಂಬುದನ್ನು ಖುದ್ದಾಗಿ ನೋಡಬೇಕು ಎಂಬ ಹಂಬಲದಿಂದ ನೂರಾರು ಮಂದಿ 'ಆ್ಯಪಲ್' ಪ್ರಿಯರು ಸೋಮವಾರ ರಾತ್ರಿಯಿಂದಲೇ ಮಳಿಗೆಯ ಎದುರು ಸಾಲುಗಟ್ಟಿ ನಿಂತಿದ್ದರು. ಆ್ಯಪಲ್ ಕಂಪನಿಯು ಪಾಲುದಾರರ ಮೂಲಕ ತನ್ನ ಉತ್ಪನ್ನಗಳನ್ನು ಭಾರತದಲ್ಲಿ ಮಾರಾಟ ಮಾಡಲು ಆರಂಭಿಸಿದ 25 ವರ್ಷಗಳ ನಂತರದಲ್ಲಿ ಇದೇ ಮೊದಲ ಬಾರಿಗೆ ರಿಟೇಲ್ ಮಳಿಗೆ ತೆರೆದಿದೆ.

ಗ್ರಾಹಕರು ಕುಕ್ ಜೊತೆ ಸೆಲ್ಫಿ ತೆಗೆದುಕೊಂಡರು, ಅವರ ಹಸ್ತಾಕ್ಷರ ಪಡೆದರು. ಗ್ರಾಹಕರ ಪೈಕಿ ಒಬ್ಬರು ತಮ್ಮ ಬಳಿ ಇರುವ ಸರಿಸುಮಾರು ನಾಲ್ಕು ದಶಕಗಳಷ್ಟು ಹಳೆಯದಾದ ಆ್ಯಪಲ್ ಮ್ಯಾಕ್ ತಂದಿದ್ದರು. 'ನಾನು 1984ರಿಂದಲೂ ಆ್ಯಪಲ್ ಉತ್ಪನ್ನಗಳನ್ನು ಬಳಸುತ್ತಿದ್ದೇನೆ' ಎಂದು ಅವರು ಹೇಳಿದರು. 'ನಾನು ಸೋಮವಾರ ರಾತ್ರಿ 8 ಗಂಟೆಯಿಂದ ಸಾಲಿನಲ್ಲಿ ನಿಂತಿದ್ದೇನೆ. ಬೆಳಿಗ್ಗೆ ತಿಂಡಿಯನ್ನೂ ತಿಂದಿಲ್ಲ, ಸ್ನಾನವನ್ನೂ ಮಾಡಿಲ್ಲ. ನಾವೆಲ್ಲ ಬೆವರಿನಲ್ಲಿ ತೊಯ್ದುಹೋಗಿದ್ದೇವೆ. ಆದರೆ ಬಹಳ ಉತ್ಸುಕರಾಗಿದ್ದೇವೆ' ಎಂದು ಇನ್ನೊಬ್ಬರು ಗ್ರಾಹಕರು ಹೇಳಿದರು.

ಮಳಿಗೆ ಉದ್ಘಾಟನೆಯನ್ನು ನೋಡಲು ಗ್ರಾಹಕರೊಬ್ಬರು ರಾಜಸ್ಥಾನದಿಂದ ವಿಮಾನದಲ್ಲಿ ಬಂದಿದ್ದರು. ಈ ಮಳಿಗೆಯಲ್ಲಿ 100 ಜನ ಸಿಬ್ಬಂದಿ ಇರುತ್ತಾರೆ. 18 ಭಾರತೀಯ ಭಾಷೆಗಳಲ್ಲಿ ಇಲ್ಲಿನ ಸಿಬ್ಬಂದಿ ಜೊತೆ ವ್ಯವಹರಿಸಬಹುದು ಎಂದು ಕಂಪನಿ ಹೇಳಿದೆ.

ಮುಂಬೈನಲ್ಲಿ ಆ್ಯಪಲ್ ಕಂಪನಿ ಆರಂಭಿಸಿರುವ ದೇಶದ ಮೊದಲ ಆ್ಯಪಲ್ ರಿಟೇಲ್ ಮಳಿಗೆ ಮುಂದೆ ಗ್ರಾಹಕರು ಮಂಗಳವಾರ ಸಾಲುಗಟ್ಟಿ ನಿಂತಿದ್ದರು – ಪಿಟಿಐ ಚಿತ್ರ

'ಮಲಬಾರ್'ಗೆ ಆಲಿಯಾ ರಾಯಭಾರಿ

ಬೆಂಗಳೂರು: ಬಾಲಿವುಡ್ ನಟಿ ಆಲಿಯಾ ಭಟ್ ಅವರು ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿಯ ಬ್ರ್ಯಾಂಡ್ ರಾಯಭಾರಿ ಆಗಲು ಒಪ್ಪಂದಕ್ಕೆ ಸಹಿ ಮಾಡಿದ್ದಾರೆ.

ಚಿನ್ನಾಭರಣ ಮಾರಾಟ ಕಂಪನಿಗಳ ಪೈಕಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್, ಜಾಗತಿಕವಾಗಿ ಆರನೆಯ ಅತಿದೊಡ್ಡ ಕಂಪನಿ. ಹತ್ತು ದೇಶಗಳಲ್ಲಿ ಇದು ಜಾಲವನ್ನು ಹೊಂದಿದೆ. ಬ್ರಿಟನ್, ಆಸ್ಟ್ರೇಲಿಯಾ, ಕೆನಡಾ, ದಕ್ಷಿಣ ಆಫ್ರಿಕಾ, ಈಜಿಪ್ಟ್, ಬಾಂಗ್ಲಾದೇಶ, ಟರ್ಕಿ ಮತ್ತು ನ್ಯೂಜಿಲೆಂಡ್‌ನಲ್ಲಿ ಹೊಸದಾಗಿ ಮಾರುಕಟ್ಟೆ ಪ್ರವೇಶಿಸಲು ಕಂಪನಿ ಉದ್ದೇಶಿಸಿದೆ. ಈ ಸಂದರ್ಭದಲ್ಲಿ ಆಲಿಯಾ ಅವರು ಬ್ರ್ಯಾಂಡ್ ರಾಯಭಾರಿ ಆಗಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಜಾಗತಿಕ ಬ್ರ್ಯಾಂಡ್‌ನ ರಾಯಭಾರಿ ಆಗುತ್ತಿರುವುದು ಖುಷಿ ತಂದಿದೆ' ಎಂದು ಆಲಿಯಾ ಹೇಳಿದ್ದಾರೆ.

ಶಾಖಾ ಕಚೇರಿಯಿಂದ ಪ್ರಧಾನ ಕಚೇರಿ ಸೇವೆಗೆ ಜಿಎಸ್‌ಟಿ ಅನ್ವಯ

ನವದೆಹಲಿ (ಪಿಟಿಐ): ಕಂಪನಿಯ ಶಾಖೆಯೊಂದರ ನೌಕರರು ಬೇರೆ ರಾಜ್ಯದಲ್ಲಿ ಇರುವ ತಮ್ಮ ಮುಖ್ಯ ಕಚೇರಿಗೆ ನೀಡಿದ ಸೇವೆಗಳಿಗೆ ಶೇಕಡ 18ರಷ್ಟು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪಾವತಿ ಮಾಡಬೇಕು ಎಂದು ಜಿಎಸ್‌ಟಿ ನ್ಯಾಯಾಲಯವು (ಎಎಆರ್) ಹೇಳಿದೆ. ಅಲ್ಲದೆ, ಮುಖ್ಯ ಕಚೇರಿಯಲ್ಲಿನ ನೌಕರರು ಬೇರೆ ರಾಜ್ಯದಲ್ಲಿ ಇರುವ ತಮ್ಮ ಶಾಖಾ ಕಚೇರಿಗೆ ನೀಡಿದ ಸೇವೆಗಳಿಗೆ ಕೂಡ ಇದೇ ದರದ ಜಿಎಸ್‌ಟಿ ಅನ್ವಯವಾಗುತ್ತದೆ ಎಂದು ಅದು ಹೇಳಿದೆ.

ಕರ್ನಾಟಕದಲ್ಲಿ ನೋಂದಾಯಿತ ಕಚೇರಿ ಹೊಂದಿರುವ ಪ್ಯೂರಿಫಿಸ್-ಲ್ಯೂಬ್ರಿಕ್ ಪ್ರೈ.ಲಿ. ಕಂಪನಿಯು ತಮಿಳುನಾಡು ರಾಜಧಾನಿ ಚೆನ್ನೈನಲ್ಲಿ ಶಾಖೆಯೊಂದನ್ನು ಹೊಂದಿದೆ. ಶಾಖೆಯಿಂದ ಮುಖ್ಯ ಕಚೇರಿಗೆ ನೀಡುವ ಸೇವೆಗಳಿಗೆ ಜಿಎಸ್‌ಟಿ ಅನ್ವಯವಾಗುತ್ತದೆಯೇ ಎಂಬ ಬಗ್ಗೆ ಆದೇಶ ನೀಡುವಂತೆ ಕಂಪನಿಯು ಎಎಆರ್ ಕದ ತಟ್ಟಿತ್ತು.

ಈ ಕಂಪನಿಯ ಶಾಖೆಯು ಬೆಂಗಳೂರಿನಲ್ಲಿ ಇರುವ ಪ್ರಧಾನ ಕಚೇರಿಗೆ ಎಂಜಿನಿಯರಿಂಗ್, ವಿನ್ಯಾಸ ಮತ್ತು ಲೆಕ್ಕಪತ್ರ ನಿರ್ವಹಣೆ ಸೇವೆಗಳನ್ನು ಒದಗಿಸುತ್ತಿದೆ. ನೌಕರರನ್ನು ಇಡೀ ಕಂಪನಿಗಾಗಿ ನೇಮಕ ಮಾಡಿಕೊಳ್ಳಲಾಗುತ್ತದೆಯೇ ವಿನಾ ಯಾವುದೋ ಒಂದು ಶಾಖೆಗಾಗಿ ಅಥವಾ ಪ್ರಧಾನ ಕಚೇರಿಗಾಗಿ ಎಂದಲ್ಲ ಎಂಬ ವಾದ ಕಂಪನಿಯದ್ದಾಗಿತ್ತು.

ಕಂಪನಿಗಳು ಬೇರೆ ಬೇರೆ ರಾಜ್ಯಗಳಲ್ಲಿ ಭೌತಿಕ ಅಸ್ತಿತ್ವ ಹೊಂದಿದ್ದರೆ ಜಿಎಸ್‌ಟಿ ವ್ಯವಸ್ಥೆಯ ಅಡಿ ಅವು ಅಲ್ಲಿ ಪ್ರತ್ಯೇಕವಾಗಿ ನೋಂದಣಿ ಮಾಡಿಕೊಳ್ಳಬೇಕು. 'ವ್ಯಕ್ತಿಯೊಬ್ಬ ನೇಮಕ ಮಾಡಿಕೊಂಡಿರುವ ನೌಕರರು ಶಾಖಾ ಕಚೇರಿಯಿಂದ ಪ್ರಧಾನ ಕಚೇರಿಗೆ ಅಥವಾ ಪ್ರಧಾನ ಕಚೇರಿಯಿಂದ ಶಾಖಾ ಕಚೇರಿಗೆ ಸೇವೆ ಒದಗಿಸಿದ್ದಲ್ಲಿ, ಎರಡೂ ಕಚೇರಿಗಳು ಪ್ರತ್ಯೇಕ ಜಿಎಸ್‌ಟಿ ನೋಂದಣಿ ಹೊಂದಿದ್ದರೆ ತೆರಿಗೆ ಪಾವತಿ ಮಾಡಬೇಕಾಗುತ್ತದೆ' ಎಂದು ಎಎಆರ್ ಆದೇಶದಲ್ಲಿ ಹೇಳಿದೆ.

ಈ ಆದೇಶವು, ಪ್ರಧಾನ ಕಚೇರಿಯಿಂದ ಶಾಖಾ ಕಚೇರಿಗಳಿಗೆ ಹಾಗೂ ಶಾಖಾ ಕಚೇರಿಗಳಿಂದ ಪ್ರಧಾನ ಕಚೇರಿಗೆ ಸೇವೆ ಒದಗಿಸುವುದಕ್ಕೆ ಸಂಬಂಧಿಸಿದಂತೆ ಹತ್ತು ಹಲವು ಸಮಸ್ಯೆಗಳನ್ನು ಹೊಸದಾಗಿ ಸೃಷ್ಟಿ ಮಾಡಬಹುದು ಎಂದು ಕೆಪಿಎಂಜಿ ಸಂಸ್ಥೆಯ ಪರೋಕ್ಷ ತೆರಿಗೆ ವಿಭಾಗದ ರಾಷ್ಟ್ರೀಯ ಮುಖ್ಯಸ್ಥ ಅಭಿಷೇಕ್ ಜೈನ್ ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮುಂದಿನ ವರ್ಷ ಭಾರತಕ್ಕೆ ಫೋಕ್ಸ್‌ವ್ಯಾಗನ್ ಇ.ವಿ

ಕೊಚ್ಚಿ (ಪಿಟಿಐ): ಫೋಕ್ಸ್‌ವ್ಯಾಗನ್ ಕಂಪನಿಯು ವಿದ್ಯುತ್ ಚಾಲಿತ ಕಾರನ್ನು ಭಾರತದ ಮಾರುಕಟ್ಟೆಗೆ ಮುಂದಿನ ವರ್ಷ ಬಿಡುಗಡೆ ಮಾಡಲಿದೆ. ತಾನು ತಯಾರಿಸುವ ಪ್ರೀಮಿಯಂ ವರ್ಗದ ಎಸ್‌ಯುವಿ ಐಡಿ.4 ಕಾರನ್ನು ಕಂಪನಿಯು ಭಾರತದಲ್ಲಿ ಬಿಡುಗಡೆ ಮಾಡಲಿದ್ದು, ದೇಶದಲ್ಲಿ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಇ.ವಿ. ಮಾರುಕಟ್ಟೆಯಲ್ಲಿ ಇರುವ ಅವಕಾಶಗಳನ್ನು ಬಳಸಿಕೊಳ್ಳುವ ಗುರಿ ಹೊಂದಿದೆ.

2030ರ ವೇಳೆಗೆ ಭಾರತದಲ್ಲಿ ತಾನು ನಡೆಸುವ ವಹಿವಾಟುಗಳಲ್ಲಿ ಶೇಕಡ 25ರಿಂದ ಶೇ 30ರಷ್ಟು ವಹಿವಾಟುಗಳು ಇ.ವಿ.ಗಳಿಂದ ಬರಲಿವೆ ಎಂಬ ಅಂದಾಜನ್ನು ಕಂಪನಿ ಹೊಂದಿದೆ. 'ನಮ್ಮ ಕಾರ್ಯತಂತ್ರವು ಬಹಳ ಸ್ಪಷ್ಟವಾಗಿದೆ. ಮೊದಲನೆಯದು, ಪ್ರೀಮಿಯಂ ಕಾರುಗಳನ್ನು ಬಿಡುಗಡೆ ಮಾಡುವುದು. ಎರಡನೆಯದು, ವಿದ್ಯುತ್ ಚಾಲಿತ ವಾಹನಗಳನ್ನು ಮಾರುಕಟ್ಟೆಗೆ ತರುವುದು' ಎಂದು ಕಂಪನಿಯ ಭಾರತದ ಬ್ರ್ಯಾಂಡ್ ನಿರ್ದೇಶಕ ಆಶಿಷ್ ಗುಪ್ತ ಹೇಳಿದ್ದಾರೆ. ಐಡಿ.4 ಕಾರಿನ ಬಿಡಿಭಾಗಗಳನ್ನು ಆಮದು ಮಾಡಿಕೊಂಡು, ಅವುಗಳನ್ನು ಭಾರತದಲ್ಲಿ ಜೋಡಿಸಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)
₹239-533
ದ್ವಿತಳಿ (ಬಿ.ವಿ)
₹261-643

ಮುಂಬೈ ಧಾರಣೆ

ಶೇಂಗಾ

18–4-2023

ಜಾವಾ 70/80(ಹೊಸ)	11150-11200
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	12000-12100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1690(1705)
ಒಂದು ವಾರದ ಡೆಲಿವರಿ	1685(1700)
ಸೋಯಾ ಕಚ್ಚಾ	920(905)
ಪಾಮ್ ವಾರದ ಡೆಲಿವರಿ	968(953)
ಸೂರ್ಯಕಾಂತಿ ಎಣ್ಣೆ ಕಚ್ಚಾ	920(910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60275(60250)
ಬೆಳ್ಳಿ ಕೆ.ಜಿ 74600(75450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಂಕ್ಷಿಪ್ತ ಸುದ್ದಿ

ಬೀಜಿಂಗ್: ಬೆಂಕಿ ಅವಘಡ, 21 ಸಾವು

ಬೀಜಿಂಗ್(ಪಿಟಿಐ): ಚೀನಾದ ರಾಜಧಾನಿ ಬೀಜಿಂಗ್‌ನಲ್ಲಿ ಆಸ್ಪತ್ರೆ ಕಟ್ಟಡವೊಂದರಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ 21 ಮಂದಿ ಮೃತಪಟ್ಟಿದ್ದಾರೆ.

ಬೀಜಿಂಗ್‌ನ ಫೆಂಗ್ಟಾಯಿ ಜಿಲ್ಲೆಯಲ್ಲಿ ಅವಘಡ ನಡೆದಿದೆ. ರಕ್ಷಣಾ ಕ್ರಮವಾಗಿ 71 ರೋಗಿಗಳನ್ನು ಸ್ಥಳಾಂತರಿಸಲಾಗಿದೆ ಎಂದು ಸ್ಥಳೀಯ ದೈನಿಕ ವರದಿ ಮಾಡಿದೆ. ಅವಘಡಕ್ಕೆ ಕಾರಣ ತಿಳಿದುಬಂದಿಲ್ಲ. ತನಿಖೆ ನಡೆಯುತ್ತಿದೆ ಎಂದು ವರದಿ ತಿಳಿಸಿದೆ.

ಪರ್ವತಾರೋಹಿ ರಕ್ಷಣೆ

ಕಠ್ಮಂಡು (ಪಿಟಿಐ): ಅನ್ನಪೂರ್ಣ ಪರ್ವತದ ತುದಿಯಿಂದ ವಾಪಸಾಗುವ ವೇಳೆ 4ನೇ ಶಿಬಿರದ ಸಮೀಪ ಕಣ್ಮರೆಯಾಗಿದ್ದ ಭಾರತೀಯ ಮಹಿಳಾ ಪರ್ವತಾರೋಹಿ ಬಲ್‌ಜೀತ್ ಕೌರ್ (27) ಅವರನ್ನು ಪತ್ತೆ ಮಾಡಲಾಗಿದೆ ಎಂದು ಯಾತ್ರೆಯ ಆಯೋಜಕರು ಮಂಗಳವಾರ ತಿಳಿಸಿದ್ದಾರೆ.

ವೈಮಾನಿಕ ತಂಡದಿಂದ ಶೋಧ ಕಾರ್ಯ ನಡೆಸಲಾಗಿತ್ತು. ಈ ವೇಳೆ 4ನೇ ಶಿಬಿರದ ಬಳಿಯೇ ಪತ್ತೆಯಾಗಿದ್ದಾರೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹನುಮಂತ ರಾಜು, ಊರು ತಿಳಿಸಿಲ್ಲ

- **ಪ್ರಶ್ನೆ:** ನಾನು ಸಾರ್ವಜನಿಕ ಸಂಸ್ಥೆಯೊಂದರಲ್ಲಿ 32 ವರ್ಷ ಕರ್ತವ್ಯ ನಿರ್ವಹಿಸಿ ಸ್ವಇಚ್ಛೆಯಿಂದ ಮಾರ್ಚ್ 31ರಂದು ನಿವೃತ್ತಿ ಪಡೆದಿದ್ದೇನೆ. ಈಗ ನನಗೆ ಸುಮಾರು ₹ 80 ಲಕ್ಷ ಮೊತ್ತ ನಿವೃತ್ತಿಯಿಂದ ದೊರಕಬಹುದು, ಸುಮಾರು 3 ತಿಂಗಳ ನಂತರ ₹ 60,000 ನಿವೃತ್ತಿ ವೇತನ ಸಿಗಬಹುದು. ಈಗ ಸಿಗುವ ₹ 80 ಲಕ್ಷವನ್ನು ಕಡಿಮೆ ತೆರಿಗೆ ಬರುವಂತೆ ಯಾವ ಯೋಜನೆಗಳಲ್ಲಿ ತೊಡಗಿಸಬಹುದು?

ಉತ್ತರ: ನೀವು ಈಗಾಗಲೇ ಸ್ವಯಂ ನಿವೃತ್ತಿ ಹೊಂದಿದ್ದೀರಿ, ಮುಂದೆ ಪಿಂಚಣಿ ಗಳಿಸುವವರಿದ್ದೀರಿ. ಈ ಮೊತ್ತ ವಾರ್ಷಿಕವಾಗಿ ₹ 7.20 ಲಕ್ಷ ಆಗಲಿದೆ. ಅದರೊಡನೆ ನೀವು ₹ 80 ಲಕ್ಷ ನಿಯೋಜಿಸಿ, ಆ ಮೊತ್ತಕ್ಕೆ ಬರುವ ಬಡ್ಡಿ ಅಥವಾ ಹೂಡಿಕೆಯಿಂದ ಬರುವ ಡಿವಿಡೆಂಡ್ ಇತ್ಯಾದಿಗೂ ತೆರಿಗೆ ಅನ್ವಯವಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಈ ಕೆಳಗಿನ ಸೂಕ್ತವಾದ ಆಯ್ಕೆ ಮಾಡಿಕೊಳ್ಳಬಹುದು.

1. ಹಿರಿಯ ನಾಗರಿಕರ ಉಳಿತಾಯ ಯೋಜನೆ (ಎಸ್‌ಸಿಎಸ್‌ಎಸ್): ನೀವು ಸ್ವಯಂ ನಿವೃತ್ತಿ ಪಡೆದಿರುವುದರಿಂದ, ಸಮೀಪದ ಬ್ಯಾಂಕ್ ಅಥವಾ ಅಂಚೆ ಕಚೇರಿಯಲ್ಲಿ ನಿಮ್ಮ ಹಾಗೂ ನಿಮ್ಮ ಪತ್ನಿಯ ಹೆಸರಲ್ಲಿ ಜಂಟಿ ಖಾತೆ ತೆರೆದು ₹ 30 ಲಕ್ಷದ ತನಕ ಹೂಡಿಕೆ ಮಾಡಬಹುದು. ಈಗ ಇದರ ಮೇಲೆ ಶೇ 8.20ರಷ್ಟು ಬಡ್ಡಿ ಸಿಗುತ್ತಿದೆ. ನಿಮಗೆ ನಿವೃತ್ತಿಯಿಂದ ಸಿಕ್ಕ ಹಣವನ್ನು ಸೂಕ್ತ ದಾಖಲೆಗಳೊಂದಿಗೆ ಒಂದು ತಿಂಗಳಲ್ಲಿ ಇದರಲ್ಲಿ ತೊಡಗಿಸಿ.

2. ಮಾಸಿಕ ಆದಾಯ ಯೋಜನೆ (ಎಂಐಎಸ್): ಅಂಚೆ ಇಲಾಖೆಯ ಮಾಸಿಕ ಆದಾಯ ಯೋಜನೆಯ ಅಡಿ ಜಂಟಿ ಖಾತೆ ತೆರೆದು ₹ 15 ಲಕ್ಷದವರೆಗೆ ಹೂಡಿಕೆ ಮಾಡಬಹುದು. ಇದರ ಮೇಲೆ ಪ್ರಸ್ತುತ ಶೇ 7.10ರಷ್ಟು ಬಡ್ಡಿ ಸಿಗುತ್ತದೆ.

3. ಪಬ್ಲಿಕ್ ಪ್ರಾವಿಡೆಂಟ್ ಫಂಡ್: ಇದು ಏಕ ಕಂತಿನ ಹೂಡಿಕೆಯಲ್ಲ. 15 ವರ್ಷಗಳವರೆಗೆ ವಾರ್ಷಿಕವಾಗಿ ₹ 1.50 ಲಕ್ಷದಷ್ಟು ಹೂಡಿಕೆಗೆ ಅವಕಾಶವಿದೆ. ಇದರ ಮೇಲೆ ಬರುವ ಬಡ್ಡಿಯು ತೆರಿಗೆಯಿಂದ ಸಂಪೂರ್ಣವಾಗಿ ಮುಕ್ತ. ಇದರ ಮೇಲೆ ಶೇ 7.10ರಷ್ಟು ಬಡ್ಡಿ ಸಿಗುತ್ತದೆ.

4. ಉಡುಗೊರೆ ಮೊತ್ತದ ಹೂಡಿಕೆ: ನಿಮ್ಮ ಒಂದಷ್ಟು ಹಣವನ್ನು ನಿಮ್ಮ ಕುಟುಂಬದವರಿಗೆ (ಪತ್ನಿ, ಮಕ್ಕಳು, ತಂದೆ-ತಾಯಿ ಇತ್ಯಾದಿ) ಉಡುಗೊರೆ ನೀಡಿ ಆ ಮೊತ್ತವನ್ನು ಅವರು ಹೂಡಿಕೆ ಮಾಡಬಹುದು. ಆದರೆ ಅವರಿಗೆ ಸ್ವಂತ ಆದಾಯಕ್ಕೆ ಯಾವ ತೆರಿಗೆ ದರ ಅನ್ವಯಿಸುತ್ತದೋ ಅದರಂತೆ ತೆರಿಗೆ ನಿರ್ಣಯವಾಗುತ್ತದೆ. ಈ ರೀತಿ ಉಡುಗೊರೆ ಹಣ ನೀಡುವ ಮೊದಲು ಸೂಕ್ತ 'ಉಡುಗೊರೆ ಪತ್ರ' ಹೊಂದುವುದು ಸೂಕ್ತ. ಇಂತಹ ಮೊತ್ತದ ವರ್ಗಾವಣೆ ಆದಾಯ ತೆರಿಗೆಯ ಸೆಕ್ಷನ್ 56(2) ಅಡಿ ವಿನಾಯಿತಿ ಹೊಂದಿದೆ.

5. ಚಿನ್ನದ ಬಾಂಡ್: ಕೇಂದ್ರ ಸರ್ಕಾರ ವಾರ್ಷಿಕವಾಗಿ ಬಿಡುಗಡೆ ಮಾಡುವ ಚಿನ್ನದ ಬಾಂಡ್‌ಅನ್ನು ಹೂಡಿಕೆಗೆ ಆಯ್ಕೆ ಮಾಡಬಹುದು. ಇದರ ಮೇಲೆ ಬರುವ ವಾರ್ಷಿಕ ಬಡ್ಡಿ (ಶೇ. 2.50) ಆದಾಯ ತೆರಿಗೆಯ ಸೆಕ್ಷನ್ 10(15) (vi) ಅಡಿ ತೆರಿಗೆಯಿಂದ ಮುಕ್ತವಾಗಿದೆ. ಹೂಡಿಕೆಯ ಪೂರ್ಣ ಅವಧಿ (8 ವರ್ಷ) ಪೂರೈಸಿದ ಬಾಂಡ್‌ಗಳ ಮೌಲ್ಯವರ್ಧನೆಗೆ ತೆರಿಗೆ ಇರುವುದಿಲ್ಲ.

6. ಷೇರು/ಮ್ಯೂಚುವಲ್ ಫಂಡ್: ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 112(ಎ) ಪ್ರಕಾರ ಈಕ್ವಿಟಿ ಷೇರುಗಳು, ಈಕ್ವಿಟಿ-ಆಧಾರಿತ ಮ್ಯೂಚುವಲ್ ಫಂಡ್‌ಗಳ ಮಾರಾಟದಿಂದ ಬರುವ ದೀರ್ಘಾವಧಿಯ ಬಂಡವಾಳ ವೃದ್ಧಿ ಲಾಭದ ಮೇಲೆ ವಾರ್ಷಿಕ ₹ 1 ಲಕ್ಷದ ತನಕ ತೆರಿಗೆ ವಿನಾಯಿತಿ ಇದೆ. ಅದಕ್ಕೂ ಮೇಲ್ಪಟ್ಟ ಮೊತ್ತಕ್ಕೆ ಶೇ 10ರಷ್ಟು ದೀರ್ಘಾವಧಿ ಬಂಡವಾಳ ವೃದ್ಧಿ ಲಾಭ ತೆರಿಗೆ ಇರುತ್ತದೆ. ಇಂತಹ ಹೂಡಿಕೆಗಳಲ್ಲಿ ಮಾರುಕಟ್ಟೆಯ ಅಪಾಯವೂ ಇರುವ ಕಾರಣ ಈ ಕ್ಷೇತ್ರದಲ್ಲಿ ಹೂಡಿಕೆಗೆ ಅನುಭವ ಬೇಕು.

ನೀವು ಆಯ್ಕೆ ಮಾಡುವ ತೆರಿಗೆ ವಿಧಾನ ಅನುಸರಿಸಿ (ಹಳೆಯ ತೆರಿಗೆ ಪದ್ಧತಿ), ಬಡ್ಡಿಯ ಮೇಲೆ ವಾರ್ಷಿಕವಾಗಿ ₹ 50,000 ಹಾಗೂ ಎಸ್‌ಸಿಎಸ್‌ಎಸ್ ಅಥವಾ ಪಿಪಿಎಫ್ ಮೇಲೆ ₹ 1.50 ಲಕ್ಷದತನಕ ವಿನಾಯಿತಿ ಸಿಗುತ್ತದೆ. ಆದರೆ ನಿಮಗೆ ಈ ಎಲ್ಲಾ ಹೂಡಿಕೆಯ ಸನ್ನಿವೇಶದಲ್ಲಿ ಯಾವ ತೆರಿಗೆ ಪದ್ಧತಿ ಸೂಕ್ತ (ಹೊಸ ಅಥವಾ ಹಳೆಯ ತೆರಿಗೆ ಪದ್ಧತಿ) ಎನ್ನುವುದನ್ನು ಎಲ್ಲಾ ಆದಾಯ ಹಾಗೂ ವಿನಾಯಿತಿಗಳನ್ನು ತುಲನೆ ಮಾಡಿ ನಿರ್ಧರಿಸಿ.

ಕೇಶವ ನಾಯಕ್, ಜೆ.ಪಿ.ನಗರ, ಬೆಂಗಳೂರು.

- **ಪ್ರಶ್ನೆ:** ನಾನು ಹಿರಿಯ ನಾಗರಿಕ, ವಯಸ್ಸು 75 ವರ್ಷ. ಆಧಾರ್-ಪ್ಯಾನ್ ಜೋಡಣೆ ಬಗ್ಗೆ ಈಚೆಗೆ ಪದೇ ಪದೇ ಸುದ್ದಿ ಬರುತ್ತಿದೆ. ನಾನು ಬಡ್ಡಿ ಆದಾಯ ಮಾತ್ರದಿಂದ ಬದುಕು ನಿರ್ವಹಿಸುತ್ತಿದ್ದೇನೆ. ನನ್ನ ಆದಾಯ ವರ್ಷಕ್ಕೆ ₹ 2.75 ಲಕ್ಷ, ತೆರಿಗೆ ಬರುವುದಿಲ್ಲ. ಹಾಗಿದ್ದರೂ ಆಧಾರ್-ಪ್ಯಾನ್ ಜೋಡಣೆ ಕಡ್ಡಾಯವೇ?

ಉತ್ತರ: ಆಧಾರ್-ಪ್ಯಾನ್ ಜೋಡಣೆ ಪ್ರಕ್ರಿಯೆ ಕಳೆದ ಕೆಲವು ತಿಂಗಳಿನಿಂದ ಚಾಲ್ತಿಯಲ್ಲಿದ್ದರೂ ಸರ್ಕಾರ ಇದನ್ನು ಕಟ್ಟುನಿಟ್ಟಾಗಿ ಜಾರಿ ಮಾಡುವುದಕ್ಕಾಗಿ ಜೋಡಣೆ ಮಾಡದಿರುವುದರ ಅಡ್ಡ ಪರಿಣಾಮವನ್ನು ತುಸುವೇ ಸಡಿಲಿಸಿ ಜೂನ್ 30ರತನಕ ₹ 1000 ಪಾವತಿಸಿ ಜೋಡಣೆಗೆ ಅವಕಾಶ ಕೊಟ್ಟಿದೆ. ಮುಖ್ಯವಾಗಿ 80 ವರ್ಷ ವಯಸ್ಸು ಮೇಲ್ಪಟ್ಟವರಿಗೆ ಹಾಗೂ ಅನಿವಾಸಿ ಭಾರತೀಯರಿಗೆ, ವಿದೇಶಿ ನಾಗರಿಕರಿಗೆ, ಜಮ್ಮು-ಕಾಶ್ಮೀರ, ಅಸ್ಸಾಂ, ಮೇಘಾಲಯ ರಾಜ್ಯದ ನಿವಾಸಿಗಳಿಗಷ್ಟೇ ಇದರಿಂದ ವಿನಾಯಿತಿ ಇದೆ. ಹೀಗಾಗಿ ಯಾರು ಪ್ಯಾನ್ ಹೊಂದಿದ್ದಾರೋ ಅವರು ಆದಾಯದ ಪರಿಮಿತಿ ಇಲ್ಲದೆ ಆಧಾರ್-ಪ್ಯಾನ್ ಜೋಡಣೆ ಮಾಡಬೇಕು.

ಪ್ಯಾನ್ ಹೊಂದಿರುವ ಮತ್ತು ಆಧಾರ್ ಸಂಖ್ಯೆ ಪಡೆಯಲು ಅರ್ಹರಾಗಿರುವ ಪ್ರತಿ ವ್ಯಕ್ತಿಯೂ ಪ್ಯಾನ್ ನಿಷ್ಕ್ರಿಯವಾಗುವುದನ್ನು ತಪ್ಪಿಸಲು ಇವೆರಡನ್ನು ಜೋಡಿಸಬೇಕು. 2017ರ ಜುಲೈ 01ರ ನಂತರ ಆದಾಯ ತೆರಿಗೆ ವಿವರ ಸಲ್ಲಿಸುವ ಸಂದರ್ಭದಲ್ಲಿ, ಆಧಾರ್ ಸಂಖ್ಯೆಯನ್ನು ಉಲ್ಲೇಖಿಸಬೇಕಾಗುತ್ತದೆ. ಇದು ಕೂಡ ಅನಿವಾರ್ಯವಾಗಿ ನಿಮ್ಮ ಪ್ಯಾನ್‌ಅನ್ನು ಆಧಾರ್‌ನೊಂದಿಗೆ ಜೋಡಿಸುವ ಅವಕಾಶ ಕೊಡುತ್ತದೆ. ಈ ಪ್ರಕ್ರಿಯೆಗೆ ಒಳಗಾಗದವರು ಆಧಾರ್-ಪ್ಯಾನ್ ಜೋಡಣೆ ಮಾಡಿಕೊಳ್ಳಲು ಇನ್ನೂ ಅವಕಾಶವಿದೆ.

ಒಂದು ವಿವರಣೆ

ಮಾರ್ಚ್ 12ರ 'ಪ್ರಶ್ನೋತ್ತರ' ಅಂಕಣದಲ್ಲಿ ಪ್ರಕಟವಾದ ಹಿರಿಯ ನಾಗರಿಕರ ಉಳಿತಾಯ ಖಾತೆಯಲ್ಲಿನ ಹೂಡಿಕೆಗೆ ಸಂಬಂಧಿಸಿದ ಉತ್ತರದಲ್ಲಿ 'ವಯಸ್ಸು 60 ದಾಟಿದ ಹಿರಿಯ ನಾಗರಿಕರು ತಮ್ಮ ನಿವೃತ್ತಿಯ ನಂತರ ಸ್ವಂತ ಉಳಿತಾಯದಿಂದ ಹೂಡಿಕೆ ಮಾಡಲು ಅವಕಾಶವಿಲ್ಲ' ಎಂದಿದೆ. ಆದರೆ ವಯಸ್ಸಿನ ಈ ನಿಬಂಧನೆಯು 55 ಮತ್ತು 60 ವರ್ಷ ವಯಸ್ಸಿನ ನಡುವೆ ನಿವೃತ್ತಿ ಹೊಂದಿದವರಿಗೆ ಮಾತ್ರ ಅನ್ವಯಿಸುತ್ತದೆ. ಹೀಗಾಗಿ 60 ವರ್ಷ ವಯಸ್ಸು ದಾಟಿದ ಯಾರು ಬೇಕಾದರೂ ಈ ಯೋಜನೆಯಲ್ಲಿ ಹೂಡಿಕೆ ಮಾಡಬಹುದು. ಈ ವಿಚಾರವನ್ನು ಅಂಚೆ ಇಲಾಖೆಯ ನಿವೃತ್ತ ಉದ್ಯೋಗಿ ಗೋಸಾಡ ಕೃಷ್ಣ ಭಟ್ ಅವರು ಗಮನಕ್ಕೆ ತಂದಿದ್ದಾರೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು-560001 ಇ-ಮೇಲ್: businessdesk@prajavani.co.in

'ಅಮೆರಿಕ ಪತ್ರಕರ್ತನಿಗೆ ಜಾಮೀನು ಇಲ್ಲ'

ಮಾಸ್ಕೊ (ಎಪಿ): ಗೂಢಚರ್ಯೆ ನಡೆಸಿರುವ ಆಪಾದನೆಯ ಮೇಲೆ ಅಮೆರಿಕದ 'ವಾಲ್ ಸ್ಟ್ರೀಟ್ ಜರ್ನಲ್'ನ ವರದಿಗಾರ ಇವಾನ್ ಗೆರ್ಸ್‌ಕೊವಿಚ್ ಬಂಧಿಸಿರುವುದನ್ನು ರಷ್ಯಾ ನ್ಯಾಯಾಧೀಶರು ಎತ್ತಿಹಿಡಿದಿದ್ದಾರೆ.

ಬಂಧನದ ಬಳಿಕ ಮೊದಲ ಬಾರಿಗೆ ಇಲ್ಲಿಯ ನ್ಯಾಯಾಲಯಕ್ಕೆ ಇವಾನ್ ಅವರನ್ನು ಹಾಜರು ಪಡಿಸಲಾಗಿತ್ತು. ವಿಚಾರಣೆ ನಡೆಸಿದ ನ್ಯಾಯಧೀಶರು ಜಾಮೀನು ನೀಡಲು ನಿರಾಕರಿಸಿದ್ದು, 'ಬಂಧನ ವಿಚಾರದಲ್ಲಿ ಯಾವುದೇ ಬದಲಾವಣೆ ಇಲ್ಲ, ಮೇ 29ರವರೆಗೂ ಜೈಲಿನಲ್ಲೇ ಇರುತ್ತಾರೆ' ಎಂದು ತೀರ್ಪು ನೀಡಿದ್ದಾರೆ.

ಅದಕ್ಕೆ ಉತ್ತರವಾಗಿ ಇವಾನ್, 'ಎಲ್ಲವೂ ಅರ್ಥವಾಗಿದೆ ತುಂಬಾ ಧನ್ಯವಾದಗಳು' ಎಂದು ಉತ್ತರಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ
ಬಂಟ್ವಾಳ
ಕೋಕ 12,500-25,000
ಹೊಸತು 27,500-38,000
ಹಳತು 48,000-53,000
ಚನ್ನಗಿರಿ
ರಾಶಿ 46,700-47,639
ಕಾರ್ಕಳ
ಹೊಸತು 30,000-39,000
ಹಳತು 40,000-53,000
ಕುಂದಾಪುರ
ಹಳೆಚಾಲಿ 44,000-44,500
ಹೊಸಚಾಲಿ35,000-36,000
ಪುತ್ತೂರು
ಕೋಕ 11,000-25,000
ಹೊಸತು 32,500-39,000
ಸಾಗರ
ಬಿಳಿಗೋಟು 28,199-30,099
ಚಾಲಿ 35,299-36,219
ಕೋಕ 29,399-29,399
ಕೆಂಪುಗೋಟು 33249-33678
ರಾಶಿ 43,609-47,299
ಸಿಪ್ಪೆಗೋಟು 4,529-20,569
ಶಿವಮೊಗ್ಗ
ಬೆಟ್ಟೆ 45,100-52,369
ಗೊರಬಲು 20,012-34,450
ರಾಶಿ 33,199-48,069
ಸರಕು 46,159-81,996
ಶಿರಸಿ
ಬೆಟ್ಟೆ 32,599-43,299
ಬಿಳಿಗೋಟು 22,699-34,099
ಚಾಲಿ 33,099-36,899
ಕೆಂಪುಗೋಟು 25,601-33,499
ರಾಶಿ 41,018-45199
ತುಮಕೂರು
ರಾಶಿ 45,900-46,900
ಯಲ್ಲಾಪುರ
ಆಪಿ 52,799-58,942
ಬಿಳಿಗೋಟು24,499-33,899
ಚಾಲಿ 33,801-39,201
ಕೋಕ 16,899-29,899
ಕೆಂಪುಗೋಟು 24,099-34,899
ರಾಶಿ 40,090-49,969
ತಟ್ಟಿಬೆಟ್ಟೆ 36,100-44,419

ಭಾರತದ ವಿದ್ಯಾರ್ಥಿಗಳಿಗೆ ಆಸ್ಟ್ರೇಲಿಯಾದ 5 ವಿ.ವಿಗಳ ನಿರ್ಬಂಧ

ಮೆಲ್ಬರ್ನ್ (ಪಿಟಿಐ): ಉದ್ಯೋಗಕ್ಕಾಗಿ ಬರಲು ವ್ಯಾಸಂಗದ ನೆಪದಲ್ಲಿ ಅರ್ಜಿ ಸಲ್ಲಿಸುವ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಆಸ್ಟ್ರೇಲಿಯಾದ ಐದು ವಿಶ್ವವಿದ್ಯಾಲಯಗಳು ಭಾರತದ ಕೆಲ ರಾಜ್ಯಗಳ ವಿದ್ಯಾರ್ಥಿಗಳಿಗೆ ನಿರ್ಬಂಧ ಅಥವಾ ನಿಷೇಧ ಹೇರಿವೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

ಪರ್ತ್‌ನ ಎಡಿತ್ ಕೊವಾನ್ ವಿಶ್ವವಿದ್ಯಾಲಯವು ಕಳೆದ ಫೆಬ್ರುವರಿಯಲ್ಲಿ ಪಂಜಾಬ್ ಮತ್ತು ಹರಿಯಾಣ ರಾಜ್ಯಗಳ ವಿದ್ಯಾರ್ಥಿಗಳಿಗೆ ನಿಷೇಧ ಹೇರಿತ್ತು. ಮಾರ್ಚ್‌ನಲ್ಲಿ ವಿಕ್ಟೋರಿಯಾ ವಿ.ವಿಯು ಉತ್ತರ ಪ್ರದೇಶ, ರಾಜಸ್ಥಾನ, ಗುಜರಾತ್ ಸೇರಿ ಎಂಟು ರಾಜ್ಯಗಳ ವಿದ್ಯಾರ್ಥಿಗಳಿಗೆ ವಿಧಿಸಿರುವ ನಿರ್ಬಂಧವನ್ನು ಮತ್ತಷ್ಟು ಬಿಗಿಗೊಳಿಸಿತು.

ಆಸ್ಟ್ರೇಲಿಯಾಗೆ ಶಿಕ್ಷಣಕ್ಕಾಗಿ ಭಾರತದಿಂದ ಗರಿಷ್ಠ ಸಂಖ್ಯೆಯ ವಿದ್ಯಾರ್ಥಿಗಳು ತೆರಳುತ್ತಾರೆ. 2019ರಲ್ಲಿ 75 ಸಾವಿರ ವಿದ್ಯಾರ್ಥಿಗಳು ತೆರಳಿದ್ದರು. ಆದರೆ, ಇತ್ತೀಚೆಗೆ ಶಿಕ್ಷಣದ ಹೆಸರಿನಲ್ಲಿ ಉದ್ಯೋಗ ಅರಸಿ ಬರುವವರ ಸಂಖ್ಯೆ ಹೆಚ್ಚಾಗಿದೆ ಎನ್ನಲಾಗಿತ್ತು.

ಈ ಬೆಳವಣಿಗೆಯಿಂದ ಆಸ್ಟ್ರೇಲಿಯಾದ ವಲಸಿಗರ ತಪಾಸಣಾ ವ್ಯವಸ್ಥೆಯ ವಿಶ್ವಾಸಾರ್ಹತೆಗೆ ಧಕ್ಕೆ ಆಗಲಿದೆ. ದೀರ್ಘಾವಧಿಯಲ್ಲಿ ಶಿಕ್ಷಣ ಕ್ಷೇತ್ರದ ಮೇಲೆ ಪರಿಣಾಮ ಬೀರಲಿದೆ ಎಂದು ಜನಪ್ರತಿನಿಧಿಗಳು ಆತಂಕ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ನಿರ್ಬಂಧ ಹೇರಲಾಗಿದೆ.

ವೊಲ್ಲೊಗಾಂಗ್ ವಿಶ್ವವಿದ್ಯಾಲಯವು ಭಾರತ, ನೇಪಾಳ, ಬಾಂಗ್ಲಾದೇಶ, ಪಾಕಿಸ್ತಾನ, ಲೆಬನಾನ್, ಮಂಗೋಲಿಯಾ, ನೈಜೀರಿಯಾ ಮತ್ತಿತರ ದೇಶಗಳ ವಿದ್ಯಾರ್ಥಿಗಳಿಗೆ ನಡೆಸುವ ಪ್ರವೇಶ ಪರೀಕ್ಷೆ ಕುರಿತು ನಿರ್ಬಂಧಗಳನ್ನು ಬಿಗಿಗೊಳಿಸಿದೆ. ಆಡಿಲೇಡ್‌ನ ಟೊರೆನ್ಸ್ ವಿಶ್ವವಿದ್ಯಾಲಯ ಹೆಚ್ಚಿನ ಅರ್ಜಿಗಳು ಯಾವ ದೇಶದಿಂದ ಬರುತ್ತಿವೆ ಎಂಬುದನ್ನು ಕಟ್ಟುನಿಟ್ಟಾಗಿ ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

WANTED
ITI-WELDERS & FITTERS
(Fresher/Experienced)
Required for a manufacturing company in Nelamangala, Bangalore Rural-562123.
Interested candidates may contact the following Mobile Nos. during 9 a.m to 4 p.m on all working days/mail their bio-date to the e-mail id.
M: 96324 28588, 63614 01798
E-mail id: jobskph41@gmail.com

Cook

ಬೇಕಾಗಿದ್ದಾರೆ. ಅಡಿಗೆ ಮತ್ತು ಮನೆಕೆಲಸ ಮಾಡಲು ದಂಪತಿಗಳು ಬೇಕಾಗಿದ್ದಾರೆ. ವಯಸ್ಸು: 30 ವರ್ಷದಿಂದ 31 ವರ್ಷದೊಳಗೆ. ಸ್ಥಳ: ರಾಜರಾಜೇಶ್ವರಿ ನಗರ, ಬೆಂಗಳೂರು. ಉತ್ತಮ ಸಂಬಳದೊಂದಿಗೆ ಉಚಿತ ವಸತಿ ಇರುತ್ತದೆ. ಆಸಕ್ತರು ಸಂಪರ್ಕಿಸಿ: 8951739996

ಬೆಂಗಳೂರಿನ ಹತ್ತಿರ ಇರುವ ಆಶ್ರಮಕ್ಕೆ ಸಸ್ಯಾಹಾರಿ ಅಡುಗೆಯವರು ಮತ್ತು ಅಡಿಗೆ ಸಹಾಯಕರು ಕೂಡಲೇ ಬೇಕಾಗಿದ್ದಾರೆ. ಊಟ, ವಸತಿ ಉಚಿತ. ಸೂಕ್ತ ಸಂಬಳ. ಸಂಪರ್ಕಿಸಿ: 9880855005

ಬೆಂಗಳೂರಿನ ಬಾಣಸವಾಡಿ ಮನೆಯಲ್ಲಿ ಅಡುಗೆ (ವೆಜ್ & ನಾನ್ ವೆಜ್)ಕೆಲಸ ಹಾಗೂ ಮನೆಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ.ವಯಸ್ಸು 30-40 ವರ್ಷ. ಉತ್ತಮ ಸಂಬಳ, ಉಚಿತ ಊಟ + ವಸತಿ ಕೊಡಲಾಗುವುದು. ಸಂಪರ್ಕಿಸಿ: 9880364492

General

promac Engineering Industries Ltd, Bengaluru
Executing Turnkey Projects in India & Overseas
ಬೇಕಾಗಿದ್ದಾರೆ
ಮಷೀನ್ ಆಪರೇಟರ್
ಐಟಿಐ/ಡಿಪ್ಲೋಮ ಅಭ್ಯರ್ಥಿಗಳು ಸಿಎನ್‌ಸಿ ಪರಿಣಿತಿಯ ಜೊತೆಗೆ ಸುಮಾರು 2 ರಿಂದ 3 ವರ್ಷಗಳ ಲೇಥ್, ಮಿಲ್ಲಿಂಗ್, ವಿಟಿಎಲ್ ಮತ್ತು ಎಫ್‌ಎಚ್‌ಬಿ ಆಪರೇಟಿಂಗ್ ಅನುಭವ ಹೊಂದಿರುವ ಮಷೀನ್ ಆಪರೇಟರ್ ಬೇಕಾಗಿದ್ದಾರೆ. ಮಷೀನ್‌ನಲ್ಲಿ ವಿವಿಧ ಜಾಬ್‌ಗಳನ್ನು ಅಳವಡಿಸಲು ತಿಳಿದಿರಬೇಕು, ಡ್ರಾಯಿಂಗ್ ಪ್ರಕಾರ ಜಾಬ್ ಆಪರೇಟ್ ಮಾಡಿ ಪೂರ್ಣಗೊಳಿಸಬೇಕು, ಕಡ್ಡಾಯವಾಗಿ ಮೆಷರಿಂಗ್ ಇನಸ್ಟ್ರೂಮೆಂಟ್‌ಗಳ ಮತ್ತು ಇತರೆ ಫ್ಲೋರ್ ಪ್ರಾಕ್ಟೀಸ್‌ಗಳ ಜ್ಞಾನವಿರಬೇಕು.
ಸಂಪರ್ಕಿಸಿ : 63669 91659
ಅಥವಾ ಅರ್ಜಿ ಸಲ್ಲಿಸಿ:
careers@promacindia.com
www.promacindia.com

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

Teachers/ Professors

NOBLE HIGH School kottigepalya Magadi Main road B'lore- 91 Wanted NTT SOCIAL ENGLISH COMPUTER SCIENCE PE TEACHER WALK IN INTERVIEW 10 am- 3 pm contact 08023285900/ 9449152947 noblehighschoolblr@gmail.com

ಸುವರ್ಣ ಸಂಸ್ಕೃತಿಧಾಮ(ರಿ) ಸುವರ್ಣಮುಖಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ವಡೇರಹಳ್ಳಿ, (ಗಂಟಕನದೊಡ್ಡಿಗೇಟ್) ಕಗ್ಗಲಹಳ್ಳಿ ಅಂಚೆ ಕನಕಪುರ ತಾಲ್ಲೂಕು, ಬೆಂಗಳೂರು ಕನಕಪುರ ರಸ್ತೆ. ಕೆಳಗಿನ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ:1) ಇಂಗ್ಲೀಷ್ ಭಾಷಾ ಶಿಕ್ಷಕರು:01 ಬಿ.ಎ.ಬಿಎಡ್, ಎಂ.ಎ.(ಇಂಗ್ಲೀಷ್ ಮೇಜರ್). 2)ವಿಜ್ಞಾನ ಶಿಕ್ಷಕರು:01 ಬಿಎಸ್ಸಿ.ಬಿಎಡ್(ಪಿಸಿಎಂ). 3)ಸಂಸ್ಕೃತ ಶಿಕ್ಷಕರು:01 (ವಿದ್ವತ್). ಇಲ್ಲಿ ಉಳಿಯುವವರಿಗೆ(ಸಿಂಗಲ್) ಊಟ ಮತ್ತು ವಸತಿ ವ್ಯವಸ್ಥೆ ಇರುತ್ತದೆ. ಆಸಕ್ತರು ಕೆಳಕಂಡ ವಿಳಾಸಕ್ಕೆ ತಮ್ಮ ಬಯೋಡೇಟಾವನ್ನು ಕಳುಹಿಸಬಹುದು. Email: suvarnamukhisamskritidhama@gmail.com ಮಾಹಿತಿಗಾಗಿ ಸಂಪರ್ಕಿಸಿ :ಮಹಾದೇವಯ್ಯ 9886128699. ಚಂದ್ರಶೇಖರ್ 9972970502.

Drivers

ಬೇಕಾಗಿದ್ದಾರೆ ಟಾಟಾ ಏಸ್ 1.5 ಟನ್ ಲಗೇಜ್ ಗಾಡಿ ಸ್ವಂತ ಮಾಲೀಕರು ಲೋಡಿಂಗ್ ಮತ್ತು ಅನ್ ಲೋಡಿಂಗ್ ಮಾಡತಕ್ಕದ್ದು ಆಸಕ್ತಿ ಉಳ್ಳವರು ಉಪ್ಪು ಮತ್ತು ಬೆಂಕಿ ಪಟ್ಟಣ ಮಾರುವುದು ಸಂಬಳ ತಿಂಗಳಿಗೆ ರೂ 35,000 ರಿಂದ 40,000 ಸಂಪರ್ಕಿಸಿ: 9845451135

ಪ್ರಜಾವಾಣಿ
ಹೆಸರು ಬದಲಾವಣೆಗಾಗಿ
BOOK YOUR NAME CHANGE AD IN PRAJAVANI ALL KARNATAKA ALL DAYS
CHANGE OF NAME @ 50/-* Per Word
*conditions apply
For More Details Contact:
9731810277 | 9901641752
9845114560 | 9886213331
080- 45557160 | 163 | 164

ADMISSION CORNER

ST. BENEDICT'S ACADEMY RESIDENTIAL
CBSE School, PU, Degree and Nursing Colleges for Boys & Girls.
ADMISSION OPEN FOR 2023 - 24
Fee, Food, Hostel facilities for One (1) Year- One Lakh only in Installments
Free Academy for NCC, Karate, Kung Fu-Wu, Counseling, Yoga.
St. Benedict's Group of Institutions,
Anchpalaya, Kengeri, Mysore Road, Bangalore.
Contact: 9886812398
Mail: jeromeosb@gmail.com / www.sbab.in

Wanted

ಬೆಂಗಳೂರಿನ ಖಾಸಗಿ ಕಂಪನಿಗೆ ಮಾಜಿ ಸೈನಿಕರು ಮತ್ತು ಅರೆ ಮಾಜಿ ಸೈನಿಕರುಗಳಾದ Army/ BSF/ CRPF/ CISF ಸಿಬ್ಬಂದಿಗಳವರುಗಳು ಕಂಪನಿಯ Security Task- Force ವಿಭಾಗಕ್ಕೆ ತುರ್ತಾಗಿ ಬೇಕಾಗಿದ್ದಾರೆ. ಸಂಪರ್ಕಿಸಿ: 8073334719

ಪ್ರವಾಸ

Travel

24.4.2023 ರಿಂದ 10 ದಿನಗಳ ರಾಮೇಶ್ವರ,ಕನ್ಯಾಕುಮಾರಿ ಮಧುರೈ ತ್ರಿವೇಂಡ್ರಮ್ ಕಾಲಡಿ ಗುರುವಾಯುರು. 12.05.2023 ರಿಂದ 14 ದಿನಗಳ ಚಾರ್‌ಧಾಮ್‌ಯಾತ್ರೆ. 12.06.2023 16 ದಿನಗಳ ನೇಪಾಳ,ಮುಕ್ತಿನಾಥ್,ಕಾಶಿ. 28.06.2023 ರಿಂದ 13 ದಿನಗಳ ವೈಷ್ಣೋದೇವಿ ಅಮರನಾಥ್ ಪ್ರವಾಸ. ವಿಷ್ಣನ್ ಟೂರ್ಸ್ ಅಂಡ್ ಟ್ರಾವೆಲ್ಸ್ ತ್ಯಾಗರಾಜನ ಬೆಂಗಳೂರು-70 9342287551 8050629305

ಸರ್ವೋದಯ ಟ್ರಾವೆಲ್ಸ್ ಕಲಾಸಿಪಾಳ್ಯಂ ನಮ್ಮ ಸ್ವಂತ ಬಸ್ಸಿನಲ್ಲಿ ಪ್ರತಿ ಶುಕ್ರವಾರ 5ದಿನಗಳ ಪಂಡರಾಪುರ ಶನಿಸಿಂಗನಾಪುರ,ಶಿರಡಿ,ಪಂಚವಟಿ ತ್ರಯಂಬಕೇಶ್ವರ್,ಕೊಲ್ಲಾಪುರ್ ಇತ್ಯಾದಿ ಊಟ ವಸತಿಯೊಂದಿಗೆ ಸೀಟ್‌ಯೊಂದಕ್ಕೆ 5,500 ಅಮರನಾಥ್,ಚಾರ್‌ಧಾಮ್ ಕಾಶಿಯಾತ್ರೆ ಪ್ರವಾಸ ಏರ್ಪಡಿಸಲಾಗುವುದು ಸಂಪರ್ಕಿಸಿ: 9886941955 8277755695

ನೇಪಾಳ ಮುಕ್ತಿನಾಥ ಯಾತ್ರೆ 22.05.2023 ರಿಂದ 7 ದಿನಗಳು ಆಗಸ್ಟ್ ಸೆಪ್ಟೆಂಬರ್ ತಿಂಗಳಲ್ಲಿ ಚಾರ್‌ಧಾಮ್ ಯಾತ್ರೆ ಸಂಪರ್ಕಿಸಿ: ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ ಬೆಂಗಳೂರು. 9448294477

03.05.2023 21.05.2023 22.06.2023 ಸಿಂಗಾಪುರ್,ಮಲೇಶಿಯಾ, ಥೈಲ್ಯಾಂಡ್ 7/11 ದಿನಗಳು. 16.05.2023 20.06.2023 ನೇಪಾಳ 9 ದಿನಗಳು. 18.05.2023 13.06.2023 ಭೂತಾನ್ 8 ದಿನಗಳು. 29.04.2023 25.05.2023 12.06.2023 ಗ್ಯಾಂಗ್‌ಟಾಕ್ ಡಾರ್ಜಿಲಿಂಗ್ 6 ದಿನಗಳು. 27.04.2023 16.05.2023 06.06.2023 ಶಿಮ್ಲಾ,ಮನಾಲಿ 8 ದಿನಗಳು. ಜೈನ್ ಟ್ರಾವೆಲ್ಸ್ ಮಲ್ಲೇಶ್ವರಂ. ಬೆಂಗಳೂರು.03 9448402248 7022547922

ಭವಿಷ್ಯ

Astrology

★॥ಸ್ತ್ರೀವಶೀಕರಣ ಸ್ಪೆಷಲಿಸ್ಟ್॥★ ಕೇರಳ ಅಘೋರಿ,ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದು ನಿಜ ನಂಬಿ ಕರೆಮಾಡಿ. ಪಂಡಿತ್.ಜೈದೇವಭಟ್. 9901724082

ಸೌಂದರ್ಯ-ಆರೋಗ್ಯ

Health Clinic

ತನ್ಮಯಿ ಜಾಯಿಂಟ್ ಕೇರ್ ಮ್ಯಾಗ್ನೆಟಿಕ್ ಆಯಿಲ್ ಮತ್ತು ಕ್ರೀಮ್ ನಿಂದ ಸಂಪೂರ್ಣಉಚಿತ ಮಸಾಜ್ ಮಾಡಲಾಗುವುದು. ಮಂಡಿ, ಬೆನ್ನು, ಕೀಲು ನೋವು, ವೆರಿಕೋಸ್ ವೆಯಿನ್ಸ್, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ ತಲೆನೋವು ಇತ್ಯಾದಿ. ಬೆಂಗಳೂರು 9019626612

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಸಲಿಂಗ ಮದುವೆಗೆ ಮಾನ್ಯತೆ ಕೋರಿದ ಅರ್ಜಿಗಳ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್

‘ವೈಯಕ್ತಿಕ ಕಾನೂನುಗಳನ್ನು ಪರಿಗಣಿಸುವುದಿಲ್ಲ’

ನವದೆಹಲಿ (ಪಿಟಿಐ): ಸಲಿಂಗ ಮದುವೆಗೆ ಮಾನ್ಯತೆ ನೀಡಬೇಕು ಎಂದು ಕೋರಿರುವ ಅರ್ಜಿಗಳ ಕುರಿತು ನಿರ್ಧಾರ ಕೈಗೊಳ್ಳುವಾಗ ಮದುವೆಗಳಿಗೆ ಸಂಬಂಧಿಸಿದ ವೈಯಕ್ತಿಕ ಕಾನೂನುಗಳನ್ನು ಪರಿಗಣಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ ಸುಪ್ರೀಂ ಕೋರ್ಟ್, ವಿಶೇಷ ವಿವಾಹ ಕಾಯ್ದೆ ಮೇಲೆಯೇ ವಾದ ಮುಂದುವರಿಸುವಂತೆ ವಕೀಲರಿಗೆ ಸೂಚಿಸಿತು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ಸದಸ್ಯರಿದ್ದ ಸಾಂವಿಧಾನಿಕ ಪೀಠವು, ಸಲಿಂಗ ಮದುವೆಗೆ ಮಾನ್ಯತೆ ನೀಡಬೇಕು ಎಂದು ಕೋರಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಮಂಗಳವಾರವೂ ನಡೆಸಿತು.

ನ್ಯಾಯಮೂರ್ತಿಗಳಾದ ಎಸ್.ಕೆ.ಕೌಲ್, ಎಸ್.ಆರ್.ಭಟ್, ಹಿಮಾ ಕೊಹ್ಲಿ ಹಾಗೂ ಪಿ.ಎಸ್. ನರಸಿಂಹ ಈ ನ್ಯಾಯಪೀಠದಲ್ಲಿದ್ದಾರೆ.

ಹಿಂದೂ ವಿವಾಹ ಕಾಯ್ದೆ ಹಾಗೂ ಇತರ ಧಾರ್ಮಿಕ ಗುಂಪುಗಳಲ್ಲಿನ ಮದುವೆಗೆ ಸಂಬಂಧಿಸಿದ ವೈಯಕ್ತಿಕ ಕಾನೂನುಗಳಲ್ಲಿರುವ ಜಟಿಲತೆಗಳು ಹಾಗೂ ಪರಿಣಾಮಗಳನ್ನು ಪ್ರಸ್ತಾಪಿಸಿದ ನ್ಯಾಯಪೀಠ, ‘ಸಲಿಂಗ ಮದುವೆಗೆ ಕಾನೂನಿನ ಮಾನ್ಯತೆ ನೀಡಬೇಕು ಎಂದಾದಲ್ಲಿ, ವೈಯಕ್ತಿಕ ಕಾನೂನುಗಳನ್ನು ನಾವು ಪರಿಗಣಿಸಲೇಬಾರದು. ಆಗ, ನಿಮ್ಮ (ವಕೀಲರು) ವಾದ ಸರಣಿ ವಿಶೇಷ ವಿವಾಹ ಕಾಯ್ದೆ ಮೇಲೆಯೇ ಇರಬೇಕಾಗುತ್ತದೆ’ ಎಂದು ನ್ಯಾಯಪೀಠ ಹೇಳಿತು.

ವಿಶೇಷ ವಿವಾಹ ಕಾಯ್ದೆ, 1954 ‘ಧರ್ಮ ತಟಸ್ಥ ವಿವಾಹ ಕಾಯ್ದೆ’ಯಾಗಿದೆ. ಬೇರೆ ಬೇರೆ ಧರ್ಮ, ಜಾತಿಗೆ ಸೇರಿದ ಜನರು ಆಗುವ ಮದುವೆಗೆ ಸಂಬಂಧಿಸಿದ ಕಾನೂನು ಚೌಕಟ್ಟನ್ನು ಈ ಕಾಯ್ದೆ ಒದಗಿಸುತ್ತದೆ. ಈ ಕಾಯ್ದೆಯಡಿ ನೆರವೇರುವ ಮದುವೆಗಳಿಗೆ ಸರ್ಕಾರವೇ ದೃಢೀಕರಣ ನೀಡುತ್ತದೆ.

‘ಈ ಅರ್ಜಿಗಳಲ್ಲಿ ಪ್ರಸ್ತಾಪಿಸಲಾಗಿರುವ ವಿಷಯಗಳು ಸಂಕೀರ್ಣವಾಗಿವೆ. ವಿಶೇಷ ವಿವಾಹ ಕಾಯ್ದೆಯಲ್ಲಿ ವಿವರಿಸಿರುವಂತೆ, ಈ ವಿಷಯದಲ್ಲಿ (ಸಲಿಂಗ ಮದುವೆ) ಪುರುಷ ಮತ್ತು ಮಹಿಳೆ ಎಂಬ ಕಲ್ಪನೆಗೆ ಜನನಾಂಗಗಳೆ ಆಧಾರವೆಂದು ಪರಿಗಣಿಸಲು ಆಗುವುದಿಲ್ಲ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತು.

‘ಇಲ್ಲಿರುವ ಪ್ರಶ್ನೆ, ಜನನೇಂದ್ರೀಯ ಎಂಥವು ಎಂಬುದಲ್ಲ. ಅದಕ್ಕಿಂತಲೂ ಸಂಕೀರ್ಣವಾದ ಅಂಶಗಳನ್ನು ಈ ವಿಷಯ ಒಳಗೊಂಡಿದೆ’ ಎಂದಿತು.

ಲಿಂಗ ಪರಿವರ್ತಿತರ ಕುರಿತು ಪ್ರಸ್ತಾಪಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ‘ಸಂಗಾತಿಗಳನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕು, ಖಾಸಗಿತನ ಹಕ್ಕು, ಲೈಂಗಿಕತೆಯ ಆಯ್ಕೆ ಹಕ್ಕು ಸೇರಿದಂತೆ ಹಲವಾರು ಹಕ್ಕುಗಳಿವೆ. ಈ ವಿಷಯದಲ್ಲಿ ಮಾಡುವ ಯಾವುದೇ ತಾರತಮ್ಯದ ವಿರುದ್ಧ ಕಾನೂನುಕ್ರಮಕ್ಕೆ ಅವಕಾಶ ಇದೆ’ ಎಂದರು.

ಆದರೆ, ಮದುವೆಗಳಿಗೆ ಬೇಕಾದ ಸಾಮಾಜಿಕ–ಕಾನೂನಾತ್ಮಕ ಸ್ಥಾನಮಾನವನ್ನು ನ್ಯಾಯಿಕ ನಿರ್ಧಾರಗಳ ಮೂಲಕ ನೀಡಬಾರದು. ಶಾಸಕಾಂಗದಿಂದಲೂ ಇದು ಆಗಬಾರದು. ಇಂಥ ಮದುವೆಗಳನ್ನು ಸ್ವೀಕರಿಸುವ ಮನೋಧರ್ಮ ಸಮಾಜದ ಒಳಗಿನಿಂದಲೇ ಬರಬೇಕು’ ಎಂದು ಮೆಹ್ತಾ ಹೇಳಿದರು.

‘ಹಿಂದೂ ಧರ್ಮಕ್ಕೆ ಸೇರಿದ ವ್ಯಕ್ತಿ ಸಲಿಂಗ ಮದುವೆ ಹಕ್ಕು ಬೇಕು ಹಾಗೂ ಹಿಂದೂವಾಗಿಯೇ ಇರುತ್ತೇನೆ ಎಂದಾಗ ಸಮಸ್ಯೆ ಆರಂಭವಾಗುತ್ತದೆ. ಹಿಂದೂಗಳು, ಮುಸ್ಲಿಮರು ಹಾಗೂ ಇತರ ಸಮುದಾಯಗಳ ಮೇಲೆ ಸಲಿಂಗ ಮದುವೆ ಪದ್ಧತಿ ಪರಿಣಾಮ ಬೀರುತ್ತದೆ. ಹೀಗಾಗಿ, ಈ ವಿಷಯ ಕುರಿತು ಎಲ್ಲ ರಾಜ್ಯಗಳ ಅಹವಾಲು ಆಲಿಸುವುದು ಅಗತ್ಯ’ ಎಂದರು.

‘ಇದೇ ಕಾರಣಕ್ಕಾಗಿಯೇ ನಾವು ವೈಯಕ್ತಿಕ ಕಾನೂನುಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಆದರೆ, ಆ ಕಾನುನುಗಳನ್ನು ನಾವು ಪರಿಗಣಿಸಬೇಕು ಎಂದು ನೀವು ಬಯಸುತ್ತಿದ್ದೀರಿ. ಪ್ರತಿಯೊಂದರ ಕುರಿತು ವಿಚಾರಣೆ ನಡೆಸುವಂತೆ ನಮ್ಮನ್ನು ಬಲವಂತ ಮಾಡಬೇಡಿ’ ಎಂದು ನ್ಯಾಯಪೀಠ ಹೇಳಿತು.

‘ಹಾಗಾದರೆ, ಕೇಂದ್ರದ ನಿಲುವನ್ನು ಆಲಿಸದೇ ನಿರ್ಣಯಿಸದಂತಾಗುತ್ತದೆ’ ಎಂದು ಮೆಹ್ತಾ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯನ್ಯಾಯಮೂರ್ತಿ ಚಂದ್ರಚೂಡ್, ‘ನಾವು ಮಧ್ಯಮ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೇವೆ. ಒಂದು ವಿಷಯವನ್ನು ಇತ್ಯರ್ಥಪಡಿಸುವ ಸಲುವಾಗಿ ನಾವು ಪ್ರತಿಯೊಂದು ವಿಷಯವನ್ನು ಇತ್ಯರ್ಥಪಡಿಸಬೇಕಾಗಿಲ್ಲ’ ಎಂದರು.

ಹಿರಿಯ ವಕೀಲ ರಾಕೇಶ್ ದ್ವಿವೇದಿ ಅವರು ಕೇಂದ್ರದ ನಿಲುವನ್ನು ಬೆಂಬಲಿಸಿದರು.

ಜಮಿಯತ್–ಉಲೇಮಾ–ಎ–ಹಿಂದ್ ಪರ ಹಿರಿಯ ವಕೀಲ ಕಪಿಲ್ ಸಿಬಲ್, ಅರ್ಜಿದಾರರೊಬ್ಬರ ಪರ ಮುಕುಲ್ ರೋಹ್ಟಗಿ ವಾದ ಮಂಡಿಸಿದರು. ಬುಧವಾರವೂ ವಿಚಾರಣೆ ಮುಂದುವರಿಯಲಿದೆ.

ಕೇಂದ್ರದ ವಾದಕ್ಕೆ ‘ಸುಪ್ರೀಂ’ ತೀಕ್ಷ್ಣ ಪ್ರತಿಕ್ರಿಯೆ

‘ಸಲಿಂಗ ಮದುವೆಗೆ ಮಾನ್ಯತೆ ನೀಡುವುದು ಶಾಸಕಾಂಗದ ಕೆಲಸ. ಈ ಕುರಿತು ತಾನು ಎತ್ತಿರುವ ಆಕ್ಷೇಪವನ್ನು ಪರಿಗಣಿಸಿ, ಮೊದಲು ಈ ವಿಷಯ ಇತ್ಯರ್ಥಪಡಿಸಬೇಕು’ ಎಂಬ ಸಾಲಿಟರ್ ಜನರಲ್ ತುಷಾರ್ ಮೆಹ್ತಾ ಮಾತಿಗೆ, ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಸಾಂವಿಧಾನಿಕ ಪೀಠ ತೀಕ್ಷ್ಣವಾಗಿ ಪ್ರತಿಕ್ರಿಯಿಸಿತು.

‘ಕ್ಷಮಿಸಿ ಸಾಲಿಟರ್ ಜನರಲ್ ಅವರೇ. ನ್ಯಾಯಾಲಯವು ಮೊದಲು ಅರ್ಜಿದಾರರ ಪರ ವಾದವನ್ನು ಆಲಿಸಲಿದೆ. ನಿಮ್ಮ ಆಕ್ಷೇಪದ ಸ್ವರೂಪ ಹಾಗೂ ಅದು ಸಮರ್ಥನೀಯವೇ ಎಂಬುದು ಅರ್ಜಿದಾರರು ಮಂಡಿಸುವ ವಾದವನ್ನು ಅವಲಂಬಿಸಿದೆ’ ಎಂದು ನ್ಯಾಯಪೀಠ ಹೇಳಿತು.

‘ನಾವು ಕಲಾಪವನ್ನು ಹೇಗೆ ನಡೆಸಬೇಕು ಎಂಬುದನ್ನು ನೀವು ನಿರ್ದೇಶಿಸಲು ಸಾಧ್ಯವಿಲ್ಲ. ಇಂಥ ಪ್ರಯತ್ನಗಳಿಗೆ ನಾನು ಅವಕಾಶವನ್ನೇ ನೀಡಿಲ್ಲ’ ಎಂದು ಮುಖ್ಯನ್ಯಾಯಮೂರ್ತಿ ಚಂದ್ರಚೂಡ್ ಹೇಳಿದರು.

ಅದಕ್ಕೆ ಪ್ರತಿಕ್ರಿಯಿಸಿದ ಮೆಹ್ತಾ, ‘ನಾನು ಎಂದೂ ಅಂಥ ಕಾರ್ಯ ಮಾಡಿಲ್ಲ’ ಎಂದರು.

‘ಅರ್ಜಿದಾರರು ಎತ್ತಿರುವ ವಿಷಯ ಬಹಳ ಸೂಕ್ಷ್ಮವಾಗಿದೆ. ಮೊದಲು ನಮ್ಮ ವಾದವನ್ನು ಆಲಿಸಿದ ನಂತರ ನನಗೆ ಸಮಯ ಕೊಡಿ. ಈ ವಿಷಯ ಕುರಿತು ಮುಂದಿನ ದಿನಗಳಲ್ಲಿ ನಡೆಯುವ ವಿಚಾರಣೆ ವೇಳೆ, ಸರ್ಕಾರದ ನಿಲುವು ಏನಾಗಿರಬೇಕು ಎಂಬ ಬಗ್ಗೆ ನಾವು ಆಲೋಚಿಸಬೇಕು’ ಎಂದೂ ಮೆಹ್ತಾ ಹೇಳಿದರು.

‘ನಮ್ಮನ್ನು ನಂಬಿ. ನಾವು ವಿಶಾಲ ದೃಷ್ಟಿಕೋನ ಹೊಂದಿದ್ದೇವೆ’ ಎಂದು ಸಿಜೆಐ ಹೇಳಿದಾಗ, ‘ನಂಬಿಕೆ ಕೊರತೆಗೆ ಸಂಬಂಧಿಸಿ ಪ್ರಶ್ನೆಯೇ ಉದ್ಭವಿಸಿಲ್ಲ’ ಎಂದು ಮೆಹ್ತಾ ಪ್ರತಿಕ್ರಿಯಿಸಿದರು.

ನಿಯಮ ಉಲ್ಲಂಘಿಸಿದ ಟ್ವೀಟ್‌ಗಳಿಗೆ ನಿರ್ಬಂಧ: ಟ್ವಿಟರ್

ನವದೆಹಲಿ(ಪಿಟಿಐ): ‘ಸಾಮಾಜಿಕ ಜಾಲತಾಣ ಟ್ವಿಟರ್ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅನುಮತಿಸುತ್ತದೆ. ಆದರೆ, ಬೇಕಾಬಿಟ್ಟಿಯಾಗಿ ಮಾಡಿದ ಟ್ವೀಟ್‌ಗಳೆಲ್ಲವೂ ಮುಕ್ತವಾಗಿ ಬಳಕೆದಾರರನ್ನು ಇನ್ನುಮುಂದೆ ತಲುಪಲು ಅವಕಾಶವಿಲ್ಲ. ನಿಯಮಗಳನ್ನು ಉಲ್ಲಂಘಿಸುವ ಟ್ವೀಟ್‌ಗಳು ಟ್ವಿಟರ್ ತಾಣದಲ್ಲಿ ಗೋಚರಿಸದಂತೆ ನಿರ್ಬಂಧಿಸಲಾಗುತ್ತದೆ’ ಎಂದು ಕಂಪನಿಯು ತನ್ನ ಪರಿಷ್ಕೃತ ನೀತಿಯಲ್ಲಿ ಹೇಳಿದೆ.

ಆರಂಭದಲ್ಲಿ ದ್ವೇಷಪೂರಿತ ನಡವಳಿಕೆಯಂಥ ನಿಯಮಗಳ ಉಲ್ಲಂಘನೆಯ ಟ್ವೀಟ್‌ಗಳಿಗೆ ವಿಜಿಬಿಲಿಟಿ ಫಿಲ್ಟರ್ (ಗೋಚರ ಸೋಸುಕ) ಅಳವಡಿಸಿ, ನಂತರ ಅದನ್ನು ಇತರ ಡೊಮೇನ್‌ಗಳಿಗೂ ವಿಸ್ತರಿಸಲಿದೆ. ಟ್ವಿಟರ್ ಬಳಕೆದಾರರಿಗೆ ತಮ್ಮ ಅಭಿಪ್ರಾಯಗಳನ್ನು ಮತ್ತು ಆಲೋಚನೆಗಳನ್ನು ಸೆನ್ಸಾರ್‌ಶಿಪ್ ಭಯವಿಲ್ಲದೆ ವ್ಯಕ್ತಪಡಿಸುವ ಹಕ್ಕಿದೆ ಎಂದು ಸಂಸ್ಥೆ ತಿಳಿಸಿದೆ.

‘ನಿಯಮಗಳನ್ನು ಉಲ್ಲಂಘಿಸುವ ವಿಷಯದಿಂದ ಬಳಕೆದಾರರನ್ನು ನಮ್ಮ ಜಾಲತಾಣದಲ್ಲಿ ಸುರಕ್ಷಿತವಾಗಿರಿಸುವುದು ನಮ್ಮ ಜವಾಬ್ದಾರಿ ಮತ್ತು ನಂಬಿಕೆ. ಈ ನಂಬಿಕೆಗಳು ವಾಕ್ ಸ್ವಾತಂತ್ರ್ಯದ ಅಡಿಪಾಯವಾಗಿದೆ. ಹಾಗಂಥ, ನಿಯಮ ಉಲ್ಲಂಘಿಸಿದ ಟ್ವೀಟ್‌ಗಳಿಗೆ ಮುಕ್ತವಾಗಿ ಬಳಕೆದಾರರನ್ನು ತಲುಪುವ ಸ್ವಾತಂತ್ರ್ಯವಿದೆ ಎಂದಲ್ಲ. ನಮ್ಮ ನೀತಿಗಳನ್ನು ಉಲ್ಲಂಘಿಸುವ ಟ್ವೀಟ್‌ಗಳು ಗೋಚರಿಸದಂತೆ, ಅವು ತಲುಪುವ ವ್ಯಾಪ್ತಿಯನ್ನು ನಿರ್ಬಂಧಿಸುವುದು ನಮ್ಮ ತತ್ವಾದರ್ಶವಾಗಿದೆ’ ಎಂದು ಸಂಸ್ಥೆ ಹೇಳಿದೆ.

ಕಾರ್ತಿಗೆ ಸೇರಿದ ₹ 11.04 ಕೋಟಿ ಮೌಲ್ಯದ ಆಸ್ತಿ ಜಪ್ತಿ

ನವದೆಹಲಿ (ಪಿಟಿಐ): ಐಎನ್‌ಎಕ್ಸ್ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ಅವರಿಗೆ ಸೇರಿದ ₹ 11.04 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ಜಪ್ತಿ ಮಾಡಿದೆ.

ನಾಲ್ಕು ಆಸ್ತಿಗಳನ್ನು ಜಪ್ತಿ ಮಾಡಿದ್ದು, ಇದರಲ್ಲಿ ಕರ್ನಾಟಕ ಕೊಡಗು ಜಿಲ್ಲೆಯಲ್ಲಿರುವ ಸ್ಥಿರಾಸ್ತಿಯೂ ಸೇರಿದೆ. ನಿಯಮಾನುಸಾರ, ಕಾರ್ತಿ ಅವರಿಗೆ ನೋಟಿಸ್ ಅನ್ನೂ ಜಾರಿ ಮಾಡಲಾಗಿದೆ ಎಂದು ಇ.ಡಿ. ಹೇಳಿಕೆ ತಿಳಿಸಿದೆ.

ಹಿರಿಯ ಕಾಂಗ್ರೆಸ್ ಮುಖಂಡ ಪಿ.ಚಿದಂಬರಂ ಅವ ಪುತ್ರರಾದ ಕಾರ್ತಿ, ಲೋಕಸಭೆಯಲ್ಲಿ ತಮಿಳುನಾಡಿನ ಶಿವಗಂಗಾ ಕ್ಷೇತ್ರ ಪ್ರತಿನಿಧಿಸುತ್ತಿದ್ದಾರೆ.

ಸ್ವತಂತ್ರ ತನಿಖೆ ಕೋರಿದ ಅರ್ಜಿ ವಿಚಾರಣೆ 24ಕ್ಕೆ – ‘ಸುಪ್ರೀಂ’

‘ಅತೀಕ್ ಪತ್ರ: ಸಿಜೆಐ, ಸಿಎಂಗೆ ರವಾನೆ’

ಪ್ರಯಾಗರಾಜ್ (ಪಿಟಿಐ): ‘ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವರಿಗೆ ತಲುಪಿಸುವಂತೆ ಸೂಚಿಸಿ, ನನ್ನ ಕಕ್ಷಿದಾರ ಬರೆದಿದ್ದ ಪತ್ರವನ್ನು ಈ ಇಬ್ಬರಿಗೆ ಕಳುಹಿಸಲಾಗುತ್ತಿದೆ’ ಎಂದು ಪಾತಕಿ ಹಾಗೂ ಮಾಜಿ ಸಂಸದ ಅತೀಕ್ ಅಹ್ಮದ್ ಪರ ವಕೀಲ ವಿಜಯ್ ಮಿಶ್ರಾ ಮಂಗಳವಾರ ಹೇಳಿದ್ದಾರೆ.

‘ಒಂದು ಪಕ್ಷ ಏನಾದರೂ ಅವಘಡ ಸಂಭವಿಸಿದರೆ ಅಥವಾ ನನ್ನ ಕೊಲೆಯಾದರೆ, ಲಕೋಟೆಯಲ್ಲಿರುವ ಪತ್ರವನ್ನು ಸಿಜೆಐ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿಗೆ ತಲುಪಿಸಬೇಕು ಎಂಬುದಾಗಿ ಅತೀಕ್ ಹೇಳಿದ್ದ’ ಎಂದು ಮಿಶ್ರಾ ತಿಳಿಸಿದ್ದಾರೆ.

‘ಮುಚ್ಚಿದ ಲಕೋಟೆಯಲ್ಲಿರುವ ಈ ಪತ್ರ ನನ್ನ ಬಳಿ ಇಲ್ಲ ಹಾಗೂ ನಾನು ಕಳಿಸಿಯೂ ಇಲ್ಲ. ಇದನ್ನು ಯಾವುದೋ ಸ್ಥಳದಲ್ಲಿ ಇಡಲಾಗಿದ್ದು, ಮತ್ತೊಬ್ಬ ವ್ಯಕ್ತಿ ಕಳುಹಿಸುತ್ತಿದ್ದಾರೆ. ಪತ್ರದಲ್ಲಿ ಏನಿದೆ ಎಂಬುದು ಸಹ ನನಗೆ ಗೊತ್ತಿಲ್ಲ’ ಎಂದು ಅವರು ಹೇಳಿದ್ದಾರೆ.

ನವದೆಹಲಿ ವರದಿ: ಅತೀಕ್ , ಅಶ್ರಫ್ ಹತ್ಯೆ ಕುರಿತು ಸ್ವತಂತ್ರ ತನಿಖೆ ನಡೆಸುವಂತೆ ಕೋರಿ ಸಲ್ಲಿಸಲಾದ ಅರ್ಜಿಯ ವಿಚಾರಣೆಯನ್ನು ಏಪ್ರಿಲ್ 24ರಂದು ನಡೆಸಲು ಸುಪ್ರೀಂ ಕೋರ್ಟ್ ಮಂಗಳವಾರ ಸಮ್ಮತಿಸಿತು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು. ಈ ಸಂಬಂಧ, ವಕೀಲ ವಿಶಾಲ್ ತಿವಾರಿ ಅರ್ಜಿ ಸಲ್ಲಿಸಿದ್ದರು.

‘ಅತೀಕ್ ಅಹ್ಮದ್ ಹಾಗೂ ಅಶ್ರಫ್ ಹತ್ಯೆ ಕುರಿತು ಸ್ವತಂತ್ರ ತನಿಖೆಗೆ ಕೋರಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆಯನ್ನು ತುರ್ತಾಗಿ ಕೈಗೆತ್ತಿಕೊಳ್ಳಬೇಕು. ಉತ್ತರ ಪ್ರದೇಶದಲ್ಲಿ 2017ರಿಂದ ಇಲ್ಲಿಯವರೆಗೆ 183 ಎನ್‌ಕೌಂಟರ್‌ಗಳು ನಡೆದಿದ್ದು, ಅವುಗಳ ಬಗ್ಗೆಯೂ ತನಿಖೆಗೆ ಆದೇಶಿಸಬೇಕು’ ಎಂದು ವಕೀಲ ತಿವಾರಿ ಕೋರಿದ್ದರು.

ಅತೀಕ್ ಪರ ವಕೀಲನ ಮನೆ ಬಳಿ ಕಚ್ಚಾ ಬಾಂಬ್ ಎಸೆತ

ಅತೀಕ್ ಅಹ್ಮದ್ ಪರ ವಕೀಲ ದಯಾಶಂಕರ್ ಮಿಶ್ರ ಮನೆ ಸಮೀಪ ಮಂಗಳವಾರ ಕಚ್ಚಾ ಬಾಂಬ್ ಎಸೆಯಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

‘ಇಬ್ಬರು ಯುವಕರ ನಡುವಿನ ವೈಯಕ್ತಿಕ ದ್ವೇಷದ ಹಿನ್ನೆಲೆಯಲ್ಲಿ ಎಸಗಿರುವ ಕೃತ್ಯ ಇದಾಗಿದ್ದು, ವಕೀಲ ಮಿಶ್ರ ಗುರಿಯಾಗಿಸಿ ನಡೆಸಿರುವುದಲ್ಲ’ ಎಂದು ಕರ್ನಲ್‌ಗಂಜ್ ಠಾಣೆ ಅಧಿಕಾರಿ ರಾಮಮೋಹನ್ ರಾಯ್ ತಿಳಿಸಿದ್ದಾರೆ.

‘ಇಲ್ಲಿನ ಕತ್ರಾ ಪ್ರದೇಶದಲ್ಲಿ ಮಧ್ಯಾಹ್ನ 2.30ರ ಸುಮಾರಿಗೆ ಈ ಘಟನೆ ನಡೆದಿದೆ. ಅತೀಕ್ ಪರ ವಕೀಲರೊಬ್ಬರ ಮನೆ ಸಮೀಪ ಈ ಘಟನೆ ನಡೆದಿರುವುದು ಕಾಕತಾಳೀಯವಷ್ಟೆ’ ಎಂದು ಅವರು ಹೇಳಿದ್ದಾರೆ.

ಯೋಗಿ ಹತ್ಯೆ ಬೆದರಿಕೆ: ವ್ಯಕ್ತಿ ವಿರುದ್ಧ ಪ್ರಕರಣ

ಬಾಗ್‌ಪತ್, ಉತ್ತರ ಪ್ರದೇಶ: ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ ಆರೋಪದಡಿ ಜಾರ್ಖಂಡ ರಾಜ್ಯದ ವ್ಯಕ್ತಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಬಾಗ್‌ಪತ್ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಅಮನ್ ರಾಜಾ ಎಂಬಾತನ ವಿರುದ್ಧ ಕೊತ್ವಾಲಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಸಿಪಿಐ ಡಿ.ಕೆ.ಶರ್ಮ ತಿಳಿಸಿದ್ದಾರೆ.

ಉನ್ನಾವೊ ಸಂತ್ರಸ್ತೆಯ ಶೆಡ್‌ಗೆ ಬೆಂಕಿ

ಒಂದನೇ ಪುಟದಿಂದ...

ಇಬ್ಬರ ಸ್ಥಿತಿಯೂ ಗಂಭೀರವಾಗಿದೆ. ಹೆಚ್ಚಿನ ಚಿಕಿತ್ಸೆಗಾಗಿ ಕಾನ್ಪುರದ ಆಸ್ಪತ್ರೆಗೆ ಕಳುಹಿಸಲಾಗಿದೆ’ ಎಂದು ಮುಖ್ಯ ವೈದ್ಯಾಧಿಕಾರಿ ಸುಶೀಲ್ ಶ್ರೀವಾಸ್ತವ್ ತಿಳಿಸಿದ್ದಾರೆ.

‘ಅತ್ಯಾಚಾರ ಆರೋಪಿಗಳ ಪೈಕಿ ಇಬ್ಬರು ಜಾಮೀನಿನ ಮೇಲೆ ಜೈಲಿನಿಂದ ಇತ್ತೀಚೆಗೆ ಹೊರಬಂದಿದ್ದರು. ಇತರ ಐದು ಮಂದಿಯ ಜೊತೆಗೆ ಸೋಮವಾರ ಸಂಜೆ ಸಂತ್ರಸ್ತೆಯ ಕುಟುಂಬದವರು ವಾಸವಿದ್ದ ಶೆಡ್‌ಗೆ ತೆರಳಿದ್ದ ಇವರು ಪ್ರಕರಣ ಹಿಂಪಡೆಯುವಂತೆ ಒತ್ತಾಯಿಸಿದ್ದರು. ಸಂತ್ರಸ್ತೆ ಒಪ್ಪಿರಲಿಲ್ಲ. ಇದರಿಂದ ಕೆರಳಿದ್ದ ಅವರು ಸಂತ್ರಸ್ತೆ ಹಾಗೂ ಆಕೆಯ ತಾಯಿ ಮೇಲೆ ಹಲ್ಲೆ ನಡೆಸಿದ್ದರು. ನಂತರ ಶೆಡ್‌ಗೆ ಬೆಂಕಿ ಹಚ್ಚಿದ್ದರು’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

‘ಸಂತ್ರಸ್ತೆಯ ಚಿಕ್ಕಪ್ಪ ಹಾಗೂ ಅಜ್ಜ ಕೂಡ ಆರೋಪಿಗಳ ಜೊತೆಗಿದ್ದರು. ಸಂತ್ರಸ್ತೆಯ ತಂದೆಯ ಮೇಲೆ ಅವರು ಕೊಡಲಿಯಿಂದ ದಾಳಿ ನಡೆಸಿದ್ದಾರೆ. ಅವರನ್ನು ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಪೂರ್ವ ವಿಭಾಗದ ಎಸ್‌ಐ ತಿಳಿಸಿದ್ದಾರೆ.

ಕೊಡೆಗಳ ಚಿತ್ತಾರ.. ಬಿಸಿಲಿನ ಝಳ ಹೆಚ್ಚಿರುವ ಕಾರಣ ನವದೆಹಲಿಯ ದಿಲ್ಲಿ ಹಾಟ್ ಬಳಿಯ ಗಲ್ಲಿಯೊಂದರಲ್ಲಿ ಬಣ್ಣ ಬಣ್ಣದ ಕೊಡೆಗಳನ್ನು ಅಳವಡಿಸಲಾಗಿದ್ದು, ಈ ಹಾದಿಯಲ್ಲಿ ಯುವತಿಯರು ಮಂಗಳವಾರ ಹಾದು ಹೋದರು –ಪಿಟಿಐ ಚಿತ್ರ

ಬಿಜೆಪಿಯಲ್ಲಿ ‘ಸಂತೋಷದ ಹೊಳೆ’

ಒಂದನೇ ಪುಟದಿಂದ...

ಸೆಂಟ್ರಲ್ ಕ್ಷೇತ್ರದಲ್ಲಿ ಒಬ್ಬ ವ್ಯಕ್ತಿಗೆ ಮನ್ನಣೆ ನೀಡಿ ಟಿಕೆಟ್ ನೀಡಿದರೆ ಪಕ್ಷಕ್ಕೆ ಎಷ್ಟು ಹಾನಿಯಾಗುತ್ತದೆ ಎಂಬುದನ್ನು ಅವರು ತಿಳಿದುಕೊಳ್ಳಬೇಕಿತ್ತು, ಈ ಲೆಕ್ಕಾಚಾರ ಗೊತ್ತಿಲ್ಲದಿದ್ದರೆ ರಾಷ್ಟ್ರಮಟ್ಟದಲ್ಲಿ ಪಕ್ಷಕ್ಕೆ ಯಾವ ರೀತಿ ಸಲಹೆ ನೀಡುತ್ತಾರೆ ಎಂಬುದು ಅರ್ಥವಾಗುತ್ತಿಲ್ಲ’ ಎಂದರು.

‘ಒಂದು ಬಾರಿ ಮಾತ್ರ ಶಾಸಕರಾಗಿರುವ, ತಮಗೆ ಬೇಕಾದ ನಿರ್ಮಲ್ ಕುಮಾರ್ ಸುರಾನಾ ಮತ್ತು ಕೇಶವಪ್ರಸಾದ್ ಅವರನ್ನು ಸಂತೋಷ್ ಕಚೇರಿಯಲ್ಲಿ ಕೂರಿಸಿದ್ದಾರೆ. ಪಕ್ಷದ ಅಧ್ಯಕ್ಷ ನಳಿನ್‌ಕುಮಾರ್ ಕೂಡ ಸಂತೋಷ್ ಅವರಿಗೆ ಬೇಕಾದ ವ್ಯಕ್ತಿ. ಮುಂಚೆ ಎಂಟ್ಟತ್ತು ಜನರಿದ್ದ ಕೋರ್ ಕಮಿಟಿಗೆ ನಳಿನ್ ಅವರನ್ನು ಸಹ ತಂದರು. ಚುನಾವಣೆಯಲ್ಲಿ ಅನುಭವವೇ ಇಲ್ಲದವರು ಇಲ್ಲಿಯೂ ಉಸ್ತುವಾರಿ. ಇದು ಸಂತೋಷ್ ವರಸೆ. ಕಟೀಲ್ ಅವಧಿ ಮುಗಿದರೂ ಮುಂದುವರಿಸಿದರು’ ಎಂದು ಟೀಕಿಸಿದರು.

‘ಮೂರು ತಿಂಗಳಿಗೊಮ್ಮೆ ನಡೆಯುವ ರಾಜ್ಯ ಕಾರ್ಯಕಾರಿಣಿಯಲ್ಲಿ ನಮಗೆ ಮಾತನಾಡಲು ಅವಕಾಶವೇ ಇರುತ್ತಿರಲಿಲ್ಲ. ಕಳೆದ ಮೂರು ವರ್ಷದಿಂದ ಮಾತನಾಡಲು ಅವಕಾಶ ಕೊಡಲಿಲ್ಲ. ಪಕ್ಷದ ಹಿತಾಸಕ್ತಿಗಾಗಿ ಎಲ್ಲವನ್ನೂ ಸಹಿಸಿಕೊಂಡು ಬಂದೆ’ ಎಂದರು.

ಆಡಿಯೊ ಸತ್ಯವಾಗಿದೆ: ‘ವರ್ಷದ ಹಿಂದೆ ಕಟೀಲ್ ಅವರ ಟೆಲಿಫೋನ್ ಆಡಿಯೊ ವೈರಲ್ ಆಗಿತ್ತು. ಯಡಿಯೂರಪ್ಪ ಅವರ ಕಾಲ ಮುಗಿಯಿತು. ಮುಂದೆ ಈಶ್ವರಪ್ಪ ಮತ್ತು ಶೆಟ್ಟರ್ ಕಾಲ ಮುಗಿಯಲಿದೆ ಎಂದು ಹೇಳಿದ್ದರು. ಅದೀಗ ನಿಜವಾಗಿದೆ. ಸಂತೋಷ್ ಪ್ಲಾನ್ ಈಡೇರಿದೆ’ ಎಂದರು.

ರಾಮದಾಸ್‌ಗೂ ಇದೇ ಸ್ಥಿತಿ: ಮೈಸೂರಿನಲ್ಲಿಯೂ ಇದೇ ಸ್ಥಿತಿ. ಸಂತೋಷ್ ಅವರ ಆಪ್ತರಲ್ಲ ಎಂಬ ಕಾರಣಕ್ಕಾಗಿ ಗೆಲ್ಲುವ ರಾಮದಾಸ್‌ಗೆ ಟಿಕೆಟ್ ತಪ್ಪಿಸಿ, ತಮಗೆ ಬೇಕಾದ ಶ್ರೀವತ್ಸ ಅವರಿಗೆ ಟಿಕೆಟ್ ಕೊಡಲಾಯಿತು. ರಾಮದಾಸ್ ಬಂಡಾಯವೆದ್ದರೆ ಅಲ್ಲಿ ಬಿಜೆಪಿ ಗೆಲ್ಲಲು ಸಾಧ್ಯವೆ?’ ಎಂದರು.

ಆರೋಪ ಸುಳ್ಳು: ಬಿಎಸ್‌ವೈ

ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರ ಮೇಲೆ ಜಗದೀಶ ಶೆಟ್ಟರ್ ವಾಗ್ದಾಳಿ ನಡೆಸಿರುವುದು ಅವರಿಗೆ ಶೋಭೆ ತರುವುದಿಲ್ಲ. ಪಕ್ಷಕ್ಕೆ ದ್ರೋಹ ಎಸಗಿದ ಶೆಟ್ಟರ್ ಅವರಿಗೆ ಮತದಾರರು ಪಾಠ ಕಲಿಸಲಿದ್ದಾರೆ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹರಿಹಾಯ್ದಿದ್ದಾರೆ.

‘ಸಂತೋಷ್ ಅವರ ಕುರಿತಂತೆ ಶೆಟ್ಟರ್ ಮಾಡಿರುವ ಆರೋಪಗಳು ಸುಳ್ಳು. ಪಕ್ಷ ಬಿಟ್ಟ ಮೇಲೆ ಅವರು ಈ ರೀತಿ ಆರೋಪ ಮಾಡುತ್ತಿರುವುದು ಸರಿಯಲ್ಲ’ ಎಂದು ಅವರು ಮಂಗಳವಾರ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

‘ಶೆಟ್ಟರ್ ಪಕ್ಷ ಬಿಟ್ಟು ಹೋಗಿದ್ದರಿಂದ ಪಕ್ಷಕ್ಕೆ ಹಾನಿ ಆಗುವುದಿಲ್ಲ. ಇನ್ನು ಮೇಲೆ ಅವರ ದಾರಿ ಅವರಿಗೆ, ನಮ್ಮ ದಾರಿ ನಮಗೆ. ಬಿಜೆಪಿ ಬಹುಮತ ಗಳಿಸಿ ಮತ್ತೆ ಅಧಿಕಾರಕ್ಕೆ ಬರುವುದು ನಿಶ್ಚಿತ’ ಎಂದರು.

ಜೋಶಿ ವಿರುದ್ಧ ಅಸಮಾಧಾನ

‘ನಾನು ಜೋಶಿ ಅವರನ್ನು ಸಂಸದರನ್ನಾಗಿ ಮಾಡಲು ಎಷ್ಟು ಓಡಾಡಿದ್ದೇನೆ ಎಂಬುದನ್ನು ಅವರು ನೆನಪಿಸಿಕೊಳ್ಳಲಿ. ನನ್ನ ಚುನಾವಣೆಗೂ ನಾನು ಅಷ್ಟು ಓಡಾಡುತ್ತಿರಲಿಲ್ಲ. ಅವರ ಎಲ್ಲಾ ಕರಪತ್ರಗಳಲ್ಲಿ ನನ್ನ ದೊಡ್ಡ ಫೋಟೊ ಇರುತ್ತಿತ್ತು. ನಾನು ಸ್ಪೀಕರ್ ಇದ್ದಾಗ, ನನ್ನ ಫೋಟೊ ಬದಲು ನನ್ನ ಪತ್ನಿ ಶಿಲ್ಪಾ ಶೆಟ್ಟರ್ ಫೋಟೊ ಹಾಕಲಾಗಿತ್ತು. ನನ್ನ ಪರವಾಗಿ ಅವರೇ ಭಾಷಣ ಮಾಡಿದ್ದರು’ ಎಂದು ಶೆಟ್ಟರ್ ನೆನಪಿಸಿಕೊಂಡರು.

‘ನನಗೆ ಟಿಕೆಟ್ ಕೊಡಲು ನಿರಾಕರಿಸಿದಾಗ, ನನ್ನ ಪರವಾಗಿ ಗಟ್ಟಿಯಾಗಿ ಏಕೆ ದನಿ ಎತ್ತಲಿಲ್ಲ? ಸಂತೋಷ್‌ಗೆ ಏಕೆ ಮನವರಿಕೆ ಮಾಡಿಕೊಡಲಿಲ್ಲ? ಇಲ್ಲಿ ಆಗಬಹುದಾದ ಅನಾಹುತಗಳ ಬಗ್ಗೆ ಏಕೆ ತಿಳಿಸಲಿಲ್ಲ. ನಿಮಗಾಗಿ ನಾವು ಏನೆಲ್ಲಾ ಮಾಡಿದೆವು. ನೀವು ಗಟ್ಟಿಯಾಗಿ ಮಾತನಾಡಬೇಕಿತ್ತು. ಶೆಟ್ಟರ್‌ಗೆ ಟಿಕೆಟ್ ಬೇಕೇ ಬೇಕು ಎಂದು ನಿಲ್ಲಬೇಕಿತ್ತು. ಅದ್ಯಾವುದನ್ನು ಮಾಡದೆ ಪ್ರಯತ್ನ ಮಾಡಿದೆವು ಎಂದು ಸುಮ್ಮನೆ ಹೇಳುತ್ತಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಸಂಕೇಶ್ವರ ಬಳಿಕ ಲೋಕಸಭೆ ಚುನಾವಣೆಗೆ ಸ್ಪರ್ಧಿಸುವಂತೆ ಜೇಟ್ಲಿ ನನಗೆ ಹೇಳಿದ್ದರು. ನನಗೆ ರಾಷ್ಟ್ರ ರಾಜಕಾರಣದಲ್ಲಿ ಆಸಕ್ತಿ ಇಲ್ಲ ಎಂದು ಹೇಳಿದೆ. ಪಕ್ಷವನ್ನು ಗೆಲ್ಲಿಸುವ ಜವಾಬ್ದಾರಿ ನನ್ನದು ಎಂದು ಹೇಳಿದ ನಾನು, ಪ್ರಲ್ಹಾದ ಜೋಶಿ ಅವರ ಹೆಸರನ್ನು ಪ್ರಸ್ತಾಪಿಸಿದ್ದೆ. ಅದರಂತೆ, ಅವರನ್ನು ಗೆಲ್ಲಿಸಿದ್ದೆ. ಅದಕ್ಕೆ ಪ್ರತಿಯಾಗಿ ಅವರು ಮಾಡಿದ್ದಾದರೂ ಏನು’ ಎಂದು ಪ್ರಶ್ನಿಸಿದರು.

ಮೊರ್ಬಿ ದುರಂತ: ₹14 ಕೋಟಿ ಮಧ್ಯಂತರ ಪಾವತಿ

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಮೊರ್ಬಿಯ ತೂಗು ಸೇತುವೆ ಕುಸಿತ ಪ್ರಕರಣದ ಸಂತ್ರಸ್ತರಿಗೆ ನೀಡಬೇಕಿದ್ದ ₹14.62 ಕೋಟಿ ಮಧ್ಯಂತರ ಪರಿಹಾರವನ್ನು ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ ನೀಡಲಾಗಿದೆ ಎಂದು ಒರೆವಾ ಗ್ರೂಪ್ ಮಂಗಳವಾರ ಗುಜರಾತ್ ಹೈಕೋರ್ಟ್‌ಗೆ ಮಾಹಿತಿ ನೀಡಿದೆ.

ಅರ್ಜಿ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಎ.ಜೆ.ದೇಸಾಯಿ ಮತ್ತು ನ್ಯಾಯಮೂರ್ತಿ ಬಿರೆನ್ ವೈಷ್ಣವ್ ಅವರಿದ್ದ ನ್ಯಾಯಪೀಠವು, ಫೆ.22ರಂದು ವಿಭಾಗೀಯ ಪೀಠ ನೀಡಿದ ಆದೇಶದ ಅನುಸಾರ ಪರಿಹಾರ ಮೊತ್ತವನ್ನು ಹಂಚಿಕೆ ಮಾಡಬಹುದು ಎಂದಿದೆ.

ಸೂರ್ಯಾಘಾತ: ಮೃತರ ಸಂಖ್ಯೆ 14ಕ್ಕೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಖಾರ್‌ಘರ್‌ನ ಬಯಲು ಪ್ರದೇಶದಲ್ಲಿ ಭಾನುವಾರ ನಡೆದಿದ್ದ ಸಮಾರಂಭವೊಂದರಲ್ಲಿ ಪಾಲ್ಗೊಂಡಿದ್ದ ವೇಳೆ ಸೂರ್ಯಾಘಾತಕ್ಕೆ ಒಳಗಾಗಿ ತೀವ್ರ ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಮಹಿಳೆಯೊಬ್ಬರು ಮಂಗಳವಾರ ಮೃತಪಟ್ಟಿದ್ದು, ಇದರೊಂದಿಗೆ ಮೃತರ ಸಂಖ್ಯೆ 14ಕ್ಕೆ ಏರಿದೆ. 7 ಜನರು ವಿವಿಧ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬಿಲ್ಕಿಸ್ ಬಾನು ಪ್ರಕರಣ; ‘ಸುಪ್ರೀಂ’ನಲ್ಲಿ ವಿಚಾರಣೆ

ಕಡತ ಕೋರ್ಟ್‌ಗೆ ಸಲ್ಲಿಸಲು ಕೇಂದ್ರ, ಗುಜರಾತ್ ಹಿಂದೇಟು

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಬಿಲ್ಕಿಸ್ ಬಾನು ಪ್ರಕರಣದ 11 ಅಪರಾಧಿಗಳಿಗೆ ಅವಧಿಪೂರ್ವ ಬಿಡುಗಡೆಗೆ ಮಂಜೂರಾತಿ ನೀಡಿರುವುದಕ್ಕೆ ಸಂಬಂಧಿಸಿದ ಕಡತಗಳ ಮೇಲೆ ತಮಗೇ ವಿಶೇಷಾಧಿಕಾರ ಇದೆ’ ಎಂದು ಕೇಂದ್ರ ಹಾಗೂ ಗುಜರಾತ್ ಸರ್ಕಾರಗಳು ಸುಪ್ರೀಂಕೋರ್ಟ್‌ಗೆ ಮಂಗಳವಾರ ತಿಳಿಸಿದವು.

ತನ್ನ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ್ದ ಅಪರಾಧಿಗಳ ಅವಧಿಪೂರ್ವ ಬಿಡುಗಡೆ ಪ್ರಶ್ನಿಸಿ ಬಿಲ್ಕಿಸ್ ಬಾನು ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ, ಉಭಯ ಸರ್ಕಾರಗಳು ಈ ಪ್ರತಿಪಾದನೆ ಮಾಡಿದವು.

ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಹಾಗೂ ಬಿ.ವಿ.ನಾಗರತ್ನ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

‘ಅಪರಾಧಿಗಳನ್ನು ಬಿಡುಗಡೆಗೊಳಿಸಿರುವುದಕ್ಕೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ಮುಂದಿನ ವಿಚಾರಣೆ ವೇಳೆ ನ್ಯಾಯಪೀಠಕ್ಕೆ ಸಲ್ಲಿಸಬೇಕು’ ಎಂದು ಮಾರ್ಚ್ 27ರಂದು ನ್ಯಾಯಪೀಠ ಆದೇಶಿಸಿತ್ತು.

ಆದೇಶ ಕುರಿತು ಪ್ರಸ್ತಾಪಿಸಿದ ಉಭಯ ಸರ್ಕಾರಗಳು, ‘ಈ ಆದೇಶವನ್ನು ಮರುಪರಿಶೀಲಿಸುವಂತೆ ಕೋರಿ ಅರ್ಜಿ ಸಲ್ಲಿಸಲಾಗುವುದು’ ಎಂದು ನ್ಯಾಯಪೀಠಕ್ಕೆ ತಿಳಿಸಿದವು.

‘ಅಪರಾಧ ಕೃತ್ಯವು ಘೋರ ಹಾಗೂ ಭಯಾನಕವಾಗಿದೆ. ಹೀಗಾಗಿ ಅಪರಾಧಿಗಳ ಅವಧಿಪೂರ್ವ ಬಿಡುಗಡೆಗೆ ಅನುಮತಿ ನೀಡುವ ಮುನ್ನ ರಾಜ್ಯ ಸರ್ಕಾರ ವಿವೇಕಯುತವಾಗಿ ನಡೆದುಕೊಳ್ಳಬೇಕಿತ್ತು’ ಎಂದು ನ್ಯಾಯಪೀಠ ಹೇಳಿತು.

‘ಅವಧಿಪೂರ್ವ ಬಿಡುಗಡೆಗೆ ಅನುಮತಿ ನೀಡಿದ್ದಕ್ಕೆ ಸಂಬಂಧಿಸಿದ ಕಡತಗಳನ್ನು ಕೋರ್ಟ್ ಮುಂದೆ ಹಾಜರುಪಡಿಸಲು ಹೆದರಿಕೆ ಏಕೆ’ ಎಂದು ಪ್ರಶ್ನಿಸಿತು.

‘ಸರ್ಕಾರ ವಿವೇಕ ಬಳಸಿದೆಯೇ ಎಂಬುದು ಇಲ್ಲಿರುವ ಪ್ರಶ್ನೆ. ತನ್ನ ನಿರ್ಧಾರಕ್ಕೆ ಕಾರಣವಾದ ಅಂಶಗಳು ಯಾವುವು? ಅಪರಾಧಿಗಳು ತಮ್ಮ ಜೀವಿತಾವಧಿ ವರೆಗೆ ಜೈಲಿನಲ್ಲಿರಬೇಕು ಎಂಬ ಆದೇಶವಿತ್ತು. ಆದಾಗ್ಯೂ, ಸರ್ಕಾರದ ಆದೇಶವೊಂದರ ಆಧಾರದ ಮೇಲೆ ಅವರನ್ನು ಬಿಡುಗಡೆ ಮಾಡಲಾಗಿದೆ’ ಎಂದು ನ್ಯಾಯಪೀಠ ಹೇಳಿತು.

‘ಇವತ್ತು ಬಿಲ್ಕಿಸ್ ಬಾನು ಅವರಿಗೆ ಹೀಗಾಗಿದ್ದರೆ, ನಾಳೆ ಯಾರಿಗೂ ಹೀಗಾಬಹುದು. ಇಂಥ ಪರಿಸ್ಥಿತಿ ನನಗೆ ಬಂದೊದಗಬಹುದು ಅಥವಾ ನೀವು ಎದುರಿಸಬಹುದು. ಹೀಗಾಗಿ, ಅವಧಿಪೂರ್ವ ಬಿಡುಗಡೆಗೆ ನಿರ್ಧಾರ ಕೈಗೊಳ್ಳಲು ನಿಮಗಿದ್ದ ಕಾರಣಗಳನ್ನು ಹೇಳದಿದ್ದರೆ, ನಾವು ನಮ್ಮದೇ ಆದ ನಿರ್ಣಯಗಳಿಗೆ ಬರಬೇಕಾಗುತ್ತದೆ’ ಎಂದು ನ್ಯಾಯಪೀಠ ಹೇಳಿತು.

ಕೇಂದ್ರ ಸರ್ಕಾರ ಪ್ರತಿನಿಧಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, ‘ಸಂಬಂಧಪಟ್ಟ ಕಡತಗಳು ಮಂಗಳವಾರವಷ್ಟೆ ನನ್ನ ಕೈಸೇರಿವೆ. ಕಡತಗಳನ್ನು ಪರಿಶೀಲಿಸಿ, ಮುಂದಿನ ವಾರ ವಾದ ಮಂಡಿಸುವೆ’ ಎಂದು ನ್ಯಾಯಪೀಠದ ಗಮನಕ್ಕೆ ತಂದರು.

‘ಸಾಮಾನ್ಯ ಪ್ರಕರಣಗಳಲ್ಲಿ, ಅಪರಾಧಿಗಳ ಅವಧಿಪೂರ್ವ ಬಿಡುಗಡೆಗೆ ಸಂಬಂಧಿಸಿ ನೀಡುವ ಮಂಜೂರಾತಿಗಳನ್ನು ನ್ಯಾಯಿಕ ಪರಿಶೀಲನೆಗೆ ಒಳಪಡಿಸುವುದಿಲ್ಲ. ನೀವು ಈ ಕಾನೂನು ಕ್ರಮವನ್ನು ಸಮರ್ಪಕವಾಗಿಯೇ ತೆಗೆದುಕೊಂಡಿದ್ದೀರಿ. ಇಲ್ಲಿ ಹೆದರಿಕೊಳ್ಳುವಂಥದ್ದು ಏನೂ ಇಲ್ಲ’ ಎಂದು ರಾಜು ಅವರಿಗೆ ನ್ಯಾಯಪೀಠ ಹೇಳಿತು.

‘ಈ ಕಡತಗಳ ಮೇಲೆ ಅಧಿಕಾರ ಇದೆ. ಕಡತಗಳನ್ನು ಹಾಜರುಪಡಿಸುವ ಕುರಿತು ನೀಡಿರುವ ಆದೇಶವನ್ನು ಮರುಪರಿಶೀಲಿಸಬೇಕು ಎಂದಷ್ಟೆ ನಿಮ್ಮ ಗಮನಕ್ಕೆ ತರುತ್ತಿದ್ದೇವೆ’ ಎಂದು ರಾಜು ಹೇಳಿದರು.

‘ನೀವು ಕಡತಗಳನ್ನು ನಮಗೆ ತೋರಿಸಿದರೆ ಒಳ್ಳೆಯದು’ ಎಂದ ನ್ಯಾಯಪೀಠ, ‘ಮರುಪರಿಶೀಲನಾ ಅರ್ಜಿ ಸಲ್ಲಿಸದಂತೆ ನಾವು ಸರ್ಕಾರವನ್ನು ತಡೆದಿಲ್ಲ’ ಎಂದು ಹೇಳಿತು. ವಿಚಾರಣೆಯನ್ನು ಮೇ 2ಕ್ಕೆ ಮುಂದೂಡಿತು.

ಹೋಲಿಕೆ ಸಲ್ಲ

‘ಸೇಬು ಹಣ್ಣುಗಳನ್ನು ಕಿತ್ತಳೆ ಹಣ್ಣುಗಳೊಂದಿಗೆ ಹೋಲಿಕೆ ಮಾಡುವುದು ಸಾಧ್ಯ ಇಲ್ಲ. ಹಾಗೆಯೇ, ಒಂದು ಕೊಲೆ ಪ್ರಕರಣದೊಂದಿಗೆ ಸಾಮೂಹಿಕ ಹತ್ಯೆಯನ್ನು ಹೋಲಿಸಲಾಗದು. ಈ ಪ್ರಕರಣದಲ್ಲಿ, ಒಬ್ಬ ಗರ್ಭಿಣಿ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಲಾಗಿದೆ. ಹಲವು ಜನರನ್ನು ಹತ್ಯೆ ಮಾಡಲಾಗಿದೆ’ ಎಂದು ನ್ಯಾಯಪೀಠ ಹೇಳಿತು.

ಕ್ಷೀಣಿಸಿದ ಉದ್ಯೋಗಾವಕಾಶ • ಕೊಳೆಗೇರಿಗಳಲ್ಲಿನ ಅತಿರೇಕದ ಅಪರಾಧಗಳಿಗೆ ಹಲವರು ಬಲಿ

ಮಹಾನಗರಗಳ ಹಾದಿ ಹಿಡಿದ ಆಂತರಿಕ ವಲಸಿಗರ ಬದುಕು ದುಸ್ತರ

ನವದೆಹಲಿ/ಜೌನಾಪುರ (ಉತ್ತರಪ್ರದೇಶ) (ರಾಯಿಟರ್ಸ್): ದೇಶದಲ್ಲಿ ಆಂತರಿಕ ವಲಸೆ ಹೆಚ್ಚುತ್ತಿದೆ. ಆದರೆ, ನೆಮ್ಮದಿಯ ಜೀವನವನ್ನು ಅರಸಿ ಮಹಾನಗರಗಳ ಹಾದಿ ಹಿಡಿದವರ ಬದುಕು ದುಸ್ತರವಾಗಿದೆ.

ಭಾರತವು ಜಗತ್ತಿನಲ್ಲೇ ಅಧಿಕ ಜನಸಂಖ್ಯೆ ಹೊಂದಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಮೊದಲ ಸ್ಥಾನಕ್ಕೇರುವ ಹಾದಿಯಲ್ಲಿ ಸಾಗುತ್ತಿರುವ ಹೊತ್ತಿನಲ್ಲೇ ಆಂತರಿಕ ವಲಸೆ ತೀವ್ರಗೊಳ್ಳುತ್ತಿದೆ. ಇದು ಸರ್ಕಾರದ ಎದುರು ಹಲವು ಸವಾಲುಗಳನ್ನು ತಂದಿಟ್ಟಿದೆ. 2011ರ ಅಂಕಿ ಅಂಶಗಳ ಪ್ರಕಾರ ಭಾರತದ ಒಟ್ಟು ಜನಸಂಖ್ಯೆ 121 ಕೋಟಿ. ಇದರಲ್ಲಿ ಆಂತರಿಕ ವಲಸಿಗರ ಸಂಖ್ಯೆ 45.6 ಕೋಟಿ.

ಭಾರತದ ಜನಸಂಖ್ಯೆಯು ಶೀಘ್ರವೇ 142 ಕೋಟಿಯ ಗಡಿ ದಾಟಲಿದ್ದು,

ಸಂಗ್ರಹ ಚಿತ್ರ

ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಚೀನಾವನ್ನು ಹಿಂದಿಕ್ಕುವ ಕಾಲ ಸನ್ನಿಹಿತವಾಗಿದೆ ಎಂದು ವಿಶ್ವಸಂಸ್ಥೆ ಕಳೆದ ವಾರ ಹೇಳಿತ್ತು.

ದೇಶದ ಜನಸಂಖ್ಯೆಯಲ್ಲಿ ಸುಮಾರು ಮೂರನೇ ಎರಡು ಭಾಗದಷ್ಟು ಮಂದಿ 35 ವರ್ಷದೊಳಗಿನವರಾಗಿದ್ದಾರೆ. ಇವರು ಕೆಲಸ ಅರಸಿ ನಗರಗಳತ್ತ ಗುಳೆ ಹೋಗುತ್ತಿದ್ದಾರೆ. ಕಾರ್ಮಿಕ, ಚಾಲಕ, ಸಹಾಯಕ ಹೀಗೆ ಏನೇ ಕೆಲಸ ಸಿಕ್ಕರೂ ಮಾಡಲು ಇವರು ತಯಾರಿರುತ್ತಾರೆ. ಗುಳೆ ಹೋಗುವವರಲ್ಲಿ ಉತ್ತರಪ್ರದೇಶ ಹಾಗೂ ಬಿಹಾರ ರಾಜ್ಯದವರ ಸಂಖ್ಯೆಯೇ ಅಧಿಕವಾಗಿದೆ.

‘ವಲಸಿಗರಿಗೆ ಅರ್ಹತೆಗೆ ಅನುಗುಣವಾದ ಕೆಲಸಗಳೇ ಸಿಗುವುದಿಲ್ಲ. ಈಗ ಉದ್ಯೋಗಾವಕಾಶ ಕ್ಷೀಣಿಸಿದೆ. ಇಂತಹ ಪರಿಸ್ಥಿತಿಯಲ್ಲಿ ಇವರಿಗೆ ಕಾಯಂ ಕೆಲಸ ದೊರೆಯುವುದು ದೂರದ ಮಾತು. ಸಿಗುವ ಸಂಬಳದಿಂದ ಜೀವನ ನಿರ್ವಹಿಸುವುದೇ ಕಷ್ಟ. ಹೀಗಿರುವಾಗ ಬಾಡಿಗೆ ಮನೆ ಹಿಡಿಯುವುದು, ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸುವುದು ಅಸಾಧ್ಯ’ ಎಂದು ದೆಹಲಿಯ ಸೆಂಟರ್ ಫಾರ್ ಪಾಲಿಸಿ ರಿಸರ್ಚ್‌ನ ತಜ್ಞೆ ಮುಕ್ತಾ ನಾಯಕ್ ಹೇಳುತ್ತಾರೆ.

ನಗರಗಳಿಗೆ ವಲಸೆ ಬರುವವರು ಕಡಿಮೆ ಕೂಲಿ ಹಾಗೂ ಕೆಲಸ ಸಿಗುವುದೇ ಕಷ್ಟ ಎಂಬಂತಹ ಪರಿಸ್ಥಿತಿಯಿಂದಾಗಿ ನೆಲೆ ಕಂಡುಕೊಳ್ಳಲು ಕಷ್ಟಪಡಬೇಕಾಗಿದೆ. ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿರುವ ಹಲವರು ನಗರದ ಕೊಳೆಗೇರಿಗಳಲ್ಲಿನ ಅತಿರೇಕದ ಅಪರಾಧಗಳಿಗೆ ಬಲಿಯಾಗುತ್ತಿದ್ದಾರೆ.

‘17ನೇ ವಯಸ್ಸಿನಲ್ಲಿ ಊರು ಬಿಟ್ಟು ಚೆನ್ನೈ, ಹೈದರಾಬಾದ್ ಮತ್ತು ಮುಂಬೈಯಂತಹ ನಗರಗಳಲ್ಲಿ ಕೆಲಸ ಮಾಡಿದೆ. ಅಲ್ಲಿ ಬದುಕು ಕಟ್ಟಿಕೊಳ್ಳುವುದು ಕಷ್ಟವಾಯಿತು. ಹೀಗಾಗಿ ಬೆಂಗಳೂರಿಗೆ ಬಂದು ಭದ್ರತಾ ಸಿಬ್ಬಂದಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಇಲ್ಲೂ ಕೂಡ ಜೀವನ ನಿರ್ವಹಣೆ ಕಷ್ಟವಾಗಿದೆ. ಹೀಗಾಗಿ ಹೆಂಡತಿ ಮತ್ತು ಮಕ್ಕಳನ್ನು ಊರಿಗೆ ಕಳುಹಿಸಿದ್ದೇನೆ. ನನಗೆ ಸಿಗುವ ಸಂಬಳದಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವುದೂ ಕಷ್ಟಕರವಾಗಿದೆ’ ಎಂದು ಅಸ್ಸಾಂನ ಅಬ್ದುಲ್ ನೂರ್ ಅಳಲು ತೋಡಿಕೊಂಡಿದ್ದಾರೆ.

ಜಿಡಿಪಿಗೆ ಕೊಡುಗೆ ಗಣನೀಯ

ದೇಶದ ಒಟ್ಟು ಆಂತರಿಕ ಉತ್ಪಾದನೆಯಲ್ಲಿ (ಜಿಡಿಪಿ) ವಲಸೆ ಕಾರ್ಮಿಕರ ಪಾಲು ಶೇ 10ರಷ್ಟಿದೆ. ಇವರು ವಿವಿಧ ವಲಯಗಳ ಬೆನ್ನೆಲುಬಾಗಿ ಕೆಲಸ ಮಾಡುತ್ತಿದ್ದಾರೆ ಎಂದು ರಾಷ್ಟ್ರೀಯ ಕಾರ್ಮಿಕ ಒಕ್ಕೂಟವು 2020ರಲ್ಲಿ ಬಿಡುಗಡೆ ಮಾಡಿದ್ದ ವರದಿಯಲ್ಲಿ ತಿಳಿಸಿದೆ.

ಉದ್ಯೋಗ ವಾಣಿ

ಬೇಕಾಗಿದ್ದಾರೆ

ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ, ಬಿಳಿಗಿರಿರಂಗನಬೆಟ್ಟ, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ – 571441 ಇಲ್ಲಿನ ಅನುದಾನಿತ ವಿವೇಕಾನಂದ ಗಿರಿಜನ ಪ್ರೌಢಶಾಲೆಯಲ್ಲಿ ಖಾಲಿ ಇರುವ ಆಂಗ್ಲಭಾಷಾ ಶಿಕ್ಷಕ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ವಯೋಮಿತಿ ಮತ್ತು ವೇತನವು ಸರ್ಕಾರಿ ಆದೇಶ ಮತ್ತು ಇಲಾಖೆ ನಿಯಮಾನುಸಾರ ಇರುತ್ತದೆ.

ವಿದ್ಯಾರ್ಹತೆ : ಬಿ.ಎ., ಬಿ.ಇಡಿ (ಇಂಗ್ಲಿಷ್ ಐಚ್ಛಿಕ)

ಮೀಸಲಾತಿ : ಪರಿಶಿಷ್ಟ ಜಾತಿ

ಅರ್ಹ ಅಭ್ಯರ್ಥಿಗಳು ಈ ಜಾಹೀರಾತು ಪ್ರಕಟಗೊಂಡ 21 ದಿನಗಳ ಒಳಗಾಗಿ ಮೇಲಿನ ವಿಳಾಸಕ್ಕೆ 1000 ರೂ. ಗಳ ಡಿಡಿಯೊಡನೆ ಅರ್ಜಿ ಸಲ್ಲಿಸಲು ಹಾಗೂ ಪ್ರತಿಯನ್ನು ಮಾನ್ಯ ಉಪನಿರ್ದೇಶಕರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಚಾಮರಾಜನಗರ ಜಿಲ್ಲೆ ಇವರಿಗೆ ಸಲ್ಲಿಸಲು ಕೋರಲಾಗಿದೆ.

ಸಹಿ/– ಗೌರವ ಕಾರ್ಯದರ್ಶಿ

ಗ್ರೀನ್, ತಿಲಕ್ ಉತ್ತಮ ಬ್ಯಾಟಿಂಗ್; ಕೊನೆ ಓವರ್‌ನಲ್ಲಿ ಮಿಂಚಿದ ಅರ್ಜುನ್ ತೆಂಡೂಲ್ಕರ್

ಮುಂಬೈ ಇಂಡಿಯನ್ಸ್‌ಗೆ ಮೂರನೇ ಜಯ

ಹೈದರಾಬಾದ್ (ಪಿಟಿಐ): ಅರ್ಧಶತಕ ಗಳಿಸಿದ ಕ್ಯಾಮರಾನ್ ಗ್ರೀನ್ ಹಾಗೂ ಬೌಲರ್‌ಗಳ ನೆರವಿನಿಂದ ಮುಂಬೈ ಇಂಡಿಯನ್ಸ್ ತಂಡವು ಸತತ ಮೂರನೇ ಪಂದ್ಯದಲ್ಲಿ ಜಯಿಸಿತು.

ರಾಜೀವಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಮುಂಬೈ ತಂಡವು 14 ರನ್‌ಗಳಿಂದ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಜಯಿಸಿತು.

ಟಾಸ್ ಗೆದ್ದ ಸನ್‌ರೈಸರ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮುಂಬೈ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 192 ರನ್ ಗಳಿಸಿತು. ಗ್ರೀನ್ (ಔಟಾಗದೆ 64; 40ಎ) ಅರ್ಧಶತಕ ಗಳಿಸಿದರು. ಗುರಿ ಬೆನ್ನಟ್ಟಿದ ಸನ್‌ರೈಸರ್ಸ್ ತಂಡವು 19.5 ಓವರ್‌ಗಳಲ್ಲಿ 178 ರನ್ ಗಳಿಸಲಷ್ಟೇ ಶಕ್ತವಾಯಿತು.

ಮುಂಬೈ ತಂಡದ ಜೇಸನ್ ಬೆರೆನ್‌ಡ್ರಾರ್ಫ್, ಸ್ಪಿನ್ನರ್ ಪಿಯೂಷ್ ಚಾವ್ಲಾ ಹಾಗೂ ರಿಲೆ ಮೆರೆಡಿತ್ ತಲಾ ಎರಡು ವಿಕೆಟ್ ಗಳಿಸಿದರು. ಪಂದ್ಯದ ಕೊನೆಯ ಓವರ್‌ನಲ್ಲಿ ಸನ್‌ರೈಸರ್ಸ್ ತಂಡಕ್ಕೆ 20 ರನ್‌ಗಳ ಅವಶ್ಯಕತೆ ಇತ್ತು. ಈ ಓವರ್ ಬೌಲಿಂಗ್ ಮಾಡಿದ ಎಡಗೈ ಮಧ್ಯಮವೇಗಿ ಅರ್ಜುನ್ ತೆಂಡೂಲ್ಕರ್ ಯಶಸ್ವಿಯಾದರು. ಈ ಓವರ್‌ನಲ್ಲಿ ಅವರು ಒಂದು ವಿಕೆಟ್ ಕೂಡ ಗಳಿಸಿದರು.

ಇದರಿಂದಾಗಿ ಸನ್‌ರೈಸರ್ಸ್ ತಂಡದ ಮಯಂಕ್ ಅಗರವಾಲ್ (48; 41ಎ) ಹಾಗೂ ಹೆನ್ರಿಚ್ ಕ್ಲಾಸೆನ್ (36; 16ಎ) ಅವರ ಶ್ರಮ ವ್ಯರ್ಥವಾಯಿತು. ಉಳಿದ ಬ್ಯಾಟರ್‌ಗಳು ಮಿಂಚಲಿಲ್ಲ.

ಗ್ರೀನ್ ಮಿಂಚು: ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ತಂಡಕ್ಕೆ ನಾಯಕ ರೋಹಿತ್ ಶರ್ಮಾ (28; 18ಎಸೆತ, 4X6) ಹಾಗೂ ಇಶಾನ್ ಕಿಶನ್ (38; 31ಎ, 4X3, 6X2) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 41 ರನ್ ಸೇರಿಸಿದರು. ಆದರೆ ಐದನೇ ಓವರ್‌ನಲ್ಲಿ ರೋಹಿತ್ ಶರ್ಮಾ ಅವರ ವಿಕೆಟ್ ಗಳಿಸಿದ ಮಧ್ಯಮವೇಗಿ ಟಿ. ನಟರಾಜನ್ ಈ ಜೊತೆಯಾಟವನ್ನು ಮುರಿದರು.

ಕ್ಯಾಮರಾನ್ ಗ್ರೀನ್ ಜೊತೆಗೂಡಿದ ಇಶಾನ್ ಎರಡನೇ ವಿಕೆಟ್ ಜೊತೆಯಾಟದಲ್ಲಿ 46 ರನ್ ಸೇರಿಸಿದರು. 12ನೇ ಓವರ್‌ನಲ್ಲಿ ಇಶಾನ್ ವಿಕೆಟ್ ಗಳಿಸುವಲ್ಲಿ ಮಾರ್ಕೊ ಜೆನ್ಸನ್ ಯಶಸ್ವಿಯಾದರು. ತಿಲಕ್ ವರ್ಮಾ (37; 17ಎ, 4X2, 6X4) ತಂಡಕ್ಕೆ ಉಪಯುಕ್ತ ಕಾಣಿಕೆ ನೀಡಿದರು.

ಮುಂಬೈ ಇಂಡಿಯನ್ಸ್ ತಂಡದ ಕ್ಯಾಮರಾನ್ ಗ್ರೀನ್–ಪಿಟಿಐ ಚಿತ್ರ

ರೋಹಿತ್ 6,000 ರನ್

ಮುಂಬೈ ಇಂಡಿಯನ್ಸ್ ತಂಡದ ನಾಯಕ ರೋಹಿತ್ ಶರ್ಮಾ ಅವರು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆರು ಸಾವಿರ ರನ್‌ಗಳನ್ನು ಗಳಿಸಿದ ಶ್ರೇಯಕ್ಕೆ ಪಾತ್ರರಾದರು. ಸನ್‌ರೈಸರ್ಸ್ ಎದುರಿನ ಪಂದ್ಯದಲ್ಲಿ ಅವರು 25 ರನ್ ಗಳಿಸಿದಾಗ ಈ ಮೈಲುಗಲ್ಲು ಮುಟ್ಟಿದರು. ವಿರಾಟ್ ಕೊಹ್ಲಿ ಹಾಗೂ ಶಿಖರ್ ಧವನ್ ಅವರ ನಂತರ ಈ ಸಾಧನೆ ಮಾಡಿದ ಬ್ಯಾಟರ್ ಶರ್ಮಾ ಆಗಿದ್ದಾರೆ.

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್ 5ಕ್ಕೆ192 (20 ಓವರ್‌ಗಳಲ್ಲಿ)
ರೋಹಿತ್ ಸಿ ಮರ್ಕರಂ ಬಿ ನಟರಾಜನ್ 28 (18ಎ, 4X6)
ಇಶಾನ್ ಸಿ ಮರ್ಕರಂ ಬಿ ಮಾರ್ಕೊ 38 (31ಎ, 4X3, 6X2)
ಗ್ರೀನ್ ಔಟಾಗದೆ 64 (40ಎ, 4X6, 6X2)
ಸೂರ್ಯಕುಮಾರ್ ಸಿ ಮರ್ಕರಂ ಬಿ ಮಾರ್ಕೊ 7 (3ಎ, 6X1)
ವರ್ಮಾ ಸಿ ಅಗರವಾಲ್ ಬಿ ಭುವನೇಶ್ವರ್ 37 (17ಎ, 4X2, 6X4)
ಡೇವಿಡ್ ರನ್‌ಔಟ್ (ಅಭಿಷೇಕ್ ಶರ್ಮಾ/ನಟರಾಜನ್) 16 (11ಎ, 4X2)
ಇತರೆ: 2 (ವೈಡ್ 2)
ವಿಕೆಟ್ ಪತನ: 1–41 (ರೋಹಿತ್ ಶರ್ಮಾ; 4.4), 2–87 (ಇಶಾನ್ ಕಿಶನ್; 11.1) 3–95 (ಸೂರ್ಯಕುಮಾರ್ ಯಾದವ್; 11.5), 4–151 (ತಿಲಕ್ ವರ್ಮಾ; 16.3), 5–192 (ಟಿಮ್ ಡೇವಿಡ್; 19.6)
ಬೌಲಿಂಗ್: ಭುವನೇಶ್ವರ್ ಕುಮಾರ್ 4–0–31–1, ಮಾರ್ಕೊ ಜೆನ್ಸನ್ 4–0–43–2, ವಾಷಿಂಗ್ಟನ್ ಸುಂದರ್ 4–0–33–0, ಟಿ. ನಟರಾಜನ್ 4–0–50–1, ಮಯಂಕ್ ಮಾರ್ಕಂಡೆ 4–0–35–0

ಸನ್‌ರೈಸರ್ಸ್ ಹೈದರಾಬಾದ್ 178 (19.5 ಓವರ್‌ಗಳಲ್ಲಿ)
ಹ್ಯಾರಿ ಸಿ ಸೂರ್ಯಕುಮಾರ್ ಬಿ ಬೆರೆನ್‌ಡಾರ್ಫ್ 9 (7ಎ, 4X2)
ಮಯಂಕ್ ಸಿ ಟಿಮ್ ಬಿ ರಿಲೆ 48 (41ಎ, 4X4, 6X1)
ತ್ರಿಪಾಠಿ ಸಿ ಇಶಾನ್ ಬಿ ಬೆರೆನ್‌ಡಾರ್ಫ್ 7 (5ಎ, 4X1)
ಮರ್ಕರಂ ಸಿ ಹೃತಿಕ್ ಬಿ ಗ್ರೀನ್ 22 (17ಎ, 4X1, 6X1)
ಅಭಿಷೇಕ್ ಸಿ ಟಿಮ್ ಬಿ ಚಾವ್ಲಾ 1 (2ಎ)
ಕ್ಲಾಸನ್ ಸಿ ಟಿಮ್ ಬಿ ಚಾವ್ಲಾ 36 (16ಎ, 4X4, 6X2)
ಅಬ್ದುಲ್ ರನ್‌ಔಟ್ (ಶೋಕಿನ್/ಇಶಾನ್) 9 (12ಎ, 4X1)
ಮಾರ್ಕೊ ಸಿ ಟಿಮ್ ಬಿ ರಿಲೆ 13 (6ಎ, 4X3)
ವಾಷಿಂಗ್ಟನ್ ರನ್ ಔಟ್ (ಟಿಮ್ ಡೇವಿಡ್) 10 (6ಎ, 4X2)
ಭುವನೇಶ್ವರ್ ಸಿ ರೋಹಿತ್ ಬಿ ಅರ್ಜುನ್ 2 (5ಎ)
ಮಾರ್ಕಂಡೆ ಔಟಾಗದೆ 2 (2ಎ)
ಇತರೆ: 19 (ಬೈ 1, ಲೆಗ್‌ಬೈ 5, ವೈಡ್ 13)
ವಿಕೆಟ್ ಪತನ: 1–11 (ಹ್ಯಾರಿ ಬ್ರೂಕ್;1.4), 2–25 (ರಾಹುಲ್ ತ್ರಿಪಾಠಿ; 3.4), 3–71 (ಏಡನ್ ಮರ್ಕರಂ; 8.4), 4–72 (ಅಭಿಷೇಕ್ ಶರ್ಮಾ; 9.1), 5–127 (ಹೆನ್ರಿಚ್ ಕ್ಲಾಸನ್; 13.6), 6–132 (ಮಯಂಕ್ ಅಗರವಾಲ್; 14.5), 7–149 (ಮಾರ್ಕೊ ಜೆನ್ಸನ್; 16.4) 8–165 (ವಾಷಿಂಗ್ಟನ್ ಸುಂದರ್; 17.5), 9–174 (ಅಬ್ದುಲ್ ಸಮದ್; 19.2), 10–178 (ಭುವನೇಶ್ವರ್; 19.5)
ಬೌಲಿಂಗ್: ಅರ್ಜುನ್ ತೆಂಡೂಲ್ಕರ್ 2.5–0–18–1, ಜೇಸನ್ ಬೆರೆನ್‌ಡಾರ್ಫ್ 4–0–37–2, ರಿಲೆ ಮೆರೆಡಿತ್ 4–0–33–2, ಹೃತಿಕ್ ಶೋಕೀನ್ 1–0–12–0, ಪಿಯೂಷ್ ಚಾವ್ಲಾ 4–0–43–2, ಕ್ಯಾಮರಾನ್ ಗ್ರೀನ್ 4–0–29–1

ಫಲಿತಾಂಶ: ಮುಂಬೈ ಇಂಡಿಯನ್ಸ್ ತಂಡಕ್ಕೆ 14 ರನ್‌ಗಳ ಜಯ

ರಾಹುಲ್ ಪಡೆಗೆ ರಾಯಲ್ಸ್ ಸವಾಲು

ಲಖನೌ ಸೂಪರ್ ಜೈಂಟ್ಸ್ – ರಾಜಸ್ಥಾನ ಪಂದ್ಯ ಇಂದು

ಜೈಪುರ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್ ತಂಡವು ಬುಧವಾರ ಸಂಜು ಸ್ಯಾಮ್ಸನ್ ಮುಂದಾಳತ್ವದ ರಾಜಸ್ಥಾನ ರಾಯಲ್ಸ್ ಬಳಗವನ್ನು ಎದುರಿಸಲಿದೆ.

ರಾಜಸ್ಥಾನ ತಂಡವು ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಎರಡನೇ ಸ್ಥಾನದಲ್ಲಿ ಲಖನೌ ಇದೆ. ಸಂಜು ಬಳಗವು ಐದು ಪಂದ್ಯಗಳನ್ನು ಆಡಿದೆ. ಅದರಲ್ಲಿ ನಾಲ್ಕು ಗೆದ್ದು, ಒಂದರಲ್ಲಿ ಸೋತಿದೆ. ಯುವ ಬ್ಯಾಟರ್ ಯಶಸ್ವಿ ಜೈಸ್ವಾಲ್, ಸಂಜು ಸ್ಯಾಮ್ಸನ್, ದೇವದತ್ತ ಪಡಿಕ್ಕಲ್ ಹಾಗೂ ಜಾಸ್ ಬಟ್ಲರ್ ಅವರು ರಾಯಲ್ಸ್ ಬ್ಯಾಟಿಂಗ್ ವಿಭಾಗದ ಪ್ರಮುಖರಾಗಿದ್ದಾರೆ.

ಬೌಲರ್‌ಗಳಾದ ಟ್ರೆಂಟ್ ಬೌಲ್ಟ್, ಆರ್.ಅಶ್ವಿನ್, ಯಜುವೇಂದ್ರ ಚಾಹಲ್ ಹಾಗೂ ಸಂದೀಪ್ ಶರ್ಮಾ ಉತ್ತಮ ಲಯದಲ್ಲಿರುವುದರಿಂದ ರಾಹುಲ್ ಬಳಗದ ಬ್ಯಾಟಿಂಗ್ ಪಡೆಯ ಮುಂದೆ ಕಠಿಣ ಸವಾಲು ಎದುರಾಗಬಹುದು.

ರಾಹುಲ್ ಬಳಗವೂ ಐದು ಪಂದ್ಯಗಳನ್ನು ಆಡಿದೆ. ಮೂರರಲ್ಲಿ ಮಾತ್ರ ಜಯಿಸಿ, ಎರಡು ಸೋತಿದೆ. ಕಳೆದ ಪಂದ್ಯದಲ್ಲಿ ರಾಹುಲ್ ಅರ್ಧಶತಕ ಹೊಡೆದು ಭರವಸೆ ಮೂಡಿಸಿದ್ದಾರೆ.

ಕೈಲ್ ಮೇಯರ್ಸ್, ನಿಕೊಲಸ್ ಪೂರನ್, ಆಯುಷ್ ಬಡೋಣಿ ಹಾಗೂ ಮಾರ್ಕಸ್ ಸ್ಟೋಯಿನಿಸ್ ಅವರು ಸ್ಫೋಟಕ ಶೈಲಿಯ ಬ್ಯಾಟಿಂಗ್‌ನಿಂದ ತಂಡಕ್ಕೆ ಉತ್ತಮ ಮೊತ್ತ ಗಳಿಸಿಕೊಡುವ ಸಮರ್ಥರು.

ಮಧ್ಯಮವೇಗಿ ಜಯದೇವ್ ಉನದ್ಕತ್, ಸ್ಪಿನ್ನರ್ ರವಿ ಬಿಷ್ಣೋಯಿ ಹಾಗೂ ಕೃಣಾಲ್ ಪಾಂಡ್ಯ ಅವರು ಎದುರಾಳಿ ಬ್ಯಾಟರ್‌ಗಳಿಗೆ ಸವಾಲೊಡ್ಡುವ ಪ್ರತಿಭಾವಂತರಾಗಿದ್ದಾರೆ. ಆದರೆ ಪಂದ್ಯದಲ್ಲಿ ಪರಿಸ್ಥಿತಿಗನುಗುಣವಾಗಿ ಇವರ ಪ್ರತಿಭೆಯನ್ನು ಬಳಸಿಕೊಳ್ಳುವ ಸವಾಲು ನಾಯಕ ರಾಹುಲ್ ಮುಂದಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್

ಕೆ.ಎಲ್. ರಾಹುಲ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ರಾಜಸ್ಥಾನ	5	4	1	0	8	1.354
ಲಖನೌ	5	3	2	0	6	0.761
ಚೆನ್ನೈ	5	3	2	0	6	0.265
ಗುಜರಾತ್	5	3	2	0	6	0.192
ಪಂಜಾಬ್	5	3	2	0	6	-0.109
ಮುಂಬೈ	5	3	2	0	6	-0.164
ಕೋಲ್ಕತ್ತ	5	2	3	0	4	0.320
ಬೆಂಗಳೂರು	5	2	3	0	4	-0.318
ಹೈದರಾಬಾದ್	5	2	3	0	4	-0.798
ಡೆಲ್ಲಿ	5	0	5	0	0	-1.488

* ಮಂಗಳವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	259

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಚಾಹಲ್	ರಾಜಸ್ಥಾನ	11

ಸ್ಪೈಡರ್ ಕ್ಯಾಮ್ ಬಳಕೆ- ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳಲ್ಲಿ ಕೆಲವು ಆಟಗಾರರ ಕೆಂಗಣ್ಣಿಗೆ ಗುರಿಯಾಗಿದ್ದ ಸ್ಪೈಡರ್ ಕ್ಯಾಮೆರಾ ಈಗ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ಮಹೇಂದ್ರಸಿಂಗ್ ಧೋನಿ ಅಸಮಾಧಾನಕ್ಕೂ ಕಾರಣವಾಗಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬ್ಯಾಟರ್ ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಕ್ಯಾಚ್ ಪಡೆಯುವಾಗ ಸ್ಪೈಡರ್ ಕ್ಯಾಮ್ ಚಲನವಲನ ಗೊಂದಲವುಂಟು ಮಾಡುವಂತಿತ್ತು. ಕ್ಯಾಚ್ ಪಡೆಯುವಲ್ಲಿ ಯಶಸ್ವಿಯಾದ ಧೋನಿ ಸಂಭ್ರಮಿಸುವ ಗೋಜಿಗೆ ಹೋಗದೇ, ಸೀದಾ ಅಂಪೈರ್‌ಗಳ ಬಳಿ ತೆರಳಿ ದೂರಿದರು.

ಬಹುಶಃ ಧೋನಿ ಆ ಕ್ಯಾಚ್ ಕೈಚೆಲ್ಲಿದ್ದರೆ ಚೆನ್ನೈ ಸೋಲುವ ಸಾಧ್ಯತೆ ಇತ್ತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಚೆನ್ನೈ 226 ರನ್‌ಗಳ ಗುರಿ ನೀಡಿತ್ತು. ಆರ್‌ಸಿಬಿ ತಂಡಕ್ಕೆ ಗ್ಲೆನ್ ಮತ್ತು ಫಫ್ ಅವರ 126 ರನ್‌ಗಳ ಜೊತೆಯಾಟವು ಗೆಲುವಿನ ವಿಶ್ವಾಸ ಮೂಡಿಸಿತ್ತು.

ಆದರೆ 13ನೇ ಓವರ್‌ನಲ್ಲಿ ಆಫ್‌ಸ್ಪಿನ್ನರ್ ಮಹೀಷ ತೀಕ್ಷಣ ಎಸೆತವನ್ನು ಗ್ಲೆನ್ ಸ್ಲಾಗ್ ಸ್ವೀಪ್ ಮಾಡಲು ಪ್ರಯತ್ನಿಸಿದರು. ಆದರೆ ಬ್ಯಾಟ್ ಅಂಚಿಗೆ ಸ್ಲೈಸ್ ಆದ ಚೆಂಡು ಎತ್ತರಕ್ಕೆ ಪುಟಿಯಿತು.

ವಿಕೆಟ್‌ಕೀಪರ್ ಧೋನಿ ಓಡಿ ಬಂದು ಕ್ಯಾಚ್ ಮಾಡುವಲ್ಲಿ ಯಶಸ್ವಿಯಾದರು. ಇದು ಇನಿಂಗ್ಸ್‌ಗೆ ಮಹತ್ವದ ತಿರುವು ನೀಡಿತು. ಚೆನ್ನೈ 8 ರನ್‌ಗಳಿಂದ ಜಯಿಸಿತು.

‘ಪಂದ್ಯವನ್ನು ವಿವಿಧ ಕೋನಗಳಲ್ಲಿ ವಾಹಿನಿಯ ಮೂಲಕ ಜನರಿಗೆ ತಲುಪಿಸುವ ತಂತ್ರಜ್ಞಾನ ಚೆನ್ನಾಗಿದೆ. ಪಂದ್ಯದಲ್ಲಿ ತಂತ್ರಜ್ಞಾನ ಬಳಕೆ ಒಳ್ಳೆಯದು. ಆದರೆ ಅದರಿಂದ ಆಟಕ್ಕೆ ಅಡ್ಡಿಯಾಗಬಾರದು ಎಂದೂ ಡೇವೊನ್ ಅಭಿಪ್ರಾಯಪಟ್ಟರು.

ಆದರೆ ಸ್ಪೈಡರ್ ಕ್ಯಾಮೆರಾದ ಚಲನವಲನವು ಈ ಹಿಂದೆಯೂ ಕೆಲವು ಬಾರಿ ಫೀಲ್ಡರ್‌ಗಳನ್ನು ಗೊಂದಲಕ್ಕೀಡು ಮಾಡಿರುವ ಘಟನೆಗಳಿವೆ. ಅದರಲ್ಲೂ ರಾತ್ರಿಯ ಪಂದ್ಯಗಳಲ್ಲಿ ಎತ್ತರದಿಂದ ಬರುವ ಕ್ಯಾಚ್‌ಗಳನ್ನು ಪಡೆಯುವುದು ಸುಲಭವಲ್ಲ. ಅದರಲ್ಲಿ ಸ್ಪೈಡರ್ ಕ್ಯಾಮೆರಾದ ನೆರಳು ಹಾಗೂ ಅದನ್ನು ಅಳವಡಿಸಿರುವ ವೈರ್‌ಗಳು ಗೊಂದಲ ಮೂಡಿಸುತ್ತವೆ. ಧೋನಿ ಕ್ಯಾಚ್ ಪಡೆಯುವಾಗಲೂ ಇಂತಹ ಗೊಂದಲ ಉಂಟಾಗಿದೆ. ಆದ್ದರಿಂದಲೇ ಅವರು ಅಂಪೈರ್‌ಗೆ ತಿಳಿಸಿದರು. ಚೆಂಡಿನ ತೀರಾ ಹತ್ತಿರಕ್ಕೆ ಕ್ಯಾಮೆರಾ ಬರದಂತೆ ಎಚ್ಚರವಹಿಸಬೇಕೆಂದು ಹೇಳಿದರು. ಈ ಪಂದ್ಯದಲ್ಲಿ ಧೋನಿ ಪಡೆದ ಎರಡೂ ಕ್ಯಾಚ್‌ಗಳೂ ನಮ್ಮ ತಂಡದ ಗೆಲುವಿಗೆ ಮಹತ್ವದ ಕಾಣಿಕೆ ನೀಡಿದವು’ ಎಂದು ಪಂದ್ಯ ನಂತರ ಚೆನ್ನೈ ಬ್ಯಾಟರ್ ಡೇವೊನ್ ಕಾನ್ವೆ ಹೇಳಿದರು.

2021ರಲ್ಲಿ ಭಾರತ ಹಾಗೂ ನ್ಯೂಜಿಲೆಂಡ್ ನಡುವಣ ಟೆಸ್ಟ್ ಪಂದ್ಯದಲ್ಲಿ ಕ್ರೀಡಾಂಗಣದ ನಡುವೆ ತುಸು ಎತ್ತರದಲ್ಲಿ ಸ್ಪೈಡರ್ ಕ್ಯಾಮ್ ತಾಂತ್ರಿಕ ಕಾರಣಗಳಿಂದ ಕೆಲಹೊತ್ತು ಸ್ಥಗಿತವಾಗಿತ್ತು. ಇದರಿಂದಾಗಿ ಸ್ವಲ್ಪ ಹೊತ್ತು ಆಟ ನಡೆದಿರಲಿಲ್ಲ.

ಹೋದ ವರ್ಷ ಮೆಲ್ಬರ್ನ್‌ನಲ್ಲಿ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ನಡುವಣ ಟೆಸ್ಟ್ ಪಂದ್ಯದಲ್ಲಿ ಫೀಲ್ಡಿಂಗ್ ಮಾಡುತ್ತಿದ್ದ ಎನ್ರಿಚ್ ನಾಕಿಯಾ ಅವರಿಗೆ ಸ್ಪೈಡರ್ ಕ್ಯಾಮ್ ಬಡಿದಿತ್ತು. ಆದರೆ ಅದೃಷ್ಟವಶಾತ್ ನಾಕಿಯಾ ಗಂಭೀರ ಗಾಯವಾಗಿರಲಿಲ್ಲ.

ಇನ್ನೂ ಕೆಲವು ಪಂದ್ಯಗಳಲ್ಲಿ ಬ್ಯಾಟರ್‌ಗಳೂ ಸಿಕ್ಸರ್‌ಗೆತ್ತಿದ ಚೆಂಡು ಸ್ಪೈಡರ್ ಕ್ಯಾಮ್ ವೈರ್‌ಗಳಿಗೆ ಬಡಿದು ದಿಕ್ಕು ತಪ್ಪಿದ ಘಟನೆಗಳೂ ನಡೆದಿವೆ.

ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರದ ಪಂದ್ಯದಲ್ಲಿ ಬಳಕೆಯಾದ ಸ್ಪೈಡರ್ ಕ್ಯಾಮ್– ಪ್ರಜಾವಾಣಿ ಚಿತ್ರ

2.4 ಕೋಟಿ ಜನರಿಂದ ವೀಕ್ಷಣೆ

ಆರ್‌ಸಿಬಿ–ಸಿಎಸ್‌ಕೆ ನಡುವಣ ಪಂದ್ಯವನ್ನು ಜಿಯೊ ಸಿನಿಮಾ ಆ್ಯಪ್‌ನಲ್ಲಿ 2.4 ಕೋಟಿಗೂ ಹೆಚ್ಚು ವೀಕ್ಷಕರು ನೋಡಿದ್ದಾರೆ. ಆ್ಯಪ್‌ನಲ್ಲಿ ಇದು ಹೊಸ ದಾಖಲೆಯಾಗಿದೆ. ಏಪ್ರಿಲ್ 12ರಂದು ನಡೆದಿದ್ದ ಪಂದ್ಯದ ವೀಕ್ಷಣೆಯು 2.2 ಕೋಟಿ ದಾಟಿತ್ತು ಎಂದು ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಸೋಮವಾರ ನಡೆದ ಪಂದ್ಯದಲ್ಲಿ ಒಟ್ಟು 444 ರನ್‌ಗಳು ದಾಖಲಾದವು. ಅದರಲ್ಲಿ ಒಟ್ಟು 33 ಸಿಕ್ಸರ್‌ಗಳು ಸಿಡಿದವು.

ಸಿಎಸ್‌ಕೆ ಬೌಲರ್‌ಗಳಿಂದಾಗಿ ಧೋನಿಗೆ ಸಂಕಷ್ಟ: ಸೆಹ್ವಾಗ್

ನವದೆಹಲಿ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ಬೌಲರ್‌ಗಳು ಕಳಪೆ ಬೌಲಿಂಗ್ ಮಾಡುವ ಮೂಲಕ ನಾಯಕ ಮಹೇಂದ್ರಸಿಂಗ್ ಧೋನಿಯನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿದ್ದಾರೆ. ಬೌಲರ್‌ಗಳು ಆದಷ್ಟು ಬೇಗ ಸುಧಾರಿಸಿಕೊಳ್ಳಬೇಕು ಎಂದು ಭಾರತ ತಂಡದ ಮಾಜಿ ಆಟಗಾರ ವೀರೇಂದ್ರ ಸೆಹ್ವಾಗ್ ಹೇಳಿದ್ದಾರೆ.

ಸೋಮವಾರ ನಡೆದ ರಾಯಲ್ ಚಾಲೆಂಜರ್ಸ್ ಎದುರಿನ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಚೆನ್ನೈ ದೊಡ್ಡ ಮೊತ್ತ ಪೇರಿಸಿತ್ತು. ಆದರೆ ಚೆನ್ನೈ ಬೌಲರ್‌ಗಳು ಉತ್ತಮವಾಗಿ ಬೌಲಿಂಗ್ ಮಾಡಿರಲಿಲ್ಲ. ಇದರಿಂದಾಗಿ ಚೆನ್ನೈ ಪ್ರಯಾಸದ ಜಯ ಸಾಧಿಸಿತು. ‘ವೈಡ್ ಮತ್ತು ನೋಬಾಲ್‌ಗಳನ್ನು ಕಡಿಮೆ ಮಾಡಬೇಕು. ರನ್‌ಗಳನ್ನು ಬಿಟ್ಟುಕೊಡಬಾರದು. ಬಿಗಿ ದಾಳಿ ನಡೆಸಬೇಕು ಎಂದು ಧೋನಿ ಈ ಹಿಂದೆಯೇ ತಮ್ಮ ಬೌಲರ್‌ಗಳಿಗೆ ಎಚ್ಚರಿಕೆ ನೀಡಿದ್ದಾರೆ. ಆದರೂ ಯುವ ಬೌಲರ್‌ಗಳು ಕಳಪೆ ಬೌಲಿಂಗ್ ಮಾಡಿದ್ದಾರೆ. ಇದೇ ರೀತಿಯಾದರೆ ಧೋನಿ ಮುಂದೊಂದು ದಿನ ಆಮಾನತು ಶಿಕ್ಷೆಗೊಳಗಾಗಬಹುದು’ ಎಂದು ಸೆಹ್ವಾಗ್ ಹೇಳಿದರು.

‘ಆರ್‌ಸಿಬಿ ಎದುರಿನ ಪಂದ್ಯದಲ್ಲಿ ಚೆನ್ನೈ ಬೌಲರ್‌ಗಳೂ 37 ಡಾಟ್ ಬಾಲ್ ಹಾಕಿದ್ದಾರೆ. ಆದರೂ ಬೆಂಗಳೂರು ತಂಡವು 8 ವಿಕೆಟ್‌ಗೆ 218 ರನ್ ಗಳಿಸಿತು. ಇದರರ್ಥ ಕೇವಲ 14 ಓವರ್‌ಗಳಲ್ಲಿ ಇಷ್ಟು ಪ್ರಮಾಣದ ರನ್‌ಗಳು ಸೇರಿದವು. ಅಲ್ಲದೇ ಆರು ವೈಡ್‌ಬಾಲ್‌ಗಳನ್ನೂ ಹಾಕಿದ್ದಾರೆ. ಮೊದಲು ಬ್ಯಾಟಿಂಗ್ ಮಾಡಿ ಬೃಹತ್ ಮೊತ್ತ ಪೇರಿಸಿದ ಮೇಲೂ ಬೌಲರ್‌ಗಳು ಕೈಚೆಲ್ಲಬಾರದು’ ಎಂದು ಕ್ರಿಕ್‌ಬಜ್ ಶೋನಲ್ಲಿ ಸೆಹ್ವಾಗ್ ಹೇಳಿದ್ದಾರೆ.

ವಿರಾಟ್‌ಗೆ ದಂಡ

ಬೆಂಗಳೂರು: ಐಪಿಎಲ್ ನಿಯಮ ಉಲ್ಲಂಘಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಅವರಿಗೆ ಪಂದ್ಯ ಶುಲ್ಕದ ಶೇಕಡಾ 10ರಷ್ಟು ದಂಡ ವಿಧಿಸಲಾಗಿದೆ.

ಚೆನ್ನೈ ಸೂಪರ್ ಕಿಂಗ್ಸ್ ಎದುರಿನ ಪಂದ್ಯದಲ್ಲಿ ಶಿವಂ ದುಬೆ ವಿಕೆಟ್ ಉರುಳಿದ ಸಂದರ್ಭದಲ್ಲಿ ಕೊಹ್ಲಿ ಅತಿರೇಕದ ಸಂಭ್ರಮಾಚರಣೆ ಮಾಡಿದ್ದರು. ಈ ಕಾರಣಕ್ಕಾಗಿ ಕೊಹ್ಲಿ ಅವರಿಗೆ ದಂಡ ವಿಧಿಸಿರುವ ಸಾಧ್ಯತೆಯಿದೆ. ವೇಯ್ನ್ ಪಾರ್ನೆಲ್ ಬೌಲಿಂಗ್‌ನಲ್ಲಿ ದುಬೆ ಔಟಾಗಿದ್ದರು.

ವಿಶ್ವ ಚೆಸ್: ನಿಪೊಮ್‌ನಿಷಿಗೆ ಮುನ್ನಡೆ

ಇಯಾನ್ ನಿಪೊಮ್‌ನಿಷಿ

ಅಸ್ತಾನ, ಕಜಕಸ್ತಾನ (ರಾಯಿಟರ್ಸ್): ಚೀನಾದ ಡಿಂಗ್ ಲಿರೆನ್ ಅವರು ‘ಸಮಯದ ಒತ್ತಡ’ದಲ್ಲಿ ಸಂಭಾವ್ಯ ಗೆಲುವನ್ನು ಕೈಚೆಲ್ಲಿದರು. ವಿಶ್ವ ಚೆಸ್ ಚಾಂಪಿಯನ್ ಷಿಪ್‌ನ ಏಳನೇ ಗೇಮ್‌ನಲ್ಲಿ ಅವರನ್ನು ಮಣಿಸಿದ ರಷ್ಯಾದ ಇಯಾನ್ ನಿಪೊಮ್‌ನಿಷಿ 4–3ರಿಂದ ಮುನ್ನಡೆ ಸಾಧಿಸಿದರು.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಏಳನೇ ಗೇಮ್‌ನಲ್ಲಿ ಮಂಗಳವಾರ ಲಿರೆನ್ ಅವರು ಕಪ್ಪುಕಾಯಿಗಳೊಂದಿಗೆ ಆಡಿದರು.

ವಿಶ್ವ ಚೆಸ್ ಚಾಂಪಿಯನ್‌ಷಿಪ್ ‘ಬೆಸ್ಟ್ ಆಫ್ 14’ ಗೇಮ್‌ಗಳ ಮಾದರಿಯ ಪಂದ್ಯವಾಗಿದೆ.

ಚಾಂಪಿಯನ್‌ಷಿಪ್‌ಗೆ ಬುಧವಾರ ವಿರಾಮದ ದಿನವಾಗಿದ್ದು, ಎಂಟನೇ ಗೇಮ್ ಗುರುವಾರ ನಡೆಯಲಿದೆ.

ಪದಕಗಳೊಂದಿಗೆ (ಎಡದಿಂದ) ಮನೀಷಾ, ಶ್ವೇತಾ ಮತ್ತು ಲಕ್ಷ್ಮಿ

ಕುಸ್ತಿ: ಶ್ವೇತಾ ಅಣ್ಣಿಗೇರಿಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಶ್ವೇತಾ ಅಣ್ಣಿಗೇರಿ ಅವರು ಇತ್ತೀಚೆಗೆ ನಡೆದ ರಾಷ್ಟ್ರೀಯ ಮಹಿಳಾ ಜೂನಿಯರ್ ಕುಸ್ತಿ ಚಾಂಪಿಯಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಉತ್ತರ ಪ್ರದೇಶದ ಗೊಂಡಾದಲ್ಲಿ ನಡೆದ 17ವರ್ಷದೊಳಗಿನವರ ಚಾಂಪಿಯನ್‌ಷಿಪ್‌ನಲ್ಲಿ ರಾಜ್ಯದ ಶ್ವೇತಾ ಅವರಿಗೆ ಪದಕ ಒಲಿದಿದೆ. ರಾಷ್ಟ್ರೀಯ ಜೂನಿಯರ್ ಮಹಿಳಾ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ಚಿನ್ನದ ಪದಕ ಜಯಿಸಿಸಿರುವುದು ಇದೇ ಮೊದಲು ಎಂದು ಕರ್ನಾಟಕ ಕುಸ್ತಿ ಸಂಸ್ಥೆಯ ಅಧ್ಯಕ್ಷ ಬಿ. ಗುಣರಂಜನ್ ಶೆಟ್ಟಿ ತಿಳಿಸಿದ್ದಾರೆ.

ಮನೀಷಾ ಸಿದ್ದಿ ಹಾಗೂ ಲಕ್ಷ್ಮೀ ಪಾಟೀಲ್ ಅವರು ಕಂಚಿನ ಪದಕ ಗಳಿಸಿದ್ದಾರೆ.

ಟೆಸ್ಟ್: ಶ್ರೀಲಂಕಾ ತಂಡಕ್ಕೆ ದಾಖಲೆ ಜಯ

ಪ್ರಭಾತ್– ಎಎಫ್‌ಪಿ ಚಿತ್ರ

ಗಾಲ್, ಶ್ರೀಲಂಕಾ (ಎಪಿ): ಎಡಗೈ ಸ್ಪಿನ್ನರ್ ಪ್ರಭಾತ್ ಜಯಸೂರ್ಯ ಗಳಿಸಿದ ಒಟ್ಟು 10 ವಿಕೆಟ್‌ಗಳ ಬಲದಿಂದ ಶ್ರೀಲಂಕಾ ತಂಡವು ಐರ್ಲೆಂಡ್ ಎದುರಿನ ಮೊದಲ ಟೆಸ್ಟ್ ಪಂದ್ಯವನ್ನು ದಾಖಲೆಯ ಅಂತರದಿಂದ ಗೆದ್ದುಕೊಂಡಿತು.

ಪಂದ್ಯದ ಮೂರನೇ ದಿನವಾದ ಮಂಗಳವಾರ ಶ್ರೀಲಂಕಾ ಇನಿಂಗ್ಸ್ ಹಾಗೂ 280 ರನ್‌ಗಳಿಂದ ಜಯ ಸಾಧಿಸಿತು. ಇದು ಆ ತಂಡದ ದೊಡ್ಡ ಅಂತರದ ಗೆಲುವಾಗಿದೆ.

ಮೊದಲ ಇನಿಂಗ್ಸ್‌ನಲ್ಲಿ 143 ರನ್‌ಗಳಿಗೆ ಆಲೌಟ್ ಆಗಿದ್ದ ಪ್ರವಾಸಿ ತಂಡ, ಫಾಲೊ ಆನ್ ಪಡೆದು ಎರಡನೇ ಇನಿಂಗ್ಸ್‌ನಲ್ಲಿ 168 ರನ್ ಗಳಿಸಿ ಎಲ್ಲ ವಿಕೆಟ್ ಒಪ್ಪಿಸಿತು.

ಸೋಮವಾರ ಮೊದಲ ಇನಿಂಗ್ಸ್‌ನಲ್ಲಿ ಐರ್ಲೆಂಡ್ 117 ರನ್‌ಗಳಿಗೆ ಏಳು ವಿಕೆಟ್ ಕಳೆದುಕೊಂಡಿತ್ತು. ಮಂಗಳವಾರದ ಆಟದಲ್ಲಿ ಆ ತಂಡದ ಒಟ್ಟು 13 ವಿಕೆಟ್‌ಗಳು ಪತನವಾದವು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್:ಶ್ರೀಲಂಕಾ 6 ವಿಕೆಟ್‌ಗೆ 591 ಡಿಕ್ಲೇರ್ಡ್. ಐರ್ಲೆಂಡ್: 52.3 ಓವರ್‌ಗಳಲ್ಲಿ 143 (ಜೇಮ್ಸ್ ಮೆಕಲಂ 35, ಹ್ಯಾರಿ ಟೆಕ್ಟರ್ 34, ಲೋರ್ಕನ್ ಟಕರ್ 45, ಪ್ರಭಾತ್ ಜಯಸೂರ್ಯ 52ಕ್ಕೆ 7, ವಿಶ್ವ ಫೆರ್ನಾಂಡೊ 38ಕ್ಕೆ 2). ಎರಡನೇ ಇನಿಂಗ್ಸ್: ಐರ್ಲೆಂಡ್ (ಫಾಲೊ ಆನ್): 54.1 ಓವರ್‌ಗಳಲ್ಲಿ 168 (ಹ್ಯಾರಿ ಟೆಕ್ಟರ್ 42, ಕರ್ಟಿಸ್ ಕ್ಯಾಂಪರ್ 30, ಜಾರ್ಜ್ ಡಾಕ್ರೆಲ್ 32, ಮಾರ್ಕ್ ಅಡೈರ್ 23; ಪ್ರಭಾತ್ ಜಯಸೂರ್ಯ 56ಕ್ಕೆ 3, ರಮೇಶ್ ಮೆಂಡಿಸ್ 76ಕ್ಕೆ 4, ವಿಶ್ವ ಫೆರ್ನಾಂಡೊ 3ಕ್ಕೆ 2).

ಫಲಿತಾಂಶ: ಶ್ರೀಲಂಕಾ ತಂಡಕ್ಕೆ ಇನಿಂಗ್ಸ್ ಮತ್ತು 280 ರನ್‌ಗಳ ಜಯ

ಸಂಕ್ಷಿಪ್ತ ಸುದ್ದಿ

‘ಏಷ್ಯನ್ ಹಾಕಿ ಚಾಂಪಿಯನ್‌ಷಿಪ್ ಅಗ್ನಿಪರೀಕ್ಷೆ’

ಬೆಂಗಳೂರು (ಪಿಟಿಐ): ಚೆನ್ನೈನಲ್ಲಿ ಆಗಸ್ಟ್‌ನಲ್ಲಿ ನಡೆಯಲಿರುವ ಏಷ್ಯನ್ ಚಾಂಪಿಯನ್‌ಷಿಪ್ ಟೂರ್ನಿಯು ‘ಅಗ್ನಿ ಪರೀಕ್ಷೆ‘ಯಾಗಿದೆ ಎಂದು ಭಾರತ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಅಭಿಪ್ರಾಯಪಟ್ಟಿದ್ದಾರೆ.

ಹರ್ಮನ್‌ಪ್ರೀತ್

ಏಳನೇ ಆವೃತ್ತಿಯ ಏಷ್ಯನ್ ಹಾಕಿ ಚಾಂಪಿಯನ್‌ಷಿಪ್ ಆಗಸ್ಟ್ 3ರಿಂದ 12ರವರೆಗೆ ಚೆನ್ನೈನಲ್ಲಿ ನಿಗದಿಯಾಗಿದೆ. ಚೀನಾದ ಹ್ಯಾಂಗ್‌ಜೌನಲ್ಲಿ ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ಏಷ್ಯನ್ ಗೇಮ್ಸ್ ನಡೆಯಲಿವೆ.

ಏಷ್ಯನ್ ಗೇಮ್ಸ್‌ಗೆ ಮೊದಲು ನಡೆಯುವ ಏಷ್ಯನ್ ಚಾಂಪಿಯನ್‌ಷಿಪ್ ತಂಡಕ್ಕೆ ಅಗ್ನಿಪರೀಕ್ಷೆ ಎಂದು ಹರ್ಮನ್‌ಪ್ರೀತ್ ಹೇಳಿದರು.

‘ನಮ್ಮ ತಂಡದ ಬಹಳಷ್ಟು ಆಟಗಾರರು ಚೆನ್ನೈನಲ್ಲಿ ಮೊದಲ ಬಾರಿ ಆಡಲಿದ್ದಾರೆ. 2007ರಲ್ಲಿ ಇಲ್ಲಿ ನಡೆದ ಏಷ್ಯಾಕಪ್ ಟೂರ್ನಿಯಲ್ಲಿ ನಮ್ಮ ಹಿರಿಯ ಆಟಗಾರರು ಟ್ರೋಫಿ ಗೆದ್ದುಕೊಂಡಿದ್ದರು. ಭಾರತಕ್ಕೆ ಅದೊಂದು ಮಹತ್ವದ ಟೂರ್ನಿಯಾಗಿತ್ತು‘ ಎಂದು ಪ್ರಕಟಣೆಯಲ್ಲಿ ಹರ್ಮನ್ ಹೇಳಿದ್ದಾರೆ.

‘ನಮ್ಮ ಸಾಮರ್ಥ್ಯದ ಮೌಲ್ಯಮಾಪನಕ್ಕೆ ಏಷ್ಯನ್ ಚಾಂಪಿಯನ್‌ಷಿಪ್ ವೇದಿಕೆಯಾಗಲಿದೆ. ಈ ಟೂರ್ನಿ ಅಗ್ನಿಪರೀಕ್ಷೆ. ಎದುರಾಳಿ ಆಟಗಾರರ ಕೌಶಲಗಳನ್ನು ಅರಿತುಕೊಳ್ಳಲು ಏಷ್ಯನ್ ಗೇಮ್ಸ್‌ಗೆ ಸಜ್ಜುಗೊಳ್ಳಲು ಅನುಕೂಲ. ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಜಯಿಸಿ 2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ನೇರ ಅರ್ಹತೆ ಗಳಿಸುವ ಗುರಿಯಿದೆ‘ ಎಂದು ಹರ್ಮನ್ ನುಡಿದರು.

2011ರಲ್ಲಿ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನ ಚೊಚ್ಚಲ ಆವೃತ್ತಿಯಲ್ಲಿ ಭಾರತ ಪ್ರಶಸ್ತಿ ಜಯಿಸಿತ್ತು. 2016ರಲ್ಲಿ ಪಾಕಿಸ್ತಾನ ತಂಡವನ್ನು ಮಣಿಸಿ ಪ್ರಶಸ್ತಿ ಎತ್ತಿಹಿಡಿದಿತ್ತು. 2018ರಲ್ಲಿ ಮಸ್ಕತ್‌ನಲ್ಲಿ ನಡೆದಿದ್ದ ಟೂರ್ನಿಯಲ್ಲಿ ಭಾರತ–ಪಾಕಿಸ್ತಾನ ಫೈನಲ್ ತಲುಪಿದ್ದವು. ಫೈನಲ್‌ನಲ್ಲಿ ಮಳೆಯ ಕಾರಣ ಉಭಯ ತಂಡಗಳನ್ನು ಜಂಟಿ ವಿಜೇತರು ಎಂದು ಘೋಷಿಸಲಾಗಿತ್ತು.

ಟೈಗರ್ ಕಪ್ ಕ್ರಿಕೆಟ್: ಟಿಎಸ್‌ಸಿಎಗೆ ಜಯ

ಬೆಂಗಳೂರು: ತೇಜಲ್ ಶಿರಗುಪ್ಪಿ ಕ್ರಿಕೆಟ್ ಅಕಾಡೆಮಿ (ಟಿಎಸ್‌ಸಿಎ) ತಂಡವು ಟೈಗರ್ ಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿತು.

ರಾಜರಾಜೇಶ್ವರಿ ನಗರದ ಗ್ಲೋಬಲ್ ತಾಂತ್ರಿಕ ಅಕಾಡೆಮಿ ಕಾಲೇಜು ಮೈದಾನದಲ್ಲಿ ಮಂಗಳವಾರ ನಡೆದ 12 ವರ್ಷದೊಳಗಿನವರ ಪಂದ್ಯದಲ್ಲಿ ಟಿಎಸ್‌ಸಿಎ 1 ವಿಕೆಟ್‌ನಿಂದ ಜಸ್ಟ್ ಕ್ರಿಕೆಟ್ ಅಕಾಡೆಮಿ ಎದುರು ಗೆದ್ದಿತು.

78 ಎಸೆತಗಳಲ್ಲಿ 91 ರನ್ ಗಳಿಸಿದ ಟಿಎಸ್‌ಸಿಎ ತಂಡದ ಆರ್ಯನ್ ರಾಜ್ ‘ಟೈಗರ್ ಆಫ್ ದ ಮ್ಯಾಚ್’ ಗೌರವ ಪಡೆದರು.

ಸಂಕ್ಷಿಪ್ತ ಸ್ಕೋರು: ಜಸ್ಟ್ ಕ್ರಿಕೆಟ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 172 (ರಾಘವ್ ಕೆ. 49, ಲೋಕೇಶ್ ರೆಡ್ಡಿ 25, ವಿಯಾನ್ ಕಿಶ್ವನ್ 24; ಸಾಮ್ರಾಟ್ ಆದಿತ್ಯ 26ಕ್ಕೆ 2). ಟಿಎಸ್‌ಸಿಎ: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 173 (ಆರ್ಯನ್ ರಾಜ್ 91; ರಿತಿನ್ 33ಕ್ಕೆ 2, ರಾಘವ್ ಕೆ. 37ಕ್ಕೆ 2). ಫಲಿತಾಂಶ: ಟಿಎಸ್‌ಸಿಎಗೆ 1 ವಿಕೆಟ್ ಜಯ

ಎಂಎಸ್‌ಆರ್‌ಐಟಿ ತಂಡಕ್ಕೆ ಗೆಲುವು

ಬೆಂಗಳೂರು: ಎಂಎಸ್‌ಆರ್‌ಐಟಿ ತಂಡವು ಇಲ್ಲಿ ಮಂಗಳವಾರ ಆರಂಭವಾದ ಅಖಿಲ ಭಾರತ ಅಂತರ ಇಂಜಿನಿಯರಿಂಗ್ ಕಾಲೇಜುಗಳ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿತು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಆರ್‌ಐಟಿ) ವಜ್ರಮಹೋತ್ಸವ ಹಾಗೂ ಡಾ.ಎಂ.ಎಸ್. ರಾಮಯ್ಯ ಅವರ ಜನ್ಮಶತಮಾನೋತ್ಸವ ಅಂಗವಾಗಿ ಟೂರ್ನಿ ನಡೆಯುತ್ತಿದೆ.

ಬಿಇಎಲ್ ಮೈದಾನದಲ್ಲಿ ನಡೆದ ಮೊದಲ ಪಂದ್ಯದಲ್ಲಿ ಎಂಎಸ್‌ಐಆರ್‌ಟಿ 219 ರನ್‌ಗಳಿಂದ ಇಡಬ್ಲ್ಯುಐಟಿ ಎದುರು ಗೆದ್ದಿತು. ಇನ್ನೊಂದು ಪಂದ್ಯದಲ್ಲಿ ಎನ್‌ಎಚ್‌ಸಿಇ 9 ವಿಕೆಟ್‌ಗಳಿಂದ ಎಟ್ರಿಯಾ ಐಟಿ ಎದುರು ಜಯ ಸಾಧಿಸಿತು.